ಕರ್ನಾಟಕ ಸರ್ಕಾರ

ಸಂಖ್ಯೆ: ರೇಷ್ಮೆ 26 ರೇಕೃವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 05-03-2020

126
u/s
06/03/2020

ಇವರಿಂದ:
ಸರ್ಕಾರದ ಕಾರ್ಯದರ್ಶಿ,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನ ಸಭೆ ಸದಸ್ಯರಾದ ಶ್ರೀ ವೆಂಕಟರಮಣಯ್ಯ.ಟಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 302 ಕ್ಕೆ ಉತ್ತರ ಒದಗಿಸುವ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಿಧಾನ ಸಭೆ ಸದಸ್ಯರಾದ ಶ್ರೀ ವೆಂಕಟರಮಣಯ್ಯ.ಟಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 302 ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳಹಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ. ಹಾಗೂ ಉತ್ತರದ SOFT COPY ಹಾಗೂ ಪ್ರಶ್ನೆಗಳ ಶಾಖೆಯ email ID :dsqb-kla-kar@nic.in ಗೆ ಕಳುಹಿಸಲಾಗಿದೆ.

ತಮ್ಮ ನಂಬುಗೆಯ,

(ಹೆಚ್.ವನಿತ)
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ (ರೇಷ್ಮೆ)

ಪ್ರತಿ ಮಾಹಿತಿಗಾಗಿ:

1. ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರ ಆಪ್ತ ಕಾರ್ಯದರ್ಶಿ ರವರಿಗೆ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 302

ಸದಸ್ಯರ ಹೆಸರು : ಶ್ರೀ ವೆಂಕಟರಮಣಯ್ಯ .ಟಿ

ಉತ್ತರಿಸುವ ದಿನಾಂಕ : 06-03-2020

ಉತ್ತರಿಸುವವರು : ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

	ಪ್ರಶ್ನೆಗಳು	ಉತ್ತರಗಳು
ಅ	ದೊಡ್ಡಬಳ್ಳಾಪುರ ತಾಲ್ಲೂಕು ರೇಷ್ಮೆ ಇಲಾಖೆಯ ರೇಷ್ಮೆ ಬಿತ್ತನೆ ಕೋಠಿ 50 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದ ಘಟಕ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ	ಹಾಗಿದ್ದಲ್ಲಿ, ಸರ್ಕಾರ ರೇಷ್ಮೆ ಬಿತ್ತನೆ ಕೋಠಿಯನ್ನು ಪ್ರಾರಂಭಿಸಲು ಕೈಗೊಂಡಿರುವ ಕ್ರಮಗಳೇನು? (ವಿವರ ಒದಗಿಸುವುದು)	ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೂಲಿಬೆಲೆ ಸರ್ಕಾರಿ ಮಾದರಿ ಬಿತ್ತನೆ ಕೋಠಿ ಹಾಗೂ ನೊಂದಾಯಿತ ರೇಷ್ಮೆ ಮೊಟ್ಟೆ ಉತ್ಪಾದಕರು ರೇಷ್ಮೆ ಮೊಟ್ಟೆಗಳನ್ನು ಉತ್ಪಾದಿಸಿ, ದೊಡ್ಡಬಳ್ಳಾಪುರ ತಾಲ್ಲೂಕಿನ ರೇಷ್ಮೆ ಬೆಳೆಗಾರರ ಬೇಡಿಕೆ ಹಾಗೂ ಅವಶ್ಯಕತೆಗೆ ಅನುಸಾರ ರೇಷ್ಮೆ ಮೊಟ್ಟೆಗಳನ್ನು ಪೂರೈಸುತ್ತಿರುವುದರಿಂದ ದೊಡ್ಡಬಳ್ಳಾಪುರದಲ್ಲಿ ರೇಷ್ಮೆ ಬಿತ್ತನೆ ಕೋಠಿಯನ್ನು ಪ್ರಾರಂಭಿಸುವ ಅಗತ್ಯತೆ ಇರುವುದಿಲ್ಲ.

(ನಾರಾಯಣ ಗೌಡ)
ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು.

13/3

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 16 ಎಲ್‌ಎಕ್ಯೂ / ~~ಎಲ್‌ಸಿಕ್ಯೂ~~ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 12-03-2020

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ / ~~ಪರಿಷತ್~~,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ:- ಕರ್ನಾಟಕ ವಿಧಾನ ಸಭೆ / ~~ಪರಿಷತ್~~ ಸದಸ್ಯರಾದ ಶ್ರೀ ದೇವೇಗೌಡ. ಜಿ.ಟಿ. ಇವರ ಚುಕ್ಕೆ ~~ಗುರುತಿನ~~ / ಗುರುತಿಲ್ಲದ ಪ್ರಶ್ನೆ ಸಂಖ್ಯೆ: 657ಕ್ಕೆ ಉತ್ತರ ನೀಡುವ ಬಗ್ಗೆ.

.----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ/ ~~ಪರಿಷತ್ತಿನ~~ ಸದಸ್ಯರಾದ ಶ್ರೀ. ದೇವೇಗೌಡ. ಜಿ.ಟಿ. (ಚಾಮುಂಡೇಶ್ವರಿ) ಇವರು ಮಂಡಿಸಿರುವ ಚುಕ್ಕೆ ~~ಗುರುತಿನ~~ / ಗುರುತಿಲ್ಲದ ಪ್ರಶ್ನೆ ಸಂಖ್ಯೆ: 657 ಕ್ಕೆ ಉತ್ತರವನ್ನು ತಯಾರಿಸಿದ್ದು, ಇದರ 100 ಪ್ರತಿಗಳನ್ನು ಇದರೊಂದಿಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

A. Vijayakumar
12.03.2020

(ಎ.ವಿಜಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	657
ಸದಸ್ಯರ ಹೆಸರು	:	ಶ್ರೀ ದೇವೆಗೌಡ ಜಿ.ಟಿ. (ಚಾಮುಂಡೇಶ್ವರಿ)
ಉತ್ತರಿಸುವ ದಿನಾಂಕ	:	13.03.2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮೈಸೂರು ನಗರಕ್ಕೆ ಹೊಂದಿಕೊಂಡಂತೆ ಇರುವ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿ, ಪುರಸಭೆ ಹಾಗೂ ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮೈಸೂರು ನಗರಕ್ಕೆ ಹೊಂದಿಕೊಂಡಂತೆ ಇರುವ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿ, ಪುರಸಭೆ ಹಾಗೂ ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ನಗರಾಭಿವೃದ್ಧಿ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.
ಅ)	ಹಾಗಿದ್ದಲ್ಲಿ, ಮೇಲ್ದರ್ಜೆಗೇರಿಸಲು ಇರುವ ಮಾನದಂಡಗಳೇನು; ಯಾವಾಗ ಈ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)	ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ 3, 9 ಮತ್ತು 349 ಗಳನ್ವಯ ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುವುದು. 1. ಆ ಗ್ರಾಮ ಪಂಚಾಯಿತಿಯ ಪ್ರದೇಶದ ಜನಸಂಖ್ಯೆ 10,000ಕ್ಕೆ ಕಡಿಮೆ ಇಲ್ಲದಂತೆ ಹಾಗೂ 20,000 ಕ್ಕೆ ಹೆಚ್ಚಿಲ್ಲದಂತಿರಬೇಕು, 2. ಅಂತಹ ಪ್ರದೇಶದ ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚದುರ ಕಿ.ಮೀ. ವಿಸ್ತೀರ್ಣಕ್ಕೆ 400 ಕ್ಕಿಂತ ಕಡಿಮೆ ಇಲ್ಲದಿರುವುದು, 3. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ.50 ಕ್ಕಿಂತ ಕಡಿಮೆ ಇಲ್ಲದಿರುವುದು. ಆದರೆ, ದಿನಾಂಕ 19.03.2015 ರಂದು ನಡೆದ ಸಚಿವ ಸಂಪುಟ ಸಭೆಯ ತೀರ್ಮಾನದನ್ವಯ 15,000 ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಗಳನ್ನು ಮಾತ್ರ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಕ್ರಮವಹಿಸಲಾಗಿದೆ.

		ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ 3 ಮತ್ತು 9 ಗಳನ್ವಯ ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುವುದು. 1. ಆ ಪ್ರದೇಶದ ಜನಸಂಖ್ಯೆ 20,000 ಕ್ಕೆ ಕಡಿಮೆ ಇಲ್ಲದಂತೆ ಹಾಗೂ 50,000 ಕ್ಕೆ ಹೆಚ್ಚಿಲ್ಲದಂತಿರಬೇಕು, 2. ಅಂತಹ ಪ್ರದೇಶದ ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚದುರ ಕಿ.ಮೀ. ವಿಸ್ತೀರ್ಣಕ್ಕೆ 1500 ಕ್ಕಿಂತ ಕಡಿಮೆ ಇಲ್ಲದಿರುವುದು, 3. ಹಿಂದಿನ ನಿಕಟಪೂರ್ವ ಜನಗಣತಿಯಲ್ಲಿ ಅಂತಹ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಲ್ಲದ ಇತರ ಸಂಪನ್ಮೂಲಗಳಿಂದ ಉತ್ಪಾದಿತವಾದ ರಾಜಸ್ವ ವಾರ್ಷಿಕ ಒಂಬತ್ತು ಲಕ್ಷ ಅಥವಾ ವಾರ್ಷಿಕ ತಲಾ ಒಬ್ಬರಿಗೆ 45 ರೂಪಾಯಿಗಳ ದರದಂತೆ ಲೆಕ್ಕಹಾಕಲಾದ ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತಕ್ಕಿಂತ ಕಡಿಮೆ ಇರದ ಹೊರತು, 4. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ.50 ಕ್ಕಿಂತ ಕಡಿಮೆ ಇಲ್ಲದಿರುವುದು. ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ನಿಯಮ 3 ಹಾಗೂ 9 ರನ್ವಯ ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುವುದು. 1. ಆ ಪುರಸಭೆಯ ಪ್ರದೇಶದ ಜನಸಂಖ್ಯೆ 50,000 ಕ್ಕೆ ಕಡಿಮೆ ಇಲ್ಲದಂತೆ ಹಾಗೂ 3 ಲಕ್ಷಕ್ಕೆ ಹೆಚ್ಚಿಲ್ಲದಂತಿರಬೇಕು, 2. ಅಂತಹ ಪ್ರದೇಶದ ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚದುರ ಕಿ.ಮೀ. ವಿಸ್ತೀರ್ಣಕ್ಕೆ 1500 ಕ್ಕಿಂತ ಕಡಿಮೆ ಇಲ್ಲದಿರುವುದು, 3. ಹಿಂದಿನ ನಿಕಟಪೂರ್ವ ಜನಗಣತಿಯಲ್ಲಿ ಅಂತಹ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಲ್ಲದ ಇತರ ಸಂಪನ್ಮೂಲಗಳಿಂದ ಉತ್ಪಾದಿತವಾದ ರಾಜಸ್ವ ವಾರ್ಷಿಕ ಒಂಬತ್ತು ಲಕ್ಷ ಅಥವಾ ವಾರ್ಷಿಕ ತಲಾ ಒಬ್ಬರಿಗೆ 45 ರೂಪಾಯಿಗಳ ದರದಂತೆ ಲೆಕ್ಕ ಹಾಕಲಾದ ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತಕ್ಕಿಂತ ಕಡಿಮೆ ಇರದ ಹೊರತು, ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ.50 ಕ್ಕಿಂತ ಕಡಿಮೆ ಇಲ್ಲದಿರುವುದು.

		ಕೇಂದ್ರ ಜನಗಣತಿ ನಿರ್ದೇಶನಾಲಯ, ಭಾರತ ಸರ್ಕಾರದ ದಿನಾಂಕ:16.09.2019ರ ಪತ್ರದನ್ವಯ 2020ರ ಜನಗಣತಿ ಕಾರ್ಯಾಚರಣೆಯ ಅವಧಿಯಾದ ದಿನಾಂಕ:01.01.2020 ರಿಂದ 31.03.2021ರವರೆಗೆ ಹಾಲಿ ಅಸ್ತಿತ್ವದಲ್ಲಿರುವ ತಾಲ್ಲೂಕುಗಳ, ಗ್ರಾಮ ಪಂಚಾಯಿತಿಗಳ, ಮುನಿಸಿಪಾಲಿಟಿಗಳ ಆಡಳಿತಾತ್ಮಕ ಗಡಿಗಳನ್ನು (Administrative Boundaries) ಮಾರ್ಪಾಡು ಮಾಡದಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಪ್ರಸ್ತುತ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಹಾಗೂ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಸಾಧ್ಯವಾಗಿರುವುದಿಲ್ಲ.
ಇ)	ಎಷ್ಟು ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿ, ಪುರಸಭೆ ಹಾಗೂ ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಗುರುತಿಸಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು)	ಮೈಸೂರು ಜಿಲ್ಲಾಧಿಕಾರಿ ರವರಿಂದ ದಿನಾಂಕ 03.02.2020 ರ ಪತ್ರದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಗೆ ಕಳುಹಿಸಿದ ಪ್ರಸ್ತಾವನೆ ಅನುಸಾರ ಈ ಕೆಳಕಂಡ ಗ್ರಾಮ ಪಂಚಾಯಿತಿಗಳಾದ 1. ಕೂರ್ಗಳ್ಳಿ– ನಗರಸಭೆಯನ್ನಾಗಿ, 2. ಇಲವಾಲ– ಪಟ್ಟಣ ಪಂಚಾಯಿತಿ/ ಪುರಸಭೆಯನ್ನಾಗಿ 3. ಮೆಲ್ಲಹಳ್ಳಿ(ಬೀರಿಹುಂಡಿ), ಮರಟಿಕ್ಯಾತನಹಳ್ಳಿ ಬೋಗಾದಿ, ಬೆಳವಾಡಿ– ನಗರಸಭೆಯನ್ನಾಗಿ ಮತ್ತು 4. ಕಡಕೊಳ ಗ್ರಾಮ ಪಂಚಾಯಿತಿಯನ್ನು ಇದರ ವ್ಯಾಪ್ತಿಗೆ ಬರುವ ಗ್ರಾಮಗಳನ್ನು ಮತ್ತು ಸರ್ಕಾರಿ ಉತ್ತನಹಳ್ಳಿ, ಕೊಪ್ಪಲೂರು, ಬಂಡಿಪಾಳ್ಯ, ಗುಡುಮಾದನಹಳ್ಳಿ, ಐಳಿಗೆಹುಂಡಿ ಮತ್ತು ಮರಸೆ, ದೇವಲಾಪುರ ಗ್ರಾಮಗಳು ಸೇರಿಸಿ ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಜಿಲ್ಲಾಡಳಿತದಿಂದ ಗುರುತಿಸಲಾಗಿದೆ.

ಸಂಖ್ಯೆ: ನಅಇ 16 ಎಲ್ಎಕ್ಯೂ 2020

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	657
ಸದಸ್ಯರ ಹೆಸರು	:	ಶ್ರೀ ದೇವೆಗೌಡ ಜಿ.ಟಿ. (ಚಾಮುಂಡೇಶ್ವರಿ)
ಉತ್ತರಿಸುವ ದಿನಾಂಕ	:	13.03.2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮೈಸೂರು ನಗರಕ್ಕೆ ಹೊಂದಿಕೊಂಡಂತೆ ಇರುವ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿ, ಪುರಸಭೆ ಹಾಗೂ ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮೈಸೂರು ನಗರಕ್ಕೆ ಹೊಂದಿಕೊಂಡಂತೆ ಇರುವ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿ, ಪುರಸಭೆ ಹಾಗೂ ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ನಗರಾಭಿವೃದ್ಧಿ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.
ಆ)	ಹಾಗಿದ್ದಲ್ಲಿ, ಮೇಲ್ದರ್ಜೆಗೇರಿಸಲು ಇರುವ ಮಾನದಂಡಗಳೇನು; ಯಾವಾಗ ಈ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)	ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ 3, 9 ಮತ್ತು 349 ಗಳನ್ವಯ ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುವುದು. 1. ಆ ಗ್ರಾಮ ಪಂಚಾಯಿತಿಯ ಪ್ರದೇಶದ ಜನಸಂಖ್ಯೆ 10,000ಕ್ಕೆ ಕಡಿಮೆ ಇಲ್ಲದಂತೆ ಹಾಗೂ 20,000 ಕ್ಕೆ ಹೆಚ್ಚಿಲ್ಲದಂತಿರಬೇಕು, 2. ಅಂತಹ ಪ್ರದೇಶದ ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚದುರ ಕಿ.ಮೀ. ವಿಸ್ತೀರ್ಣಕ್ಕೆ 400 ಕ್ಕಿಂತ ಕಡಿಮೆ ಇಲ್ಲದಿರುವುದು, 3. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ.50 ಕ್ಕಿಂತ ಕಡಿಮೆ ಇಲ್ಲದಿರುವುದು. ಆದರೆ, ದಿನಾಂಕ 19.03.2015 ರಂದು ನಡೆದ ಸಚಿವ ಸಂಪುಟ ಸಭೆಯ ತೀರ್ಮಾನದನ್ವಯ 15,000 ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಗಳನ್ನು ಮಾತ್ರ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಕ್ರಮವಹಿಸಲಾಗಿದೆ.

ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ 3 ಮತ್ತು 9 ಗಳನ್ವಯ ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುವುದು.

1. ಆ ಪ್ರದೇಶದ ಜನಸಂಖ್ಯೆ 20,000 ಕ್ಕೆ ಕಡಿಮೆ ಇಲ್ಲದಂತೆ ಹಾಗೂ 50,000 ಕ್ಕೆ ಹೆಚ್ಚಿಲ್ಲದಂತಿರಬೇಕು,
2. ಅಂತಹ ಪ್ರದೇಶದ ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚದುರ ಕಿ.ಮೀ. ವಿಸ್ತೀರ್ಣಕ್ಕೆ 1500 ಕ್ಕಿಂತ ಕಡಿಮೆ ಇಲ್ಲದಿರುವುದು,
3. ಹಿಂದಿನ ನಿಕಟಪೂರ್ವ ಜನಗಣತಿಯಲ್ಲಿ ಅಂತಹ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಲ್ಲದ ಇತರ ಸಂಪನ್ಮೂಲಗಳಿಂದ ಉತ್ಪಾದಿತವಾದ ರಾಜಸ್ವ ವಾರ್ಷಿಕ ಒಂಬತ್ತು ಲಕ್ಷ ಅಥವಾ ವಾರ್ಷಿಕ ತಲಾ ಒಬ್ಬರಿಗೆ 45 ರೂಪಾಯಿಗಳ ದರದಂತೆ ಲೆಕ್ಕಹಾಕಲಾದ ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತಕ್ಕಿಂತ ಕಡಿಮೆ ಇರದ ಹೊರತು,
4. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ.50 ಕ್ಕಿಂತ ಕಡಿಮೆ ಇಲ್ಲದಿರುವುದು.

ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ನಿಯಮ 3 ಹಾಗೂ 9 ರನ್ವಯ ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುವುದು.

1. ಆ ಪುರಸಭೆಯ ಪ್ರದೇಶದ ಜನಸಂಖ್ಯೆ 50,000 ಕ್ಕೆ ಕಡಿಮೆ ಇಲ್ಲದಂತೆ ಹಾಗೂ 3 ಲಕ್ಷಕ್ಕೆ ಹೆಚ್ಚಿಲ್ಲದಂತಿರಬೇಕು,
2. ಅಂತಹ ಪ್ರದೇಶದ ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚದುರ ಕಿ.ಮೀ. ವಿಸ್ತೀರ್ಣಕ್ಕೆ 1500 ಕ್ಕಿಂತ ಕಡಿಮೆ ಇಲ್ಲದಿರುವುದು,
3. ಹಿಂದಿನ ನಿಕಟಪೂರ್ವ ಜನಗಣತಿಯಲ್ಲಿ ಅಂತಹ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಲ್ಲದ ಇತರ ಸಂಪನ್ಮೂಲಗಳಿಂದ ಉತ್ಪಾದಿತವಾದ ರಾಜಸ್ವ ವಾರ್ಷಿಕ ಒಂಬತ್ತು ಲಕ್ಷ ಅಥವಾ ವಾರ್ಷಿಕ ತಲಾ ಒಬ್ಬರಿಗೆ 45 ರೂಪಾಯಿಗಳ ದರದಂತೆ ಲೆಕ್ಕ ಹಾಕಲಾದ ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತಕ್ಕಿಂತ ಕಡಿಮೆ ಇರದ ಹೊರತು,

ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ.50 ಕ್ಕಿಂತ ಕಡಿಮೆ ಇಲ್ಲದಿರುವುದು.

		ಕೇಂದ್ರ ಜನಗಣತಿ ನಿರ್ದೇಶನಾಲಯ, ಭಾರತ ಸರ್ಕಾರದ ದಿನಾಂಕ:16.09.2019ರ ಪತ್ರದನ್ವಯ 2020ರ ಜನಗಣತಿ ಕಾರ್ಯಾಚರಣೆಯ ಅವಧಿಯಾದ ದಿನಾಂಕ:01.01.2020 ರಿಂದ 31.03.2021ರವರೆಗೆ ಹಾಲಿ ಅಸ್ತಿತ್ವದಲ್ಲಿರುವ ತಾಲ್ಲೂಕುಗಳ, ಗ್ರಾಮ ಪಂಚಾಯಿತಿಗಳ, ಮುನಿಸಿಪಾಲಿಟಿಗಳ ಆಡಳಿತಾತ್ಮಕ ಗಡಿಗಳನ್ನು (Administrative Boundaries) ಮಾರ್ಪಾಡು ಮಾಡದಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಪ್ರಸ್ತುತ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಹಾಗೂ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಸಾಧ್ಯವಾಗಿರುವುದಿಲ್ಲ.
ಇ)	ಎಷ್ಟು ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿ, ಪುರಸಭೆ ಹಾಗೂ ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಗುರುತಿಸಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು)	ಮೈಸೂರು ಜಿಲ್ಲಾಧಿಕಾರಿ ರವರಿಂದ ದಿನಾಂಕ 03.02.2020 ರ ಪತ್ರದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಗೆ ಕಳುಹಿಸಿದ ಪ್ರಸ್ತಾವನೆ ಅನುಸಾರ ಈ ಕೆಳಕಂಡ ಗ್ರಾಮ ಪಂಚಾಯಿತಿಗಳಾದ 1. ಕೂರ್ಗಳ್ಳಿ- ನಗರಸಭೆಯನ್ನಾಗಿ, 2. ಇಲವಾಲ- ಪಟ್ಟಣ ಪಂಚಾಯಿತಿ/ ಪುರಸಭೆಯನ್ನಾಗಿ 3. ಮೆಲ್ಲಹಳ್ಳಿ(ಬೀರಿಹುಂಡಿ), ಮರಟಿಕ್ಯಾತನಹಳ್ಳಿ ಬೋಗಾದಿ, ಬೆಳವಾಡಿ- ನಗರಸಭೆಯನ್ನಾಗಿ ಮತ್ತು 4. ಕಡಕೊಳ ಗ್ರಾಮ ಪಂಚಾಯಿತಿಯನ್ನು ಇದರ ವ್ಯಾಪ್ತಿಗೆ ಬರುವ ಗ್ರಾಮಗಳನ್ನು ಮತ್ತು ಸರ್ಕಾರಿ ಉತ್ತನಹಳ್ಳಿ, ಕೊಪ್ಪಲೂರು, ಬಂಡಿಪಾಳ್ಯ, ಗುಡುಮಾದನಹಳ್ಳಿ, ಏಳಿಗೆಹುಂಡಿ ಮತ್ತು ಮರಸೆ, ದೇವಲಾಪುರ ಗ್ರಾಮಗಳು ಸೇರಿಸಿ ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಜಿಲ್ಲಾಡಳಿತದಿಂದ ಗುರುತಿಸಲಾಗಿದೆ.

ಸಂಖ್ಯೆ: ನಅಇ 16 ಎಲ್ಎಕ್ಯೂ 2020

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ತೋಇ 76 ತೋಇವಿ 2020

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 05.03.2020

31
06/03/20

ಇವರಿಂದ:
ಸರ್ಕಾರದ ಕಾರ್ಯದರ್ಶಿ,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ.

ಇವರಿಗೆ:
ಕಾರ್ಯದರ್ಶಿಯವರು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 475ರ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 475ರ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ತಮಗೆ ಕಳುಹಿಸಲು ನಿರ್ದೇಶಿಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,
5/3
(ಟಿ.ಮಂಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ.

ಪ್ರತಿಯನ್ನು :
1) ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ,
2) ಮಾನ್ಯ ತೋಟಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಉಪ ಕಾರ್ಯದರ್ಶಿ ರವರ ಆಪ್ತ ಸಹಾಯಕರು, ತೋಟಗಾರಿಕೆ ಇಲಾಖೆ,
4) ಶಾಖಾಧಿಕಾರಿಗಳು(ಸ್ವೀ & ರ ಹಾಗೂ ಸಮನ್ವಯ), ತೋಟಗಾರಿಕೆ ಇಲಾಖೆ, ಬೆಂಗಳೂರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 475

ಸದಸ್ಯರ ಹೆಸರು : ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ

ಉತ್ತರಿಸುವ ಸಚಿವರು : ಪೌರಾಡಳಿತ ಹಾಗೂ ತೋಟಗಾರಿಕೆ & ರೇಷ್ಮೆ ಸಚಿವರು.

ಉತ್ತರಿಸಬೇಕಾದ ದಿನಾಂಕ : 06.03.2020

ಕ್ರ ಸಂ	ಪ್ರಶ್ನೆ	ಉತ್ತರ
(ಅ)	ಬೆಳಗಾವಿ ಜಿಲ್ಲೆ ಕಿತ್ತೂರು ತಾಲ್ಲೂಕು ಸುಮಾರು 8 ವರ್ಷಗಳ ಹಿಂದೆಯೇ ರಚನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಹೌದು.
(ಆ)	ಬಂದಿದ್ದಲ್ಲಿ , ಈ ತಾಲ್ಲೂಕು ಕೇಂದ್ರದಲ್ಲಿ ತೋಟಗಾರಿಕೆ ಇಲಾಖೆ ಪ್ರಾರಂಭಿಸಲಾಗಿದೆಯೇ;	ಇಲ್ಲ.
(ಇ)	ಪ್ರಾರಂಭಿಸದಿದ್ದಲ್ಲಿ ವಿಳಂಬಕ್ಕೆ ಕಾರಣವೇನು;	ತೋಟಗಾರಿಕೆ ಕಛೇರಿ ಸ್ಥಾಪನೆ ಹಾಗೂ ಹುದ್ದೆಗಳನ್ನು ಸೃಜಿಸಲು ಕೋರಿದ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ಆರ್ಥಿಕ ನಿರ್ಬಂಧದ ಕಾರಣ ಹುದ್ದೆಗಳ ಸೃಜನೆ ಸಾಧ್ಯವಿರುವುದಿಲ್ಲ, ಪ್ರಸ್ತುತ ಯಾವ ತಾಲ್ಲೂಕನ್ನು ವಿಭಜಿಸಿ ಹೊಸ ತಾಲ್ಲೂಕು ಸೃಜಿಸಲಾಗಿದೆಯೋ ಆ ತಾಲ್ಲೂಕಿನಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂಧಿಯಿಂದಲೇ ಮುಂದಿನ 4 ವರ್ಷಗಳವರೆಗೆ ಹೊಸ ತಾಲ್ಲೂಕಿನ ಕಛೇರಿಯನ್ನು ನಿರ್ವಹಿಸಬೇಕೆಂದು ತಿಳಿಸಿರುತ್ತದೆ.
ಈ	ತಾಲ್ಲೂಕು ಮಟ್ಟದ ತೋಟಗಾರಿಕೆ ಇಲಾಖೆಯನ್ನು ಕಿತ್ತೂರು ತಾಲ್ಲೂಕು ಕೇಂದ್ರದಲ್ಲಿಯಾವ ಕಾಲಮಿತಿಯಲ್ಲಿ ಪ್ರಾರಂಭಿಸಲಾಗುವುದು?	ಕಾಲಮಿತಿ ನಿಗಧಿ ಮಾಡಿರುವುದಿಲ್ಲ.

ಸಂಖ್ಯೆ: HORTI 76 HGM 20

(ನಾರಾಯಣ ಗೌಡ)

ಪೌರಾಡಳಿತ, ತೋಟಗಾರಿಕೆ ಮತ್ತು

ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂ: ನಅಇ 78 ಸಿ.ಎಸ್.ಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:-05-03-2020

(21) u/s 06/03/2020

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಅಶ್ವಿನ್ ಕುಮಾರ್.ಎಂ (ಟಿ.ನರಸೀಪುರ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: **301** ಕ್ಕೆ ಉತ್ತರಿಸುವ ಕುರಿತು.

*** <> ***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಅಶ್ವಿನ್ ಕುಮಾರ್.ಎಂ (ಟಿ.ನರಸೀಪುರ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: **301** ರ ಉತ್ತರದ 50 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಲಲಿತಾಬಾಯಿ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿಗಳು (ಪಿ.ಎಂ.ಸಿ),
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	301
ಸದಸ್ಯರ ಹೆಸರು	:	ಶ್ರೀ ಅಶ್ವಿನ್ ಕುಮಾರ್ ಎಂ (ಟಿ. ನರಸೀಪುರ)
ಉತ್ತರಿಸಬೇಕಾದ ದಿನಾಂಕ	:	06-03-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬೀದಿ ದೀಪಗಳನ್ನು ಪಿ.ಪಿ.ಪಿ ಮಾದರಿಯಲ್ಲಿ ಬದಲಾಯಿಸಿ, CCMS (Centralised Control Monitoring System) ವ್ಯವಸ್ಥೆ ಅನುಷ್ಠಾನಗೊಳಿಸಲು, ಸರ್ಕಾರ ಹಾಲಿ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಎಲ್.ಇ.ಡಿ. ಬೀದಿ ದೀಪಗಳಿಗೆ ಸಂಬಂಧಿಸಿದ ಎಲ್ಲಾ ಟೆಂಡರ್ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿ, ಸರ್ಕಾರ ಆದೇಶ ಹೊರಡಿಸಿದೆಯೇ;	ವಿವಿಧ ಅನುದಾನಗಳಲ್ಲಿ ಎಲ್ಇಡಿ ಬೀದಿ ದೀಪಗಳಿಗೆ ಸಂಬಂಧಿಸಿದ ಎಲ್ಲಾ ಟೆಂಡರ್ ಕರೆಯಬೇಕಾದ ಹಾಗೂ ಟೆಂಡರ್ ಪ್ರಕ್ರಿಯೆಯಲ್ಲಿರುವ ಕಾಮಗಾರಿಗಳನ್ನು ಮುಂದಿನ ಆದೇಶದವರೆಗೂ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ದಿನಾಂಕ:14.08.2018 ರಂದು ಪೌರಾಡಳಿತ ನಿರ್ದೇಶನಾಲಯದಿಂದ ಸೂಚಿಸಲಾಗಿದೆ. ಆದರೆ, ಸರ್ಕಾರದ ಸೂಚನೆಯಂತೆ, ಪ್ರಸ್ತುತ ಇರುವ ಬೀದಿದೀಪಗಳು ಹಾಳಾಗಿದ್ದಲ್ಲಿ/ ದುರಸ್ಥಿ ಪಡಿಸಲಾಗದಿದ್ದಲ್ಲಿ ಅಂತಹ ಬೀದಿದೀಪಗಳನ್ನು ಬದಲಾಯಿಸುವ ಅವಕಾಶವಿರುತ್ತದೆ ಎಂದು ದಿನಾಂಕ:15.07.2019 ರಂದು ತಿಳಿಸಲಾಗಿರುತ್ತದೆ.
ಆ)	ಹಾಗಿದ್ದಲ್ಲಿ, ಟಿ ನರಸೀಪುರ ಪುರಸಭೆ ಮತ್ತು ಬನ್ನೂರು ಪುರಸಭೆ ವ್ಯಾಪ್ತಿಯಲ್ಲಿ ಹೊಸದಾಗಿ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸಲು ಅವಕಾಶವಿಲ್ಲದೆ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಏನು ಪರಿಹಾರ ಕ್ರಮಕೈಗೊಳ್ಳಲಾಗಿದೆ; (ಮಾಹಿತಿ ಒದಗಿಸುವುದು)	ಹೊಸದಾಗಿ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸಲು ಅವಕಾಶವಿಲ್ಲದೆ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿರುವುದರ ಬಗ್ಗೆ ಇದುವರೆಗೂ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ.
ಇ)	CCMS (Centralised Control Monitoring System) ವ್ಯವಸ್ಥೆ ಅನುಷ್ಠಾನಗೊಳಿಸಲು ಸರ್ಕಾರದಿಂದ ಆದೇಶವಾಗಿ 2 ವರ್ಷಗಳು ಕಳೆದರೂ ಸಹ ಈವರೆಗೆ ಸದರಿ ವ್ಯವಸ್ಥೆಯನ್ನು ಜಾರಿಗೊಳಿಸಲು ಸಾಧ್ಯವಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸದರಿ ವ್ಯವಸ್ಥೆಯನ್ನು ಶೀಘ್ರ ಅನುಷ್ಠಾನಗೊಳಿಸಲು ಏನು ಕ್ರಮ ಕೈಗೊಳ್ಳಲಾಗಿದೆ; (ಮಾಹಿತಿ ಒದಗಿಸುವುದು)	ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ:ನಅಇ 550 ಪಿಆರ್‌ಜೆ 2017 ದಿನಾಂಕ:15.03.2018 ರಂತೆ, ಯೋಜನೆಯನ್ನು 2 ಹಂತಗಳಲ್ಲಿ ಅನುಷ್ಠಾನಗೊಳಿಸಬೇಕಾಗಿರುತ್ತದೆ. ಅದರಂತೆ, ಮೊದಲನೆ ಹಂತದಲ್ಲಿ ಬೀದಿದೀಪಗಳ ಸಮೀಕ್ಷೆ (Baseline Survey) ಹಾಗೂ Presumptive consumption ವರದಿಯನ್ನು ಸಲ್ಲಿಸಲು ವ್ಯವಹಾರಿಕ ಸಲಹೆಗಾರರನ್ನು (Transaction advisor) ಕೆಟಿಪಿಪಿ ಅನ್ವಯ ನೇಮಕಗೊಳಿಸಬೇಕಾಗಿರುತ್ತದೆ. ಅದರಂತೆ, ರಾಜ್ಯದ ಎಲ್ಲಾ ಜಿಲ್ಲಾ ನಗರಾಭಿವೃದ್ಧಿ ಕೋಶ/ ಮಹಾನಗರಪಾಲಿಕೆಗಳಲ್ಲಿ ಈಗಾಗಲೇ ವ್ಯವಹಾರಿಕ ಸಲಹೆಗಾರರು ನೇಮಕಗೊಂಡಿದ್ದು ಎಲ್ಲಾ ಜಿಲ್ಲೆಗಳಲ್ಲಿ ಬೀದಿ ದೀಪ ಸಮೀಕ್ಷೆ ಜಾರಿಯಲ್ಲಿರುತ್ತದೆ. ಸದರಿ ಸಮೀಕ್ಷೆ ಪೂರ್ಣಗೊಳಿಸಲು 7 ತಿಂಗಳ ಕಾಲಾವಕಾಶ ನೀಡಲಾಗಿರುತ್ತದೆ.

		ಅಲ್ಲದೇ ಈಗಾಗಲೇ, 6 ಮಹಾನಗರಪಾಲಿಕೆಗಳಲ್ಲಿ ಸದರಿ ಯೋಜನೆಯ ಸಮೀಕ್ಷೆ ಪೂರ್ಣಗೊಂಡಿದ್ದು, ಪಿಪಿಪಿ ರಿಯಾಯಿತಿದಾರರನ್ನು ನೇಮಕಗೊಳಿಸಲು ಸ್ಮಾರ್ಟ್‌ಸಿಟಿ ವತಿಯಿಂದ ಟೆಂಡರ್ ಕರೆಯಲಾಗಿರುತ್ತದೆ. ಸದರಿ ಯೋಜನೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸಲು ಅಲ್ಪಾವಧಿ ಟೆಂಡರ್ ಕರೆಯಲು ಸೂಚನೆ ನೀಡಿದ್ದು, ಪೌರಾಡಳಿತ ನಿರ್ದೇಶನಾಲಯದ ಹಂತದಲ್ಲಿ ಕಾಲಕಾಲಕ್ಕೆ ಪರಿಶೀಲನಾ ಸಭೆ ಹಾಗು ವಿಡಿಯೋ ಕಾನ್ಫರೆನ್ಸ್ ಮುಖಾಂತರ ಜಿಲ್ಲೆಗಳಿಗೆ ಶೀಘ್ರವಾಗಿ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.
ಈ)	ಈ ವ್ಯವಸ್ಥೆಯನ್ನು ರಾಜ್ಯಾದ್ಯಂತ ಅನುಷ್ಠಾನಗೊಳಿಸಲು ಕೆ.ಟಿ.ಪಿ.ಪಿ. ಮೂಲಕ ಏಕ ಸಂಸ್ಥೆಯನ್ನು ಗುರುತಿಸಲಾಗುವುದೇ; ಹಾಗಿದ್ದಲ್ಲಿ, ಏಕ ಸಂಸ್ಥೆಯು ರಾಜ್ಯಾದ್ಯಂತ ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿನ ಎಲ್ಲಾ ಬೀದಿ ದೀಪಗಳ ಅಳವಡಿಕೆ / ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗುವುದೇ? (ಮಾಹಿತಿ ಒದಗಿಸುವುದು)	ಈ ವ್ಯವಸ್ಥೆಯನ್ನು ರಾಜ್ಯಾದ್ಯಂತ ಅನುಷ್ಠಾನಗೊಳಿಸಲು. ಯಾವುದೇ ಏಕ ಸಂಸ್ಥೆಯನ್ನು ಗುರುತಿಸಲಾಗುವುದಿಲ್ಲ. ಸದರಿ ಯೋಜನೆಯ ಸುಗಮ ಹಾಗೂ ವಿಕೇಂದ್ರಿಕೃತ ಅನುಷ್ಠಾನಕ್ಕಾಗಿ ಜಿಲ್ಲಾವಾರು ನಗರ ಸ್ಥಳೀಯ ಸಂಸ್ಥೆಗಳನ್ನು ಸೇರಿಸಿ ಜಿಲ್ಲಾ ನಗರಾಭಿವೃದ್ಧಿ ಕೋಶ ಹಾಗೂ ಮಹಾನಗರಪಾಲಿಕೆಗಳಿಂದ ಪ್ರತ್ಯೇಕವಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸುವ ವ್ಯವಸ್ಥೆಯನ್ನು ರೂಪಿಸಲಾಗಿರುತ್ತದೆ. ಅದರಂತೆ ಸ್ಪರ್ಧಾತ್ಮಕ ದರ (Competitive Bidding) ದನ್ವಯ ಕಡಿಮೆ EMI ದರ ನಮೂದಿಸುವ ಬಿಡ್ಡರ್‌ಅನ್ನು ನಿಯಮಾನುಸಾರ ಆಯ್ಕೆ ಮಾಡಲಾಗುತ್ತದೆ.

ಸಂಖ್ಯೆ: ನಅಇ 78 ಸಿಎಸ್‌ಎಸ್ 2020

(ನಾರಾಯಣ ಗೌಡ)
ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ
ಸಚಿವರು.

13/3/

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 15 ಎಲ್‌ಎಕ್ಯೂ / ~~ಎಲ್‌ಸಿಕ್ಯೂ~~ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 12-03-2020

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ / ~~ಪರಿಷತ್~~,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ:- ಕರ್ನಾಟಕ ವಿಧಾನ ಸಭೆ / ~~ಪರಿಷತ್~~ ಸದಸ್ಯರಾದ ಶ್ರೀ ದೇವೇಗೌಡ ಜಿ.ಟಿ. ಇವರ ಚುಕ್ಕೆ ~~ಗುರುತಿನ~~ / ಗುರುತಿಲ್ಲದ ಪ್ರಶ್ನೆ ಸಂಖ್ಯೆ: 656ಕ್ಕೆ ಉತ್ತರ ನೀಡುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ/ ~~ಪರಿಷತ್ತಿನ~~ ಸದಸ್ಯರಾದ ಶ್ರೀ . ದೇವೇಗೌಡ ಜಿ.ಟಿ. (ಚಾಮುಂಡೇಶ್ವರಿ) ಇವರು ಮಂಡಿಸಿರುವ ಚುಕ್ಕೆ ~~ಗುರುತಿನ~~ / ಗುರುತಿಲ್ಲದ ಪ್ರಶ್ನೆ ಸಂಖ್ಯೆ:. 656 ಕ್ಕೆ ಉತ್ತರವನ್ನು ತಯಾರಿಸಿದ್ದು, ಇದರ 100 ಪ್ರತಿಗಳನ್ನು ಇದರೊಂದಿಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,
A. Vijayakumar
12.03.2020
(ಎ.ವಿಜಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	656
ಸದಸ್ಯರ ಹೆಸರು	:	ಶ್ರೀ ದೇವೆಗೌಡ ಜಿ.ಟಿ. (ಚಾಮುಂಡೇಶ್ವರಿ)
ಉತ್ತರಿಸುವ ದಿನಾಂಕ	:	13.03.2020
ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಮೈಸೂರು ನಗರಕ್ಕೆ ಹೊಂದಿಕೊಂಡಂತೆ ಇರುವ ಗ್ರಾಮ ಪಂಚಾಯಿತಿಗಳನ್ನು ಮೈಸೂರು ಮಹಾನಗರ ಪಾಲಿಕೆಗೆ ಸೇರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಮೈಸೂರು ನಗರಕ್ಕೆ ಹೊಂದಿಕೊಂಡಂತೆ ಇರುವ ಗ್ರಾಮ ಪಂಚಾಯಿತಿಗಳನ್ನು ಮೈಸೂರು ಮಹಾನಗರ ಪಾಲಿಕೆಗೆ ಸೇರಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುತ್ತದೆ.
ಆ)	ಹಾಗಿದ್ದಲ್ಲಿ, ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ;	ಪ್ರಸ್ತಾವನೆಯು ಪ್ರಸ್ತುತ ನಗರಾಭಿವೃದ್ಧಿ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.
ಇ)	ಹಾಗಿದ್ದಲ್ಲಿ, ಗ್ರಾಮ ಪಂಚಾಯಿತಿಗಳನ್ನು ಪಾಲಿಕೆಗೆ ಸೇರಿಸಲು ಸರ್ಕಾರವು ಅನುಸರಿಸುತ್ತಿರುವ ಮಾನದಂಡಗಳೇನು (ಸಂಪೂರ್ಣ ಮಾಹಿತಿ ನೀಡುವುದು);	ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರ ಕಲಂ 3 & 4 ರನ್ವಯ ಗ್ರಾಮ ಪಂಚಾಯಿತಿ ಪ್ರದೇಶಗಳನ್ನು ಮಹಾನಗರಪಾಲಿಕೆ ವ್ಯಾಪ್ತಿಗೆ ಸೇರಿಸಬೇಕಾದ್ದಲ್ಲಿ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುವುದು. 1) ಮಹಾನಗರಪಾಲಿಕೆ ಪ್ರದೇಶದ ಜನಸಂಖ್ಯೆ ಮೂರು ಲಕ್ಷಕ್ಕಿಂತ ಕಡಿಮೆ ಇಲ್ಲದ ಜನಸಂಖ್ಯೆಯನ್ನು ಹೊಂದಿರಬೇಕು; 2) ಅಂಥ ಪ್ರದೇಶದಲ್ಲಿನ ಜನಸಾಂದ್ರತೆಯು ಒಂದು ಚದರ ಕಿಲೋಮೀಟರ್ ವಿಸ್ತೀರ್ಣದಲ್ಲಿ ಮೂರು ಸಾವಿರಕ್ಕಿಂತ ಕಡಿಮೆ ಇಲ್ಲದ ನಿವಾಸಿಗಳು ಇರಬೇಕು; 3) ನಿಕಟಪೂರ್ವ ಜನಗಣತಿಯ ವರ್ಷದಲ್ಲಿ ಸ್ಥಳೀಯ ಆಡಳಿತಕ್ಕಾಗಿ ಅಂಥ ಪ್ರದೇಶದಿಂದ ಆದಾಯ ಉತ್ಪಾದನೆಯು ವಾರ್ಷಿಕ ಆರು ಕೋಟಿ ರೂಪಾಯಿಗಳಿಗಿಂತ ಕಡಿಮೆ ಇಲ್ಲದಷ್ಟು ಅಥವಾ ವಾರ್ಷಿಕ ತಲಾವಾರು ಎರಡು ನೂರು ರೂಪಾಯಿಗಳ ದರದಂತ ಲೆಕ್ಕ ಹಾಕಿದಮೊಬಲಗು ಇವೆರಡರಲ್ಲಿ ಯಾವುದು ಅಧಿಕವೋ ಅಷ್ಟು ಇರಬೇಕು; 4) ಕೃಷಿಯೇತರ ಚಟುವಟಿಕೆಗಳಲ್ಲಿನ ತೊಡಗಿರುವ ಉದ್ಯೋಗಗಳ ಶೇಕಡಾವಾರು ಸಂಖ್ಯೆಯು ಒಟ್ಟು ಉದ್ಯೋಗಿಗಳಲ್ಲಿ ಶೇಕಡಾ ಐವತ್ತಕ್ಕಿಂತ ಕಡಿಮೆಯಾಗಿರಕೂಡದು;

ಈ)	ಎಷ್ಟು ಗ್ರಾಮ ಪಂಚಾಯಿತಿಗಳನ್ನು ಪಾಲಿಕೆ ವ್ಯಾಪ್ತಿಗೆ ಸೇರಿಸಲು ಗುರುತಿಸಲಾಗಿದೆ (ಸಂಪೂರ್ಣ ಮಾಹಿತಿ ನೀಡುವುದು);	ಜಿಲ್ಲಾಧಿಕಾರಿ, ಮೈಸೂರು ರವರ ದಿನಾಂಕ:03.02.2020ರ ಪತ್ರದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಗೆ ಕಳುಹಿಸಿದ ಪ್ರಸ್ತಾವನೆ ಅನುಸಾರ ಶ್ರೀರಾಂಪುರ, ಆಲನಹಳ್ಳಿ ಮತ್ತು ಹಿನಕಲ್ ಗ್ರಾಮ ಪಂಚಾಯಿತಿಗಳನ್ನು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಲು ಪ್ರಸ್ತಾಪಿಸಲಾಗಿದೆ.

ಸಂಖ್ಯೆ: ನಅಇ 15 ಎಲ್‌ಎಕ್ಯೂ 2020

(ಬಿ.ಎ. ಬಸವರಾಜು)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 46 ಪಿಆರ್‌ಜೆ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:05-03-2020

37
415
06/03/2020

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,

ಇವರಿಗೆ:

ಕಾರ್ಯದರ್ಶಿಗಳು
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ
ಬೆಂಗಳೂರು.

ಮಾನ್ಯರೆ,

ವಿಷಯ:- ವಿಧಾನಸಭೆ ಸದಸ್ಯರಾದ ಶ್ರೀ ಈಶ್ವರ್ ಖಂಡ್ರೆ (ಭಾಲ್ಕಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:574 ಕ್ಕೆ ಉತ್ತರ ನೀಡುವ ಕುರಿತು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನಸಭೆ ಸದಸ್ಯರಾದ ಶ್ರೀ ಈಶ್ವರ್ ಖಂಡ್ರೆ (ಭಾಲ್ಕಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:574 ಕ್ಕೆ ಉತ್ತರದ 50 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿ ಕೊಡಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

ಲಲಿತಾಬಾಯಿ.ಕೆ

(ಲಲಿತಾಬಾಯಿ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಮೇಕೋ),
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 574
ಸದಸ್ಯರ ಹೆಸರು : ಶ್ರೀ ಈಶ್ವರ್ ಖಂಡ್ರೆ (ಭಾಲ್ಕಿ)
ಉತ್ತರಿಸಬೇಕಾದ ದಿನಾಂಕ : 06-03-2020
ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆಯಲ್ಲಿ KUWS&DB ಹಾಗೂ KUIDFC ಗಳ ವತಿಯಿಂದ ಎಷ್ಟು ನಗರಗಳಲ್ಲಿ ಕುಡಿಯುವ ನೀರು ಮತ್ತು ಒಳಚರಂಡಿ ಯೋಜನೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ (ವಿವರ ನೀಡುವುದು)	**ಕನನೀಸ ಮತ್ತು ಒಚ ಮಂಡಳಿ ವತಿಯಿಂದ:** ಬೀದರ ನಗರದಲ್ಲಿ ಒಳ ಚರಂಡಿ ಹಾಗೂ ಭಾಲ್ಕಿ ಪಟ್ಟಣದಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ ವಿವರ ಕೆಳಕಂಡಂತಿದೆ : 1) ಬೀದರ ನಗರದ ವಲಯ 2 ಮತ್ತು ವಲಯ 3 ರಲ್ಲಿ ಒಳಚರಂಡಿ ಯೋಜನೆಯನ್ನು ಕೇಂದ್ರ ಪುರಸ್ಕೃತ "ಅಮೃತ್" ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿದೆ. 2) ಭಾಲ್ಕಿ ಪಟ್ಟಣ ಹಾಗೂ ಮಾರ್ಗ ಮಧ್ಯದ 23 ಗ್ರಾಮಗಳಿಗೆ ಕಾರಂಜಾ ಜಲಾಶಯದಿಂದ ಕುಡಿಯುವ ನೀರು ಸರಬರಾಜು ಮಾಡುವ ರೂ.140.54 ಕೋಟಿ ಕಾಮಗಾರಿಯನ್ನು ರಾಜ್ಯ ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿದೆ. **ಕೆಯುಐಡಿಎಫ್‌ಸಿ ವತಿಯಿಂದ:** ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿಯಲ್ಲಿ (ಎನ್‌ಕೆಯುಎಸ್‌ಐಪಿ) ಯೋಜನೆಯಡಿ ಬೀದರ್ ಜಿಲ್ಲೆಯಲ್ಲಿ ಬೀದರ್ ಹಾಗೂ ಬಸವಕಲ್ಯಾಣದಲ್ಲಿ ಕುಡಿಯುವ ನೀರು ಹಾಗೂ ಬೀದರ್ ನಗರದಲ್ಲಿ ಒಳಚರಂಡಿ ಕಾಮಗಾರಿಗಳನ್ನು ಕೈಗೊಂಡಿದ್ದು ವಿವರ ಈ ಕೆಳಗಿನಂತಿದೆ: **ಬೀದರ್ ನಗರ:** • ಸಗಟು ನೀರು ಸರಬರಾಜು ವ್ಯವಸ್ಥೆ ಸುಧಾರಣೆ ಮತ್ತು ನೀರು ಶುದ್ಧೀಕರಣ ಘಟಕ (ಪ್ಯಾಕೇಜು 02ಬಿಡಿಆರ್01) • ಕುಡಿಯುವ ನೀರು ವಿತರಣಾ ಜಾಲ (ಪ್ಯಾಕೇಜು 02ಬಿಡಿಆರ್01ಎ) • 24X7 ನೀರು ಸರಬರಾಜು ಯೋಜನೆ (ಪ್ಯಾಕೇಜು 04ಬಿಡಿಆರ್01) • ಒಳಚರಂಡಿ ವ್ಯವಸ್ಥೆ ಹಾಗೂ ಎಸ್‌ಟಿಪಿ ನಿರ್ಮಾಣ (ಪ್ಯಾಕೇಜು-02ಬಿಡಿಆರ್02). • ಹೊಸ ಪ್ರದೇಶಕ್ಕೆ ಒಳಚರಂಡಿ ವ್ಯವಸ್ಥೆ ವಿಸ್ತರಣೆ (ಪ್ಯಾಕೇಜು-03ಬಿಡಿಆರ್02). **ಬಸವಕಲ್ಯಾಣ ನಗರ** • ಸಗಟು ನೀರು ಸರಬರಾಜು ವ್ಯವಸ್ಥೆ (ಪ್ಯಾಕೇಜು-02ಬಿಎಸ್‌ಕೆ01). • 24X7 ನೀರು ಸರಬರಾಜು ಯೋಜನೆ (ಪ್ಯಾಕೇಜು-04ಬಿಎಸ್‌ಕೆ01).

ಆ)	ಸದರಿ ಕಾಮಗಾರಿಗಳು ಯಾವ ಹಂತದಲ್ಲಿವೆ (ಮಾಹಿತಿಯನ್ನು ಒದಗಿಸುವುದು)	**ಕನನೀಸ ಮತ್ತು ಒಚ ಮಂಡಳಿ ವತಿಯಿಂದ:** **1) ಭಾಲ್ಕಿ ಪಟ್ಟಣದ ಕುಡಿಯುವ ನೀರು ಸರಬರಾಜು ಕಾಮಗಾರಿ:** ಭಾಲ್ಕಿ ಪಟ್ಟಣ ಮತ್ತು ಮಾರ್ಗ ಮಧ್ಯದ 23 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆಯ ಕಾಮಗಾರಿಗಳು ಶೇ. 80% ರಷ್ಟು ಪೂರ್ಣಗೊಂಡಿದ್ದು, ಮಾರ್ಚ್-2020 ರ ಕೊನೆಯಲ್ಲಿ ಪ್ರಾಯೋಗಿಕವಾಗಿ ಚಾಲನೆ ಮಾಡಿ, ಗುತ್ತಿಗೆಯ ಕಾಲಾವಧಿಯಂತೆ ಜುಲೈ-2020 ಅಂತ್ಯಕ್ಕೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿ ಚಾಲನೆಗೊಳಿಸಲಾಗುವುದು. **1) ಬೀದರ ನಗರದ ಒಳಚರಂಡಿ ಯೋಜನೆ:** ಬೀದರ ನಗರದ ವಲಯ 2 ರ ಪ್ರದೇಶಕ್ಕೆ ಒಳಚರಂಡಿ ಯೋಜನೆಯನ್ನು ಕಲ್ಪಿಸುವ ಕಾಮಗಾರಿಗಳು ಶೇ. 98% ರಷ್ಟು ಪೂರ್ಣಗೊಂಡಿದ್ದು, ಯೋಜನೆಯನ್ನು ಡಿಸೆಂಬರ್-2019 ರಲ್ಲಿ ಪ್ರಾಯೋಗಿಕವಾಗಿ ಚಾಲನೆಗೊಳಿಸಲಾಗಿದೆ. ಬಾಕಿ ಕಾಮಗಾರಿಗಳನ್ನು ಮಾರ್ಚ್-2020ರೊಳಗಾಗಿ ಪೂರ್ಣಗೊಳಿಸಲಾಗುವುದು. ಬೀದರ ನಗರದ ವಲಯ 3 ರ ಪ್ರದೇಶಕ್ಕೆ ಒಳಚರಂಡಿ ಯೋಜನೆ ಕಲ್ಪಿಸುವ ಕಾಮಗಾರಿಗಳು ಶೇ.50% ರಷ್ಟು ಪೂರ್ಣಗೊಂಡಿರುತ್ತವೆ. ವಲಯ-3 ರ ವೆಟ್‌ವೆಲ್ ಮತ್ತು ಮಲಿನ ನೀರು ಸಂಸ್ಕರಣಾ ಘಟಕ ನಿರ್ಮಿಸಲು ನೌಬಾದ ಗ್ರಾಮ ವ್ಯಾಪ್ತಿಯಲ್ಲಿ ನಿವೇಶನವನ್ನು ಗುರುತಿಸಲಾಗಿದ್ದು, ನಗರಸಭೆ, ಬೀದರ ವತಿಯಿಂದ ಭೂಸ್ವಾಧೀನಪಡಿಸಿಕೊಂಡ ನಂತರ, ವೆಟ್‌ವೆಲ್ ಮತ್ತು ಮಲಿನ ನೀರು ಸಂಸ್ಕರಣಾ ಘಟಕದ ನಿರ್ಮಾಣವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು. **ಕೆಯುಐಡಿಎಫ್‌ಸಿ ವತಿಯಿಂದ:** **ಬೀದರ್ ನಗರ :** ಬೀದರ್ ನಗರದಲ್ಲಿ ಸಗಟು ನೀರು ಸರಬರಾಜು ವ್ಯವಸ್ಥೆ ಸುಧಾರಣೆ ಮತ್ತು ನೀರು ಶುದ್ಧೀಕರಣ ಘಟಕ ಹಾಗೂ ನೀರು ವಿತರಣಾ ಜಾಲದ ಕಾಮಗಾರಿ ಪೂರ್ಣಗೊಂಡಿದ್ದು ಮುಂದಿನ ನಿರ್ವಹಣೆಗೆ ನಗರಸಭೆಗೆ ಹಸ್ತಾಂತರಿಸಿದೆ. 24X7 ನೀರು ಸರಬರಾಜು ಯೋಜನೆ ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿದ್ದು, ಕರಾರಿನ ನಿಯಮದಂತೆ ಗುತ್ತಿಗೆದಾರರು ಫೇಸ್-2ಯಡಿ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ನಿರ್ವಹಿಸುತ್ತಿರುತ್ತಾರೆ. ಒಳಚರಂಡಿ ವ್ಯವಸ್ಥೆ ಸುಧಾರಣೆಯ ಕಾಮಗಾರಿ ಪೂರ್ಣಗೊಂಡಿದ್ದು, ದೋಷನಿವಾರಣ ಅವಧಿಯಲ್ಲಿರುತ್ತದೆ. ಎಸ್‌ಟಿಪಿ ಘಟಕದಲ್ಲಿ ಜಲತ್ಯಾಜ್ಯವನ್ನು ಸಂಗ್ರಹಿಸಿದಾಗ ಘಟಕದ ತಳಭಾಗದಲ್ಲಿ ತ್ಯಾಜ್ಯದ ನೀರು ಸೋರುವಿಕೆಯ ನ್ಯೂನತೆ ಕಂಡುಬಂದ ಕಾರಣ ಅದನ್ನು ಸರಿಪಡಿಸಲು ಪರಿಣಿತರ ಅಭಿಪ್ರಾಯ ಪಡೆದು ಕ್ರಮ ತೆಗೆದುಕೊಳ್ಳಲಾಗಿದೆ.

ಬಸವಕಲ್ಯಾಣ ನಗರ :

ಸಗಟು ನೀರು ಸರಬರಾಜು ವ್ಯವಸ್ಥೆ ಕಾಮಗಾರಿ ಪೂರ್ಣಗೊಂಡಿದ್ದು ಮುಂದಿನ ನಿರ್ವಹಣೆಗೆ ನಗರಸಭೆಗೆ ಹಸ್ತಾಂತರಿಸಿದೆ.

24X7 ನೀರು ಸರಬರಾಜು ಯೋಜನೆ ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿದ್ದು, ಕರಾರಿನ ನಿಯಮದಂತೆ ಗುತ್ತಿಗೆದಾರರು ಫೇಸ್-2 ಯಡಿ ಕಾರ್ಯಚರಣೆ ಮತ್ತು ನಿರ್ವಹಣೆಯನ್ನು ನಿರ್ವಹಿಸುತ್ತಿದ್ದು, ಫೇಸ್-3 ಗೆ ಪ್ರವೇಶ ಮಾಡುವ ಹಂತದಲ್ಲಿರುತ್ತದೆ.

ಇ) ಈ ಕಾಮಗಾರಿಗಳ ಟೆಂಡರ್ ಮೊತ್ತ ಮತ್ತು ಇಲ್ಲಿಯವರೆಗಿನ ಪ್ರಗತಿಯೇನು ? (ಗುತ್ತಿಗೆದಾರರ ಸಂಪೂರ್ಣ ವಿವರ ಒದಗಿಸುವುದು)

ಕನನೀಸ ಮತ್ತು ಒಚ ಮಂಡಳಿ ವತಿಯಿಂದ:

1) **ಭಾಲ್ಕಿ ಪಟ್ಟಣದ ಕುಡಿಯುವ ನೀರು ಸರಬರಾಜು ಕಾಮಗಾರಿಯ ಪ್ರಗತಿ ವಿವರಗಳು :**

i) ಮೂಲಸ್ಥಾವರ, 15200 ಮೀ ಉದ್ದದ 559 ಮಿ.ಮೀ ವ್ಯಾಸದ ಎಮ್ ಎಸ್ ಕಚ್ಚಾ ನೀರಿನ ಏರು ಕೊಳವೆ ಮಾರ್ಗ, 20 ಎಮ್‌ಎಲ್‌ಡಿ ಸಾಮರ್ಥ್ಯದ ಜಲಶುದ್ಧೀಕರಣ ಘಟಕ, 10 ಲಕ್ಷ ಸಾಮರ್ಥ್ಯದ ಒಂದು ಮತ್ತು 5 ಲಕ್ಷ ಲೀಟರ್ ಸಾಮರ್ಥ್ಯದ ಒಂದು ಮೇಲ್ಮಟ್ಟದ ಜಲಸಂಗ್ರಹಾಗಾರಗಳು, 26946 ಮೀ ಉದ್ದದ 250 ರಿಂದ 600 ಮಿ.ಮೀ ವ್ಯಾಸದ ಡಿ.ಐ. ಫೀಡರ್ ಮೈನ್ ಕೊಳವೆ ಮಾರ್ಗ, 151.50 ಕಿ. ಮೀ ಉದ್ದದ 75 ರಿಂದ 350 ಮಿ.ಮೀ ವ್ಯಾಸದ ಡಿ.ಐ ಮತ್ತು ಹೆಚ್.ಡಿ.ಪಿ.ಇ ನೀರು ಸರಬರಾಜು ವಿತರಣಾ ಜಾಲ ಮತ್ತು 7866 ಸಂಖ್ಯೆಯ ಗೃಹ ಸಂಪರ್ಕ ಒದಗಿಸುವ ಕಾಮಗಾರಿ ಒಳಗೊಂಡಂತೆ ಇತ್ಯಾದಿ ಕಾಮಗಾರಿಯ ಪ್ಯಾಕೇಜ್ ಟೆಂಡರ್:

ಗುತ್ತಿಗೆದಾರರು	:	ಮೆ॥ ಲಕ್ಷ್ಮೀ ಸಿವಿಲ್ ಇಂಜಿನಿಯರಿಂಗ್ ಸರ್ವಿಸ್ಸ ಪ್ರೇ.ಲಿ., ಕೊಲ್ಹಾಪುರ
ಗುತ್ತಿಗೆ ಮೊತ್ತ	:	ರೂ. 96.22 ಕೋಟಿಗಳು.
ಗುತ್ತಿಗೆ ಕಾಲಾವಧಿ	:	30 ತಿಂಗಳು. ಕಾಮಗಾರಿ ಪ್ರಾರಂಭಿಸಿದ ದಿನಾಂಕ :11.01.2018.
ಆರ್ಥಿಕ ಪ್ರಗತಿ	:	ರೂ. 65.61 ಕೋಟಿಗಳು
ಭೌತಿಕ ಪ್ರಗತಿ	:	ಮೂಲ ಸ್ಥಾವರ ಮತ್ತು ಕಚ್ಚಾ ನೀರಿನ ಏರು ಕೊಳವೆ ಮಾರ್ಗ, 25 ಕಿ.ಮೀ ಉದ್ದದ ಫೀಡರ್ ಮೆನ್, 120 ಕಿ.ಮೀ. ಉದ್ದದ ವಿತರಣಾ ಜಾಲ ಮತ್ತು 4500 ಸಂಖ್ಯೆ ಗೃಹ ಸಂಪರ್ಕ ಒದಗಿಸುವ ಕಾಮಗಾರಿ ಮತ್ತು ಶೇ. 40% ರಷ್ಟು 20 ಎಮ್‌ಎಲ್‌ಡಿ ಸಾಮರ್ಥ್ಯದ ಜಲಶುದ್ಧೀಕರಣ ಘಟಕದ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ii) ಮೂಲಸ್ಥಾವರದಲ್ಲಿ ಮೂರು ಸಂಖ್ಯೆ 335 ಹೆಚ್‌ಪಿ ಸಾಮರ್ಥ್ಯದ ಸಬ್‌ಮರ್ಸಿಬಲ್ ಮತ್ತು ಜಲಶುದ್ಧೀಕರಣ ಘಟಕದ'ಲ್ಲಿ ಮೂರು ಸಂಖ್ಯೆ 100 ಹೆಚ್‌ಪಿ ಸಾಮರ್ಥ್ಯದ ಸೆಂಟ್ರಿಫೂಗಲ್ ಪಂಪಸೆಟ್ ಅಳವಡಿಸುವ ಕಾಮಗಾರಿ.

ಗುತ್ತಿಗೆದಾರರು	:	ಮೇ//ಪ್ಲೊಮೋರ್ ಪ್ರೈ.ಲಿ., ಬೆಂಗಳೂರು
ಗುತ್ತಿಗೆ ಮೊತ್ತ	:	ರೂ. 1.86 ಕೋಟಿಗಳು.
ಗುತ್ತಿಗೆ ಕಾಲಾವಧಿ	:	06 ತಿಂಗಳು. ಕಾಮಗಾರಿ ಪ್ರಾರಂಭಿಸಿದ ದಿನಾಂಕ :23.09.2019.
ಆರ್ಥಿಕ ಪ್ರಗತಿ	:	ರೂ. 31.00 ಲಕ್ಷಗಳು.
ಭೌತಿಕ ಪ್ರಗತಿ	:	ಟ್ರಾನ್ಸ್ ಫಾರ್ಮರ್ ಸರಬರಾಜು ಮಾಡಲಾಗಿದ್ದು, ಪಂಪ್‌ಸೆಟ್‌ಗಳು ತಯಾರಿಕಾ ಸಂಸ್ಥೆಯಲ್ಲಿ ಪರಿವೀಕ್ಷಣೆಯಲ್ಲಿವೆ.

iii) 20 ಎಮ್‌ಎಲ್‌ಡಿ ಸಾಮರ್ಥ್ಯದ ಜಲಶುದ್ಧೀಕರಣ ಘಟಕದಲ್ಲಿ ಮೈಕ್ರೊಫೈಬರ್ ಫಿಲ್ಟರ್ ಅಳವಡಿಸುವ ಕಾಮಗಾರಿ.

ಗುತ್ತಿಗೆದಾರರು	:	ಮೇ//ಸುಪ್ರದಾ ಕನ್‌ಸ್ಟ್ರಕ್ಷನ್ಸ್ ಪ್ರೈ.ಲಿ., ಧಾರವಾಡ.
ಗುತ್ತಿಗೆ ಮೊತ್ತ	:	ರೂ. 9.08 ಕೋಟಿಗಳು.
ಗುತ್ತಿಗೆ ಕಾಲಾವಧಿ	:	06 ತಿಂಗಳು. ಕಾಮಗಾರಿ ಪ್ರಾರಂಭಿಸಿದ ದಿನಾಂಕ :16.12.2019.
ಆರ್ಥಿಕ ಪ್ರಗತಿ	:	ರೂ. 3.50 ಕೋಟಿಗಳು.
ಭೌತಿಕ ಪ್ರಗತಿ	:	ಒಟ್ಟು 28 ಸಂಖ್ಯೆ ಸೆಕ್ಯೂರಿಟಿ ಫಿಲ್ಟರ್‌ಗಳನ್ನು ಸರಬರಾಜು ಮಾಡಲಾಗಿದೆ.

(iv) ಮೂಲಸ್ಥಾವರ ಮತ್ತು ಜಲಶುದ್ಧೀಕರಣ ಘಟಕ್ಕಕೆ 25.5 ಕಿ.ಮೀ ಉದ್ದದ 11 ಕೆವಿ ವಿದ್ಯುತ್ ಸರಬರಾಜು ಮಾಡುವ ಕಾಮಗಾರಿ.

ಗುತ್ತಿಗೆದಾರರು	:	ಮೇ//ಉಮಾ ಎಲೆಕ್ಟ್ರಿಕಲ್ಸ್, ಕುಷ್ಟಗಿ
ಗುತ್ತಿಗೆ ಮೊತ್ತ	:	ರೂ.1.65 ಕೋಟಿಗಳು.
ಗುತ್ತಿಗೆ ಕಾಲಾವಧಿ	:	06 ತಿಂಗಳು. ಕಾಮಗಾರಿ ಪ್ರಾರಂಭಿಸಿದ ದಿನಾಂಕ :02.12.2019.
ಆರ್ಥಿಕ ಪ್ರಗತಿ	:	ರೂ. 1.06 ಕೋಟಿಗಳು.
ಭೌತಿಕ ಪ್ರಗತಿ	:	15 ಕಿ.ಮೀ ಉದ್ದದ ವಿದ್ಯುತ್ ಮಾರ್ಗ ಪೂರ್ಣಗೊಂಡಿದೆ.

2) ಬೀದರ ನಗರ ಒಳಚರಂಡಿ ಯೋಜನೆ ಕಾಮಗಾರಿಗಳ ವಿವರಗಳು :

i) ವಲಯ (2) ರ ಪ್ರದೇಶಕ್ಕೆ 126 ಕಿ ಮೀ ಉದ್ದದ ಒಳಚರಂಡಿ ಕೊಳವೆ ಮಾರ್ಗ, ವೆಟ್‌ವಲ್ ನಿರ್ಮಾಣ, 17.26 ಎಂ.ಎಲ್.ಡಿ ಸಾಮರ್ಥ್ಯದ SBR ತಂತ್ರಜ್ಞಾನದ ಮಲಿನ ನೀರು ಸಂಸ್ಕರಣಾ ಘಟಕ ನಿರ್ಮಾಣ ಹಾಗೂ 12630 ಸಂಖ್ಯೆ ಒಳಚರಂಡಿ ಗೃಹ ಸಂಪರ್ಕ ಒದಗಿಸುವ ಕಾಮಗಾರಿ.

ಗುತ್ತಿಗೆದಾರರು	:	ಮೇ// ಎಲ್.ಸಿ.ಇನ್ಫ್ರಾ ಪ್ರೊಜೆಕ್ಟ್ಸ ಪ್ರೈ. ಲಿ., ಅಹಮದಾಬಾದ
ಗುತ್ತಿಗೆ ಮೊತ್ತ	:	ರೂ. 125.21 ಕೋಟಿಗಳು
ಗುತ್ತಿಗೆ ಕಾಲಾವಧಿ	:	36 ತಿಂಗಳು. ಕಾಮಗಾರಿ ಪ್ರಾರಂಭಿಸಿದ ದಿನಾಂಕ :01.11.2016.
ಆರ್ಥಿಕ ಪ್ರಗತಿ	:	ರೂ. 89.96 ಕೋಟಿಗಳು
ಭೌತಿಕ ಪ್ರಗತಿ	:	126.00 ಕಿ.ಮೀ. ಉದ್ದದ ಒಳಚರಂಡಿ

		ಕೊಳವೆ ಮಾರ್ಗ, 11503 ಸಂಖ್ಯೆ ಒಳಚರಂಡಿ ಗೃಹ ಸಂಪರ್ಕ ಜೋಡಣೆ, ಅಮಲಾಪೂರ ನಾಲಾ ಮತ್ತು ನ್ಯೂ ಆದರ್ಶ ಕಾಲೋನಿಯಲ್ಲಿ ವೆಟ್‌ವೆಲ್ ನಿರ್ಮಾಣ ಮತ್ತು ಗೋರನಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ 17.26 ಎಂ.ಎಲ್.ಡಿ. ಸಾಮರ್ಥ್ಯದ SBR ಮಾದರಿಯ ಮಲೀನ ನೀರು ಸಂಸ್ಕರಣಾ ಘಟಕದ ನಿರ್ಮಾಣದ ಕಾಮಗಾರಿ ಪೂರ್ಣಗೊಂಡಿರುತ್ತದೆ.

ii) ವಲಯ (3) ರ ಪ್ರದೇಶಕ್ಕೆ 67 ಕಿ ಮೀ ಉದ್ದದ ಒಳಚರಂಡಿ ಕೊಳವೆ ಮಾರ್ಗ, ವೆಟ್‌ವಲ್ ನಿರ್ಮಾಣ, 7.00 ಎಂ.ಎಲ್.ಡಿ ಸಾಮರ್ಥ್ಯದ SBR ತಂತ್ರಜ್ಞಾನದ ಮಲೀನ ನೀರು ಸಂಸ್ಕರಣಾ ಘಟಕ ನಿರ್ಮಾಣ ಹಾಗೂ 5753 ಸಂಖ್ಯೆ ಒಳಚರಂಡಿ ಗೃಹ ಸಂಪರ್ಕ ಒದಗಿಸುವ ಕಾಮಗಾರಿ.

ಗುತ್ತಿಗೆದಾರರು	:	ಮೇ// ಜಯಂತಿ ಸೂಪರ್ ಕನ್‌ಸ್ಟ್ರಕ್ಷನ್ಸ ಪ್ರೈ. ಲಿ., ಮೆಹಸಾನಾ, ಗುಜರಾತ.
ಗುತ್ತಿಗೆ ಮೊತ್ತ	:	ರೂ. 58.62 ಕೋಟಿಗಳು.
ಗುತ್ತಿಗೆ ಕಾಲಾವಧಿ	:	18 ತಿಂಗಳು. ಕಾಮಗಾರಿ ಪ್ರಾರಂಭಿಸಿದ ದಿನಾಂಕ :10.10.2018.
ಆರ್ಥಿಕ ಪ್ರಗತಿ	:	ರೂ. 24.57 ಕೋಟಿಗಳು.
ಭೌತಿಕ ಪ್ರಗತಿ	:	48.50 ಕಿ.ಮೀ. ಉದ್ದದ ಒಳಚರಂಡಿ ಕೊಳವೆ ಮಾರ್ಗ ಮತ್ತು 3947 ಸಂಖ್ಯೆ ಒಳಚರಂಡಿ ಗೃಹ ಸಂಪರ್ಕ ಜೋಡಣೆಯ ಕಾಮಗಾರಿ ಪೂರ್ಣಗೊಂಡಿರುತ್ತದೆ.

ಕೆಯುಐಡಿಎಫ್‌ಸಿ ವತಿಯಿಂದ:

ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ.

ಸಂಖ್ಯೆ: ನಅಇ 46 ಪಿಆರ್‌ಜೆ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು.

ಅನುಬಂಧ-1

ವಿಧಾನ ಸದಸ್ಯರಾದ ಶ್ರೀ. ಈಶ್ವರ್ ಖಂಡ್ರೆ (ಭಾಲ್ಕಿ) ಇವರ ಚುಕ್ಕೆ ರಹಿತ ಪ್ರಶ್ನೆ ಸಂ 574 ಕ್ಕೆ ಕರಡು ಉತ್ತರ

ಕ್ರ. ಸಂ	ಕಾಮಗಾರಿ ವಿವರ	ಗುತ್ತಿಗೆದಾರರ ವಿವರ	ಗುತ್ತಿಗೆ ಮೊತ್ತ (ರೂ.ಲಕ್ಷ)	ವೆಚ್ಚ ವಾಗಿರುವ ಮೊತ್ತ (ರೂ.ಲಕ್ಷ)
1	ಬೀದರ್ ನಗರ			
ಅ	ಸಗಟು ನೀರು ಸರಬರಾಜು ವ್ಯವಸ್ಥೆ ಸುಧಾರಣೆ ಮತ್ತು ನೀರು ಶುದ್ಧೀಕರಣ ಘಟಕ (ಪ್ಯಾಕೇಜು 02ಬಿಡಿಆರ್01)	ಮೆ//ಮೆಘ ಇಂಜಿನೀಯರಿಂಗ್ & ಇನ್ಫ್ರಾಸ್ಟ್ರಕ್ಚರಸ್ ಲಿ., ಹೈದರಾಬಾದ್	2803.0	2677.0 (ಪೂರ್ಣಗೊಂಡಿದೆ)
ಆ	ಕುಡಿಯುವ ನೀರು ವಿತರಣಾ ಜಾಲ (ಪ್ಯಾಕೇಜು 02ಬಿಡಿಆರ್01ಎ)	ಮೆ//ಮೆಘ ಇಂಜಿನೀಯರಿಂಗ್ & ಇನ್ಫ್ರಾಸ್ಟ್ರಕ್ಚರಸ್ ಲಿ., ಹೈದರಾಬಾದ್	2758.0	2662.0 (ಪೂರ್ಣಗೊಂಡಿದೆ)
ಇ	24X7 ನೀರು ಸರಬರಾಜು ಯೋಜನೆ (ಪ್ಯಾಕೇಜು 04ಬಿಡಿಆರ್01)	ಮೆ//ವಿಶ್ವರಾಜ್ ಇನ್ಫ್ರಾಸ್ಟ್ರಕ್ಚರಸ್ ಲಿ., ನಾಗಪೂರ್, ಮಹಾರಾಷ್ಟ್ರ	4200.0	3129.0 (ಪ್ರಗತಿಯಲ್ಲಿದೆ)
ಈ	ಒಳಚರಂಡಿ ವ್ಯವಸ್ಥೆ ಹಾಗೂ ಎಸ್.ಟಿ.ಪಿ ನಿರ್ಮಾಣ (ಪ್ಯಾಕೇಜು-02ಬಿಡಿಆರ್02).	ಮೆ// ಅಯ್ಯಪ್ಪ ಇನ್ಫ್ರಾ ಪ್ರಾಜೆಕ್ಟ್ಸ್ ಲಿ. ಮತ್ತು ಮೆ//ಮೆಘಾ ಇಂಜಿನೀಯರ್ಸ್ ಮತ್ತು ಇನ್ಫ್ರಾಸ್ಟ್ರಕ್ಚರ್ಸ್ ಪ್ರೈ.ಲಿ (ಜಿ.ವಿ) ಹೈದರಾಬಾದ್	3980.0	3519.8 (ಪೂರ್ಣಗೊಂಡಿದೆ)
ಉ	ಹೊಸ ಪ್ರದೇಶಕ್ಕೆ ಒಳಚರಂಡಿ ವ್ಯವಸ್ಥೆ ವಿಸ್ತರಣೆ (ಪ್ಯಾಕೇಜು-03ಬಿಡಿಆರ್02).	ಶ್ರೀ.ಗುರುನಾಥ್ ಕೊಲ್ಲೂರ್, ಬೀದರ್	1797.0	1797.0 (ಪೂರ್ಣಗೊಂಡಿದೆ)
2	ಬಸವಕಲ್ಯಾಣ ನಗರ:			
ಅ	ಸಗಟು ನೀರು ಸರಬರಾಜು ವ್ಯವಸ್ಥೆ (ಪ್ಯಾಕೇಜು-02ಬಿಎಸ್‌ಕೆ01).	ಮೆ//ಮೆಘ ಇಂಜಿನೀಯರಿಂಗ್ & ಇನ್ಫ್ರಾಸ್ಟ್ರಕ್ಚರಸ್ ಲಿ., ಹೈದರಾಬಾದ್	2692.0	2599.0 (ಪೂರ್ಣಗೊಂಡಿದೆ)
ಆ	24X7 ನೀರು ಸರಬರಾಜು ಯೋಜನೆ (ಪ್ಯಾಕೇಜು-04ಬಿಎಸ್‌ಕೆ01).	ಮೆ//ವಿಶ್ವರಾಜ್ ಇನ್ಫ್ರಾಸ್ಟ್ರಕ್ಚರಸ್ ಲಿ., ನಾಗಪೂರ್, ಮಹಾರಾಷ್ಟ್ರ	5657.0	3057.0 (ಪ್ರಗತಿಯಲ್ಲಿದೆ)

ಕಾರ್ಯ ವ್ಯವಸ್ಥಾಪಕರು
(ಕೆಯುಐಡಿಎಫ್‌ಸಿ/ಎನ್‌ಕೆಯುಎಸ್‌ಐಪಿ)

ಕರ್ನಾಟಕ ಸರ್ಕಾರ

ಸಂಖ್ಯೆ: ತೋಇ 69 ತೋಇವಿ 2020

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 05.03.2020

86
48
06/03/20

ಇವರಿಂದ:
ಸರ್ಕಾರದ ಕಾರ್ಯದರ್ಶಿ,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ.

ಇವರಿಗೆ:
ಕಾರ್ಯದರ್ಶಿಯವರು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ರೇವಣ್ಣ ಹೆಚ್.ಡಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 590ರ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ರೇವಣ್ಣ ಹೆಚ್.ಡಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 590ರ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ತಮಗೆ ಕಳುಹಿಸಲು ನಿರ್ದೇಶಿಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,
Maj 5/3
(ಟಿ.ಮಂಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ.

ಪ್ರತಿಯನ್ನು :

1) ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ,
2) ಮಾನ್ಯ ತೋಟಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಉಪ ಕಾರ್ಯದರ್ಶಿ ರವರ ಆಪ್ತ ಸಹಾಯಕರು, ತೋಟಗಾರಿಕೆ ಇಲಾಖೆ,
4) ಶಾಖಾಧಿಕಾರಿಗಳು(ಸ್ವೀ & ರ ಹಾಗೂ ಸಮನ್ವಯ), ತೋಟಗಾರಿಕೆ ಇಲಾಖೆ, ಬೆಂಗಳೂರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ	:	590
ಸದಸ್ಯರ ಹೆಸರು	:	ಶ್ರೀ. ರೇವಣ್ಣ ಹೆಚ್.ಡಿ
ಉತ್ತರಿಸುವ ಸಚಿವರು	:	ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು
ಉತ್ತರಿಸಬೇಕಾದ ದಿನಾಂಕ	:	06-03--2020

ಕ್ರಸಂ	ಪ್ರಶ್ನೆ	ಉತ್ತರ
ಅ.	2019-20 ನೇ ಸಾಲಿನಲ್ಲಿ ಹಾಸನ ಜಿಲ್ಲೆಯಲ್ಲಿ ಆಲೂಗಡ್ಡೆ ಬೆಳೆಯು ಅಂಗಮಾರಿ ರೋಗಕ್ಕೆ ತುತ್ತಾಗಿ, ರೈತರು ಸಂಕಷ್ಟಕ್ಕೀಡಾಗಿದ್ದರಿಂದ ಆಲೂಗಡ್ಡೆ ಬೆಳೆಗೆ ಪ್ರೋತ್ಸಾಹಧನ ಯೋಜನೆಯನ್ನು ಜಾರಿಗೆ ತಂದು ಬೆಳೆ ಬೆಳೆಯುವ ರೈತರಿಗೆ ಶೇ. 50 ರ ಸಹಾಯಧನ ಸೌಲಭ್ಯ ಒದಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು
ಆ.	ರಾಜ್ಯದಲ್ಲಿ ಈ ಯೋಜನೆಯಿಂದ ಎಷ್ಟು ಆಲೂಗಡ್ಡೆ ಬೆಳೆಗಾರರಿಗೆ ಸಹಾಯಧನ ನೀಡಲಾಗಿದೆ.(ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು).	ಈ ಯೋಜನೆಯಿಂದ 23902 ಆಲೂಗಡ್ಡೆ ಬೆಳೆಗಾರರಿಗೆ ಸಹಾಯಧನ ನೀಡಲಾಗಿದೆ.

ಕ್ರಸಂ	ಜಿಲ್ಲೆಗಳು	ಸಾಧನೆ		ಸಹಾಯಧನ ಪಡೆದ ಫಲಾನುಭವಿಗಳ ಸಂಖ್ಯೆ
		ಆರ್ಥಿಕ (ರೂ.ಲಕ್ಷಗಳಲ್ಲಿ)	ಭೌತಿಕ (ಹೆ.ಗಳಲ್ಲಿ)	
1	ಹಾಸನ	1079.19	14755	14782
2	ಚಿಕ್ಕಮಗಳೂರು	176.00	2500	3659
3	ಬೆಳಗಾವಿ	94.88	1252	2256
4	ಧಾರವಾಡ	40.00	600	670
5	ಚಿಕ್ಕಬಳ್ಳಾಪುರ	20.00	455	666
6	ಕೋಲಾರ	48.00	950	670
7	ಬೆಂಗಳೂರು (ಗ್ರಾ)	10.29	140	80
8	ಚಾಮರಾಜನಗರ	41.82	661	1112
	ಒಟ್ಟು	1510.18	21313	23902

ಇ.	2020-21 ನೇ ಸಾಲಿನಲ್ಲಿ ಈ ಯೋಜನೆಯನ್ನು ಮುಂದುವರೆಸುವ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು).	ಅನುದಾನದ ಲಭ್ಯತೆ ಮೇರೆಗೆ ನಿರ್ಧರಿಸಲಾಗುವುದು.

ಸಂಖ್ಯೆ: HORTI 69 HGM 20

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ತೋಇ 78 ತೋಇವಿ 2020

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 05.03.2020

ಇವರಿಂದ:
ಸರ್ಕಾರದ ಕಾರ್ಯದರ್ಶಿ,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ.

62
QIS
06/3/20

ಇವರಿಗೆ:
ಕಾರ್ಯದರ್ಶಿಯವರು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಹೆಚ್.ಕೆ.ಕುಮಾರಸ್ವಾಮಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 619ರ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಹೆಚ್.ಕೆ.ಕುಮಾರಸ್ವಾಮಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 619ರ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ತಮಗೆ ಕಳುಹಿಸಲು ನಿರ್ದೇಶಿಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,
5/3
(ಟಿ.ಮಂಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ.

ಪ್ರತಿಯನ್ನು :
1) ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ,
2) ಮಾನ್ಯ ತೋಟಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಉಪ ಕಾರ್ಯದರ್ಶಿ ರವರ ಆಪ್ತ ಸಹಾಯಕರು, ತೋಟಗಾರಿಕೆ ಇಲಾಖೆ,
4) ಶಾಖಾಧಿಕಾರಿಗಳು(ಸ್ವೀ & ರ ಹಾಗೂ ಸಮನ್ವಯ), ತೋಟಗಾರಿಕೆ ಇಲಾಖೆ, ಬೆಂಗಳೂರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : 619

ಸದಸ್ಯರ ಹೆಸರು : ಶ್ರೀ ಕುಮಾರಸ್ವಾಮಿ ಹೆಚ್.ಕೆ

ಉತ್ತರಿಸುವ ಸಚಿವರು : ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 06.03.2020

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹಾಸನ ಜಿಲ್ಲೆಯಲ್ಲಿ ಪ್ರಮುಖ ತೋಟಗಾರಿಕೆ ಬೆಳೆಗಳಾದ ಆಲೂಗಡ್ಡೆ, ತೆಂಗು, ಕಾಫಿ, ಮೆಣಸು, ಏಲಕ್ಕಿ, ಅಡಿಕೆ ಶುಂಠಿ, ಹಣ್ಣಿನ ಬೆಳೆಗಳಾದ ಮಾವು, ಬಾಳೆ, ಸಪೋಟ, ಪಪ್ಪಾಯ ಹಾಗೂ ತರಕಾರಿ ಬೆಳೆಗಳಾದ ಟೊಮೆಟೋ, ಹಸಿರು ಮೆಣಸಿನಕಾಯಿ, ಬೀನ್ಸ್ , ಈರುಳ್ಳಿ ಬೆಳೆಗಳನ್ನು ಸುಮಾರು ಒಂದು ಲಕ್ಷ ತೊಂಬತ್ತು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ</td></tr>
<tr><td>ಆ)</td><td>ಹಾಸನ ಜಿಲ್ಲೆಯ ತೋಟಗಾರಿಕೆ ಇಲಾಖೆಯಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಹುದ್ದೆ, ಸಹಾಯಕ ತೋಟಗಾರಿಕೆ ನಿರ್ದೇಶಕರು, ಸಹಾಯಕ ತೋಟಗಾರಿಕೆ ಅಧಿಕಾರಿ, ದ್ವಿತೀಯ ದರ್ಜೆ ಸಹಾಯಕರು, ಬೆಳಚ್ಚುಗಾರರು, ತೋಟಗಾರಿಕೆಯ ಸಹಾಯಕರು, ಜೇನು ಕೃಷಿ ಪ್ರದರ್ಶಕರು, ಜೇನು ಕೃಷಿ ಸಹಾಯಕರನ್ನೊಳಗೊಂಡಂತೆ ಮಂಜೂರಾದ ಹುದ್ದೆಗಳೆಷ್ಟು; ಇವುಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು; ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)</td><td>
ಹಾಸನ ಜಿಲ್ಲಾ ವ್ಯಾಪ್ತಿಯ ತೋಟಗಾರಿಕೆ ಇಲಾಖೆಯ ವಿವಿಧ ಕಛೇರಿಗಳಲ್ಲಿ ಮಂಜೂರಾದ ಹುದ್ದೆಗಳ ಒಟ್ಟು ಸಂಖ್ಯೆ:158 ಹಾಗೂ ಸದರಿ ಹುದ್ದೆಗಳ ಪೈಕಿ ಖಾಲಿ ಇರುವ ಒಟ್ಟು ಹುದ್ದೆಗಳ ಸಂಖ್ಯೆ:55
ಹುದ್ದೆಗಳ ಸಂಪೂರ್ಣ ಮಾಹಿತಿ ಕೆಳಕಂಡಂತಿದೆ.
<table>
<tr><th>ಹುದ್ದೆ</th><th>ಮಂಜೂರಾದ ಹುದ್ದೆ ಸಂಖ್ಯೆ</th><th>ಖಾಲಿ ಹುದ್ದೆ ಸಂಖ್ಯೆ</th></tr>
<tr><td>ತೋಟಗಾರಿಕೆ ಉಪನಿರ್ದೇಶಕರು</td><td>1</td><td>0</td></tr>
</table>
</td></tr>
</table>

೩) ಉಪನಿರ್ದೇಶಕರ ಕಛೇರಿ ಆಧೀನದಲ್ಲಿರುವ ವಿವಿಧ ತಾಲ್ಲೂಕುಗಳಲ್ಲಿ ಹಲವಾರು ವರ್ಷಗಳಿಂದ ಖಾಲಿ ಇರುವ ಹುದ್ದೆಗಳನ್ನು ರೈತರ ಹಿತದೃಷ್ಟಿಯಿಂದ ಕೂಡಲೇ ನೇಮಕಾತಿ ಮಾಡಲು ಯಾವಾಗ ಕ್ರಮ ಕೈಗೊಳ್ಳಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು	9	1
ಸಹಾಯಕ ತೋಟಗಾರಿಕೆ ನಿರ್ದೇಶಕರು	18	8
ಸಹಾಯಕ ಸಾಂಖ್ಯಿಕ ಅಧಿಕಾರಿ	1	1
ಸಹಾಯಕ ತೋಟಗಾರಿಕೆ ಅಧಿಕಾರಿ	48	19
ಅಧೀಕ್ಷಕರು	6	0
ಪ್ರಥಮ ದರ್ಜೆ ಸಹಾಯಕರು	6	1
ದ್ವಿತೀಯ ದರ್ಜೆಸಹಾಯಕರು	10	3
ತೋಟಗಾರಿಕೆ ಸಹಾಯಕರು	43	13
ಬೆರಳಚ್ಚುಗಾರರು	3	3
ತೋಟಗಾರರು	8	3
ಅಟೆಂಡರ್	2	0
ಜೇನು ಕೃಷಿಸಹಾಯಕರು	2	2
ಜೇನು ಕೃಷಿ ಪ್ರದರ್ಶಕರು	1	1
ಒಟ್ಟು	158	55

ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಈ ಕೆಳಕಂಡಂತೆ ಕ್ರಮ ವಹಿಸಲಾಗಿದೆ.

- 08 ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಹುದ್ದೆಗಳಿಗೆ, 309 ಸಹಾಯಕ ತೋಟಗಾರಿಕೆ ಅಧಿಕಾರಿ ಹುದ್ದೆಗಳಿಗೆ, 48 ಪ್ರಥಮ ದರ್ಜೆ ಸಹಾಯಕರುಗಳ

		ಹುದ್ದೆಗಳಿಗೆ, ಕರ್ನಾಟಕ ಲೋಕಸೇವಾ ಆಯೋಗದಿಂದ ಅಧಿಸೂಚನೆ ಹೊರಡಿಸಲಾಗಿದೆ. • 22 ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ಭರ್ತಿಗಾಗಿ ಕೋರಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಿದೆ. • 200 ತೋಟಗಾರರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಇಲಾಖೆಯಿಂದ ಚಾಲ್ತಿಯಲ್ಲಿದ್ದು ಅರ್ಹತಾ ದಾಖಲೆಗಳ ಪರಿಶೀಲನೆ ಮಾಡಲಾಗುತ್ತಿದೆ. • ಖಾಲಿ ಇರುವ ವಿವಿಧ ವೃಂದಗಳ 1071 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಆರ್ಥಿಕ ಇಲಾಖೆಗೆ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ.

ಸಂಖ್ಯೆ:HORTI 78 HGM 20

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ತೋಇ 74 ತೋಇವಿ 2020

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 05.03.2020

131
G/S
06/3/20

ಇವರಿಂದ:
ಸರ್ಕಾರದ ಕಾರ್ಯದರ್ಶಿ,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ.

ಇವರಿಗೆ:
ಕಾರ್ಯದರ್ಶಿಯವರು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 312ರ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 312ರ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ತಮಗೆ ಕಳುಹಿಸಲು ನಿರ್ದೇಶಿಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,
Manj 5/3
(ಟಿ.ಮಂಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ.

ಪ್ರತಿಯನ್ನು :

1) ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ,
2) ಮಾನ್ಯ ತೋಟಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಉಪ ಕಾರ್ಯದರ್ಶಿ ರವರ ಆಪ್ತ ಸಹಾಯಕರು, ತೋಟಗಾರಿಕೆ ಇಲಾಖೆ,
4) ಶಾಖಾಧಿಕಾರಿಗಳು(ಸ್ವೀ & ರ ಹಾಗೂ ಸಮನ್ವಯ), ತೋಟಗಾರಿಕೆ ಇಲಾಖೆ, ಬೆಂಗಳೂರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆಗುರುತಿಲ್ಲದ ಪ್ರಶ್ನೆಸಂಖ್ಯೆ :312
2. ವಿಧಾನ ಸಭೆ ಸದಸ್ಯರಹೆಸರು :ಶ್ರೀ.ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
3. ಉತ್ತರಿಸಬೇಕಾದ ಸಚಿವರು :ಪೌರಾಡಳಿತ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು
4. ಉತ್ತರಿಸಬೇಕಾದ ದಿನಾಂಕ :06.03.2020

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಯಾವ ಯಾವ ವಸ್ತು ಅಥವಾ ಪದಾರ್ಥಗಳಿಗೆ ಜಿಯೋಗ್ರಾಫಿಕಲ್ ಐಡೆಂಟಿಫಿಕೇಷನ್ ಗುರುತು (GI) ನೀಡಲಾಗಿದೆ; (ವಿವರ ನೀಡುವುದು)	ರಾಜ್ಯದಲ್ಲಿ ಒಟ್ಟು 12 ತೋಟಗಾರಿಕೆ ಬೆಳೆಗಳಿಗೆ ಜಿಯೋಗ್ರಾಫಿಕಲ್ ಐಡೆಂಟಿಫಿಕೇಷನ್ ಗುರುತು (GI) ದೊರಕಿಸಿ ಕೊಡಲು ತೋಟಗಾರಿಕೆ ಇಲಾಖೆ ವತಿಯಿಂದ ಕ್ರಮ ಕೈಗೊಳ್ಳಲಾಗಿದೆ. ಈ ಬೆಳೆಗಳೆಂದರೆ: ನಂಜನಗೂಡು ಬಾಳೆ, ಮೈಸೂರು ವೀಳ್ಯೆದೆಲೆ, ಮೈಸೂರು ಮಲ್ಲಿಗೆ, ಉಡುಪಿ ಮಲ್ಲಿಗೆ, ಮಟ್ಟುಗುಳ್ಳಬದನೆ, ಕೊಡಗಿನ ಕಿತ್ತಳೆ, ಹಡಗಲಿ ಮಲ್ಲಿಗೆ, ಕಮಲಾಪುರ ಕೆಂಪುಬಾಳೆ, ಸಾಗರ ಅಪ್ಪೆಮಿಡಿ, ದೇವನಹಳ್ಳಿ ಚಕ್ಕೋತ, ಬೆಂಗಳೂರು ನೀಲಿ ದ್ರಾಕ್ಷಿ ಮತ್ತು ಬೆಂಗಳೂರು ಕೆಂಪು ಈರುಳ್ಳಿ.
ಆ)	ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಬೆಳೆಯುವ ಲಿಂಬೆಹಣ್ಣು ವಿಶಿಷ್ಟ ಗುಣದಿಂದ ಕೂಡಿದ್ದು, ಇಲ್ಲಿ ಬೆಳಯುವ ಲಿಂಬೆಯು ಅಂತರರಾಜ್ಯ ಮತ್ತು ವಿದೇಶಗಳಿಗೆ ರಫ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಬೆಳೆಯುವ ಲಿಂಬೆಹಣ್ಣು ವಿಶಿಷ್ಟ ಗುಣದಿಂದ ಕೂಡಿದ್ದು, ಇಲ್ಲಿ ಬೆಳಯುವ ಲಿಂಬೆಯು ಅಂತರರಾಜ್ಯ ಮತ್ತು ವಿದೇಶಗಳಿಗೆ ರಫ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಇ)	ಇಂಡಿ ಲಿಂಬೆ ಹಣ್ಣಿಗೆ ಜಿಯೋಗ್ರಫಿಕಲ್ ಐಡೆಂಟಿಫಿಕೇಷನ್ ನನ್ನು ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುವುದು ನಿಜವೇ; ಬಂದಿದ್ದು ಯಾವಾಗ: (ವಿವರ ನೀಡುವುದು)	ಹೌದು. ಮೇ – 2016 ರಲ್ಲಿ ಪ್ರಸ್ತಾವನೆ ನೀಡಲಾಗಿರುತ್ತದೆ. ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಉತ್ಕೃಷ್ಟ ಗುಣಮಟ್ಟದ ಲಿಂಬೆ ಕಾಯಿಗಳನ್ನು ಸುಮಾರು 5 ಸಾವಿರ ಹೇಕ್ಟರ್ ಪ್ರದೇಶದಲ್ಲಿ ಅದರಲ್ಲೂ ವಿಶೇಷವಾಗಿ ಸಾವಯವ ಪದ್ಧತಿಯಲ್ಲಿ ಬೆಳೆಯಲಾಗುತ್ತಿದ್ದು, ಈ ಪ್ರದೇಶದಲ್ಲಿ ಬೆಳೆಯಲಾಗುತ್ತಿರುವ ಲಿಂಬೆ ಕಾಯಿಗಳ ಗುಣಮಟ್ಟ ವಿಶಿಷ್ಟವಾಗಿದ್ದು, ಈ ರೀತಿಯ ಗುಣಮಟ್ಟ ಬೇರೆ ಯಾವುದೇ ಪ್ರದೇಶದಲ್ಲಿ ಬೆಳೆದ ಲಿಂಬೆ ಕಾಯಿಗಳಲ್ಲಿ ಕಾಣುವುದಿಲ್ಲ, ಆದಕಾರಣ ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಬೆಳೆಯಲಾಗುತ್ತಿರುವ ಲಿಂಬೆ ಬೆಳೆಗೂ ಸಹ ಜಿಯೋಗ್ರಫಿಕಲ್ ಐಡೆಂಟಿಫಿಕೇಷನ್ (GI) ಗುರುತು ದೊರಕಿಸಿ ಕೊಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ)	ಇಂಡಿ ನಿಂಬೆಗೆ ಜಿಯೋಗ್ರಾಫಿಕಲ್ ಐಡೆಂಟಿಫಿಕೇಷನ್ ಗುರುತು ದೊರಕಿಸಲು ಸರ್ಕಾರ ಆಸಕ್ತಿ ಹೊಂದಿದೆಯೇ;	ಹೌದು, ಇಂಡಿ ನಿಂಬೆಗೆ ಜಿಯೋಗ್ರಾಫಿಕಲ್ ಐಡೆಂಟಿಫಿಕೇಷನ್ ಗುರುತು ದೊರಕಿಸಲು ಸರ್ಕಾರ ಆಸಕ್ತಿ ಹೊಂದಿದೆ
ಉ)	ಹೊಂದಿದ್ದಲ್ಲಿ, ಸದರಿ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ; ಆದಕ್ಕಾಗಿ ಯಾವ ಯಾವ ಪ್ರಕ್ರಿಯೆಗಳು ಜರುಗಿವೆ; ಬಾಕಿ ಇರುವ ಪ್ರಕ್ರಿಯೆಗಳು ಯಾವುವು; (ವಿವರ ನೀಡುವುದು)	ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, GI ಗುರುತು ದೊರಕಿಸಲು ಅಗತ್ಯವಿರುವ ಪ್ರಕ್ರಿಯೆಗಳು ಚಾಲನೆಯಲ್ಲಿವೆ. ಈ ಕುರಿತಂತೆ ಬೆಳೆಯ ವಿಶೇಷತೆಯ ಬಗ್ಗೆ ವೈಜ್ಞಾನಿಕ ಮಾಹಿತಿ ಕ್ರೋಢೀಕರಿಸಲಾಗುತ್ತಿದೆ. ಈ ಬೆಳೆಯ ವಿಭಿನ್ನತೆಗೆ ನಿರ್ದಿಷ್ಟ ಭೌಗೋಳಿಕ ಪ್ರದೇಶದ ನೈಸರ್ಗಿಕ ಪರಿಸರ ಮತ್ತು ಬೇಸಾಯ ಪದ್ಧತಿಗಳು ಕಾರಣ ಎಂಬುದನ್ನು ದೃಢಪಡಿಸಲು ಆಧಾರಗಳನ್ನು ಸಂಗ್ರಹಿಸಲಾಗುತ್ತಿದೆ. ಬೆಳೆಯ ಇತಿಹಾಸದ ಬಗ್ಗೆ ಮಾಹಿತಿ ಒದಗಿಸಬೇಕಾಗಿದೆ. ಈ ದಿಶೆಯಲ್ಲಿ ಬಾಗಲಕೋಟೆಯಲ್ಲಿರುವ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಪರಿಣಿತರೊಂದಿಗೆ ಸಮಾಲೋಚಿಸಲಾಗುತ್ತಿದೆ. ಬಾಕಿ ಇರುವ ಪ್ರಕ್ರಿಯೆ ಕೆಳ ಕಂಡಂತಿದೆ; (1) ವೈಜ್ಞಾನಿಕ ಮಾಹಿತಿಯನ್ನು ಪೂರ್ಣಗೊಳಿಸಿ ನಿಗದಿತ ನಮೂನೆಯಲ್ಲಿ ಸಿದ್ಧಪಡಿಸುವುದು. (2) ಲಿಂಬೆ ಬೆಳೆಗಾರರ ಸಂಘ ಸ್ಥಾಪಿಸ ಬೇಕಾಗಿದೆ. (3) ಸಂಘದವತಿಯಿಂದ ಚೆನ್ನೈನಲ್ಲಿರುವ ಭೌಗೋಳಿಕ ಗುರುತಿಸುವಿಕೆ ನೊಂದಣಿ ಪ್ರಾಧಿಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಬೇಕಾಗಿದೆ.
ಊ)	ಈ ತಾಲ್ಲೂಕಿಗೆ ಜಿಯೋಗ್ರಾಫಿಕಲ್ ಐಡೆಂಟಿಫಿಕೇಷನ್ ಗುರುತು ದೊರಕಿಸಲಾಗುವುದೆ; ಆದಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಹೌದು. ಮೇಲಿನಂತೆ ಕೈಗೊಂಡಿರುವ ಕ್ರಮಗಳನ್ನು ಕ್ರಮ ಸಂ.(ಉ) ವಿವರಿಸಲಾಗಿದೆ.

ಸಂಖ್ಯೆ: HORTI 67 HGM 20

(ನಾರಾಯಣ ಗೌಡ)

ಪೌರಾಡಳಿತ, ತೋಟಗಾರಿಕೆ ಮತ್ತು

ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ತೋಇ 64 ತೋಇವಿ 2020

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 05.03.2020

13
VS
06/03/20

ಇವರಿಂದ:
ಸರ್ಕಾರದ ಕಾರ್ಯದರ್ಶಿ,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ.

ಇವರಿಗೆ:
ಕಾರ್ಯದರ್ಶಿಯವರು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ. ಅಪ್ಪಚ್ಚುರಂಜನ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 57ರ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ. ಅಪ್ಪಚ್ಚುರಂಜನ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 57ರ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ತಮಗೆ ಕಳುಹಿಸಲು ನಿರ್ದೇಶಿಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,
(ಟಿ.ಮಂಜಪ್ಪ) 5/3
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ.

ಪ್ರತಿಯನ್ನು :

1) ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ,
2) ಮಾನ್ಯ ತೋಟಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಉಪ ಕಾರ್ಯದರ್ಶಿ ರವರ ಆಪ್ತ ಸಹಾಯಕರು, ತೋಟಗಾರಿಕೆ ಇಲಾಖೆ,
4) ಶಾಖಾಧಿಕಾರಿಗಳು(ಸ್ವೀ & ರ ಹಾಗೂ ಸಮನ್ವಯ), ತೋಟಗಾರಿಕೆ ಇಲಾಖೆ, ಬೆಂಗಳೂರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 57

ಸದಸ್ಯರ ಹೆಸರು ಶ್ರೀ. ಅಪ್ಪಚ್ಚು (ರಂಜನ್) ಎಂ.ಪಿ

ಉತ್ತರಿಸುವ ಸಚಿವರು ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸುವ ದಿನಾಂಕ 06.03.2020

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಮಡಿಕೇರಿಯ ರಾಜಾಸೀಟು ಅಭಿವೃದ್ಧಿ ಪಡಿಸಲು ಸರ್ಕಾರ ಕಳೆದ ಮೂರು ವರ್ಷಗಳಿಂದ ಎಷ್ಟು ಅನುದಾನ ನೀಡಲಾಗಿದೆ ಮತ್ತು ಯಾವ ಉದ್ದೇಶಕ್ಕಾಗಿ ಅನುದಾನ ನೀಡಿದೆ;	ಮಡಿಕೇರಿಯ ರಾಜಾಸೀಟು ಅಭಿವೃದ್ಧಿ ಪಡಿಸಲು ಸರ್ಕಾರ ಕಳೆದ ಮೂರು ವರ್ಷಗಳಿಂದ ಅಂದರೆ 2016-17 ರಿಂದ 2018-19ರ ವರೆಗೆ ಒಟ್ಟು ರೂ.47.00 ಲಕ್ಷಗಳ ಅನುದಾನ ನೀಡಿದೆ. ಸಸ್ಯಾಗಾರದ ಪಾಲನೆ ಮತ್ತು ನಿರ್ವಹಣೆಗೆ, ರಾಜಾಸೀಟ್ ಉದ್ಯಾನವನಕ್ಕೆ ಅಗತ್ಯವಿರುವ ಪರಿಕರಗಳಾದ ಮಣ್ಣು, ಮರಳು, ಗೊಬ್ಬರ, ಹೂ ಕುಂಡಗಳು ಹಾಗೂ ಔಷಧಿ ಮತ್ತು ಇತರೆ ಅಗತ್ಯ ಸಾಮಾಗ್ರಿಗಳ ಖರೀದಿಗೆ, ಉದ್ಯಾನವನದ ಅಲಂಕಾರಿಕ ವಿದ್ಯುತ್ ದೀಪ, ಸೋಲಾರ್ ದೀಪ, ಮತ್ತು ವಿದ್ಯುತ್ ಲೈನ್ ಗಳ ಅಳವಡಿಕೆ ಹಾಗೂ ಪ್ಯಾನೆಲ್ ಗಳ ಖರೀದಿ, ದುರಸ್ಥಿ, ನಿರ್ವಹಣೆ ಕಾರ್ಯಗಳನ್ನು ಕೈಗೊಳ್ಳಲು, ನಾಡಹಬ್ಬ ದಸರಾ ಹಾಗೂ ಇತರೆ ರಾಷ್ಟ್ರೀಯ ದಿನಗಳ ಸಂದರ್ಭಗಳಲ್ಲಿ ಉದ್ಯಾನವನ ಮತ್ತು ಕಛೇರಿಗೆ ವಿದ್ಯುತ್ ದೀಪಾಲಂಕಾರ ಕೈಗೊಳ್ಳಲು, ಅಲಂಕಾರಿಕ ಹೂ-ಗಿಡಗಳ ಖರೀದಿಗೆ, ಉದ್ಯಾನವನದ ಸೊಬಗನ್ನು ಹೆಚ್ಚಿಸಲು ಫೈಬರ್ ಪ್ರಾಣಿ ಮಾದರಿಗಳ ಅಳವಡಿಕೆಗಾಗಿ ಮತ್ತು ಉದ್ಯಾನವನದಲ್ಲಿ ಸ್ವಚ್ಛತೆ ಕಾಪಾಡಲು Fibre Glass Dust Bins ಅಳವಡಿಕೆಗಾಗಿ ಅನುದಾನ ನೀಡಲಾಗಿದೆ.
ಆ)	ರಾಜಾಸೀಟು ಒತ್ತಿನಲ್ಲಿಯೇ 5.00 ಎಕರೆ ಖಾಲಿ ಜಾಗವಿದ್ದು ಅಭಿವೃದ್ಧಿ ಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು;	ಪ್ರಸ್ತಾಪಿತ ಪ್ರದೇಶವು ಜಿಲ್ಲಾಡಳಿತದ ನಿಯಂತ್ರಣದಲ್ಲಿದೆ. ಪ್ರಸ್ತಾಪಿತ ಪ್ರದೇಶದ ಅಭಿವೃದ್ಧಿಗೆ ಸಂಬಂಧಿಸಿದಂತೆ ಹಾರ್ಡ್ ಸ್ಕೇಪ್(ಸಿವಿಲ್) ಕಾರ್ಯಕ್ಕೆ ರೂ.242.75 ಲಕ್ಷಗಳು, ಸಾಫ್ಟ್ ಸ್ಕೇಪ್ (ಭೂದೃಶ್ಯ)ಕಾರ್ಯಕ್ಕೆ ರೂ.142.42 ಲಕ್ಷಗಳು, ಸಾಫ್ಟ್ ಸ್ಕೇಪ್ ನೀರಾವರಿ ಕಾರ್ಯಕ್ಕೆ ರೂ.40.00 ಲಕ್ಷಗಳು ವಿದ್ಯುದ್ದೀಕರಣಕ್ಕೆ ರೂ.28.00 ಲಕ್ಷಗಳು, ವಿವಿಧ ಮತ್ತು ಅನಿರೀಕ್ಷಿತ ಶುಲ್ಕಗಳಿಗೆ ರೂ.181.00 ಲಕ್ಷಗಳು ಸೇರಿದಂತೆ ಒಟ್ಟು ರೂ.455.00ಲಕ್ಷಗಳಿಗೆ ಪ್ರವಾಸೋದ್ಯಮ ಇಲಾಖೆವತಿಯಿಂದ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ

		ಅಭಿವೃದ್ಧಿ ಸಮಿತಿ, ಕೊಡಗು ಜಿಲ್ಲೆ, ಮಡಿಕೇರಿ ರವರಿಗೆ ಅನುಮೋದನೆ ನೀಡಿ ರೂ. 100.00 ಲಕ್ಷಗಳು ಬಿಡುಗಡೆಯಾಗಿರುತ್ತದೆ.
ಈ)	ತೋಟಗಾರಿಕೆ ಇಲಾಖೆಯಲ್ಲಿ ಬರುವ ವಿವಿಧ ಯೋಜನೆಗಳಾವುವು; ಈ ಯೋಜನೆಗೆ ಕಳೆದ ಮೂರು ವರ್ಷಗಳಿಂದ ಬಿಡುಗಡೆಗೊಳಿಸಲಾದ ಅನುದಾನವೆಷ್ಟು;	ತೋಟಗಾರಿಕೆ ಇಲಾಖೆಯಲ್ಲಿ ಬರುವ ವಿವಿಧ ಯೋಜನೆಗಳು ಹಾಗೂ ಈ ಯೋಜನೆಗಳಿಗೆ ಕಳೆದ ಮೂರು ವರ್ಷಗಳಿಂದ ಅಂದರೆ 2016-17 ರಿಂದ ಇದುವರೆಗೂ ಬಿಡುಗಡೆಗೊಳಿಸಿದ ಅನುದಾನದ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.
ಊ)	ಮಾದಾಪುರದಲ್ಲಿರುವ ತೋಟಗಾರಿಕಾ ಕ್ಷೇತ್ರದಲ್ಲಿ ಖಾಲಿ ಇರುವ ಜಾಗದಲ್ಲಿ ಅಭಿವೃದ್ಧಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು? (ಪೂರ್ಣ ವಿವರವನ್ನು ಒದಗಿಸುವುದು)	ಮಾದಾಪುರ ತೋಟಗಾರಿಕೆ ಕ್ಷೇತ್ರವು ಒಟ್ಟು 178.10 ಎಕರೆ ಪ್ರದೇಶವನ್ನು ಹೊಂದಿದ್ದು, ಇದರಲ್ಲಿ 81.00 ಎಕರೆ ಖಾಲಿ ಇರುತ್ತದೆ. ಈ ಜಾಗವನ್ನು ಅಭಿವೃದ್ಧಿಪಡಿಸಲು 2019-20ನೇ ಸಾಲಿನಲ್ಲಿ ರೂ.70.22 ಲಕ್ಷಗಳನ್ನು ನೀಡಲಾಗಿದೆ. ಈ ಅನುದಾನವನ್ನು ವಿನಿಯೋಗಿಸಿ ಪಾಲಿಹೌಸ್‌ಗೆ ಪಾಲಿಶೀಟ್ ಅಳವಡಿಕೆ, ಬೆಂಕಿ ಸಂರಕ್ಷಣಾ ವಲಯ ನಿರ್ಮಾಣ, ವಿದ್ಯುತ್ ಸಂಪರ್ಕ, ಮಾದಾಪುರ ತೋಟಗಾರಿಕೆ ಕ್ಷೇತ್ರದ ಹಳೆ ಸಪೋಟ/ಕಿತ್ತಳೆ ಬ್ಲಾಕ್ ನಲ್ಲಿ ಬೆಂಕಿ ಅನಾಹುತ ತಪ್ಪಿಸಲು ಹುಲ್ಲುಗಾವಲು ಸ್ವಚ್ಛಗೊಳಿಸುವುದು, ಹಳೆ ಗಂಜಿಕೆರೆ ತಾಕುಗಳಲ್ಲಿ ಸಾಧಾರಣ ಕಾಡು ಸ್ವಚ್ಛಗೊಳಿಸುವುದು, ತಂತಿಬೇಲಿ ಮತ್ತು ಗೇಟ್‌ಗಳ ದುರಸ್ಥಿ, ತಾತ್ಕಾಲಿಕವಾಗಿ ಗೇಟ್‌ನಿಂದ ಪಾಲಿಹೌಸ್‌ವರೆಗೆ ಜೆಲ್ಲಿರಸ್ತೆ ನಿರ್ಮಾಣ, ಕ್ಷೇತ್ರದಲ್ಲಿ ಬೆಂಕಿ ಹಾವಳಿ ತಪ್ಪಿಸಲು ಕಾಂಪೌಂಡ್ ಮತ್ತು ಚೈನ್ ಲಿಂಕ್ ಬೇಲಿ ನಿರ್ಮಾಣ, ನೀರಿನ ಅಭಾವ ಕಾರಣ ಈಗಾಗಲೇ ಡ್ರಿಲ್ ಮಾಡಲಾಗಿರುವ ಕೊಳವೆ ಬಾವಿಗೆ ಮೋಟರ್, ಮೋಟರ್ ಪಂಪ್, ವಿದ್ಯುತ್ ಸಂಪರ್ಕ, 600 ರ.ಮೀ. ಪೈಪ್ ಲೈನ್ ಅಳವಡಿಕೆ ಕಾರ್ಯಕ್ರಮಗಳನ್ನು ಹಾಗೂ ಪೀಠೋಪಕರಣಗಳನ್ನು ಖರೀದಿಸಲು ಕ್ರಮ ಕೈಗೊಳ್ಳಲಾಗಿದೆ.

ಸಂಖ್ಯೆ: HORTI 64 HGM 20

(ನಾರಾಯಣ ಗೌಡ)

ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಅನುಬಂಧ

ಕಳೆದ 3 ವರ್ಷಗಳಲ್ಲಿ ಅಂದರೆ 2016-17 ರಿಂದ ಇದುವರೆಗೂ ತೋಟಗಾರಿಕೆ ಇಲಾಖೆ ವತಿಯಿಂದ ಅನುಷ್ಠಾನಗೊಳಿಸಲಾದ ಯೋಜನೆಗಳು ಹಾಗೂ ಈ ಯೋಜನೆಗಳಿಗೆ ಬಿಡುಗಡೆಯಾದ ಅನುದಾನದ ವಿವರ

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಯೋಜನೆ	2016-17	2017-18	2018-19	2019-20 (ಜನವರಿ-2020 ರ ಅಂತ್ಯಕ್ಕೆ)
I	ಕೇಂದ್ರ ನೆರವಿನ ಯೋಜನೆಗಳು				
1	ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆ ತಾಳೆ ಅಬಿಯಾನ ಯೋಜನೆ,	1023.02	810.67	888.12	528.00
2	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ	22047.67	28914.96	38229.42	. 21041.61
3	ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗೆ ತೆಂಗಿನಲ್ಲಿ ಸಂಯೋಜಿತ ಬೇಸಾಯ,	1397.56	2107.85	15300.00	931.15
4	ರಾಷ್ಟ್ರೀಯ ತೋಟಗಾರಿಕೆ ಮಿಷನ್	11542.32	11740.92	18305.56	12549.00
5	ರಾಷ್ಟ್ರೀಯ ಆಯುಷ್ ಮಿಷನ್	84.57	25.00	0.00	0.00
6	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ	6368.88	3614.00	3272.00	1772.00
	ಉಪ ಮೊತ್ತ	**42464.02**	**47213.40**	**75995.10**	**36821.76**
II	**ರಾಜ್ಯವಲಯ ಯೋಜನೆಗಳು**				
1	ನಿರ್ದೇಶನ ಮತ್ತು ಆಡಳಿತ	49.00	0.00	0.00	6642.00
2	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ,	354.00	1420.00	279.00	328.97
3	ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ,	1056.00	1556.00	1000.00	750.00
4	ಸಾಂಬಾರು ಪಧಾರ್ಥಗಳ ಅಭಿವೃದ್ಧಿ ಮಂಡಳಿ	200.00	300.00	0.00	0.00
5	ತೆಂಗು ಉತ್ಪನ್ನ ಉದ್ಯಾನಗಳು	25.00	0.75	0.00	0.00
6	ದ್ರಾಕ್ಷಾರಸ ನೀತಿ	500.00	500.00	0.00	0.00
7	ಸಮಗ್ರ ತೋಟಗಾರಿಕಾ ಅಭಿವೃದ್ಧಿ	14656.00	13606.57	16500.00	9538.50
8	ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ	300.00	1300.00	1300.00	975.00
9	ಇಲಾಖಾ ಪ್ರಯೋಗ ಶಾಲೆಗಳ ಅಭಿವೃದ್ಧಿ	600.00	1100.00	659.00	665.25
10	ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ	307.63	350.00	1661.95	706.45
11	ತೋಟಗಾರಿಕೆ ಕಟ್ಟಡಗಳು	300.00	400.00	400.00	750.00
12	ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ -II (ಸುಜಲಾ-III) -ಇಎಪಿ	630.00	2200.00	2980.00	1307.22
13	ತೋಟಗಾರಿಕೆ ಉದ್ಯಾನವನಗಳು ಮತ್ತು ತೋಟಗಳು	3981.00	4886.34	3050.00	2200.00
14	ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ	200.00	200.00	200.00	525.00
15	ಕೀಟನಾಶಕ ಶೇಷ ವಿಶ್ಲೇಷಣೆ ಪ್ರಯೋಗಾಲಯ-ನಬಾರ್ಡ	0.00	654.62	50.00	0.00
16	RIDF-XXI. A) Micro Irrigation	1102.00	1160.00	448.00	153.00
	B) Infrastructure for UHS Bagalakot.	400.00	1000.00	761.00	145.24
17	ಬಾಗಲಕೋಟೆಯಲ್ಲಿ ತೋಟಗಾರಿಕಾ ವಿಶ್ವ ವಿದ್ಯಾಲಯ,	454.00	200.00	390.00	3868.00
18	ಕೃಷಿ ಭಾಗ್ಯ (ತೋಟಗಾರಿಕೆ)		12900.00	7867.00	4172.50
	ಉಪ ಮೊತ್ತ	25114.63	43734.28	37545.95	32727.13

ಕಳೆದ 3 ವರ್ಷಗಳಲ್ಲಿ ಅಂದರೆ 2016-17 ರಿಂದ ಇದುವರೆಗೂ ತೋಟಗಾರಿಕೆ ಇಲಾಖೆ ವತಿಯಿಂದ ಅನುಷ್ಠಾನಗೊಳಿಸಲಾದ ಯೋಜನೆಗಳು ಹಾಗೂ ಈ ಯೋಜನೆಗಳಿಗೆ ಬಿಡುಗಡೆಯಾದ ಅನುದಾನದ ವಿವರ

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಯೋಜನೆ	2016-17	2017-18	2018-19	2019-20 (ಜನವರಿ-2020 ರ ಅಂತ್ಯಕ್ಕೆ)
III	ಜಿಲ್ಲಾವಲಯ ಯೋಜನೆಗಳು				
1	ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆ ತಾಳೆ ಅಭಿಯಾನ ಯೋಜನೆ	83.32	79.05	60.10	55.20
2	ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ	1146.06	1180.54	1160.93	1084.93
3	ತೋಟಗಾರಿಕೆ ಕಟ್ಟಡಗಳು	466.09	531.6	608.50	426.00
4	ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ	239.44	245.95	287.50	300.00
5	ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ ಯೋಜನೆ	165.95	180.67	166.53	156.87
6	ಪ್ರಚಾರ ಮತ್ತು ಸಾಹಿತ್ಯ	129.22	145.89	185.74	159.93
7	ಶೀಥಲ ಗೃಹಗಳಿಗೆ ಸಹಾಯಧನ ಯೋಜನೆ	58.81	70.8	66.09	69.86
8	ಜೇನು ಸಾಕಾಣಿಕೆ	85.63	212.85	254.26	209.84
9	ರೈತರಿಗೆ ಸಹಾಯ	203.40	217.89	232.45	151.89
10	ರೈತರಿಗೆ ತರಬೇತಿ	47.75	51.49	57.77	20.61
	ಒಟ್ಟು	2625.67	2916.73	3079.87	2635.13
1	ಕೇಂದ್ರ ನೆರವಿನ ಯೋಜನೆಗಳು*	42464.02	47213.40	75995.10	36821.76
2	ರಾಜ್ಯವಲಯ ಯೋಜನೆಗಳು	25114.63	43734.28	37545.95	32727.13
	ಒಟ್ಟು (1+2)	67578.65	90947.68	113541.05	69548.89
3	ಜಿಲ್ಲಾವಲಯ ಯೋಜನೆಗಳು	2625.67	2916.73	3079.87	2635.13
	ಒಟ್ಟು ಮೊತ್ತ (1+2+3)	70204.32	93864.41	116620.92	72184.02

ತೋಟಗಾರಿಕೆ ಜಂಟಿ ನಿರ್ದೇಶಕರು
(ಯೋಜನೆ)

ಕರ್ನಾಟಕ ಸರ್ಕಾರ

ಸಂಖ್ಯೆ: ತೋಇ 67 ತೋಇವಿ 2020

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 05.03.2020

5
US
06/03/20

ಇವರಿಂದ:
ಸರ್ಕಾರದ ಕಾರ್ಯದರ್ಶಿ,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ.

ಇವರಿಗೆ:
ಕಾರ್ಯದರ್ಶಿಯವರು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಆನಂದ್ ಸಿದ್ದು ನ್ಯಾಮಗೌಡ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 326ರ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಆನಂದ್ ಸಿದ್ದು ನ್ಯಾಮಗೌಡ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 326ರ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ತಮಗೆ ಕಳುಹಿಸಲು ನಿರ್ದೇಶಿಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,
5/3
(ಟಿ.ಮಂಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ.

ಪ್ರತಿಯನ್ನು :
1) ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ,
2) ಮಾನ್ಯ ತೋಟಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಉಪ ಕಾರ್ಯದರ್ಶಿ ರವರ ಆಪ್ತ ಸಹಾಯಕರು, ತೋಟಗಾರಿಕೆ ಇಲಾಖೆ,
4) ಶಾಖಾಧಿಕಾರಿಗಳು(ಸ್ವೀ & ರ ಹಾಗೂ ಸಮನ್ವಯ), ತೋಟಗಾರಿಕೆ ಇಲಾಖೆ, ಬೆಂಗಳೂರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 326
ವಿಧಾನಸಭೆಯ ಸದಸ್ಯರ ಹೆಸರು : ಶ್ರೀ ಆನಂದ್ ಸಿದ್ದುನ್ಯಾಮಗೌಡ
ಉತ್ತರಿಸುವ ಸಚಿವರು : ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು
ಉತ್ತರಿಸಬೇಕಾದ ದಿನಾಂಕ : 06-03-2020

*****

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಹಣ್ಣು ಮತ್ತು ತರಕಾರಿಗಳು ಕೆಡದಂತೆ ಸಂಗ್ರಹಣೆ ಮಾಡುವ ಸಲುವಾಗಿ ಕೋಲ್ಡ್ ಸ್ಟೋರೇಜ್ ಗಳನ್ನು ಯಾವ ಯಾವ ಜಿಲ್ಲೆಗಳಲ್ಲಿ ನಿರ್ಮಾಣ ಮಾಡಲಾಗಿದೆ;	ಹಣ್ಣು ಮತ್ತು ತರಕಾರಿಗಳು ಕೆಡದಂತೆ ಸಂಗ್ರಹಣೆ ಮಾಡುವ ಸಲುವಾಗಿ ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು (ನಗರ), ಬೆಂಗಳೂರು (ಗ್ರಾ), ಬಾಗಲಕೋಟೆ, ಬೆಳಗಾವಿ, ಬೀದರ್, ಬಳ್ಳಾರಿ, ಚಿತ್ರದುರ್ಗ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ಧಾರವಾಡ, ಗದಗ, ಹಾಸನ, ಹಾವೇರಿ, ಕಲಬುರಗಿ, ಕೋಲಾರ, ಕೊಪ್ಪಳ, ಮೈಸೂರು, ರಾಮನಗರ, ರಾಯಚೂರು, ಶಿವಮೊಗ್ಗ, ತುಮಕೂರು, ಉತ್ತರ ಕನ್ನಡ, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಸರ್ಕಾರಿ ಮತ್ತು ಖಾಸಗಿ ವಲಯಗಳ ಮೂಲಕ ಕೋಲ್ಡ್ ಸ್ಟೋರೇಜ್ ಗಳನ್ನು ನಿರ್ಮಾಣ ಮಾಡಲಾಗಿದೆ.
ಆ)	ಖಾಸಗಿ ಅಥವಾ ಸಹಕಾರಿ ರಂಗದಲ್ಲಿ ಕೋಲ್ಡ್ ಸ್ಟೋರೇಜ್ ನ್ನು ರೈತರು ತಾವೇ ನಿರ್ಮಿಸಿಕೊಂಡಲ್ಲಿ ಅದಕ್ಕೆ ಸರ್ಕಾರದಿಂದ ಸಹಾಯಧನ ನೀಡಲಾಗುತ್ತಿದೆಯೇ; ಹಾಗಿದ್ದಲ್ಲಿ, ಎಷ್ಟು ಸಹಾಯಧನ ನೀಡಲಾಗುತ್ತಿದೆ?	ಹೌದು, ನೀಡಲಾಗುತ್ತಿದೆ. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ, ರಾಷ್ಟ್ರೀಯ ತೋಟಗಾರಿಕೆ ಮಂಡಳಿ ಮತ್ತು ಕೇಂದ್ರ ಸರ್ಕಾರದ ಆಹಾರ ಸಂಸ್ಕರಣಾ ಮಂತ್ರಾಲಯದ ವತಿಯಿಂದ ಶೇ.35 ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ.

ಸಂಖ್ಯೆ: HORTI 67 HGM 20

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ತೋಇ 73 ತೋಇವಿ 2020

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 05.03.2020

113
48
06/03/20

ಇವರಿಂದ:
ಸರ್ಕಾರದ ಕಾರ್ಯದರ್ಶಿ,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ.

ಇವರಿಗೆ:
ಕಾರ್ಯದರ್ಶಿಯವರು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಶ್ರೀನಿವಾಸ್ ಎಂ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 479ರ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಶ್ರೀನಿವಾಸ್ ಎಂ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 479ರ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ತಮಗೆ ಕಳುಹಿಸಲು ನಿರ್ದೇಶಿಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,
(ಟಿ.ಮಂಜಪ್ಪ) 5/3
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ.

ಪ್ರತಿಯನ್ನು :
1) ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ,
2) ಮಾನ್ಯ ತೋಟಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಉಪ ಕಾರ್ಯದರ್ಶಿ ರವರ ಆಪ್ತ ಸಹಾಯಕರು, ತೋಟಗಾರಿಕೆ ಇಲಾಖೆ,
4) ಶಾಖಾಧಿಕಾರಿಗಳು(ಸ್ವೀ & ರ ಹಾಗೂ ಸಮನ್ವಯ), ತೋಟಗಾರಿಕೆ ಇಲಾಖೆ, ಬೆಂಗಳೂರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 479

ಸದಸ್ಯರ ಹೆಸರು : ಶ್ರೀ ಶ್ರೀನಿವಾಸ್ ಎಂ

ಉತ್ತರಿಸುವ ಸಚಿವರು : ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 06.03.2020

ಕ್ರಸಂ	ಪ್ರಶ್ನೆ	ಉತ್ತರ
ಅ	ಮಂಡ್ಯ ಜಿಲ್ಲಾಧಿಕಾರಿ ಕಛೇರಿ ಮುಂಭಾಗದ ಹೆಸರುವಾಸಿಯಾದಂತಹ ಕಾವೇರಿವನ ಮತ್ತು ಭವ್ಯವನ ಹಾಗೂ ಜಿಲ್ಲಾಧಿಕಾರಿಗಳ ಕಛೇರಿ ಹಿಂಭಾಗದ ವನಗಳ ಅಭಿವೃದ್ಧಿ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;	ಮಂಡ್ಯ ಜಿಲ್ಲಾಧಿಕಾರಿ ಕಛೇರಿ ಮುಂಭಾಗದ ಕಾವೇರಿವನ ಮತ್ತು ಭವ್ಯವನಗಳ ಅಭಿವೃದ್ಧಿಗಾಗಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. 1. ಉದ್ಯಾನವನದ ಸುರಕ್ಷತೆಗಾಗಿ ಸರಹದ್ದಿನಲ್ಲಿ ರಕ್ಷಣಾ ಬೇಲಿ ಕಾಮಗಾರಿ ಕೈಗೊಳ್ಳಲಾಗಿದೆ. 2. ಉದ್ಯಾನವನದಲ್ಲಿರುವ ಸರ್ ಎಂ ವಿಶ್ವೇಶ್ವರಯ್ಯ ಪ್ರತಿಮೆ ರಕ್ಷಣೆಗಾಗಿ ಮತ್ತು ಉಧ್ಯಾನವನದ ಸೊಬಗನ್ನು ಹೆಚ್ಚಿಸಲು ಪ್ರತಿಮೆಯ ಸುತ್ತಲೂ ಅಲಂಕಾರಿಕ ಬಂಬೂ ಮಾದರಿಗಳ ಆಕೃತಿ ನಿರ್ಮಾಣ ಮಾಡಲಾಗಿದೆ. 3. ಉದ್ಯಾನವನದಲ್ಲಿರುವ ಸಂಗೀತ ನೃತ್ಯ ಕಾರಂಜಿಯನ್ನು ದುರಸ್ಥಿಪಡಿಸಿ ಎಲ್.ಇ.ಡಿ ಲೈಟ್ ಅಳವಡಿಸಿ ಸಾರ್ವಜನಿಕರಿಗಾಗಿ ರಜಾ ದಿನಗಳಲ್ಲಿ ಚಾಲನೆ ಮಾಡಲಾಗುತ್ತಿದೆ. 4. ಉದ್ಯಾನವನಕ್ಕೆ ಹೊಸದಾಗಿ ಆಕರ್ಷಕ ಟೋಪಿಯರಿ ಗಿಡಗಳನ್ನು ನೆಡಲಾಗಿದೆ. 5. ಅಲಂಕಾರಿಕ ಹೂವಿನ ಬೆಡ್ ಗಳನ್ನು ಅಭಿವೃದ್ಧಿಪಡಿಸಲಾಗಿದೆ. 6. ಭವ್ಯವನದ ಕಾರಂಜಿಯ ಇಕ್ಕೆಲಗಳಲ್ಲಿ ಹೊಸದಾಗಿ ಪೇವ್ ಮೆಂಟ್ ನಿರ್ಮಾಣ ಮಾಡಲಾಗಿದೆ. 7. ಉದ್ಯಾನವನದಲ್ಲಿ ಕಾಲಕಾಲಕ್ಕೆ ಅವಶ್ಯವಿರುವ ಸ್ವಚ್ಛತೆ, ಉದ್ಯಾನವನ

		ಹಾಗೂ ಹುಲ್ಲು ಹಾಸು ನಿರ್ವಹಣೆ ಹಾಗೂ ಕುಂಡಗಳಲ್ಲಿ ಅಲಂಕಾರಿಕ ಗಿಡಗಳನ್ನು ಅಭಿವೃದ್ಧಿಪಡಿಸುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. 8. ಪ್ರತಿ ವರ್ಷ ಉದ್ಯಾನವನದಲ್ಲಿ ಆಕರ್ಷಕ ಫಲಪುಷ್ಪ ಪ್ರದರ್ಶನಗಳನ್ನು ಮತ್ತು ಚಿತ್ರಕಲಾ ಶಿಬಿರವನ್ನು ಆಯೋಜಿಸಲಾಗುತ್ತದೆ. ಕಛೇರಿ ಹಿಂಭಾಗದ ಪ್ರದೇಶವು ತೋಟಗಾರಿಕೆ ಇಲಾಖೆ ವ್ಯಾಪ್ತಿಯಲ್ಲಿ ಇರುವುದಿಲ್ಲ.
ಆ	ಹಾಗಿದ್ದಲ್ಲಿ, ಈವರೆವಿಗೂ ಬಿಡುಗಡೆಯಾದ ಅನುದಾನವೆಷ್ಟು;	ಪ್ರಸಕ್ತ ಆರ್ಥಿಕ ಸಾಲಿನಲ್ಲಿ ರೂ.100.00 ಲಕ್ಷಗಳನ್ನು ಬಿಡುಗಡೆಮಾಡಲಾಗಿದೆ.
ಇ	ಇದುವರೆವಿಗೂ ಅಭಿವೃದ್ಧಿಗಾಗಿ ವ್ಯಯಿಸಿದ ಅನುದಾನವೆಷ್ಟು?(ವಿವರ ನೀಡುವುದು)	ಉದ್ಯಾನವನ ಮತ್ತು ನೃತ್ಯ ಕಾರಂಜಿ ನಿರ್ವಹಣೆಗಾಗಿ ರೂ.3.60 ಲಕ್ಷಗಳು, ಪರಿಕರಗಳ ಖರೀದಿಗಾಗಿ ರೂ.5.60ಲಕ್ಷಗಳು, ಟೋಪಿಯರಿ ಗಿಡಗಳು ರೂ2.50 ಲಕ್ಷಗಳು, ಕಾವೇರಿವನ ಉದ್ಯಾನವನದ ಕಾಂಪೌಂಡ್ ಗೆ ಗ್ರಾನೈಟ್ ರೂ.18.60 ಲಕ್ಷಗಳು, ಭವ್ಯವನದ ಕಾಂಪೌಂಡ್ ರೂ.46.40 ಲಕ್ಷಗಳು, ನೃತ್ಯ ಕಾರಂಜಿ ದುರಸ್ಥಿ ರೂ.3.40 ಲಕ್ಷಗಳು, ಭವ್ಯವನದ ಕಾರಂಜಿ ಪಕ್ಕದ ರಸ್ತೆಗೆ ಟೈಲ್ಸ್ ಅಳವಡಿಕೆ ರೂ.7.00 ಲಕ್ಷಗಳು, ಇತರೆ ನಿರ್ವಹಣಾ ಮತ್ತು ಅವಶ್ಯ ಕಾರ್ಯಗಳು ರೂ.11.20 ಲಕ್ಷಗಳು ಸೇರಿ ಇದುವರೆವಿಗೂ ರೂ.98.30 ಲಕ್ಷಗಳನ್ನು ವ್ಯಯಿಸಲಾಗಿದೆ.

ಸಂಖ್ಯೆ: HORTI 73 HGM 20

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 37 ಸಮಸ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:05-03-2020

63
U15
06/03/2020

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,

ಇವರಿಗೆ:

ಕಾರ್ಯದರ್ಶಿಗಳು
ಕರ್ನಾಟಕ ವಿಧಾನಸಭೆ
ವಿಧಾನ ಸೌಧ
ಬೆಂಗಳೂರು.

ಮಾನ್ಯರೆ,

ವಿಷಯ:- ವಿಧಾನಸಭೆ ಸದಸ್ಯರಾದ ಶ್ರೀ ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :620ಕ್ಕೆ ಉತ್ತರ ನೀಡುವ ಕುರಿತು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನಸಭೆ ಸದಸ್ಯರಾದ ಶ್ರೀ ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 620 ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿ ಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

ಲಲಿತಾಬಾಯಿ.ಕೆ

(ಲಲಿತಾಬಾಯಿ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಮೇಕೋ),
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	620
ಸದಸ್ಯರ ಹೆಸರು	:	ಶ್ರೀ ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ)
ಉತ್ತರಿಸಬೇಕಾದ ದಿನಾಂಕ	:	06-03-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆಯ ಹಾಸನ ನಗರಸಭೆಯ ನಗರೋತ್ಥಾನ (ಮುನಿಸಿಪಾಲಿಟಿ)-3 ಕ್ರಿಯಾ ಯೋಜನೆಗೆ ನಗರೋತ್ಥಾನ ಜಿಲ್ಲಾ ಮಟ್ಟದ ಪೌರಾಡಳಿತ ಇಲಾಖಾ ವತಿಯಿಂದ ಅನುಮೋದನೆ ದೊರೆತು ಈಗಾಗಲೇ ಕಾಮಗಾರಿಗಳ ಅನುಷ್ಠಾನಕ್ಕೆ ಕೆ.ಟಿ.ಟಿ.ಪಿ ನಿಯಮಾವಳಿಗಳನ್ವಯ ಇ-ಪ್ರಕ್ಯೂರ್ ಮೆಂಟ್ ಮೂಲಕ ಟೆಂಡರ್ ಕರೆದಿರುವುದು ನಿಜವೇ;	ಹೌದು
ಆ)	ಹಾಗಿದ್ದಲ್ಲಿ, ಈ ಟೆಂಡರ್‌ನಲ್ಲಿ ಎಷ್ಟು ಜನ ಟೆಂಡರ್ ದಾರರು ಭಾಗವಹಿಸಿರುತ್ತಾರೆ; ಇದರ ತಾಂತ್ರಿಕ ಬಿಡ್ ಅನ್ನು ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಇವರು ಅನುಮೋದಿಸಿ, ನಂತರ ಜಿಲ್ಲಾಧಿಕಾರಿಗಳಿಗೆ ಆರ್ಥಿಕ ಬಿಡ್ ಅನ್ನು ತೆರೆದು ಅರ್ಹ ಗುತ್ತಿಗೆದಾರರಿಗೆ ನೀಡಲು ಸೂಚಿಸಿರುವುದು ನಿಜವೇ; (ಸಂಪೂರ್ಣ ಮಾಹಿತಿ ಒದಗಿಸುವುದು)	ಸದರಿ ಟೆಂಡರ್ ನಲ್ಲಿ ಇಬ್ಬರು ಗುತ್ತಿಗೆದಾರರು (ಶ್ರೀ ಎಸ್.ಆರ್. ರವಿ ಮತ್ತು ಶ್ರೀ ಬಿ.ಎಂ. ರಂಗೇಗೌಡ) ಭಾಗವಹಿಸಿರುತ್ತಾರೆ. ತಾಂತ್ರಿಕ ಬಿಡ್ ಅನ್ನು ತೆರೆದು, ನಗರೋತ್ಥಾನ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ ಸಭೆಯ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಪೌರಾಡಳಿತ ನಿರ್ದೇಶನಾಲಯಕ್ಕೆ ದಿನಾಂಕ: 28-06-2019 ಮತ್ತು 13-08-2019ರ ಪತ್ರದನ್ವಯ ಸಲ್ಲಿಸಿರುತ್ತಾರೆ. ಸದರಿ ತಾಂತ್ರಿಕ ಬಿಡ್‌ಗಳಿಗೆ ದಿನಾಂಕ:02-11-2019 ರ ಪೌರಾಡಳಿತ ನಿರ್ದೇಶನಾಲಯ ಮಟ್ಟದ ಟೆಂಡರ್ ಪರಿಶೀಲನಾ ಸಮಿತಿ ಸಭೆಯಲ್ಲಿ ಇಬ್ಬರು ಗುತ್ತಿಗೆದಾರರ ತಾಂತ್ರಿಕ ಬಿಡ್‌ಗೆ ಅನುಮೋದನೆ ನೀಡಲಾಗಿರುತ್ತದೆ. ಅದರಂತೆ ದಿನಾಂಕ: 05-11-2019 ರಂದು ತಾಂತ್ರಿಕ ಬಿಡ್‌ಗಳಿಗೆ ಅನುಮೋದನೆ ನೀಡಿ ಆರ್ಥಿಕ ಬಿಡ್ ತೆರೆಯಲು ಜಿಲ್ಲಾಧಿಕಾರಿಗಳಿಗೆ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅನುಮತಿ ನೀಡಲಾಗಿದೆ.

ಇ)	ಹಾಗಿದ್ದಲ್ಲಿ, ಈ ಟೆಂಡರ್ ಪ್ರಕ್ರಿಯೆಯಲ್ಲಿದ್ದ ರೂ.1090.10 ಲಕ್ಷಗಳ ಕಾಮಗಾರಿಗಳ ಬದಲು ಹಾಸನ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಬದಲೀ ಕಾಮಗಾರಿಗಳಿಗೆ ಅನುಮೋದನೆ ನೀಡಲು ತೀರ್ಮಾನಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಮಾನ್ಯ ಶಾಸಕರು, ಹಾಸನ ವಿಧಾನಸಭಾ ಕ್ಷೇತ್ರ ಇವರು ದಿನಾಂಕ: 07-11-2019ರ ಪತ್ರದಲ್ಲಿ ಕೋರಿರುವಂತೆ ರೂ.1090.10 ಲಕ್ಷಗಳಿಗೆ ಅನುಮೋದನೆಯಾಗಿದ್ದ ಪರಿಷ್ಕೃತ ಕ್ರಿಯಾಯೋಜನೆ ಮತ್ತು ಸದರಿ ಕಾಮಗಾರಿಗಳ ಟೆಂಡರ್ ರದ್ದುಪಡಿಸಿ, ಬದಲಿ ಕಾಮಗಾರಿಗಳ ಕ್ರಿಯಾಯೋಜನೆಗೆ ದಿನಾಂಕ: 24-01-2020 ರಂದು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ನಗರೋತ್ಥಾನ ಜಿಲ್ಲಾ ಮಟ್ಟದ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದು, ಪೌರಾಡಳಿತ ನಿರ್ದೇಶನಾಲಯಕ್ಕೆ ದಿನಾಂಕ: 03-02-2020 ಮತ್ತು 06-02-2020 ರ ಪತ್ರಗಳನ್ವಯ ಪ್ರಸ್ತಾವನೆಯು ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಕೆಯಾಗಿರುತ್ತದೆ. ಸದರಿ ಪ್ರಸ್ತಾವನೆಯನ್ನು ಪೌರಾಡಳಿತ ಸಚಿವರ ಅಧ್ಯಕ್ಷತೆಯ ನಗರೋತ್ಥಾನ ರಾಜ್ಯ ಮಟ್ಟದ ಸಮಿತಿಯಲ್ಲಿ ತೀರ್ಮಾನಿಸಬೇಕಿರುತ್ತದೆ.ಮಾನ್ಯ ಶಾಸಕರು, ಹಾಸನ ವಿಧಾನಸಭಾ ಕ್ಷೇತ್ರ ಇವರು ದಿನಾಂಕ: 07-11-2019ರ ಪತ್ರದಲ್ಲಿ ಕೋರಿರುವಂತೆ ರೂ.1090.10 ಲಕ್ಷಗಳಿಗೆ ಅನುಮೋದನೆಯಾಗಿದ್ದ ಪರಿಷ್ಕೃತ ಕ್ರಿಯಾಯೋಜನೆ ಮತ್ತು ಸದರಿ ಕಾಮಗಾರಿಗಳ ಟೆಂಡರ್ ರದ್ದುಪಡಿಸಿ, ಬದಲಿ ಕಾಮಗಾರಿಗಳ ಕ್ರಿಯಾಯೋಜನೆಗೆ ದಿನಾಂಕ: 24-01-2020 ರಂದು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ನಗರೋತ್ಥಾನ ಜಿಲ್ಲಾ ಮಟ್ಟದ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದು, ಪೌರಾಡಳಿತ ನಿರ್ದೇಶನಾಲಯಕ್ಕೆ ದಿನಾಂಕ: 03-02-2020 ಮತ್ತು 06-02-2020 ರ ಪತ್ರಗಳನ್ವಯ ಪ್ರಸ್ತಾವನೆಯು ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಕೆಯಾಗಿರುತ್ತದೆ. ಸದರಿ ಪ್ರಸ್ತಾವನೆಯನ್ನು ಪೌರಾಡಳಿತ ಸಚಿವರ ಅಧ್ಯಕ್ಷತೆಯ ನಗರೋತ್ಥಾನ ರಾಜ್ಯ ಮಟ್ಟದ ಸಮಿತಿಯಲ್ಲಿ ತೀರ್ಮಾನಿಸಬೇಕಿರುತ್ತದೆ.

ಈ)	ಅದರಂತೆ,, ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಹಾಸನ ರವರು ಬದಲೀ ಕಾಮಗಾರಿಗಳಿಗೆ ಅನುಮೋದನೆ ಕೋರಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಉ)	ಪೌರಾಡಳಿತ ಇಲಾಖಾ ವತಿಯಿಂದ ಅನುಮೋದನೆ ದೊರೆತು ಈಗಾಗಲೇ ಕಾಮಗಾರಿಗಳ ಅನುಷ್ಠಾನಕ್ಕೆ ಕೆ.ಟಿ.ಪಿ.ಪಿ. ನಿಯಮಾವಳಿಗಳನ್ವಯ ಇ-ಪ್ರಕ್ಯೂರ್ಮೆಂಟ್ ಮೂಲಕ ಟೆಂಡರ್ ಕರೆಯಲಾಗಿರುವ ಕಾಮಗಾರಿಗಳನ್ನು ರದ್ದು ಮಾಡಲು ಸರ್ಕಾರದ ಮುಂದಿದ್ದ ಪ್ರಬಲವಾದ ಕಾರಣಗಳೇನು; ಮತ್ತು ಕಾನೂನಿನಡಿಯಲ್ಲಿ ಇಂತಹ ಕ್ರಮಕ್ಕೆ ಅವಕಾಶವಿದೆಯೇ, ಈ ಕಾರಣಗಳು ಸಮಂಜಸ ವಲ್ಲವೆಂಬುದು ಸರ್ಕಾರದ ಆದ್ಯ ಗಮನಕ್ಕೆ ಬಂದಿದೆಯೇ;	ನಗರೋತ್ಥಾನ (ಮುನಿಸಿಪಾಲಿಟಿ) ಹಂತ-3 ರಡಿ ಅನುಮೋದಿತ ರೂ.1090.10 ಲಕ್ಷಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪರಿಷ್ಕೃತ ಕ್ರಿಯಾ ಯೋಜನೆಯಲ್ಲಿನ ಕಾಮಗಾರಿಗಳು 10 ವಾರ್ಡುಗಳಿಗೆ ಸೀಮಿತವಾಗಿದ್ದು, ಸದರಿ 10 ವಾರ್ಡುಗಳಲ್ಲಿಯೇ ಅಲ್ಪಸಂಖ್ಯಾತರ ಇಲಾಖೆ ವತಿಯಿಂದ ಸುಮಾರು ರೂ.1500.00 ಲಕ್ಷಗಳ ಮೊತ್ತದ ಕಾಮಗಾರಿಗಳು ಈಗಾಗಲೇ ಪ್ರಾರಂಭಗೊಂಡು, ಪೂರ್ಣಗೊಳ್ಳುವ ಹಂತದಲ್ಲಿ ಇರುವುದರಿಂದ ಹಾಗೂ ನಗರಸಭಾ ವ್ಯಾಪ್ತಿಯ ಎಲ್ಲಾ ವಾರ್ಡುಗಳ ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯ ಮೂಲಭೂತ ಸೌಲಭ್ಯ ಒದಗಿಸುವ ಉದ್ದೇಶದಿಂದ ಬದಲಿ ಕಾಮಗಾರಿಗಳನ್ನು ಪ್ರಸ್ತಾಪಿಸಲಾಗಿರುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯ ನಗರೋತ್ಥಾನ ಜಿಲ್ಲಾ ಮಟ್ಟದ ಸಮಿತಿ ಸಭೆಯ ನಡವಳಿಯಲ್ಲಿ ವರದಿ ಮಾಡಲಾಗಿದೆ. ಬದಲಿ ಕಾಮಗಾರಿಗಳಿಗೆ ಅನುಮೋದನೆ ನೀಡಲು ನಗರೋತ್ಥಾನ (ಮುನಿಸಿಪಾಲಿಟಿ) ಹಂತ-3 ರ ಮಾರ್ಗಸೂಚಿಯ ಕಂಡಿಕೆ 14.2(iii)ರಲ್ಲಿ ಅನುವು ಮಾಡಲಾಗಿರುತ್ತದೆ. (ಮಾರ್ಗಸೂಚಿಯ ಪ್ರತಿಯನ್ನು ಅನುಬಂಧ-01 ರಲ್ಲಿ ನೀಡಿದೆ). ಸದರಿ ಪ್ರಸ್ತಾವನೆಯನ್ನು ಪೌರಾಡಳಿತ ಸಚಿವರ ಅಧ್ಯಕ್ಷತೆಯ ನಗರೋತ್ಥಾನ ರಾಜ್ಯ ಮಟ್ಟದ ಸಮಿತಿಯಲ್ಲಿ ತೀರ್ಮಾನಿಸಬೇಕಿರುತ್ತದೆ.

ಊ)	ಬಂದಿದ್ದಲ್ಲಿ, ಸದರಿ ಕಾಮಗಾರಿಗಳನ್ನ ಅನುಷ್ಠಾನಗೊಳಿಸಲು ಸರ್ಕಾರ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರಿಗೆ ನಿರ್ದೇಶನ ನೀಡಲಾಗಿದೆಯೇ (ಸಂಪೂರ್ಣ ಮಾಹಿತಿ ನೀಡುವುದು)	ಈ ವಿಷಯವಾಗಿ ಸರ್ಕಾರದಿಂದ ಪ್ರಸ್ತುತ ಯಾವುದೇ ನಿರ್ದೇಶನ ನೀಡಿರುವುದಿಲ್ಲ.

ಸಂಖ್ಯೆ: ನಅಇ 37 ಸಮಸ 2020

(ನಾರಾಯಣ ಗೌಡ)
ಪೌರಾಡಳಿತ ಹಾಗೂ ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು

ಅನುಬಂಧ-೫

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮಾನ್ಯ ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಕಾರ್ಯಕ್ರಮದ 3ನೇ ಹಂತದ ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ನಅಇ 16 ಸಮನ 2009, ದಿನಾಂಕ:24-06-2009.
2. ಸರ್ಕಾರದ ಆದೇಶ ಸಂಖ್ಯೆ: ನಅಇ 25 ಸಮನ 2012, ದಿನಾಂಕ: 13-09-2012 ಮತ್ತು 07-11-2012.
3. ಪೌರಾಡಳಿತ ನಿರ್ದೇಶನಾಲಯದ ಕಡತ ಸಂಖ್ಯೆ: ಪೌನಿ/ ತಾಂತ್ರಿಕ/ ಸಿಎಂಎಸ್‌ಎಂಟಿಡಿಪಿ/ 3ನೇ ಹಂತ/ ಮಾ.ಸೂ/ 69/ 2015-16.
4. ಪೌರಾಡಳಿತ ನಿರ್ದೇಶನಾಲಯದ ಪತ್ರ ಸಂಖ್ಯೆ: ಪೌನಿ/ತಾಂತ್ರಿಕ/ ಸಿಎಂಎಸ್‌ಎಂಟಿಡಿಪಿ/ 3ನೇಹಂತ/ ಮಾ.ಸೂ/ 69/ 2015-16, ದಿನಾಂಕ: 10-06-2016.
5. ರಾಜ್ಯ ಸಚಿವ ಸಂಪುಟದ ದಿನಾಂಕ: 28-09-2016ರಂದು ನಡೆದ ಸಭೆಯ ವಿಷಯ ಸಂಖ್ಯೆ: ಸಿ-467/2016ರ ನಡವಳಿಗಳು.

****

ಪ್ರಸ್ತಾವನೆ:

ಕರ್ನಾಟಕದ ಒಟ್ಟು ಜನಸಂಖ್ಯೆ 61.13 ದಶಲಕ್ಷದಲ್ಲಿ (2011 ರ ಜನಗಣತಿಯ ಪ್ರಕಾರ) ಸುಮಾರು 23.6 ದಶಲಕ್ಷ ಜನಸಂಖ್ಯೆ ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ, ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 38.57% ಜನಸಂಖ್ಯೆಯು ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ತೀವ್ರವೇಗದ ನಗರೀಕರಣ ಎಲ್ಲಾ ನಗರಗಳು/ಪಟ್ಟಣಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯನ್ನು ಉಂಟು ಮಾಡಿದೆ. ಮೂಲಭೂತ ಸೌಲಭ್ಯಗಳ ಕೊರತೆಯನ್ನು ನೀಗಿಸಲು ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಸಮಗ್ರ ಅಭಿವೃದ್ಧಿ ಮೇಲೆ ಕೇಂದ್ರೀಕರಿಸಲು ರಾಜ್ಯ ಸರ್ಕಾರವು ಈ ಪಟ್ಟಣಗಳಲ್ಲಿ ಪೌರಸೇವೆಗಳನ್ನು ಮೇಲ್ದರ್ಜೆಗೇರಿಸುವುದು ಮತ್ತು ವಿಸ್ತರಿಸುವುದು ಅವಶ್ಯಕವೆಂದು ಭಾವಿಸಿ, ವಿವಿಧ ಕ್ಷೇತ್ರಗಳಲ್ಲಿ ಮೂಲಭೂತ ಸೌಲಭ್ಯಗಳ ಮೇಲ್ದರ್ಜೆ ಮತ್ತು ನಾಗರೀಕರಿಗೆ ಸೇವೆಗಳನ್ನು ತಲುಪಿಸುವ ಬಗ್ಗೆ ಸುಧಾರಣೆಗಳು ಅತ್ಯಗತ್ಯವಾಗಿರುವುದರಿಂದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸೇವಾಮಟ್ಟದ ಮಾನದಂಡಗಳನ್ವಯ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗಿದೆ. ಈ ಉದ್ದೇಶವನ್ನು ಸಾಧಿಸುವ ಸಲುವಾಗಿ ಮೇಲೆ ಓದಲಾದ (1) ಮತ್ತು (2) ರ ಆದೇಶಗಳಲ್ಲಿ ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಕಾರ್ಯಕ್ರಮ (ಸಿಎಂಎಸ್‌ಎಂಟಿಡಿಪಿ) ಮೊದಲನೇ ಮತ್ತು ಎರಡನೇ ಹಂತದ ಯೋಜನೆಗಳನ್ನು ಕ್ರಮವಾಗಿ 2009-10 ಮತ್ತು 2012-13 ನೇ ಸಾಲಿನಲ್ಲಿ ಅನುಷ್ಠಾನಕ್ಕೆ ತರಲಾಯಿತು.

ನಗರೋತ್ಥಾನ ಸಿಎಂಎಸ್‌ಎಂಟಿಡಿಪಿ ಮೊದಲನೇ ಹಂತದ ಯೋಜನೆಯಲ್ಲಿ ರಾಜ್ಯದ 211 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ರೂ.1454.00 ಕೋಟಿಗಳ ಅನುದಾನದಿಂದ ಅನುಷ್ಠಾನಗೊಳಿಸಲು 2009-10ನೇ ಸಾಲಿನಿಂದ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಯಿತು. ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈ ಯೋಜನೆಯಡಿ ಎಲ್ಲಾ ಕ್ಷೇತ್ರಗಳಲ್ಲಿ ಪರಿಣಾಮಕಾರಿಯಾಗಿ ಮೂಲಭೂತ ಸೌಕರ್ಯಗಳು /ಸ್ವತ್ತುಗಳ ಸೃಜನೆಯಲ್ಲಿ ಸುಧಾರಣೆ ಕಾಣಬಹುದಾಗಿರುತ್ತದೆ. ಅನುಮೋದನೆಯಾದ ಒಟ್ಟು 8301 ಕಾಮಗಾರಿಗಳ ಪೈಕಿ ಆಗಸ್ಟ್ 2016ರ ಅಂತ್ಯಕ್ಕೆ 7854 ಕಾಮಗಾರಿಗಳು ಪೂರ್ಣಗೊಂಡಿವೆ.

ನಗರೋತ್ಥಾನ ಸಿಎಂಎಸ್‌ಎಂಟಿಡಿಪಿ ಎರಡನೇ ಹಂತದ ಯೋಜನೆಯಲ್ಲಿ ರಾಜ್ಯದ 211 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಲು 2012-13ನೇ ಸಾಲಿನಿಂದ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಯಿತು. ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈ ಯೋಜನೆಯಡಿ ರಸ್ತೆ ಮತ್ತು ಚರಂಡಿ ಸೌಕರ್ಯಗಳಲ್ಲಿ ಸುಧಾರಣೆ ಕಾಣಬಹುದಾಗಿರುತ್ತದೆ. ಅನುಮೋದನೆಯಾದ ಒಟ್ಟು 2050 ಕಾಮಗಾರಿಗಳ ಪೈಕಿ ಆಗಸ್ಟ್-2016ರ ಅಂತ್ಯಕ್ಕೆ 1500 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಮಾನ್ಯ ಮುಖ್ಯಮಂತ್ರಿಗಳು ದಿನಾಂಕ:18-03-2016ರ ಆಯ-ವ್ಯಯ ಭಾಷಣದಲ್ಲಿ ಸಿಎಂಎಸ್‌ಎಂಟಿಡಿಪಿ ನಗರೋತ್ಥಾನ 3ನೇ ಹಂತದ ಯೋಜನೆಯನ್ನು ಘೋಷಣೆ ಮಾಡಿದ್ದು, ಪೂರ್ವ ಸಿದ್ಧತಾ ಕಾರ್ಯಗಳಿಗಾಗಿ 2016-17ನೇ ಸಾಲಿನ ಆಯ-ವ್ಯಯದಲ್ಲಿ ರೂ.25 ಕೋಟಿಗಳ ಅನುದಾನವನ್ನು ಮೀಸಲಿರಿಸಲಾಗಿದೆ.

ಮೇಲೆ ಓದಲಾದ (3) ಮತ್ತು (4)ರ ಪೌರಾಡಳಿತ ನಿರ್ದೇಶನಾಲಯದ ಕಡತ ಮತ್ತು ಪತ್ರದಲ್ಲಿ ಸಿಎಂಎಸ್‌ಎಂಟಿಡಿಪಿ ಮೂರನೇ ಹಂತದ ಯೋಜನೆಯನ್ನು 264 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೈಗೆತ್ತಿಕೊಳ್ಳಲು ರೂ. 2836.50 ಕೋಟಿಗಳ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ನಗರೋತ್ಥಾನ ಸಿಎಂಎಸ್‌ಎಂಟಿಡಿಪಿ ಮೊದಲನೇ ಮತ್ತು ಎರಡನೇ ಹಂತದ ಯೋಜನೆಯಂತೆ 3ನೇ ಹಂತದ ಯೋಜನೆಗೂ ಸಹಾ ಪ್ರಸ್ತಾಪಿಸಿರುವ ಒಟ್ಟು ಹಂಚಿಕೆಯಲ್ಲಿ ಸರ್ಕಾರವು ಶೇಕಡ 50 ರಷ್ಟು ಹಂಚಿಕೆಯನ್ನು ಅನುದಾನದ ರೂಪದಲ್ಲಿ ಮತ್ತು ಉಳಿದ ಶೇಕಡ 50 ರಷ್ಟು ಹಂಚಿಕೆಯನ್ನು ಕೆಯುಐಡಿಎಫ್‌ಸಿಯ Karnataka Water and Sanitation Pooled Fund Trust ನ ವತಿಯಿಂದ ಸಾಲದ ಮುಖಾಂತರ ಭರಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ನಅಇ 98 ಸಮಸ 2015,
ಬೆಂಗಳೂರು, ದಿನಾಂಕ:29-11-2016

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯಡಿ ರಾಜ್ಯದ ಸಣ್ಣ ಮತ್ತು ಮಧ್ಯಮ ಪಟ್ಟಣಗಳನ್ನು ಅಭಿವೃದ್ಧಿ ಪಡಿಸಲು ಈ ಕೆಳಕಂಡಂತೆ ಮಂಜೂರಾತಿ ನೀಡಿದೆ.

1 ನಗರೋತ್ಥಾನ (ಮುನಿಸಿಪಾಲ್ಟಿ) ಮೂರನೇ ಹಂತದ ಯೋಜನೆಯಡಿ ಒಟ್ಟಾರೆ ರೂ.2836.50 ಕೋಟಿಗಳ (ರೂ. ಎರಡು ಸಾವಿರದ ಎಂಟು ನೂರ ಮೂವತ್ತಾರು ಕೋಟಿಗಳು ಮತ್ತು ಐವತ್ತು ಲಕ್ಷಗಳು ಮಾತ್ರ) ಮೊತ್ತದಲ್ಲಿ ಈ ಕೆಳಗೆ ನಿಗದಿಪಡಿಸಿರುವ ನಗರ ಸ್ಥಳೀಯ ಸಂಸ್ಥೆವಾರು ಹಂಚಿಕೆಯಂತೆ ಕ್ರಿಯಾ ಯೋಜನೆ ರೂಪಿಸಲು ಅನುಮೋದನೆ ನೀಡಿದೆ.

(ರೂ.ಕೋಟಿಗಳಲ್ಲಿ)

ಕ್ರ. ಸಂ.	ವರ್ಗ	ನಗರ ಸ್ಥಳೀಯ ಸಂಸ್ಥೆಗಳ ಸಂಖ್ಯೆ	ನಗರೋತ್ಥಾನ (ಮುನಿಸಿಪಾಲ್ಟಿ) 3ನೇ ಹಂತದ ಯೋಜನೆಗೆ ನಿಗದಿಪಡಿಸಲಾದ ಹಂಚಿಕೆ	
			ಹಂಚಿಕೆ	ಮೊತ್ತ
1	ಜಿಲ್ಲಾ ಕೇಂದ್ರದ ನಗರಸಭೆಗಳು ಹಾಗೂ ಗ್ರೇಡ್-1 ನಗರಸಭೆಗಳು	23	35.00	805.00
2	ಇತರೆ ನಗರಸಭೆಗಳು	34	25.00	850.00
3	ಹಾಲಿ ಇರುವ ಪುರಸಭೆಗಳು	79	7.50	592.50
4	ಪಟ್ಟಣ ಪಂಚಾಯಿತಿ ಯಿಂದ ಮೇಲ್ದರ್ಜೆಗೆ ಏರಿಸಿದ ಪುರಸಭೆಗಳು	18	7.50	135.00
5	ಹೊಸದಾಗಿ ಸೃಜಿಸಲಾದ ಪುರಸಭೆಗಳು	16	10.00	160.00
6	ಹೊಸದಾಗಿ ಸೃಜಿಸಲಾದ ಪಟ್ಟಣ ಪಂಚಾಯಿತಿ	38	5.00	190.00
7	ಹಾಲಿ ಇರುವ ಪಟ್ಟಣ ಪಂಚಾಯಿತಿಗಳು	52	2.00	104.00
8	ಅಧಿಸೂಚಿತ ಪ್ರದೇಶ ಸಮಿತಿಗಳು	4	0.00	0.00
	ಒಟ್ಟು	264		2836.50

2 ನಗರೋತ್ಥಾನ (ಮುನಿಸಿಪಾಲ್ಟಿ) 3ನೇ ಹಂತದ ಯೋಜನೆಗೆ ನಿಗದಿಪಡಿಸಿರುವ ಒಟ್ಟು ರೂ.2836.50 ಕೋಟಿ ಮೊತ್ತದಲ್ಲಿ ಶೇ.3ರಷ್ಟು ಅನುದಾನವನ್ನು ಅಂದರೆ ರೂ.85.00 ಕೋಟಿಗಳನ್ನು ಪಿ.ಎಂ.ಸಿ. ಹಾಗೂ ನಗರೋತ್ಥಾನ ಕೋಶದ ವೆಚ್ಚಗಳಿಗೆ ನಿಗದಿಪಡಿಸಲು ಅನುಮೋದನೆ ನೀಡಿದೆ.

3 ಮೇಲಿನ ಒಟ್ಟು ಹಂಚಿಕೆಯಲ್ಲಿ ಸರ್ಕಾರವು ಶೇಕಡ 50 ರಷ್ಟು ಹಂಚಿಕೆಯನ್ನು ಅನುದಾನದ ರೂಪದಲ್ಲಿ ಮತ್ತು ಉಳಿದ ಶೇಕಡ 50 ರಷ್ಟು ಹಂಚಿಕೆಯನ್ನು ಕೆಯುಐಡಿಎಫ್‌ಸಿಯ Karnataka Water and Sanitation Pooled Fund Trust ನ ವತಿಯಿಂದ ಸಾಲದ ಮುಖಾಂತರ ಭರಿಸಿ 2017-18 ನೇ ಸಾಲಿನಿಂದ 2018-19ನೇ ಸಾಲಿನ ಅವಧಿಯಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಿದೆ

4 ಹಿಂದುಳಿದ ಪಟ್ಟಣಗಳಾದ ಬೀದರ್ ನಗರಸಭೆ ಮತ್ತು ಭಾಲ್ಕಿ ಪುರಸಭೆಗಳಿಗೆ ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯಡಿ ಹೆಚ್ಚುವರಿಯಾಗಿ ತಲಾ ರೂ. 25 ಕೋಟಿಗಳಂತೆ ಒಟ್ಟು ರೂ. 50 ಕೋಟಿ (ರೂ. ಐವತ್ತು ಕೋಟಿಗಳು ಮಾತ್ರ) ಗಳ ಮೊತ್ತವನ್ನು ಸರ್ಕಾರವು ಮಂಜೂರು ಮಾಡಿದೆ.

5 ನಗರೋತ್ಥಾನ (ಮುನಿಸಿಪಾಲ್ಟಿ) 3ನೇ ಹಂತದ ಯೋಜನೆಯ ಪೂರ್ವ ಸಿದ್ಧತಾ ಕಾರ್ಯಗಳಿಗಾಗಿ 2016-17ನೇ ಸಾಲಿನ ಆಯ-ವ್ಯಯದಲ್ಲಿ ಮೀಸಲಿರಿಸಿರುವ ರೂ.25.00 ಕೋಟಿಗಳ ಬದಲಾಗಿ ರೂ.50.00 ಕೋಟಿಗಳನ್ನು ಒದಗಿಸಲು ಅನುಮೋದನೆ ನೀಡಿದೆ.

6 ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯಿಂದ ರೂ. 270 ಕೋಟಿಗಳು ಕಡಿಮೆ ಆಗದಂತೆ ಮೊತ್ತವನ್ನು ನಗರ ಸ್ಥಳೀಯ ಸಂಸ್ಥೆಗಳ ವಂತಿಕೆಯಾಗಿ ಅಮೃತ್ ಯೋಜನೆಗೆ ನೀಡಲು ಸರ್ಕಾರವು ಅನುಮೋದನೆ ನೀಡಿದೆ.

7 ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯ ಅನುದಾನ ಮತ್ತು ಸಾಲದ ಮೊತ್ತವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆಗೊಳಿಸಲಾಗುವುದು ಮತ್ತು ಜಿಲ್ಲಾಧಿಕಾರಿಗಳು ಯೋಜನೆಯನ್ನು ಅನುಷ್ಠಾನಗೊಳಿಸಿ ಹಣಬಳಕೆ ಪ್ರಮಾಣ ಪತ್ರ ಮತ್ತು ಯೋಜನೆಯ ಮುಕ್ತಾಯ ಪ್ರಮಾಣ ಪತ್ರಗಳನ್ನು ಸಲ್ಲಿಸಲು ಜವಾಬ್ದಾರರಾಗಿರುತ್ತಾರೆ.

8 ಇನ್ನು ಮುಂದೆ ಸಿಎಂಎಸ್‌ಎಂಟಿಡಿಪಿ ನಗರೋತ್ಥಾನ 3ನೇ ಹಂತದ ಯೋಜನೆ ಎಂಬುದರ ಬದಲಾಗಿ ನಗರೋತ್ಥಾನ (ಮುನಿಸಿಪಾಲ್ಟಿ)-3 ಯೋಜನೆ ಎಂದು ಮರು ನಾಮಕರಣ ಮಾಡಲು ಅನುಮೋದನೆ ನೀಡಿದೆ.

9 **ಕಾಮಗಾರಿಗಳ ಆಯ್ಕೆ ಮತ್ತು ಆದ್ಯತೆ :-**

9.1 **ಕುಡಿಯುವ ನೀರಿನ ಕಾಮಗಾರಿಗಳು:-**

i) ಕುಡಿಯುವ ನೀರಿನ ಕಾಮಗಾರಿಗಳನ್ನು ಪ್ರಥಮ ಆದ್ಯತೆ ಮೇರೆಗೆ ಪರಿಗಣಿಸುವುದು. ಸೇವಾ ಮಟ್ಟದ ಮಾನದಂಡದಂತೆ ಪ್ರತಿ ವ್ಯಕ್ತಿಗೆ 135 ಎಲ್‌ಪಿಸಿಡಿ ನೀರು ಮತ್ತು ಶೇ100ರಷ್ಟು ನಗರ ವ್ಯಾಪ್ತಿಯನ್ನು ಆವರಿಸುವಂತೆ ನೀರು ಸರಬರಾಜು ಮಾಡಲು ಕಾಮಗಾರಿಗಳನ್ನು ಕೈಗೊಳ್ಳುವುದು.

ii) ಕೇಂದ್ರ ಸರ್ಕಾರದ ,ಅನುದಾನದಡಿ ಕುಡಿಯುವ ನೀರು ಮತ್ತು ಒಳಚರಂಡಿ ಕಾಮಗಾರಿಗಳಿಗೆ ನೀಡಬೇಕಾದ ಸ್ಥಳೀಯ ಸಂಸ್ಥೆಯ ವಂತಿಕೆಯ ಪೂರ್ಣ ಮೊತ್ತವನ್ನು ಲಭ್ಯವಿರುವ ನಗರೋತ್ಥಾನ (ಮುನಿಸಿಪಾಲ್ಟಿ)-3 ಅನುದಾನದಡಿ ಭರಿಸುವುದು.

iii) ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನಗೊಳಸುವಲ್ಲಿ, 24/7 ನೀರು ಸರಬರಾಜು ಯೋಜನೆಗಳನ್ನು ಅನುಷ್ಠಾನಗೊಳಸಲು ಇರುವಂತಹ ಮಾನದಂಡಗಳು ಹಾಗೂ ವಿಶಿಷ್ಟ ವಿವರಣೆಗಳನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.

9.2. ರಸ್ತೆ ಅಭಿವೃದ್ಧಿ ಕಾಮಗಾರಿಗಳು:-

i) ರಸ್ತೆ ಅಭಿವೃದ್ಧಿ ಕಾಮಗಾರಿ, ರಸ್ತೆ ಬದಿ ಚರಂಡಿ ನಿರ್ಮಾಣ ಕಾಮಗಾರಿ, ಫುಟ್‌ಪಾತ್ ಮತ್ತು ಟ್ರಾಫಿಕ್ ಮ್ಯಾನೇಜ್‌ಮೆಂಟ್ ಅಭಿವೃದ್ಧಿ ಕಾಮಗಾರಿಗಳು.
<u>ಹಂಚಿಕೆ:-</u> ಕುಡಿಯುವ ನೀರಿನ ಕಾಮಗಾರಿಗಳ ವೆಚ್ಚದ ನಂತರ ಉಳಿಯುವ ಮೊತ್ತದಲ್ಲಿ ಶೇಕಡ 70% ರಷ್ಟು ಮೊತ್ತ.

ii) ಸಿ.ಸಿ ರಸ್ತೆಗಳಾಗಿದ್ದಲ್ಲಿ, ಉಪಯುಕ್ತತಾ ಕಾರಿಡಾರ್ (Utility Corridor) ನಿರ್ಮಿಸುವುದು ಕಡ್ಡಾಯವಾಗಿರುತ್ತದೆ. ತೆಗೆದುಕೊಳ್ಳಲಾಗುವ ರಸ್ತೆಗಳೊಂದಿಗೆ ಚರಂಡಿ ಹಾಗೂ ಫುಟ್‌ಪಾತ್‌ಗಳ ಅಭಿವೃದ್ಧಿ ಕೈಗೊಳ್ಳತಕ್ಕದ್ದು.

9.3 ಮಳೆ ನೀರು ಚರಂಡಿ ಅಭಿವೃದ್ಧಿ ಕಾಮಗಾರಿಗಳು:

ಮಳೆ ನೀರು ಚರಂಡಿ ಅಭಿವೃದ್ಧಿ ಕಾಮಗಾರಿಗಳು ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಯೋಜನೆಯನ್ವಯ ಪ್ರವಾಹ ಉಂಟಾಗುವ ಪ್ರದೇಶಗಳನ್ನು ಗುರುತಿಸಿ ಮಳೆ ನೀರು ಚರಂಡಿಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳತಕ್ಕದ್ದು.

<u>ಹಂಚಿಕೆ:-</u> ಕುಡಿಯುವ ನೀರಿನ ಕಾಮಗಾರಿಗಳ ವೆಚ್ಚದ ನಂತರ ಉಳಿಯುವ ಮೊತ್ತದಲ್ಲಿ ಶೇಕಡ 10% ರಷ್ಟು ಮೊತ್ತ.

9.4. ಇತರೆ ಅಭಿವೃದ್ಧಿ ಕಾಮಗಾರಿಗಳು:

ಮೇಲೆ ತಿಳಿಸಿರುವ ಕಾಮಗಾರಿಗಳ ಹಂಚಿಕೆಯನ್ನು ಹೊರತುಪಡಿಸಿ ಉಳಿದ ಹಂಚಿಕೆ ಮೊತ್ತದಲ್ಲಿ ಕಛೇರಿ ಕಟ್ಟಡ ನಿರ್ಮಾಣ, ಸಮುದಾಯ ಮತ್ತು ಸಾರ್ವಜನಿಕ ಶೌಚಾಲಯ ನಿರ್ಮಾಣ, ಆಧುನಿಕ ಬಸ್ ನಿಲ್ದಾಣ ನಿರ್ಮಾಣ, ಮಾರುಕಟ್ಟೆ ಸಂಕೀರ್ಣ ನಿರ್ಮಾಣ ಕೈಗೊಳ್ಳಬಹುದಾಗಿದೆ.

ಮೇಲ್ಕಂಡ ಕಾಮಗಾರಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ವಾಸಿಸುತ್ತಿರುವ ಪ್ರದೇಶಗಳಲ್ಲಿ ಕ್ರಮವಾಗಿ ಶೇಕಡ 17.15 ಮತ್ತು ಶೇಕಡ 6.95 ರಷ್ಟು ಮೊತ್ತ ಸೇರಿದಂತೆ ಒಟ್ಟಾರೆ ಶೇಕಡ 24.10 ರಷ್ಟು ಮೊತ್ತದ ಕಾಮಗಾರಿಗಳನ್ನು ಕ್ರಿಯಾಯೋಜನೆಯಲ್ಲಿ ಕಡ್ಡಾಯವಾಗಿ ಅಳವಡಿಸಿಕೊಳ್ಳತಕ್ಕದ್ದು.

10 ಕ್ರಿಯಾಯೋಜನೆ ಅನುಮೋದನೆ:-

ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆ ಅಡಿಯಲ್ಲಿ ನಗರ ಸ್ಥಳೀಯ ಸಂಸ್ಥೆಗೆ ನಿಗದಿಪಡಿಸಲಾದ ಹಂಚಿಕೆಯಲ್ಲಿ ಶೇಕಡ 85 ರಷ್ಟು ಅನುದಾನಕ್ಕೆ ಕ್ರಿಯಾಯೋಜನೆಯನ್ನು ತಯಾರಿಸುವುದು. ಉಳಿದ ಶೇಕಡ 15 ರಷ್ಟು ಹಂಚಿಕೆಯನ್ನು ನಗರ ಸ್ಥಳೀಯ ಸಂಸ್ಥೆಗಳು ಸಾಧಿಸಲಾಗುವ ಸುಧಾರಣೆಗಳನ್ನು ಆಧರಿಸಿ, ನಿಗಧಿತ ಸಮಯದಲ್ಲಿ ಉತ್ತಮ ಸಾಧನೆಗಳನ್ನು ಸಾಧಿಸಿದ ನಗರ ಸ್ಥಳೀಯ ಸಂಸ್ಥೆಗಳಿಗೆ ಕಂಡಿಕೆ-21 ರಲ್ಲಿ ವಿವರಿಸಿರುವಂತೆ ಮೊತ್ತವನ್ನು ಬಿಡುಗಡೆ

ಮಾಡಲು ಕ್ರಮವಹಿಸಲಾಗುತ್ತದೆ. ಜಿಲ್ಲಾಧಿಕಾರಿಗಳು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಕ್ರಿಯಾಯೋಜನೆಯನ್ನು ಯೋಜನೆಯ ಮಾರ್ಗಸೂಚಿಗಳ ಪ್ರಕಾರ ಪರಿಶೀಲಿಸಿ, ಕ್ರೋಢೀಕರಿಸಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಮಟ್ಟದ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯುವುದು ಹಾಗೂ ಮಾರ್ಗಸೂಚಿಯಂತೆ ಅನುಮೋದನೆಗೊಂಡ ಕಾಮಗಾರಿಗಳ ಕ್ರಿಯಾ ಯೋಜನೆಗೆ ಜಿಲ್ಲಾಧಿಕಾರಿಗಳು ಅನುಮೋದನೆ ನೀಡಿ ಆದೇಶ ಹೊರಡಿಸಿ ಪ್ರತಿಯನ್ನು ಪೌರಾಡಳಿತ ನಿರ್ದೇಶಕರು ಹಾಗೂ ಸರ್ಕಾರಕ್ಕೆ ಕಡ್ಡಾಯವಾಗಿ ಸಲ್ಲಿಸುವುದು ಹಾಗೂ ಸಕ್ಷಮ ಪ್ರಾಧಿಕಾರಗಳಿಂದ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಪಡೆಯುವುದು. ಕ್ರಿಯಾ ಯೋಜನೆಯನ್ನು ತಯಾರಿಸುವುದರಲ್ಲಿ ಮಾರ್ಗಸೂಚಿಗಳನ್ನು ಪಾಲಿಸುವುದು ಹಾಗೂ ಹಂಚಿಕೆಯ ಮೊತ್ತ ಹಾಗೂ ವಿಧಾನಗಳನ್ನು ಪಾಲಿಸುವುದರಲ್ಲಿ ಶೇ.1 ರಷ್ಟು ವಿಚಲನೆ (deviation) ಇದ್ದರೂ ಕೂಡ, ಅಂತಹ ಕ್ರಿಯಾ ಯೋಜನೆಗಳನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸತಕ್ಕದ್ದು. ಉದಾ:-ದಿನಂಪ್ರತಿ 135 LPCD ನೀರಿನ ವ್ಯವಸ್ಥೆ ಇಲ್ಲದಿದ್ದಾಗ ಬೇರೆ ಯಾವುದೇ ಕಾಮಗಾರಿಗಳನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸತಕ್ಕದ್ದಲ್ಲ. ಒಂದು ವೇಳೆ ಕುಡಿಯುವ ನೀರಿನ ಯೋಜನೆಗೆ ಸಂಪೂರ್ಣ ಹಣ ಇಡದೆ ರಸ್ತೆ ಕೆಲಸ ತೆಗೆದುಕೊಳ್ಳಬೇಕಿದ್ದಲ್ಲಿ ಅಂತಹ ಕ್ರಿಯಾ ಯೋಜನೆಗಳನ್ನು ಜಿಲ್ಲಾ ಮಟ್ಟದಲ್ಲಿ ಅನುಮೋದಿಸತಕ್ಕದ್ದಲ್ಲ. ಅದೇ ರೀತಿ, ಕಾಮಗಾರಿಗಳ ಕನಿಷ್ಠ ಗಾತ್ರ ಹಾಗೂ ಇನ್ನುಳಿದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಕ್ರಿಯಾ ಯೋಜನೆಯು ಮಾರ್ಗಸೂಚಿಗಳನ್ವಯ ಇಲ್ಲದೆ ಇದ್ದರೆ ಹಾಗೂ ಸರ್ಕಾರದ ಪೂರ್ವಾನುಮತಿ ಪಡೆಯದೇ ಇದ್ದಲ್ಲಿ, ಅನುದಾನವನ್ನು ಕಡಿತಗೊಳಿಸಲು ನಗರಾಭಿವೃದ್ಧಿ ಇಲಾಖೆಯು ಕ್ರಮವಹಿಸಲಿದೆ.

11 ಕಾಮಗಾರಿಗಳ ಕನಿಷ್ಠ ಗಾತ್ರ :-

ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆ ಅಡಿಯಲ್ಲಿ ನಗರಸಭೆ ವ್ಯಾಪ್ತಿಯಲ್ಲಿ ಪ್ರತಿ ಕಾಮಗಾರಿಯ ಕನಿಷ್ಠ ಮೊತ್ತವನ್ನು ರೂ. 50.00 ಲಕ್ಷಗಳಿಗೆ ಹಾಗೂ ಪುರಸಭೆಗಳು, ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಪ್ರತಿ ಕಾಮಗಾರಿಯ ಕನಿಷ್ಠ ಮೊತ್ತವನ್ನು ರೂ. 25.00 ಲಕ್ಷಗಳಿಗೆ ನಿಗದಿಪಡಿಸಲಾಗಿದೆ.

11.1. ಕಾಮಗಾರಿಗಳ ಪ್ಯಾಕೇಜ್ ವಿವರ:-

i) ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆ ಅಡಿಯಲ್ಲಿ ನಗರ ಸ್ಥಳೀಯ ಸಂಸ್ಥೆವಾರು ಪ್ಯಾಕೇಜ್ ಟೆಂಡರ್‌ಗಳನ್ನು ಕರೆಯಲು ಅನುಮೋದನೆ ನೀಡಿದೆ. ಸದರಿ ಟೆಂಡರ್‌ಗಳಿಗೆ ಜಿಲ್ಲಾಧಿಕಾರಿಗಳು, ಜಿಲ್ಲಾ ನಗರಾಭಿವೃದ್ಧಿ ಕೋಶ ಮತ್ತು ಯೋಜನಾ ಅನುಷ್ಠಾನ ಸಮಾಲೋಚಕರ ನೆರವಿನೊಂದಿಗೆ ಟೆಂಡರ್ ಕರೆಯುವುದು.

ii) ನಗರೋತ್ಥಾನ ಯೋಜನೆಯ ಮಾರ್ಗಸೂಚಿಗಳನುಸಾರ ಡಿಪಿಆರ್ ಗಳನ್ನು ಸಿದ್ಧಪಡಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಲು ರಾಜ್ಯ ಮಟ್ಟದ ಸಮಿತಿಗೆ ಸಲ್ಲಿಸಿ ಅದರ ಅನುಮೋದನೆಯೊಂದಿಗೆ ಅನುಷ್ಠಾನಮಾಡುವುದು

iii) ಸಂಬಂಧಿಸಿದ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾನಗರಾಭಿವೃದ್ಧಿ ಕೋಶಗಳ ಮುಖಾಂತರ ಟೆಂಡರ್‌ಗಳನ್ನು ನಗರ ಸ್ಥಳೀಯ ಸಂಸ್ಥೆವಾರು ಪ್ಯಾಕೇಜ್ ಮಾಡಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ರಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಕರೆಯುವುದು.

iv) ಯೋಜನಾ ನಿರ್ದೇಶಕರು, ಜಿಲ್ಲಾನಗರಾಭಿವೃದ್ಧಿ ಕೋಶರವರು ಯೋಜನಾ ಅನುಷ್ಠಾನ ಸಮಾಲೋಚಕರ ನೆರವಿನಿಂದ ಸ್ವೀಕೃತವಾದ ಟೆಂಡರ್ (ತಾಂತ್ರಿಕ ಮತ್ತು ಆರ್ಥಿಕ) ಗಳನ್ನು ಮೌಲ್ಯಮಾಪನ ಮಾಡಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇರುವ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯ ಮುಂದೆ ಮಂಡಿಸುವುದು.

v) ಸಂಬಂಧಿಸಿದ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾನಗರಾಭಿವೃದ್ಧಿ ಕೋಶಗಳು ಸಕ್ಷಮ ಪ್ರಾಧಿಕಾರಗಳಿಂದ ಟೆಂಡರ್ ಅನುಮೋದನೆ ಪಡೆದು ಕಾಮಗಾರಿಗಳನ್ನು ಅರ್ಹ ಗುತ್ತಿಗೆದಾರರಿಗೆ ವಹಿಸಲು ಗುತ್ತಿಗೆ ಕರಾರು ಮಾಡಿಕೊಳ್ಳಲು ಹಾಗೂ ಕಾಮಗಾರಿಗಳ ಕಾರ್ಯಾದೇಶವನ್ನು ನೀಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

12 ಗುಣಮಟ್ಟ ನಿಯಂತ್ರಣ:-

ಕಾಮಗಾರಿಗಳ ಗುಣಮಟ್ಟ ಹಾಗೂ ಪರಿಮಾಣಗಳನ್ನು ಖಚಿತಪಡಿಸಿಕೊಳ್ಳುವುದು ಯೋಜನಾ ಅನುಷ್ಠಾನ ಸಮಾಲೋಚಕರ ಕರ್ತವ್ಯವಾಗಿರುತ್ತದೆ. ಯೋಜನಾ ಅನುಷ್ಠಾನ ಸಮಾಲೋಚಕರ ಜೊತೆಗೆ ಕಾಮಗಾರಿಗಳ ಗುಣಮಟ್ಟ ಮತ್ತು ಸ್ವಲ್ಪ ಮಟ್ಟಿಗೆ ಪರಿಮಾಣಗಳನ್ನು ಹೋಲಿಸಿ ನೋಡಲು ಹಿಎಂಜಿಎಸ್‌ವೈ ಮಾದರಿಯಲ್ಲಿ ರಾಜ್ಯ/ರಾಷ್ಟ್ರೀಯ ಗುಣಮಟ್ಟ ನಿಯಂತ್ರಕರನ್ನು ನಗರಾಭಿವೃದ್ಧಿ ಇಲಾಖೆಯು ನೇಮಿಸಲಿದೆ.

13 ಯೋಜನೆಯ ಅನುಷ್ಠಾನದ ವ್ಯವಸ್ಥೆ ಮತ್ತು ಮೌಲ್ಯಮಾಪನ :-

i) ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯ ಕಾರ್ಯಕ್ರಮವನ್ನು ಜಾರಿ ಮಾಡಲು ಪೌರಾಡಳಿತ ನಿರ್ದೇಶನಾಲಯವು ನೋಡಲ್ ಏಜೆನ್ಸಿಯಾಗಿ ಕರ್ತವ್ಯ ನಿರ್ವಹಿಸುತ್ತದೆ. ಯೋಜನೆಯ ಒಟ್ಟಾರೆ ಮೇಲ್ವಿಚಾರಣೆ ಮತ್ತು ಅನುಷ್ಠಾನದ ಜವಾಬ್ದಾರಿಯನ್ನು ನಗರಾಭಿವೃದ್ಧಿ ಇಲಾಖೆಯು ಹೊಂದಿರುತ್ತದೆ.

ii) ಪೌರಾಡಳಿತ ನಿರ್ದೇಶನಾಲಯವು ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯ ಮೌಲ್ಯಮಾಪನವನ್ನು ಏಕಕಾಲದಲ್ಲಿ ಒಟ್ಟಿಗೆ ನಡೆಸತಕ್ಕದ್ದು. ಯೋಜನೆಯ ಮೌಲ್ಯಮಾಪನದಿಂದಾಗಿ ಯಾವುದಾದರೂ ಬದಲಾವಣೆ/ತಿದ್ದುಪಡಿಗಳು ಅವಶ್ಯಕತೆ ಇದ್ದರೆ, ಅವುಗಳನ್ನು ಅಳವಡಿಸಿ ಯೋಜನೆಯ ಕಾಮಗಾರಿಗಳನ್ನು ಗುಣಮಟ್ಟದಿಂದ ಹಾಗೂ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲು ಪೌರಾಡಳಿತ ನಿರ್ದೇಶನಾಲಯವು ಕ್ರಮವಹಿಸತಕ್ಕದ್ದು.

14 ನಗರೋತ್ಥಾನ ಜಿಲ್ಲಾ ಮಟ್ಟದ ಸಮಿತಿ ಮತ್ತು ಅದರ ಕರ್ತವ್ಯಗಳು:-

14.1. ನಗರೋತ್ಥಾನ ಜಿಲ್ಲಾ ಮಟ್ಟದ ಸಮಿತಿಯು ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರುತ್ತದೆ.

1	ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಸಚಿವರು	ಅಧ್ಯಕ್ಷರು
2	ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು	ಸದಸ್ಯರು
3	ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯ ಸ್ಥಳೀಯ ಶಾಸಕರು	ಸದಸ್ಯರು
4	ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು	ಸದಸ್ಯರು
5	ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯ ಪೌರಾಯುಕ್ತರು/ ಮುಖ್ಯಾಧಿಕಾರಿಗಳು	ಸದಸ್ಯರು
6	ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಹಾಗೂ ಜಿಲ್ಲಾ ನಗರಾಭಿವೃದ್ಧಿ ಕೋಶ	ಸದಸ್ಯರು
7	ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ	ಸದಸ್ಯ ಕಾರ್ಯದರ್ಶಿಗಳು

14.2. ನಗರೋತ್ಥಾನ ಜಿಲ್ಲಾ ಮಟ್ಟದ ಸಮಿತಿಯು ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸುವುದು:-

i) ಜಿಲ್ಲಾಧಿಕಾರಿಗಳು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಕ್ರಿಯಾಯೋಜನೆಗಳನ್ನು ಯೋಜನೆಯ ಮಾರ್ಗಸೂಚಿಗಳಂತೆ ಪರಿಶೀಲಿಸಿ, ಕ್ರೋಢೀಕರಿಸಿ, ಜಿಲ್ಲಾ ಮಟ್ಟದ ಸಮಿತಿಯ ಮುಂದೆ ಮಂಡಿಸಿದ ಕ್ರಿಯಾಯೋಜನೆಗೆ ಅನುಮೋದನೆ ನೀಡುವುದು.

ii) ಜಿಲ್ಲಾ ಮಟ್ಟದ ಸಮಿತಿಯು ಪ್ರತಿ ಎರಡು ತಿಂಗಳಿಗೊಮ್ಮೆ ಯೋಜನೆಯ ಪ್ರಗತಿ ಪರಿಶೀಲನೆ ಕೈಗೊಳ್ಳತಕ್ಕದ್ದು. ಜಿಲ್ಲಾ ನಗರಾಭಿವೃದ್ಧಿ ಕೋಶವು ಪ್ರತಿ ಮಾಹೆ ಯೋಜನೆಯ ಪ್ರಗತಿಯನ್ನು ಪೌರಾಡಳಿತ ನಿರ್ದೇಶನಾಲಯದ ಪೌರಸುಧಾರಣಾ ಕೋಶದ ವೆಬ್‌ಸೈಟ್‌ನಲ್ಲಿ ಆನ್ ಲೈನ್ ಮುಖಾಂತರ ವರದಿ ಮಾಡತಕ್ಕದ್ದು.

iii) ನಗರೋತ್ಥಾನ ಜಿಲ್ಲಾ ಮಟ್ಟದ ಸಮಿತಿಯು ಯಾವುದೇ ಕಾರಣಕ್ಕೂ ಕಾಮಗಾರಿಗಳ ಬದಲಾವಣೆಗೆ ಅವಕಾಶ ನೀಡಬಾರದು. ಒಂದು ವೇಳೆ ಬದಲಾವಣೆ ಅತ್ಯವಶ್ಯಕತೆ ಇದ್ದಲ್ಲಿ, ನಗರೋತ್ಥಾನ ಜಿಲ್ಲಾ ಮಟ್ಟದ ಸಮಿತಿಯು ಬದಲಿ ಕಾಮಗಾರಿ ಪ್ರಸ್ತಾವನೆಯನ್ನು ಬದಲಾವಣೆಗೆ ಅವಶ್ಯಕವಿರುವ ಕಾರಣಗಳನ್ನು ಮತ್ತು ಬದಲಾವಣೆ ಅನುಮೋದಿಸದೆ ಇದ್ದಲ್ಲಿ ಉಂಟಾಗುವ ಪರಿಣಾಮಗಳನ್ನು ನಮೂದಿಸಿ, ಜಿಲ್ಲಾಧಿಕಾರಿಗಳು ಮಾರ್ಗಸೂಚಿಗಳಂತೆ ಇರದ ಕ್ರಿಯಾಯೋಜನೆ ಮತ್ತು ಬದಲಿ ಕ್ರಿಯಾಯೋಜನೆಗಳನ್ನು ಪೌರಾಡಳಿತ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು. ಪೌರಾಡಳಿತ ನಿರ್ದೇಶಕರು ಸದರಿ ಪ್ರಸ್ತಾವನೆಗಳನ್ನು ರಾಜ್ಯ ಮಟ್ಟದ ಸಮಿತಿಯ ಮುಂದೆ ಸೂಕ್ತ ಕ್ರಮಕ್ಕಾಗಿ ಮಂಡಿಸುವುದು.

15. ನಗರೋತ್ಥಾನ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ:-

15.1. ನಗರೋತ್ಥಾನ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯು ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರುತ್ತದೆ:-

1	ಜಿಲ್ಲಾಧಿಕಾರಿಗಳು	ಅಧ್ಯಕ್ಷರು
2	ಪೌರಾಯುಕ್ತರು/ ಮುಖ್ಯಾಧಿಕಾರಿಗಳು, ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು	ಸದಸ್ಯರು
3	ಕಾರ್ಯಪಾಲಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ	ಸದಸ್ಯರು
4	ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ	ಸದಸ್ಯರು
5	ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ	ಸದಸ್ಯ ಕಾರ್ಯದರ್ಶಿಗಳು

15.2. ನಗರೋತ್ಥಾನ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯು ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು:-

i) ಕ್ರಿಯಾ ಯೋಜನೆಯನ್ನು ತಯಾರಿಸುವುದು ಮತ್ತು ಅಂತಿಮಗೊಳಿಸುವುದು.

ii) ಯೋಜನಾ ಅನುಷ್ಠಾನ ಸಮಾಲೋಚಕರ ಆಯ್ಕೆ.

iii) ಯೋಜನಾ ಅನುಷ್ಠಾನ ಸಮಾಲೋಚಕರು ಸಲ್ಲಿಸುವ ವಿಸ್ತೃತ ಯೋಜನಾ ವರದಿಗಳನ್ನು ಪರಿಶೀಲಿಸಿ ರಾಜ್ಯ ಮಟ್ಟದ ಸಮಿತಿಯಿಂದ ಅನುಮೋದನೆ ಪಡೆದುಕೊಂಡು ಕಾಮಗಾರಿಗಳ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳತಕ್ಕದ್ದು.

iv) ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ, ತಾಂತ್ರಿಕ ಮಂಜೂರಾತಿ, ಟೆಂಡರ್‌ನ ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ಗಳಿಗೆ ಅನುಮೋದನೆ ಮತ್ತು ಗುತ್ತಿಗೆದಾರರಿಗೆ ಗುತ್ತಿಗೆ ಕರಾರು ಮಾಡುವುದು ಸೇರಿದಂತೆ ವಿವಿಧ ಅನುಮೋದನೆಗಳನ್ನು ಮೇಲ್ವಿಚಾರಣೆ ಮಾಡುವುದು.

v) ಯೋಜನೆಯ ಪ್ರಗತಿಯನ್ನು ವೇಳಾಪಟ್ಟಿಯಂತೆ ಕಾಲಕಾಲಕ್ಕೆ ಪರಿಶೀಲನೆ ಹಾಗೂ ಮೇಲ್ವಿಚಾರಣೆ ಕೈಗೊಳ್ಳತಕ್ಕದ್ದು.

16. ಟೆಂಡರ್‌ಗಳ ಅನುಮೋದನೆ:-

ಆರ್ಥಿಕ ಇಲಾಖೆಯ ಅಧಿಕಾರ ಪ್ರತ್ಯಾಯೋಜನೆಯಂತೆ ಸಕ್ಷಮ ಪ್ರಾಧಿಕಾರಗಳು ಟೆಂಡರ್‌ಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಅನುಮೋದನೆ ನೀಡತಕ್ಕದ್ದು.

17. ನಗರೋತ್ಥಾನ ರಾಜ್ಯ ಮಟ್ಟದ ಸಮಿತಿ ಮತ್ತು ಅದರ ಕರ್ತವ್ಯಗಳು:-

17.1. ನಗರೋತ್ಥಾನ ರಾಜ್ಯ ಮಟ್ಟದ ಸಮಿತಿಯು ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರುತ್ತದೆ:-

1	ಮಾನ್ಯ ಪೌರಾಡಳಿತ ಸಚಿವರು	ಅಧ್ಯಕ್ಷರು
2	ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ	ಸದಸ್ಯರು
3	ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ	ಸದಸ್ಯರು
4	ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ	ಸದಸ್ಯ ಕಾರ್ಯದರ್ಶಿಗಳು
5	ಸರ್ಕಾರದ ಉಪ ಕಾರ್ಯದರ್ಶಿ-2, ನಗರಾಭಿವೃದ್ಧಿ ಇಲಾಖೆ	ಸದಸ್ಯರು
6	ಅಧೀಕ್ಷಕ ಅಭಿಯಂತರರು, ತಾಂತ್ರಿಕ ಕೋಶ, ನಗರಾಭಿವೃದ್ಧಿ ಇಲಾಖೆ	ಸದಸ್ಯರು
7	ಅಧೀಕ್ಷಕ ಅಭಿಯಂತರರು, ಪೌರಾಡಳಿತ ನಿರ್ದೇಶನಾಲಯ	ಸದಸ್ಯ
8	ಜಂಟಿ ನಿರ್ದೇಶಕರು (ಅಭಿವೃದ್ಧಿ) ಪೌರಾಡಳಿತ ನಿರ್ದೇಶನಾಲಯ	ಸದಸ್ಯರು

17.2. ನಗರೋತ್ಥಾನ ರಾಜ್ಯ ಮಟ್ಟದ ಸಮಿತಿಯು ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು :-

i) ಯೋಜನೆಯ ಪ್ರಗತಿ ಪರಿಶೀಲನೆ ಹಾಗೂ ಮೇಲ್ವಿಚಾರಣೆ.

ii) ಯೋಜನೆಯ ಮಾರ್ಗಸೂಚಿಗಳಂತೆ ಇರದ ಕ್ರಿಯಾಯೋಜನೆ ಮತ್ತು ಬದಲಿ ಕ್ರಿಯಾಯೋಜನೆಗಳನ್ನು, ಜಿಲ್ಲಾಮಟ್ಟದ ಸಮಿತಿಯ ಶಿಫಾರಸ್ಸಿನಂತೆ ನಗರಸ್ಥಳೀಯ ಸಂಸ್ಥೆಯ ಅವಶ್ಯಕತೆಗೆ ಅನುಗುಣವಾಗಿ ಅನುಮೋದನೆ ನೀಡುವುದು.

iii) ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಅಗತ್ಯವಿರುವ ಬದಲಾವಣೆಗಳ ಬಗ್ಗೆ ಸಲಹೆಗಳನ್ನು ನೀಡುವುದು.

18. ಯೋಜನಾ ಅನುಷ್ಠಾನ ಸಮಾಲೋಚಕರು:-

18.1. ಯೋಜನಾ ಅನುಷ್ಠಾನ ಸಮಾಲೋಚಕರ ಸೇವೆಯನ್ನು ಜಿಲ್ಲಾಧಿಕಾರಿಗಳು ಸರ್ಕಾರದಿಂದ ಅನುಮೋದಿಸಲ್ಪಟ್ಟಿರುವ bid document ಗಳನ್ನು ಬಳಸಿಕೊಂಡು ತಮ್ಮ ಹಂತದಲ್ಲಿಯೇ ಟೆಂಡರ್ ಕರೆದು ನೇಮಿಸಿಕೊಳ್ಳಬಹುದು ಅಥವಾ ಕೆ.ಯು.ಐ.ಡಿ.ಎಫ್.ಸಿ ಸಂಸ್ಥೆಯು ಅಂತಿಮಗೊಳಿಸಿರುವ ಪಟ್ಟಿಯಿಂದ ಯೋಜನಾ ಅನುಷ್ಠಾನ ಸಮಾಲೋಚಕರ ಸೇವೆಯನ್ನು ಉಪಯೋಗಿಸಿಕೊಳ್ಳತಕ್ಕದ್ದು. ಕೆ.ಯು.ಐ.ಡಿ.ಎಫ್.ಸಿ ಸಂಸ್ಥೆಯು ಅಂತಿಮಗೊಳಿಸಿರುವ ಯೋಜನಾ ಅನುಷ್ಠಾನ ಸಮಾಲೋಚಕರ ಪಟ್ಟಿಯು ಜಿಲ್ಲಾಧಿಕಾರಿಗಳಿಗೆ ಹೆಚ್ಚುವರಿ ಆಯ್ಕೆಯಾಗಿ ಲಭ್ಯವಾಗುವುದರಿಂದ, ಜಿಲ್ಲಾಧಿಕಾರಿಗಳು ಯಾವುದೇ ಯೋಜನಾ ಅನುಷ್ಠಾನ ಸಮಾಲೋಚಕರನ್ನು ಜಿಲ್ಲೆಗೆ ಸಂಪೂರ್ಣವಾಗಿ ಅಥವಾ ಸರ್ಕಾರದ ಅನುಮೋದನೆಯಂತೆ ಜಿಲ್ಲೆಯನ್ನು ಒಂದಕ್ಕಿಂತ ಹೆಚ್ಚುವರಿಯಾಗಿ ವಿಭಜನೆ ಮಾಡಿ ನೇಮಿಸತಕ್ಕದ್ದು. ಆದರೆ, ಒಂದೇ ನಗರ ಸ್ಥಳೀಯ ಸಂಸ್ಥೆಗೆ ಒಂದಕ್ಕಿಂತ ಹೆಚ್ಚು ಯೋಜನಾ ಅನುಷ್ಠಾನ ಸಮಾಲೋಚಕರನ್ನು ನೇಮಿಸುವಂತಿಲ್ಲ.

ಯೋಜನಾ ಅನುಷ್ಠಾನ ಸಮಾಲೋಚಕರ ಕರ್ತವ್ಯಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.

18.2. ಸರ್ಕಾರವು ಯೋಜನಾ ಅನುಷ್ಠಾನ ಸಮಾಲೋಚಕರ ವೆಚ್ಚವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುತ್ತದೆ ಮತ್ತು ಜಿಲ್ಲಾಧಿಕಾರಿಗಳು ಯೋಜನಾ ಅನುಷ್ಠಾನ ಸಮಾಲೋಚಕರು (ಪಿಎಂಸಿ) ಗಳ ವೆಚ್ಚವನ್ನು ಭರಿಸತಕ್ಕದ್ದು.

18.3. ಜಿಲ್ಲಾಧಿಕಾರಿಗಳು ಯೋಜನಾ ಅನುಷ್ಠಾನ ಸಮಾಲೋಚಕರುಗಳನ್ನು ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯ ಅನುಮೋದನೆ ಪಡೆದು ನೇಮಿಸಿಕೊಳ್ಳುವುದು. ಸಮಾಲೋಚಕರನ್ನು ಆರ್ಥಿಕ ಇಲಾಖೆಯ ಮಾರ್ಗಸೂಚಿಗಳಂತೆ ಗುಣಮಟ್ಟ ಮತ್ತು ಮೌಲ್ಯದ ಆಧಾರ (Quality & Cost Based Selection (QCBS)) ದ ಮೇಲೆ ಹಾಗೂ ಗುಣಮಟ್ಟ (Quality) ಕ್ಕೆ ಶೇಕಡ 75 ರಷ್ಟು ವೈಟೇಜ್ ಮತ್ತು ಮೌಲ್ಯ (Cost) ಕ್ಕೆ ಶೇಕಡ 25 ರಷ್ಟು ವೈಟೇಜ್ ನೀಡಿ ಆಯ್ಕೆ ಮಾಡಿಕೊಳ್ಳತಕ್ಕದ್ದು.

19. ನಗರೋತ್ಥಾನ ಕೋಶ:-

ನಗರೋತ್ಥಾನ (ಮುನಿಸಿಪಾಲಟಿ)-3 ಯೋಜನೆಯನ್ನು ಅನುಷ್ಠಾನಗೊಳಿಸಲು ಸಿಎಂಎಸ್ಎಂಟಿಡಿಪಿ ಎರಡನೇ ಹಂತದ ಯೋಜನೆಯಲ್ಲಿರುವ ಪೌರಾಡಳಿತ ನಿರ್ದೇಶನಾಲಯದ ನಗರೋತ್ಥಾನ ಕೋಶವನ್ನು ಮೂರನೇ ಹಂತದ ಯೋಜನಾ ಅವಧಿಗೆ ಮುಂದುವರೆಸಿದೆ. ನಗರೋತ್ಥಾನ ಕೋಶಕ್ಕೆ ಹೆಚ್ಚುವರಿ ಸಿಬ್ಬಂದಿಗಳು ಅವಶ್ಯವಿದ್ದಲ್ಲಿ ರಾಜ್ಯ ಮಟ್ಟದ ಸಮಿತಿಯ ಅನುಮೋದನೆ ಪಡೆದು ನೇಮಿಸಿಕೊಳ್ಳತಕ್ಕದ್ದು. ನಗರೋತ್ಥಾನ ಕೋಶದ ವೆಚ್ಚವನ್ನು ಪೌರಾಡಳಿತ ನಿರ್ದೇಶಕರು ಭರಿಸತಕ್ಕದ್ದು.

20. ಅನುದಾನ, ಸಾಲದ ಬಿಡುಗಡೆ ಹಾಗೂ ಬಳಕೆ:-

ಅನುದಾನ ಮತ್ತು ಸಾಲದ ಮೊತ್ತವನ್ನು ಯಾವುದೇ ಜಿಲ್ಲೆಗೆ ಪ್ರತ್ಯೇಕವಾಗಿ ಬಿಡುಗಡೆ ಮಾಡದೆ, ಜಿಲ್ಲಾಧಿಕಾರಿಗಳ ಅವಶ್ಯಕತೆಗೆ ಅನುಗುಣವಾಗಿ ಡ್ರಾ ಮಾಡಲು ಅನುಕೂಲವಾಗುವ ರೀತಿಯಲ್ಲಿ ಪೌರಾಡಳಿತ ನಿರ್ದೇಶಕರು ಹಾಗೂ 30 ಜಿಲ್ಲಾಧಿಕಾರಿಗಳ ಹೆಸರಿನಲ್ಲಿ ಜಂಟಿ ಖಾತೆಗಳನ್ನು ತೆರೆದು ನಿರ್ವಹಿಸಲು ಅವಶ್ಯಕವಿರುವ ವಿಸ್ತೃತ ಮಾರ್ಗಸೂಚಿಗಳನ್ನು ಪೌರಾಡಳಿತ ನಿರ್ದೇಶನಾಲಯವು ಹೊರಡಿಸತಕ್ಕದ್ದು.

21. ಉತ್ತಮ ಸಾಧನೆಗೈದ ನಗರ ಸ್ಥಳೀಯ ಸಂಸ್ಥೆಗಳಿಗೆ ಪ್ರೋತ್ಸಾಹಸುಧಾರಣೆಗೆ ಮನ್ನಣೆ:

21.1. ನಗರೋತ್ಥಾನ (ಮುನಿಸಿಪಾಲಟಿ)-3 ಯೋಜನೆಯಡಿ ನಗರ ಸ್ಥಳೀಯ ಸಂಸ್ಥೆಗೆ ನಿಗದಿಪಡಿಸಲಾದ ಹಂಚಿಕೆಯ ಶೇಕಡ 85 ರಷ್ಟು ಮೊತ್ತಕ್ಕೆ ಕ್ರಿಯಾಯೋಜನೆಯನ್ನು ತಯಾರಿಸುವುದು, ಉಳಿದ ಶೇಕಡ 15 ರಷ್ಟು ಹಂಚಿಕೆಯನ್ನು ನಗರ ಸ್ಥಳೀಯ ಸಂಸ್ಥೆಗಳು ಸಾಧಿಸಲಾಗುವ ಸುಧಾರಣೆಗಳನ್ನು ಆಧರಿಸಿ, ನಿಗದಿತ ಸಮಯದಲ್ಲಿ ಉತ್ತಮ ಸಾಧನೆಗಳನ್ನು ಸಾಧಿಸಿದ ನಗರ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಮೊತ್ತವನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತದೆ. ನಿಗದಿತ ಸಮಯದಲ್ಲಿ ಸಾಧನೆ ಮಾಡದ ನಗರ ಸ್ಥಳೀಯ ಸಂಸ್ಥೆಗಳಿಗೆ ಶೇಕಡ 10 ರಷ್ಟು ಹಂಚಿಕೆಯನ್ನು ತಡೆಹಿಡಿಯಲಾಗುವುದು.

21.2. ನಗರ ಸ್ಥಳೀಯ ಸಂಸ್ಥೆಗಳು ಈ ಕೆಳಕಂಡ ಸಾಧನೆಗಳನ್ನು ಕೈಗೊಳ್ಳಬೇಕಾಗಿರುತ್ತದೆ.

i) ಮನೆ ಮನೆಗಳಿಂದ ಕಸ ಸಂಗ್ರಹಣೆ.
ii) ಮೂಲದಲ್ಲಿ ಕಸವನ್ನು ಬೇರ್ಪಡಿಸಲು ಕ್ರಮವಹಿಸುವುದು.
iii) ಬಯಲು ಬಹಿರ್ದೆಸೆ ಮುಕ್ತ ವ್ಯವಸ್ಥೆ ಸಾಧಿಸುವುದು.
iv) ನಗರ ಸ್ಥಳೀಯ ಸಂಸ್ಥೆಯನ್ನು ಗಣಕೀಕರಣಗೊಳಿಸುವುದು.
v) ಶೇಕಡ 100 ರಷ್ಟು ನೀರು ಸರಬರಾಜಿನ ಕರವನ್ನು ವಸೂಲಿ ಮಾಡುವುದು.
vi) ನಗರ ಸ್ಥಳೀಯ ಸಂಸ್ಥೆಗಳು ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಕಾಮಗಾರಿಗಳನ್ನು GIS ನಲ್ಲಿ ಅಳವಡಿಸುವುದು ಹಾಗೂ GIS ನಕ್ಷೆಗಳನ್ನು ನವೀಕರಿಸುವುದು.
vii) ಅನಧಿಕೃತ ಕಟ್ಟಡ ಮತ್ತು ಬಡಾವಣೆಗಳನ್ನು ನಿಯಂತ್ರಿಸುವುದು.

ಸುಧಾರಣೆಯಲ್ಲಿನ ಸಾಧನೆಗಳ ಬಗ್ಗೆ ಅಂಕಿ ಅಂಶಗಳನ್ನು DMA ರವರು ತಯಾರಿಸಿ, ಸರ್ಕಾರದ ಅನುಮೋದನೆಯನ್ನು ಪಡೆದು, ಈ ಸುಧಾರಣೆಗೆ ನಿಗದಿಯಾದ ಮೊತ್ತವನ್ನು ವಿನಿಯೋಗಿಸತಕ್ಕದ್ದು.

22. ಅನುಷ್ಠಾನದ ವೇಳಾಪಟ್ಟಿ :-

2016-17ನೇ ಸಾಲಿನಲ್ಲಿ ಪೂರ್ವಸಿದ್ಧತಾ ಕಾರ್ಯಕ್ರಮವನ್ನು ಹಮ್ಮಿಕೊಂಡು 2017-18 ರಿಂದ 2018-2019 ರವರೆಗೆ ಈ ಕೆಳಕಂಡಂತೆ ಅನುಷ್ಠಾನಗೊಳಿಸತಕ್ಕದ್ದು. :-

1. ಡಿ.ಪಿ.ಆರ್ ಸಮಾಲೋಚಕರು ಹಾಗೂ ಜಿಲ್ಲಾ ಅನುಷ್ಠಾನ ಸಮಾಲೋಚಕರ ನೇಮಕಾತಿ- ಅಕ್ಟೋಬರ್-2016.
2. ಅಂದಾಜು ಪತ್ರಿಕೆಗಳ ತಯಾರಿಕೆ/ ತಾಂತ್ರಿಕ ಅನುಮೋದನೆ- ಜನವರಿ-2017.
3. ಟೆಂಡರ್ ಪ್ರಕ್ರಿಯೆ- ಫೆಬ್ರವರಿ-2017.
4. ಶೇ.5 ರಷ್ಟು ಆರ್ಥಿಕ ಪ್ರಗತಿ- ಮಾರ್ಚ್-2017.
5. ಶೇ.75 ರಷ್ಟು ಆರ್ಥಿಕ ಪ್ರಗತಿ- ಮಾರ್ಚ್-2018.
6. ಶೇ.100 ರಷ್ಟು ಆರ್ಥಿಕ ಪ್ರಗತಿ- ಮಾರ್ಚ್-2019.

ಈ ಆದೇಶವನ್ನು ಸಚಿವ ಸಂಪುಟದ ವಿಷಯ ಸಂಖ್ಯೆ: ಸಿ/467/2016, ದಿನಾಂಕ:28-09-2016ರ ಅನುಮೋದನೆಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
1/11/16
(ಕೆ. ಎಸ್. ಭಾಗ್ಯಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಯೋಮೇಕೋ).

ಇವರಿಗೆ:

1) ಮಹಾಲೇಖಪಾಲಕರು (ಲೆಕ್ಕ ಮತ್ತು ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಧಾನ ಸೌಧ, ಬೆಂಗಳೂರು.
6) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
7) ಮಾನ್ಯ ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
8) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಬೆಂಗಳೂರು.
9) ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
10) ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
11) ಎಲ್ಲಾ ವಿಭಾಗೀಯ ಆಯುಕ್ತರು.
12) ವ್ಯವಸ್ಥಾಪಕ ನಿರ್ದೇಶಕರು, ಕೆಯುಐಡಿಎಫ್‌ಸಿ, ಬೆಂಗಳೂರು
13) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
14) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
15) ಮಾನ್ಯ ಪೌರಾಡಳಿತ ಸಚಿವರ ಆಪ್ತ ಕಾರ್ಯದರ್ಶಿಗಳು.
16) ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರುಗಳ ಆಪ್ತ ಕಾರ್ಯದರ್ಶಿಗಳು.
17) ಸರ್ಕಾರದ ಉಪ ಕಾರ್ಯದರ್ಶಿಗಳು, ಸಚಿವ ಸಂಪುಟ ಶಾಖೆ, ವಿಧಾನ ಸೌಧ, ಬೆಂಗಳೂರು.

18) ಸರ್ಕಾರದ ಉಪ ಕಾರ್ಯದರ್ಶಿಗಳು 1, 2 & 3 ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.

19) ಜಂಟಿ ನಿರ್ದೇಶಕರು (ಯೋಜನೆ), ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.

20) ಸಂಬಂಧಿಸಿದ ಎಲ್ಲಾ ಅಧ್ಯಕ್ಷರುಗಳು, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿ-ಪೌರಾಡಳಿತ ನಿರ್ದೇಶನಾಲಯದ ಮುಖಾಂತರ

21) ಸಂಬಂಧಿಸಿದ ಎಲ್ಲಾ ಆಯುಕ್ತರು/ಮುಖ್ಯಾಧಿಕಾರಿಗಳು, ನಗರಸಭೆ / ಪುರಸಭೆ / ಪಟ್ಟಣ ಪಂಚಾಯತಿ-ಪೌರಾಡಳಿತ ನಿರ್ದೇಶನಾಲಯದ ಮುಖಾಂತರ

22) ಸರ್ಕಾರದ ಅಧೀನ ಕಾರ್ಯದರ್ಶಿ, (ವೆಚ್ಚ 3 & 9), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.

23) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಸರ್ಕಾರದ ಆದೇಶ ಸಂಖ್ಯೆ: ನಅಇ 88 ಸಮಸ 2015, ದಿನಾಂಕ:29-11-2016ಕ್ಕೆ

ಅನುಬಂಧ-1

ಯೋಜನಾ ಅನುಷ್ಠಾನ ಸಮಾಲೋಚಕರು (Project Implementation Consultants) ವಿವರವಾದ ಅಂದಾಜು ಪಟ್ಟಿ ತಯಾರಿಕೆ, ಟೆಂಡರ್ ಪ್ರಕ್ರಿಯೆಯಲ್ಲಿ ಸಹಾಯ, ಮೇಲ್ವಿಚಾರಣೆ ಮತ್ತು ನಿಗದಿತ ಸಮಯದಲ್ಲಿ ಯೋಜನೆಗಳನ್ನು ಪೂರ್ಣಗೊಳಿಸುವ ಜವಾಬ್ದಾರಿ ಹೊಂದಿರುತ್ತಾರೆ. ಕಾಮಗಾರಿಗಳ ಗುಣಮಟ್ಟ ಮೇಲ್ವಿಚಾರಕರ ಸಮಾಲೋಚಕರಾಗಿಯೂ ಸಹ ಪಿಎಂಸಿ ಕಾರ್ಯ ನಿರ್ವಹಿಸಬೇಕಾಗಿರುತ್ತದೆ. ನೇಮಿಸಿಕೊಂಡ ಯೋಜನಾ ಅನುಷ್ಠಾನ ಸಮಾಲೋಚಕರು (Project Implementation Consultants) ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

i) ಜಿ.ಪಿ.ಎಸ್ coordinates ಗಳನ್ನು ಬಳಸಿಗೊಂಡು ವಿಸ್ತೃತ ಯೋಜನಾ ವರದಿ (ಡಿಪಿಆರ್) ಗಳನ್ನು ತಯಾರಿಸುವುದು.

ii) ಟೆಂಡರ್ ದಾಖಲೆಗಳನ್ನು ಸಿದ್ಧಪಡಿಸುವುದು ಹಾಗೂ ಟೆಂಡರ್ ಪ್ರಕ್ರಿಯೆಯಲ್ಲಿ ಸಹಾಯ ಮಾಡುವುದು.

iii) ಕಾಮಗಾರಿಗಳನ್ನು GIS Map ನಲ್ಲಿ ಹಾಗೂ GIS ವ್ಯವಸ್ಥೆಯಲ್ಲಿ ಅಳವಡಿಸುವ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

iv) ಕಾಮಗಾರಿಗಳ ದಿನನಿತ್ಯದ ನಿರ್ವಹಣೆ ಮತ್ತು ಪರಿವೀಕ್ಷಣೆ.

v) ನಗರ ಸ್ಥಳೀಯ ಸಂಸ್ಥೆಗಳ ಅಭಿಯಂತರರೊಂದಿಗೆ ಕಾಮಗಾರಿಗಳ ಅನುಷ್ಠಾನವನ್ನು ಪರಿವೀಕ್ಷಿಸುವುದು.

vi) ಕಾಮಗಾರಿಯ ಗುಣಮಟ್ಟ ಉತ್ತಮವಾಗಿ ನಿರ್ಮಾಣವಾಗುವಂತೆ ಉಸ್ತುವಾರಿ ವಹಿಸಿ ದೃಢೀಕರಿಸುವುದು.

vii) ಕಾಲ-ಕಾಲಕ್ಕೆ ಪ್ರಗತಿ ವರದಿಯನ್ನು ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಮತ್ತು ಪೌರಾಡಳಿತ ನಿರ್ದೇಶನಾಲಯಕ್ಕೆ ಜಿಲ್ಲಾ ನಗರಾಭಿವೃದ್ಧಿ ಕೋಶದ ಮೂಲಕ ಸಲ್ಲಿಸುವುದು.

viii) ನಿಗದಿತ ಕಾಲಕ್ಕೆ ಯೋಜನೆಯನ್ನು ಪೂರ್ಣಗೊಳಿಸಲು ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳೊಂದಿಗೆ ಮೈಲುಗಲ್ಲುಗಳನ್ನು ನಿಗದಿಪಡಿಸುವುದು ಮತ್ತು ನಿಗದಿತ ಸಮಯದೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಸಹಕರಿಸುವುದು.

ix) ಅನುಷ್ಠಾನವಾದ ಕಾಮಗಾರಿಗಳ ಬಿಲ್ಲುಗಳನ್ನು ನಗರ ಸ್ಥಳೀಯ ಸಂಸ್ಥೆಯ ಮತ್ತು ಜಿಲ್ಲಾ ನಗರಾಭಿವೃದ್ಧಿ ಕೋಶದ ಅಭಿಯಂತರರುಗಳ ನೆರವಿನೊಂದಿಗೆ ನಿಗದಿತ ಅವಧಿಯಲ್ಲಿ ಅನುಮೋದನೆಗಾಗಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವುದು.

x) ಗುತ್ತಿಗೆದಾರರು ಟೆಂಡರ್ ಕರಾರಿನನ್ವಯ ಕಾಮಗಾರಿಗಳನ್ನು ನಿರ್ವಹಿಸಲು ಜಿಲ್ಲಾಡಳಿತ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಬೇಕಾದ ಎಲ್ಲಾ ಅಗತ್ಯ ಸಹಕಾರ ಮತ್ತು ಸಹಾಯ ನೀಡುವುದು.

xi) ಕ್ರಿಯಾಯೋಜನೆಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳ ಎಲ್ಲಾ ಅಂಶಗಳು ವಿಸ್ತೃತ ಯೋಜನಾ ವರದಿಯಲ್ಲಿ ಸೇರ್ಪಡೆಗೊಂಡಿರುವ ಬಗ್ಗೆ ಹಾಗೂ ಯಾವುದೇ ತಾಂತ್ರಿಕ ನ್ಯೂನತೆಗಳು ಇಲ್ಲದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಯೋಜನಾ ಅನುಷ್ಠಾನ ಸಮಾಲೋಚಕರು, ನಗರ ಸ್ಥಳೀಯ ಸಂಸ್ಥೆಯ ಮತ್ತು ಜಿಲ್ಲಾ ನಗರಾಭಿವೃದ್ಧಿ ಕೋಶದ ಅಭಿಯಂತರರುಗಳು ಹೊಂದಿರುತ್ತಾರೆ.

xii) ಯೋಜನಾ ಅನುಷ್ಠಾನ ಸಮಾಲೋಚಕರು ಕಾಮಗಾರಿಗಳ ವಿವರಗಳನ್ನು Project Management software ನಲ್ಲಿ ನಮೂದಿಸುವ ಜವಾಬ್ದಾರಿ ಹೊಂದಿರುತ್ತಾರೆ.

xiii) ರಾಜ್ಯ ಮಟ್ಟದ ಗುಣಮಟ್ಟ ನಿರ್ವಹಣೆ ಹಾಗೂ ಮೇಲ್ವಿಚಾರಣೆ ವ್ಯವಸ್ಥೆಯನ್ನು ಕೈಗೊಳ್ಳುವ ಜವಾಬ್ದಾರಿಯನ್ನು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳು ಹೊಂದಿರುತ್ತಾರೆ.

xiv) ವಿನ್ಯಾಸದ ಪ್ರಮುಖ ಅಂಶಗಳು (ಡಿ.ಪಿ.ಆರ್ ಸಮಾಲೋಚಕರಿಗೆ ಅನ್ವಯಿಸುತ್ತದೆ):-

1. ಐ.ಆರ್.ಸಿ ಮಾನದಂಡಗಳ ಪ್ರಕಾರ
2. ಸ್ಥಳದ ಮಣ್ಣಿನ ಸಾಮರ್ಥ್ಯ (ಸಿ.ಬಿ.ಆರ್)
3. ವಾಹನ ಸಾಂದ್ರತೆಯನ್ನು ಪರಿಗಣಿಸುವುದು
4. ಸ್ಥಳೀಯವಾಗಿ ಲಭ್ಯವಿರುವ ಸಾಮಗ್ರಿಗಳನ್ನು ಅಳವಡಿಸುವುದು ಹಾಗೂ ಮುಖ್ಯವಾಗಿ ರಸ್ತೆ ನಿರ್ಮಾಣದಲ್ಲಿ ಹೊಸ ತಾಂತ್ರಿಕತೆಯನ್ನು ಅಳವಡಿಸುವುದು.

xv) ಗುತ್ತಿಗೆದಾರರು ಸಲ್ಲಿಸಿದ ಬಿಲ್ಲುಗಳನ್ನು ಪರಿಶೀಲಿಸಿ ಯೋಜನಾ ಅನುಷ್ಠಾನ ಘಟಕಕ್ಕೆ ನೀಡುವುದು.

xvi) ಕಾಮಗಾರಿಯ ಎಲ್ಲಾ ಹಂತದ ಛಾಯಾಚಿತ್ರಗಳು ಮತ್ತು ವಿಡಿಯೋ ಚಿತ್ರೀಕರಣ ಮಾಡುವುದು.

29/11/16

(ಕೆ. ಎಸ್. ಭಾಗ್ಯಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಯೋಮೇಕೋ).

<u>ಕರ್ನಾಟಕ ಸರ್ಕಾರ</u>

ಸಂಖ್ಯೆ:ನಅಇ 36 ಸಮಸ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:05-03-2020

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,

ಇವರಿಗೆ:

ಕಾರ್ಯದರ್ಶಿಗಳು
ಕರ್ನಾಟಕ ವಿಧಾನಸಭೆ
ವಿಧಾನ ಸೌಧ
ಬೆಂಗಳೂರು.

ಮಾನ್ಯರೆ,

ವಿಷಯ:- ವಿಧಾನಸಭೆ ಸದಸ್ಯರಾದ ಶ್ರೀ ಈಶ್ವರ್ ಖಂಡ್ರೆ (ಭಾಲ್ಕಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :572ಕ್ಕೆ ಉತ್ತರ ನೀಡುವ ಕುರಿತು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನಸಭೆ ಸದಸ್ಯರಾದ ಶ್ರೀ ಈಶ್ವರ್ ಖಂಡ್ರೆ (ಭಾಲ್ಕಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 572 ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿ ಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

(ಲಲಿತಾಬಾಯಿ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಮೇಕೋ),
ನಗರಾಭಿವೃದ್ಧಿ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	572
ಸದಸ್ಯರ ಹೆಸರು	:	ಶ್ರೀ ಈಶ್ವರ ಖಂಡ್ರೆ (ಭಾಲ್ಕಿ)
ಉತ್ತರಿಸಬೇಕಾದ ದಿನಾಂಕ	:	06-03-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದ ನಗರೋತ್ಥಾನ-3 ಯೋಜನೆಯಡಿ ಮೀಸಲಿಟ್ಟ ಅನುದಾನವೆಷ್ಟು; ಸ್ಥಳೀಯ ಸಂಸ್ಥೆಗಳಿಗೆ ನಿಗದಿಯಾದ ಮೊತ್ತವೆಷ್ಟು; ಎಷ್ಟು ಕಾಮಗಾರಿಗಳಿಗೆಅನುಮೋದನೆಯಾಗಿದೆ; (ಮಾಹಿತಿ ಒದಗಿಸುವುದು)	ರಾಜ್ಯದ ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತ ಯೋಜನೆಯಡಿ 263 ನಗರ ಸ್ಥಳೀಯ ಸಂಸ್ಥೆಗಳಿಗೆ ಒಟ್ಟು ರೂ. 2890.00 ಕೋಟಿಗಳು ಹಂಚಿಕೆಯಾಗಿರುತ್ತದೆ. ನಗರ ಸ್ಥಳೀಯ ಸಂಸ್ಥೆವಾರು ಹಂಚಿಕೆಯಾದ ಅನುದಾನದ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. ಒಟ್ಟು 263 ನಗರ ಸ್ಥಳೀಯ ಸಂಸ್ಥೆಗಳಲ್ಲಿ 3484 ಕಾಮಗಾರಿಗಳು ಅನುಮೋದನೆಯಾಗಿರುತ್ತದೆ.
ಆ)	ಈ ಯೋಜನೆಯಡಿ ಇಲ್ಲಿಯವರೆಗೆ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ ಮತ್ತು ಎಷ್ಟು ಚಾಲಿಯಲ್ಲಿವೆ ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು; ;(ಮಾಹಿತಿ ಒದಗಿಸುವುದು)	ನಗರೋತ್ಥಾನ (ಮುನಿಸಿಪಾಲಿಟಿ) ಹಂತ-3ರ ಯೋಜನೆಯಡಿ ಒಟ್ಟು 1865 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. 1379 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ಹಾಗೂ 137 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿರುತ್ತವೆ. ಮತ್ತು 103 ಕಾಮಗಾರಿಗಳನ್ನು ಟೆಂಡರ್ ಕರೆಯಬೇಕಾಗಿರುತ್ತದೆ. ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯು 2016-17ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು, 3 ವರ್ಷಗಳ ಕಾಲಮಿತಿಯಲ್ಲಿ ಅಂದರೆ 2018-19ನೇ ಸಾಲಿಗೆ ಮುಕ್ತಾಯವಾಗಬೇಕಿರುತ್ತದೆ. ಆದರೆ ಕಾಮಗಾರಿಗಳ ಅನುಷ್ಠಾನದ ಸಮಯದಲ್ಲಿ ಚುನಾವಣಾ ನೀತಿ ಸಂಹಿತೆ ಮತ್ತು ಮಳೆಗಾಲ ಹಾಗೂ ಕೆಲವು ಜಿಲ್ಲೆಗಳಲ್ಲಿ ಅತೀ ವೃಷ್ಟಿಯಿಂದ ಕಾಮಗಾರಿಗಳ ಅನುಷ್ಠಾನ ವಿಳಂಬವಾಗಿರುತ್ತದೆ. ಆದ್ದರಿಂದ ಯೋಜನೆಯ ಅವಧಿಯನ್ನು 2020-21ನೇ ಸಾಲಿನ ವರೆಗೆ ವಿಸ್ತರಿಸಲು ಸಚಿವ ಸಂಪುಟದ ಅನುಮೋದನೆ ಮೇರೆಗೆ ಸರ್ಕಾರವು ದಿನಾಂಕ:15-03-2018 ರಂದು ಆದೇಶ ಹೊರಡಿಸಿರುತ್ತದೆ.
ಇ)	ಈ ನಗರೋತ್ಥಾನ ಯೋಜನೆಯ ಕಾಮಗಾರಿಗಳು ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ)	ಹಾಗಿದ್ದಲ್ಲಿ, ಸದರಿ ನಗರೋತ್ಥಾನ-3 ಯೋಜನೆಗಳನ್ನು ಕಾಲಮಿತಿಯಲ್ಲಿ ಮುಕ್ತಾಯಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ?	ಪೌರಾಡಳಿತ ನಿರ್ದೇಶನಾಲಯದ ವತಿಯಿಂದ ಸಭೆಗಳನ್ನು ನಡೆಸಿ ಕಾಮಗಾರಿಗಳನ್ನು 2020-21ನೇ ಸಾಲಿನಲ್ಲಿ ಪೂರ್ಣಗೊಳಿಸಲು ನಗರ ಸ್ಥಳೀಯ ಸಂಸ್ಥೆಗಳಿಗೆ ಕಟ್ಟುನಿಟ್ಟಾಗಿ ಸೂಚನೆಗಳನ್ನು ನೀಡಲಾಗಿದೆ.

ಸಂಖ್ಯೆ: ನಅಇ 36 ಸಮಸ 2020

(ನಾರಾಯಣ ಗೌಡ)
ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು

ಅನುಬಂಧ-1				
ಕ್ರ ಸಂ.	ಜಿಲ್ಲೆಯ ಹೆಸರು	ನಗರ ಸ್ಥಳೀಯ ಸಂಸ್ಥೆಗಳ ಹೆಸರು	ವರ್ಗ	ಹಂಚಿಕೆ ಮೊತ್ತ (ರೂ.ಲಕ್ಷಗಳಲ್ಲಿ)
1	ಕೋಲಾರ	ಕೋಲಾರ	ನಗರಸಭೆ	3500.00
2		ಕೆ.ಜಿ.ಎಫ್. ರಾಬರ್ಟ್‌ಸನ್‌ಪೇಟ್	ನಗರಸಭೆ	3500.00
3		ಮುಳಬಾಗಿಲು	ನಗರಸಭೆ	2500.00
4		ಮಾಲೂರು	ಪುರಸಭೆ	750.00
5		ಬಂಗಾರಪೇಟೆ	ಪುರಸಭೆ	750.00
6		ಶ್ರೀನಿವಾಸಪುರ	ಪುರಸಭೆ	750.00
		ಒಟ್ಟು		**11750.00**
7	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಗರಸಭೆ	3500.00
8		ಚಿಂತಾಮಣಿ	ನಗರಸಭೆ	2500.00
9		ಶಿಡ್ಲಘಟ್ಟ	ನಗರಸಭೆ	2500.00
10		ಗೌರಿಬಿದನೂರು	ನಗರಸಭೆ	2500.00
11		ಬಾಗೇಪಲ್ಲಿ	ಪುರಸಭೆ	750.00
12		ಗುಡಿಬಂಡೆ	ಪಟ್ಟಣ ಪಂಚಾಯಿತಿ	200.00
		ಒಟ್ಟು		**11950.00**
13	ಬೆಂಗಳೂರು (ಗ್ರಾಮಾಂತರ)	ದೊಡ್ಡಬಳ್ಳಾಪುರ	ನಗರಸಭೆ	2500.00
14		ಹೊಸಕೋಟೆ	ನಗರಸಭೆ	2500.00
15		ದೇವನಹಳ್ಳಿ	ಪುರಸಭೆ	750.00
16		ನೆಲಮಂಗಲ	ಪುರಸಭೆ	750.00
17		ವಿಜಯಪುರ	ಪುರಸಭೆ	750.00
		ಒಟ್ಟು		**7250.00**
18	ಬೆಂಗಳೂರು (ನಗರ)	ಆನೇಕಲ್	ಪುರಸಭೆ	750.00
19		ಹೆಬ್ಬಗೋಡಿ	ನಗರಸಭೆ	2500.00
20		ಚಂದಾಪುರ	ಪುರಸಭೆ	1000.00
21		ಅತ್ತಿಬೆಲೆ	ಪುರಸಭೆ	1000.00
22		ಜಿಗಣಿ	ಪುರಸಭೆ	1000.00
23		ಬೊಮ್ಮಸಂದ್ರ	ಪುರಸಭೆ	1000.00
		ಒಟ್ಟು		**7250.00**
24	ರಾಮನಗರ	ರಾಮನಗರ	ನಗರಸಭೆ	3500.00
25		ಚನ್ನಪಟ್ಟಣ	ನಗರಸಭೆ	2500.00
26		ಕನಕಪುರ	ನಗರಸಭೆ	2500.00
27		ಮಾಗಡಿ	ಪುರಸಭೆ	750.00
28		ಬಿಡದಿ	ಪುರಸಭೆ	1000.00
		ಒಟ್ಟು		**10250.00**

ಕ್ರ ಸಂ.	ಜಿಲ್ಲೆಯ ಹೆಸರು	ನಗರ ಸ್ಥಳೀಯ ಸಂಸ್ಥೆಗಳ ಹೆಸರು	ವರ್ಗ	ಹಂಚಿಕೆ ಮೊತ್ತ (ರೂ.ಲಕ್ಷಗಳಲ್ಲಿ)
29	ತುಮಕೂರು	ಶಿರಾ	ನಗರಸಭೆ	2500.00
30		ತಿಪಟೂರು	ನಗರಸಭೆ	2500.00
31		ಕುಣಿಗಲ್	ಪುರಸಭೆ	750.00
32		ಚಿಕ್ಕನಾಯಕನಹಳ್ಳಿ	ಪುರಸಭೆ	750.00
33		ಪಾವಗಡ	ಪುರಸಭೆ	750.00
34		ಮಧುಗಿರಿ	ಪುರಸಭೆ	750.00
35		ಗುಬ್ಬಿ	ಪಟ್ಟಣ ಪಂಚಾಯಿತಿ	200.00
36		ಕೊರಟಗೆರೆ	ಪಟ್ಟಣ ಪಂಚಾಯಿತಿ	200.00
37		ತುರುವೇಕರೆ	ಪಟ್ಟಣ ಪಂಚಾಯಿತಿ	200.00
		ಒಟ್ಟು		**8600.00**
38	ಚಿತ್ರದುರ್ಗ	ಚಿತ್ರದುರ್ಗ	ನಗರಸಭೆ	3500.00
39		ಹಿರಿಯೂರು	ನಗರಸಭೆ	2500.00
40		ಚಳ್ಳಕೆರೆ	ನಗರಸಭೆ	2500.00
41		ಹೊಸದುರ್ಗ	ಪುರಸಭೆ	750.00
42		ಹೊಳಲ್ಕೆರೆ	ಪಟ್ಟಣ ಪಂಚಾಯಿತಿ	200.00
43		ಮೊಳಕಾಲ್ಮೂರು	ಪಟ್ಟಣ ಪಂಚಾಯಿತಿ	200.00
44		ನಾಯಕನಹಟ್ಟಿ	ಪಟ್ಟಣ ಪಂಚಾಯಿತಿ	500.00
		ಒಟ್ಟು		**10150.00**
45	ದಾವಣಗೆರೆ	ಹರಿಹರ	ನಗರಸಭೆ	2500.00
46		ಹರಪನಹಳ್ಳಿ	ಪುರಸಭೆ	750.00
47		ಚನ್ನಗಿರಿ	ಪುರಸಭೆ	750.00
48		ಹೊನ್ನಾಳಿ	ಪಟ್ಟಣ ಪಂಚಾಯಿತಿ	200.00
49		ಜಗಳೂರು	ಪಟ್ಟಣ ಪಂಚಾಯಿತಿ	200.00
50		ಮಲೆಬೆನ್ನೂರು	ಪುರಸಭೆ	1000.00
		ಒಟ್ಟು		**5400.00**
51	ಶಿವಮೊಗ್ಗ	ಭದ್ರಾವತಿ	ನಗರಸಭೆ	3500.00
52		ಸಾಗರ	ನಗರಸಭೆ	2500.00
53		ಶಿಕಾರಿಪುರ	ಪುರಸಭೆ	750.00
54		ಹೊಸನಗರ	ಪಟ್ಟಣ ಪಂಚಾಯಿತಿ	200.00
55		ಸೊರಬ	ಪಟ್ಟಣ ಪಂಚಾಯಿತಿ	200.00
56		ಜೋಗ್-ಕಾರ್ಗಲ್	ಪಟ್ಟಣ ಪಂಚಾಯಿತಿ	200.00
57		ಶಿರಾಳಕೊಪ್ಪ	ಪಟ್ಟಣ ಪಂಚಾಯಿತಿ	200.00
58		ತೀರ್ಥಹಳ್ಳಿ	ಪಟ್ಟಣ ಪಂಚಾಯಿತಿ	200.00
		ಒಟ್ಟು		**7750.00**

ಕ್ರ ಸಂ.	ಜಿಲ್ಲೆಯ ಹೆಸರು	ನಗರ ಸ್ಥಳೀಯ ಸಂಸ್ಥೆಗಳ ಹೆಸರು	ವರ್ಗ	ಹಂಚಿಕೆ ಮೊತ್ತ (ರೂ.ಲಕ್ಷಗಳಲ್ಲಿ)
59	ಮಂಡ್ಯ	ಮಂಡ್ಯ	ನಗರಸಭೆ	3500.00
60		ಕೆ.ಆರ್.ಪೇಟೆ	ಪುರಸಭೆ	750.00
61		ಮಳವಳ್ಳಿ	ಪುರಸಭೆ	750.00
62		ಮದ್ದೂರು	ಪುರಸಭೆ	750.00
63		ಶ್ರೀರಂಗಪಟ್ಟಣ	ಪುರಸಭೆ	750.00
64		ಪಾಂಡವಪುರ	ಪುರಸಭೆ	750.00
65		ನಾಗಮಂಗಲ	ಪುರಸಭೆ	750.00
66		ಬೆಳ್ಳೂರು	ಪಟ್ಟಣ ಪಂಚಾಯಿತಿ	500.00
		ಒಟ್ಟು		**8500.00**
67	ಚಾಮರಾಜನಗರ	ಚಾಮರಾಜನಗರ	ನಗರಸಭೆ	3500.00
68		ಕೊಳ್ಳೇಗಾಲ	ನಗರಸಭೆ	2500.00
69		ಗುಂಡ್ಲುಪೇಟೆ	ಪುರಸಭೆ	750.00
70		ಯಳಂದೂರು	ಪಟ್ಟಣ ಪಂಚಾಯಿತಿ	200.00
71		ಹನೂರು	ಪಟ್ಟಣ ಪಂಚಾಯಿತಿ	200.00
		ಒಟ್ಟು		**7150.00**
72	ಮೈಸೂರು	ಹುಣಸೂರು	ನಗರಸಭೆ	2500.00
73		ನಂಜನಗೂಡು	ನಗರಸಭೆ	2500.00
74		ಕೆ.ಆರ್.ನಗರ	ಪುರಸಭೆ	750.00
75		ಬನ್ನೂರು	ಪುರಸಭೆ	750.00
76		ಟಿ.ನರಸೀಪುರ	ಪುರಸಭೆ	750.00
77		ಹೆಚ್.ಡಿ.ಕೋಟೆ	ಪುರಸಭೆ	750.00
78		ಪಿರಿಯಾಪಟ್ಟಣ	ಪುರಸಭೆ	750.00
79		ಸರಗೂರು	ಪಟ್ಟಣ ಪಂಚಾಯಿತಿ	200.00
		ಒಟ್ಟು		**8950.00**
80	ಹಾಸನ	ಹಾಸನ	ನಗರಸಭೆ	3500.00
81		ಅರಸೀಕೆರೆ	ನಗರಸಭೆ	2500.00
82		ಬೇಲೂರು	ಪುರಸಭೆ	750.00
83		ಚನ್ನರಾಯಪಟ್ಟಣ	ಪುರಸಭೆ	750.00
84		ಸಕಲೇಶಪುರ	ಪುರಸಭೆ	750.00
85		ಹೊಳೆನರಸೀಪುರ	ಪುರಸಭೆ	750.00
86		ಆಲೂರು	ಪಟ್ಟಣ ಪಂಚಾಯಿತಿ	200.00
87		ಅರಕಲಗೂಡು	ಪಟ್ಟಣ ಪಂಚಾಯಿತಿ	200.00
		ಒಟ್ಟು		**9400.00**

ಕ್ರ. ಸಂ.	ಜಿಲ್ಲೆಯ ಹೆಸರು	ನಗರ ಸ್ಥಳೀಯ ಸಂಸ್ಥೆಗಳ ಹೆಸರು	ವರ್ಗ	ಹಂಚಿಕೆ ಮೊತ್ತ (ರೂ.ಲಕ್ಷಗಳಲ್ಲಿ)
88	ಚಿಕ್ಕಮಗಳೂರು	ಚಿಕ್ಕಮಗಳೂರು	ನಗರಸಭೆ	3500.00
89		ತರೀಕೆರೆ	ಪುರಸಭೆ	750.00
90		ಕಡೂರು	ಪುರಸಭೆ	750.00
91		ಬೀರೂರು	ಪುರಸಭೆ	750.00
92		ಶೃಂಗೇರಿ	ಪಟ್ಟಣ ಪಂಚಾಯಿತಿ	200.00
93		ಕೊಪ್ಪ	ಪಟ್ಟಣ ಪಂಚಾಯಿತಿ	200.00
94		ಮೂಡಿಗೆರೆ	ಪಟ್ಟಣ ಪಂಚಾಯಿತಿ	200.00
95		ಎನ್.ಆರ್.ಪುರ	ಪಟ್ಟಣ ಪಂಚಾಯಿತಿ	200.00
96		ಕುದುರೆಮುಖ	ಅಧಿಸೂಚಿತ ಪ್ರದೇಶ	0.00
		ಒಟ್ಟು		**6550.00**
97	ಉಡುಪಿ	ಉಡುಪಿ	ನಗರಸಭೆ	3500.00
98		ಕಾರ್ಕಳ	ಪುರಸಭೆ	750.00
99		ಕುಂದಾಪುರ	ಪುರಸಭೆ	750.00
100		ಕಾಪು	ಪುರಸಭೆ	1000.00
101		ಸಾಲಿಗ್ರಾಮ	ಪಟ್ಟಣ ಪಂಚಾಯಿತಿ	200.00
		ಒಟ್ಟು		**6200.00**
102	ದಕ್ಷಿಣಕನ್ನಡ	ಪುತ್ತೂರು	ನಗರಸಭೆ	2500.00
103		ಉಳ್ಳಾಲ	ನಗರಸಭೆ	2500.00
104		ಮೂಡಬಿದರೆ	ಪುರಸಭೆ	750.00
105		ಬಂಟ್ವಾಳ	ಪುರಸಭೆ	750.00
106		ಬೆಳ್ತಂಗಡಿ	ಪಟ್ಟಣ ಪಂಚಾಯಿತಿ	200.00
107		ಸುಳ್ಯ	ಪಟ್ಟಣ ಪಂಚಾಯಿತಿ	200.00
108		ಮುಲ್ಕಿ	ಪಟ್ಟಣ ಪಂಚಾಯಿತಿ	200.00
109		ಕೋಟೆಕಾರು	ಪಟ್ಟಣ ಪಂಚಾಯಿತಿ	500.00
110		ವಿಟ್ಲ	ಪಟ್ಟಣ ಪಂಚಾಯಿತಿ	500.00
		ಒಟ್ಟು		**8100.00**
111	ಕೊಡಗು	ಮಡಿಕೇರಿ	ನಗರಸಭೆ	3500.00
112		ವಿರಾಜಪೇಟೆ	ಪಟ್ಟಣ ಪಂಚಾಯಿತಿ	200.00
113		ಸೋಮವಾರಪೇಟೆ	ಪಟ್ಟಣ ಪಂಚಾಯಿತಿ	200.00
114		ಕುಶಾಲನಗರ	ಪಟ್ಟಣ ಪಂಚಾಯಿತಿ	200.00
		ಒಟ್ಟು		**4100.00**

ಕ್ರ ಸಂ.	ಜಿಲ್ಲೆಯ ಹೆಸರು	ನಗರ ಸ್ಥಳೀಯ ಸಂಸ್ಥೆಗಳ ಹೆಸರು	ವರ್ಗ	ಹಂಚಿಕೆ ಮೊತ್ತ (ರೂ.ಲಕ್ಷಗಳಲ್ಲಿ)
115	ಹಾವೇರಿ	ಹಾವೇರಿ	ನಗರಸಭೆ	3500.00
116		ರಾಣೆಬೆನ್ನೂರು	ನಗರಸಭೆ	3500.00
117		ಬಂಕಾಪುರ	ಪುರಸಭೆ	750.00
118		ಬ್ಯಾಡಗಿ	ಪುರಸಭೆ	750.00
119		ಹಾನಗಲ್	ಪುರಸಭೆ	750.00
120		ಸವಣೂರು	ಪುರಸಭೆ	750.00
121		ಶಿಗ್ಗಾಂವ್	ಪುರಸಭೆ	750.00
122		ಹಿರೇಕೆರೂರು	ಪಟ್ಟಣ ಪಂಚಾಯಿತಿ	200.00
123		ಗುತ್ತಲ	ಪಟ್ಟಣ ಪಂಚಾಯಿತಿ	500.00
		ಒಟ್ಟು		**11450.00**
124	ಉತ್ತರಕನ್ನಡ	ಕಾರವಾರ	ನಗರಸಭೆ	3500.00
125		ಶಿರಸಿ	ನಗರಸಭೆ	2500.00
126		ದಾಂಡೇಲಿ	ನಗರಸಭೆ	2500.00
127		ಕುಮಟ	ಪುರಸಭೆ	750.00
128		ಭಟ್ಕಳ	ಪುರಸಭೆ	750.00
129		ಹಳಿಯಾಳ	ಪುರಸಭೆ	750.00
130		ಅಂಕೋಲ	ಪುರಸಭೆ	750.00
131		ಮುಂಡಗೋಡ	ಪಟ್ಟಣ ಪಂಚಾಯಿತಿ	200.00
132		ಸಿದ್ದಾಪುರ	ಪಟ್ಟಣ ಪಂಚಾಯಿತಿ	200.00
133		ಯಲ್ಲಾಪುರ	ಪಟ್ಟಣ ಪಂಚಾಯಿತಿ	200.00
134		ಹೊನ್ನಾವರ	ಪಟ್ಟಣ ಪಂಚಾಯಿತಿ	200.00
135		ಜಾಲಿ	ಪಟ್ಟಣ ಪಂಚಾಯಿತಿ	500.00
		ಒಟ್ಟು		**12800.00**
136	ಬೆಳಗಾವಿ	ನಿಪ್ಪಾಣಿ	ನಗರಸಭೆ	2500.00
137		ಗೋಕಾಕ್	ನಗರಸಭೆ	2500.00
138		ಬೈಲಹೊಂಗಲ	ಪುರಸಭೆ	750.00
139		ಅಥಣಿ	ಪುರಸಭೆ	750.00
140		ಚಿಕ್ಕೋಡಿ	ಪುರಸಭೆ	750.00
141		ರಾಮದುರ್ಗ	ಪುರಸಭೆ	750.00
142		ಸೌದತ್ತಿ	ಪುರಸಭೆ	750.00
143		ಮೂಡಲಗಿ	ಪುರಸಭೆ	750.00
144		ಸಂಕೇಶ್ವರ	ಪುರಸಭೆ	750.00
145		ಹುಕ್ಕೇರಿ	ಪುರಸಭೆ	750.00
146		ಸದಲಗ	ಪುರಸಭೆ	750.00

ಕ್ರ. ಸಂ.	ಜಿಲ್ಲೆಯ ಹೆಸರು	ನಗರ ಸ್ಥಳೀಯ ಸಂಸ್ಥೆಗಳ ಹೆಸರು	ವರ್ಗ	ಹಂಚಿಕೆ ಮೊತ್ತ (ರೂ.ಲಕ್ಷಗಳಲ್ಲಿ)
147		ಕುಡಚಿ	ಪುರಸಭೆ	750.00
148		ಮುನವಳ್ಳಿ	ಪುರಸಭೆ	1000.00
149		ಹಾರೋಗೇರಿ	ಪುರಸಭೆ	1000.00
150		ಮುಗಳಖೋಡ	ಪುರಸಭೆ	1000.00
151		ಉಗರಖುರ್ದ	ಪುರಸಭೆ	1000.00
152		ಕೊಣ್ಣೂರು	ಪುರಸಭೆ	750.00
153		ರಾಯಭಾಗ್	ಪಟ್ಟಣ ಪಂಚಾಯಿತಿ	200.00
154		ಖಾನಾಪುರ	ಪಟ್ಟಣ ಪಂಚಾಯಿತಿ	200.00
155		ಐನಾಪುರ	ಪಟ್ಟಣ ಪಂಚಾಯಿತಿ	500.00
156		ಶೇಡಬಾಳ	ಪಟ್ಟಣ ಪಂಚಾಯಿತಿ	500.00
157		ಬೋರಗಾಂವ	ಪಟ್ಟಣ ಪಂಚಾಯಿತಿ	500.00
158		ಎಕ್ಸಾಂಬ	ಪಟ್ಟಣ ಪಂಚಾಯಿತಿ	500.00
159		ಮಲ್ಲಾಪುರ ಪಿ.ಜಿ.	ಪಟ್ಟಣ ಪಂಚಾಯಿತಿ	500.00
160	ಬೆಳಗಾವಿ	ನಾಗನೂರು	ಪಟ್ಟಣ ಪಂಚಾಯಿತಿ	500.00
161		ಚಿಂಚೋಳಿ	ಪಟ್ಟಣ ಪಂಚಾಯಿತಿ	500.00
162		ಕಂಕನವಾಡಿ	ಪಟ್ಟಣ ಪಂಚಾಯಿತಿ	500.00
163		ಚೆನ್ನಮ್ಮ-ಕಿತ್ತೂರು	ಪಟ್ಟಣ ಪಂಚಾಯಿತಿ	500.00
164		ಕಲ್ಲೋಳಿ	ಪಟ್ಟಣ ಪಂಚಾಯಿತಿ	500.00
165		ಎಂ.ಕೆ.ಹುಬ್ಬಳ್ಳಿ	ಪಟ್ಟಣ ಪಂಚಾಯಿತಿ	500.00
166		ಕಬ್ಬೂರು	ಪಟ್ಟಣ ಪಂಚಾಯಿತಿ	500.00
167		ಅರಬಾವಿ	ಪಟ್ಟಣ ಪಂಚಾಯಿತಿ	500.00
		ಒಟ್ಟು		**24150.00**
168		ನವಲಗುಂದ	ಪುರಸಭೆ	750.00
169		ಅಣ್ಣಿಗೇರಿ	ಪುರಸಭೆ	750.00
170	ಧಾರವಾಡ	ಕಲಘಟಗಿ	ಪಟ್ಟಣ ಪಂಚಾಯಿತಿ	200.00
171		ಕುಂದಗೋಳ	ಪಟ್ಟಣ ಪಂಚಾಯಿತಿ	200.00
172		ಅಳ್ನಾವರ	ಪಟ್ಟಣ ಪಂಚಾಯಿತಿ	200.00
		ಒಟ್ಟು		**2100.00**
173		ಗದಗ-ಬೆಟಗೇರಿ	ನಗರಸಭೆ	3500.00
174		ನರಗುಂದ	ಪುರಸಭೆ	750.00
175		ರೋಣ	ಪುರಸಭೆ	750.00
176		ಮುಂಡರಗಿ	ಪುರಸಭೆ	750.00
177	ಗದಗ	ಲಕ್ಷ್ಮೇಶ್ವರ	ಪುರಸಭೆ	750.00
178		ಗಜೇಂದ್ರಗಡ	ಪುರಸಭೆ	750.00
179		ಶಿರಹಟ್ಟಿ	ಪಟ್ಟಣ ಪಂಚಾಯಿತಿ	200.00
180		ನರೇಗಲ್	ಪಟ್ಟಣ ಪಂಚಾಯಿತಿ	200.00
181		ಮುಳಗುಂದ	ಪಟ್ಟಣ ಪಂಚಾಯಿತಿ	200.00
		ಒಟ್ಟು		**7850.00**

ಕ್ರ ಸಂ.	ಜಿಲ್ಲೆಯ ಹೆಸರು	ನಗರ ಸ್ಥಳೀಯ ಸಂಸ್ಥೆಗಳ ಹೆಸರು	ವರ್ಗ	ಹಂಚಿಕೆ ಮೊತ್ತ (ರೂ.ಲಕ್ಷಗಳಲ್ಲಿ)
182	ಬಾಗಲಕೋಟೆ	ಬಾಗಲಕೋಟೆ	ನಗರಸಭೆ	3500.00
183		ಇಳಕಲ್	ನಗರಸಭೆ	2500.00
184		ಜಮಖಂಡಿ	ನಗರಸಭೆ	2500.00
185		ಮುಧೋಳ್	ನಗರಸಭೆ	2500.00
186		ರಬಕವಿ ಬನಹಟ್ಟಿ	ನಗರಸಭೆ	2500.00
187		ತೆರದಾಳ್	ಪುರಸಭೆ	750.00
188		ಮಹಾಲಿಂಗಪುರ	ಪುರಸಭೆ	750.00
189		ಗುಳೇದಗುಡ್ಡ	ಪುರಸಭೆ	750.00
190		ಬಾದಾಮಿ	ಪುರಸಭೆ	750.00
191		ಹುನಗುಂದ	ಪುರಸಭೆ	750.00
192		ಬಿಳಗಿ	ಪಟ್ಟಣ ಪಂಚಾಯಿತಿ	200.00
193		ಕೆರೂರು	ಪಟ್ಟಣ ಪಂಚಾಯಿತಿ	200.00
194		ಬೆಳಗಲಿ	ಪಟ್ಟಣ ಪಂಚಾಯಿತಿ	500.00
195		ಅಮೀನಗಡ	ಪಟ್ಟಣ ಪಂಚಾಯಿತಿ	500.00
196		ಕಮಟಗಿ	ಪಟ್ಟಣ ಪಂಚಾಯಿತಿ	500.00
		ಒಟ್ಟು		**19150.00**
197	ವಿಜಯಪುರ	ಬಿ. ಬಾಗೇವಾಡಿ	ಪುರಸಭೆ	750.00
198		ಇಂಡಿ	ಪುರಸಭೆ	750.00
199		ಮುದ್ದೇಬಿಹಾಳ	ಪುರಸಭೆ	750.00
200		ಸಿಂಧಗಿ	ಪುರಸಭೆ	750.00
201		ತಾಳಿಕೋಟೆ	ಪುರಸಭೆ	750.00
202		ಆಲಮೇಲ	ಪಟ್ಟಣ ಪಂಚಾಯಿತಿ	500.00
203		ದೇವರಹಿಪ್ಪರಗಿ	ಪಟ್ಟಣ ಪಂಚಾಯಿತಿ	500.00
204		ಕೋಲ್ಹಾರ	ಪಟ್ಟಣ ಪಂಚಾಯಿತಿ	500.00
205		ನಿಡಗುಂದಿ	ಪಟ್ಟಣ ಪಂಚಾಯಿತಿ	500.00
206		ಮನಗೂಳಿ	ಪಟ್ಟಣ ಪಂಚಾಯಿತಿ	500.00
207		ಚಡಚಣ	ಪಟ್ಟಣ ಪಂಚಾಯಿತಿ	500.00
208		ನಾಲತವಾಡ	ಪಟ್ಟಣ ಪಂಚಾಯಿತಿ	500.00
		ಒಟ್ಟು		**7250.00**
209	ಬೀದರ್	ಬೀದರ್	ನಗರಸಭೆ	3500.00
210		ಬಸವಕಲ್ಯಾಣ	ನಗರಸಭೆ	2500.00
211		ಹುಮನಾಬಾದ್	ಪುರಸಭೆ	750.00
212		ಬಾಲ್ಕಿ	ಪುರಸಭೆ	750.00
213		ಚಿಟಗುಪ್ಪ	ಪುರಸಭೆ	750.00
214		ಹಳಿಖೇಡ	ಪುರಸಭೆ	1000.00
215		ಔರದ್	ಪಟ್ಟಣ ಪಂಚಾಯಿತಿ	200.00
		ಒಟ್ಟು		**9450.00**

ಕ್ರ ಸಂ.	ಜಿಲ್ಲೆಯ ಹೆಸರು	ನಗರ ಸ್ಥಳೀಯ ಸಂಸ್ಥೆಗಳ ಹೆಸರು	ವರ್ಗ	ಹಂಚಿಕೆ ಮೊತ್ತ (ರೂ.ಲಕ್ಷಗಳಲ್ಲಿ)
216	ಕಲಬುರಗಿ	ಶಹಬಾದ್	ನಗರಸಭೆ	2500.00
217		ಚಿತ್ತಾಪುರ	ಪುರಸಭೆ	750.00
218		ಆಳಂದ	ಪುರಸಭೆ	750.00
219		ಸೇಡಂ	ಪುರಸಭೆ	750.00
220		ವಾಡಿ	ಪುರಸಭೆ	750.00
221		ಚಿಂಚೋಳಿ	ಪುರಸಭೆ	750.00
222		ಅಫಜಲ್‌ಪುರ	ಪುರಸಭೆ	750.00
223		ಜೇವರ್ಗಿ	ಪುರಸಭೆ	750.00
224		ಶಹಬಾದ್ ಎನ್.ಎ.ಸಿ	ಅಧಿಸೂಚಿತ ಪ್ರದೇಶ	0.00
		ಒಟ್ಟು		**7750.00**
225	ಯಾದಗಿರಿ	ಯಾದಗಿರಿ	ನಗರಸಭೆ	3500.00
226		ಶೋರಾಪುರ	ನಗರಸಭೆ	2500.00
227		ಶಹಾಪುರ	ನಗರಸಭೆ	2500.00
228		ಗುರುಮಿಟಕಲ್	ಪುರಸಭೆ	750.00
229		ಕೆಂಭಾವಿ	ಪುರಸಭೆ	1000.00
230		ಕಕ್ಕೇರ	ಪುರಸಭೆ	1000.00
231		ಭೀಮರಾಯನಗುಡಿ ಎನ್.ಎ.ಸಿ.	ಅಧಿಸೂಚಿತ ಪ್ರದೇಶ	0.00
		ಒಟ್ಟು		**11250.00**
232	ರಾಯಚೂರು	ರಾಯಚೂರು	ನಗರಸಭೆ	3500.00
233		ಸಿಂಧನೂರು	ನಗರಸಭೆ	2500.00
234		ದೇವದುರ್ಗ	ಪುರಸಭೆ	750.00
235		ಮಾನ್ವಿ	ಪುರಸಭೆ	750.00
236		ಲಿಂಗಸೂಗೂರು	ಪುರಸಭೆ	750.00
237		ಮುದಗಲ್	ಪುರಸಭೆ	750.00
238		ಮಸ್ಕಿ	ಪುರಸಭೆ	1000.00
239		ಸಿರವಾರ	ಪಟ್ಟಣ ಪಂಚಾಯಿತಿ	500.00
240		ಕವಿತಾಳ	ಪಟ್ಟಣ ಪಂಚಾಯಿತಿ	500.00
241		ತುರ್ವಿಹಾಳ	ಪಟ್ಟಣ ಪಂಚಾಯಿತಿ	500.00
242		ಬಳಗನೂರು	ಪಟ್ಟಣ ಪಂಚಾಯಿತಿ	500.00
243		ಹಟ್ಟಿ ಚಿನ್ನದಗಣಿ	ಪಟ್ಟಣ ಪಂಚಾಯಿತಿ	500.00
244		ಹಟ್ಟಿ ಚಿನ್ನದಗಣಿ	ಅಧಿಸೂಚಿತ ಪ್ರದೇಶ	0.00
		ಒಟ್ಟು		**12500.00**
245	ಬಳ್ಳಾರಿ	ಹೊಸಪೇಟೆ	ನಗರಸಭೆ	3500.00
246		ಸಿರುಗುಪ್ಪ	ನಗರಸಭೆ	2500.00
247		ಹೂವಿನಹಡಗಲಿ	ಪುರಸಭೆ	750.00
248		ಸಂಡೂರು	ಪುರಸಭೆ	750.00
249		ಕಂಪ್ಲಿ	ಪುರಸಭೆ	750.00

ಕ್ರ ಸಂ.	ಜಿಲ್ಲೆಯ ಹೆಸರು	ನಗರ ಸ್ಥಳೀಯ ಸಂಸ್ಥೆಗಳ ಹೆಸರು	ವರ್ಗ	ಹಂಚಿಕೆ ಮೊತ್ತ (ರೂ.ಲಕ್ಷಗಳಲ್ಲಿ)
250		ಹಗರಿಬೊಮ್ಮನಹಳ್ಳಿ	ಪುರಸಭೆ	1000.00
251		ಕುರೇಕುಪ್ಪ	ಪುರಸಭೆ	1000.00
252		ಕುರುಗೋಡು	ಪುರಸಭೆ	1000.00
253		ಕೂಡಲಗಿ	ಪಟ್ಟಣ ಪಂಚಾಯಿತಿ	200.00
254		ಕೊಟ್ಟೂರು	ಪಟ್ಟಣ ಪಂಚಾಯಿತಿ	200.00
255		ಕಮಲಾಪುರ	ಪಟ್ಟಣ ಪಂಚಾಯಿತಿ	200.00
256		ತೆಕ್ಕಲಕೋಟೆ	ಪಟ್ಟಣ ಪಂಚಾಯಿತಿ	200.00
257		ಮರಿಯಮ್ಮನ ಹಳ್ಳಿ	ಪಟ್ಟಣ ಪಂಚಾಯಿತಿ	500.00
258		ಕುಡುತಿನಿ	ಪಟ್ಟಣ ಪಂಚಾಯಿತಿ	500.00
		ಒಟ್ಟು		**13050.00**
259	ಕೊಪ್ಪಳ	ಕೊಪ್ಪಳ	ನಗರಸಭೆ	3500.00
260		ಗಂಗಾವತಿ	ನಗರಸಭೆ	3500.00
261		ಕುಷ್ಟಗಿ	ಪುರಸಭೆ	750.00
262		ಕಾರಟಗಿ	ಪುರಸಭೆ	1000.00
263		ಯಲ್ಬುರ್ಗಾ	ಪಟ್ಟಣ ಪಂಚಾಯಿತಿ	200.00
264		ತಾವರಗೇರ	ಪಟ್ಟಣ ಪಂಚಾಯಿತಿ	500.00
265		ಭಾಗ್ಯನಗರ	ಪಟ್ಟಣ ಪಂಚಾಯಿತಿ	500.00
266		ಕುಕನೂರು	ಪಟ್ಟಣ ಪಂಚಾಯಿತಿ	500.00
267		ಕನಕಗಿರಿ	ಪಟ್ಟಣ ಪಂಚಾಯಿತಿ	500.00
		ಒಟ್ಟು		**10950.00**
ಹಂಚಿಕೆಯಾಗಿರುವ ಒಟ್ಟು ಮೊತ್ತ				**289000.00**

28/2/2020

for ಮುಖ್ಯ ಅಭಿಯಂತರರು,
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 60 ಎಸ್‌ಎಫ್ ಸಿ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 05-03-2020.

8
u/s
06/03/2020

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

ಇವರಿಗೆ,
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಅನಿಲ್ ಚಿಕ್ಕಮಾದು (ಹೆಚ್.ಡಿ ಕೋಟೆ) ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:585ಕ್ಕೆ ಉತ್ತರಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಅನಿಲ್ ಚಿಕ್ಕಮಾದು (ಹೆಚ್.ಡಿ ಕೋಟೆ) ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:585ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,
ಲಲಿತಾಬಾಯಿ.ಕೆ
(ಲಲಿತಾಬಾಯಿ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಪ್ರತಿ ಅಗತ್ಯ ಕ್ರಮಕ್ಕಾಗಿ:
1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
2) ಸರ್ಕಾರದ ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ (ಸಮನ್ವಯ).

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	585
ಸದಸ್ಯರ ಹೆಸರು	:	ಶ್ರೀ ಅನಿಲ್ ಚಿಕ್ಕಮಾದು (ಹೆಚ್.ಡಿ.ಕೋಟೆ)
ಉತ್ತರಿಸಬೇಕಾದ ದಿನಾಂಕ	:	06-03-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	2018-19 ಮತ್ತು 2019-20ನೇ ಸಾಲಿನಲ್ಲಿ ಮೈಸೂರುಜಿಲ್ಲೆ ಹೆಚ್.ಡಿ.ಕೋಟೆ ಪುರಸಭೆ ಹಾಗೂ ಸರಗೂರು ಪಟ್ಟಣ ಪಂಚಾಯಿತಿಗೆ ಎಸ್.ಎಫ್.ಸಿ ಯೋಜನೆಯಡಿ ವಿಶೇಷ ಅನುದಾನವನ್ನು ಮಂಜೂರು ಮಾಡಲಾಗಿದೆಯೇ; ಹಾಗಿದ್ದಲ್ಲಿ ಮಂಜೂರಾದ ಮತ್ತು ಬಿಡುಗಡೆಯಾದ ಮತ್ತು ಬಾಕಿ ಉಳಿದಿರುವ ಅನುದಾನವೆಷ್ಟು; (ಆದೇಶದ ಪ್ರತಿಯೊಂದಿಗೆ ವಿವರ ನೀಡುವುದು)	ಸರ್ಕಾರವು ಆದೇಶ ಸಂಖ್ಯೆ: ನಅಇ 03 ಎಸ್‌ಎಫ್‌ಸಿ 2019 ದಿ: 09-01-2019ರನ್ವಯ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ಪುರಸಭೆ ಹಾಗೂ ಸರಗೂರು ಪಟ್ಟಣ ಪಂಚಾಯಿತಿಗೆ ಒಟ್ಟು ರೂ.5.00 ಕೋಟಿ ಅನುದಾನವನ್ನು ಮಂಜೂರು ಮಾಡಿ ಆದೇಶಿಸಿರುತ್ತದೆ (ಆದೇಶದ ಪ್ರತಿ ಅನುಬಂಧ-1 ರಲ್ಲಿ ಲಗತ್ತಿಸಿ ಸಲ್ಲಿಸಿದೆ). ಈ ಪೈಕಿ ಇದುವರೆವಿಗೆ ಯಾವುದೇ ಮೊತ್ತವು ಬಿಡುಗಡೆಯಾಗಿರುವುದಿಲ್ಲ.
(ಆ)	ಸದರಿ ಯೋಜನೆಯಡಿ ಮಂಜೂರಾದ ಅನುದಾನಕ್ಕೆ ಕೈಗೊಳ್ಳಲು ಆದೇಶಿಸಿದ ಕಾಮಗಾರಿಗಳಾವುವು; ಪ್ರಸ್ತುತ ಕಾಮಗಾರಿಗಳು ಯಾವ ಹಂತದಲ್ಲಿವೆ; (ಪ್ರತಿ ಕಾಮಗಾರಿಯ ಸ್ಥಿತಿಗತಿಯ ಸಂಪೂರ್ಣ ವಿವರ ನೀಡುವುದು)	ಮಂಜೂರಾದ ಅನುದಾನಕ್ಕೆ ಕೈಗೊಳ್ಳಲು ಉದ್ದೇಶಿಸಲಾಗಿದ್ದ ಕಾಮಗಾರಿಗಳ ವಿವರವನ್ನು ಅನುಬಂಧ-3ರಲ್ಲಿ ಲಗತ್ತಿಸಿದೆ.
(ಇ)	2018-19ನೇ ಸಾಲಿನಲ್ಲಿ ಹೆಚ್.ಡಿ.ಕೋಟೆ ಪುರಸಭೆ ಹಾಗೂ ಸರಗೂರು ಪಟ್ಟಣ ಪಂಚಾಯಿತಿಗೆ ಮಂಜೂರಾದ ಎಸ್.ಎಫ್.ಸಿ ವಿಶೇಷ ಅನುದಾನವನ್ನು ತಡೆ ಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ತಡೆಹಿಡಿಯಲು ಕಾರಣಗಳೇನು; ಸದರಿ ಕಾಮಗಾರಿಗಳು ಸಾರ್ವಜನಿಕರಿಗೆ ಅತೀ ಅವಶ್ಯಕವಾದ ಕಾಮಗಾರಿಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 551 ವೆಚ್ಚ-9, ದಿನಾಂಕ:04-09-2019 ರಲ್ಲಿ ನೀಡಿರುವ ನಿರ್ದೇಶದನ್ವಯ ಸರ್ಕಾರವು ಹೆಚ್.ಡಿ ಕೋಟೆ ಪುರಸಭೆಗೆ ಮಂಜೂರು ಮಾಡಿರುವ ರೂ.400.00 ಲಕ್ಷಗಳ ಅನುದಾನವನ್ನು ಮಾತ್ರ ಸರ್ಕಾರದ ಪತ್ರ ಸಂಖ್ಯೆ: ನಅಇ 222 ಎಸ್.ಎಫ್.ಸಿ 2019, ದಿನಾಂಕ: 13-09-2019 ರಲ್ಲಿ ತಡೆಹಿಡಿಯಲಾಗಿರುತ್ತದೆ.
(ಈ)	ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ತಡೆ ಆದೇಶವನ್ನು ತೆರವುಗೊಳಿಸಿ, ಕಾಮಗಾರಿ ಪ್ರಾರಂಭಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)	

ಕಡತ ಸಂಖ್ಯೆ: ನಅಇ 60 ಎಸ್.ಎಫ್.ಸಿ 2020

(ನಾರಾಯಣ ಗೌಡ)
ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು.

ಅನುಬಂಧ - 1

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ರಾಜ್ಯದ ವಿವಿಧ ನಗರ ಸ್ಥಳೀಯ ಸಂಸ್ಥೆಗಳಿಗೆ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ:-1) ಸರ್ಕಾರದ ಆದೇಶ ಸಂಖ್ಯೆ:ನಅಇ 160 ಎಸ್‌ಎಫ್‌ಸಿ 2018, ದಿನಾಂಕ: 24-11-2018.

2) ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 85 ವೆಚ್ಚ-9/19, ದಿನಾಂಕ: 05-01-2019.

*****

<u>ಪ್ರಸ್ತಾವನೆ:</u>

ರಾಜ್ಯದ 72 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.253.00ಕೋಟಿಗಳನ್ನು ಎಸ್‌ಎಫ್‌ಸಿ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯಡಿ ಹೆಚ್ಚುವರಿಯಾಗಿ ಪರಿಗಣಿಸಲಾಗಿದೆ ಎಂದು ನೀಡಿದ್ದ ಅನುಮೋದನೆಯನ್ನು ಪರಿಷ್ಕರಿಸಿ, ಅದನ್ನು "ಮಾನ್ಯ ಮುಖ್ಯಮಂತ್ರಿಗಳ ವಿವೇಚನಾ ನಿಧಿಯಡಿ ಎಸ್‌ಎಫ್‌ಸಿ ವಿಶೇಷ ಅನುದಾನವಾಗಿ ಮಂಜೂರು ಮಾಡಲು" ಮೇಲೆ ಓದಲಾದ (2)ರ ಅನಧಿಕೃತ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯು ಸಹಮತಿ ನೀಡಿರುತ್ತದೆ.

ಆದ್ದರಿಂದ, ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ:ನಅಇ 03 ಎಸ್‌ಎಫ್‌ಸಿ 2019,</u>
<u>ಬೆಂಗಳೂರು, ದಿನಾಂಕ:09-01-2019.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆರ್ಥಿಕ ಇಲಾಖೆಯ ಸಹಮತಿಯಂತೆ ಈ ಕೆಳಕಂಡ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು "ಮಾನ್ಯ ಮುಖ್ಯಮಂತ್ರಿಗಳ ವಿವೇಚನಾ ನಿಧಿಯಡಿ ಎಸ್‌ಎಫ್‌ಸಿ ವಿಶೇಷ ಅನುದಾನವಾಗಿ ರೂ.25300.00ಲಕ್ಷಗಳನ್ನು ಷರತ್ತಿಗೊಳಪಟ್ಟು ಮಂಜೂರು ಮಾಡಿದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ	ನಗರ ಸ್ಥಳೀಯ ಸಂಸ್ಥೆ ಹೆಸರು	ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ	ಮಂಜೂರು ಮಾಡಿರುವ ಮೊತ್ತ
1.	ಬಾಗೇಪಲ್ಲಿ ಪುರಸಭೆ	ಆಇ 41 ವೆಚ್ಚ-9/2019, ದಿ:01-01-2019	300.00
2.	ಯಲ್ಲಾಪುರ ಪಟ್ಟಣ ಪಂಚಾಯ್ತಿ	ಆಇ 04 ವೆಚ್ಚ-9/2019, ದಿ:01-01-2019	400.00
3.	ಮುಂಡಗೋಡ ಪಟ್ಟಣ ಪಂಚಾಯ್ತಿ		
4.	ಶೃಂಗೇರಿ ಪಟ್ಟಣ ಪಂಚಾಯ್ತಿ	ಆಇ 07 ವೆಚ್ಚ-9/2019, ದಿ:01-01-2019	500.00
5.	ಕೊಪ್ಪ ಪಟ್ಟಣ ಪಂಚಾಯ್ತಿ		
6.	ಎನ್‌ಆರ್ ಪುರ ಪಟ್ಟಣ ಪಂಚಾಯ್ತಿ		
7.	ಚಳ್ಳಕೆರೆ ನಗರಸಭೆ	ಆಇ 19 ವೆಚ್ಚ-9/2019, ದಿ:01-01-2019	400.00
8.	ಹನೂರು ಪಟ್ಟಣ ಪಂಚಾಯ್ತಿ	ಆಇ 35 ವೆಚ್ಚ-9/2019, ದಿ:01-01-2019	200.00
9.	ಬೈಲಹೊಂಗಲ ಪುರಸಭೆ	ಆಇ 37 ವೆಚ್ಚ-9/2019, ದಿ:01-01-2019	300.00

---2:

10.	ಮಾನ್ವಿ ಪುರಸಭೆ	ಆಇ 40 ವೆಚ್ಚ-9/2019, ದಿ:01-01-2019	400.00
11.	ಸಿರವಾರ ಪಟ್ಟಣ ಪಂಚಾಯ್ತಿ		
12.	ಕವಿತಾಳ ಪಟ್ಟಣ ಪಂಚಾಯ್ತಿ		
13.	ಕೊಪ್ಪಳ ನಗರಸಭೆ	ಆಇ 30 ವೆಚ್ಚ-9/2019, ದಿ:01-01-2019	400.00
14.	ಹೊಳೆನರಸೀಪುರ ಪುರಸಭೆ	ಆಇ 43 ವೆಚ್ಚ-9/2019, ದಿ:01-01-2019	800.00
15.	ಮಧುಗಿರಿ ಪುರಸಭೆ	ಆಇ 45 ವೆಚ್ಚ-9/2019, ದಿ:01-01-2019	300.00
16.	ಗುರುಮಿಟ್ಕಲ್ ಪುರಸಭೆ	ಆಇ 29 ವೆಚ್ಚ-9/2019, ದಿ:01-01-2019	400.00
17.	ಆನೇಕಲ್ ಪುರಸಭೆ	ಆಇ 47 ವೆಚ್ಚ-9/2019, ದಿ:01-01-2019	500.00
18.	ಟಿ. ನರಸೀಪುರ ಪುರಸಭೆ	ಆಇ 33 ವೆಚ್ಚ-9/2019, ದಿ:01-01-2019	400.00
19.	ಬನ್ನೂರು ಪುರಸಭೆ		
20.	ಖಾನಾಪುರ ಪಟ್ಟಣ ಪಂಚಾಯ್ತಿ	ಆಇ 18 ವೆಚ್ಚ-9/2019, ದಿ:01-01-2019	400.00
21.	ದೇವನಹಳ್ಳಿ ಪುರಸಭೆ	ಆಇ 17 ವೆಚ್ಚ-9/2019, ದಿ:01-01-2019	600.00
22.	ವಿಜಯಪುರ ಪುರಸಭೆ		
23.	ಮಾಗಡಿ ಪುರಸಭೆ	ಆಇ 16 ವೆಚ್ಚ-9/2019, ದಿ:01-01-2019	600.00
24.	ಬಿಡದಿ ಪುರಸಭೆ		
25.	ಇಂಡಿ ಪುರಸಭೆ ವ್ಯಾಪ್ತಿಯಲ್ಲಿ ಮೆಗಾ ಮಾರುಕಟ್ಟೆ ನಿರ್ಮಾಣಕ್ಕಾಗಿ	ಆಇ 14 ವೆಚ್ಚ-9/2019, ದಿ:01-01-2019	800.00
26.	ಬಳ್ಳಾರಿ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿರುವ ಗ್ರಾಮಾಂತರ ವಿಧಾನಸಭಾ ಕ್ಷೇತ್ರದ 9 ವಾರ್ಡ್‌ಗಳಿಗೆ	ಆಇ 13 ವೆಚ್ಚ-9/2019, ದಿ:01-01-2019	300.00
27.	ವರುಣಾ ವಿಧಾನಸಭಾ ಕ್ಷೇತ್ರದ ಟಿ. ನರಸೀಪುರ ಪುರಸಭೆ	ಆಇ 12 ವೆಚ್ಚ-9/2019, ದಿ:01-01-2019	300.00
28.	ಕುರುಗೋಡು ಪುರಸಭೆ	ಆಇ 11 ವೆಚ್ಚ-9/2019, ದಿ:01-01-2019	500.00
29.	ಕಂಪ್ಲಿ ಪುರಸಭೆ		
30.	ಚನ್ನರಾಯಪಟ್ಟಣ ಪುರಸಭೆ	ಆಇ 10 ವೆಚ್ಚ-9/2019, ದಿ:01-01-2019	500.00
31.	ಬಾದಾಮಿ ಪುರಸಭೆ	ಆಇ 09 ವೆಚ್ಚ-9/2019, ದಿ:01-01-2019	500.00
32.	ಗುಳೇದಗುಡ್ಡ ಪುರಸಭೆ		
33.	ಕೆರೂರು ಪಟ್ಟಣ ಪಂಚಾಯ್ತಿ		
34.	ಕೋಲಾರ ನಗರಸಭೆ	ಆಇ 08 ವೆಚ್ಚ-9/2019, ದಿ:01-01-2019	500.00
35.	ಹಿರೇಕೆರೂರು ವ್ಯಾಪ್ತಿಯ ಕೆರೆಗಳ ಅಭಿವೃದ್ಧಿಗಾಗಿ	ಆಇ 06 ವೆಚ್ಚ-9/2019, ದಿ:01-01-2019	500.00
36.	ನೆಲಮಂಗಲ ಪುರಸಭೆ	ಆಇ 32 ವೆಚ್ಚ-9/2019, ದಿ:01-01-2019	500.00
37.	ದೊಡ್ಡಬಳ್ಳಾಪುರ ನಗರಸಭೆ	ಆಇ 51 ವೆಚ್ಚ-9/2019, ದಿ:01-01-2019	800.00

38.	ಕೊಳ್ಳೇಗಾಲ ನಗರಸಭೆ	ಆಇ 52 ವೆಚ್ಚ-9/2019, ದಿ:01-01-2019	500.00
39.	ಯಳಂದೂರು ಪಟ್ಟಣ ಪಂಚಾಯ್ತಿ		
40.	ಹಗರಿಬೊಮ್ಮನಹಳ್ಳಿ ಪುರಸಭೆ	ಆಇ 54 ವೆಚ್ಚ-9/2019, ದಿ:01-01-2019	400.00
41.	ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯ್ತಿ		
42.	ಕೊಟ್ಟೂರು ಪಟ್ಟಣ ಪಂಚಾಯ್ತಿ		
43.	ಲಿಂಗಸಗೂರು ಪುರಸಭೆ	ಆಇ 39 ವೆಚ್ಚ-9/2019, ದಿ:01-01-2019	600.00
44.	ಮುದಗಲ್ಲು ಪುರಸಭೆ		
45.	ಹಟ್ಟಿ ಪಟ್ಟಣ ಪಂಚಾಯ್ತಿ		
46.	ಚಿಕ್ಕಬಳ್ಳಾಪುರ ನಗರಸಭೆ	ಆಇ 34 ವೆಚ್ಚ-9/2019, ದಿ:01-01-2019	300.00
47.	ಕೆಜಿಎಫ್ ನಗರಸಭೆ	ಆಇ 05 ವೆಚ್ಚ-9/2019, ದಿ:01-01-2019	400.00
48.	ಕಲಬುರಗಿ ಉತ್ತರ ಕ್ಷೇತ್ರದ ಅಭಿವೃದ್ಧಿಗೆ	ಆಇ 44 ವೆಚ್ಚ-9/2019, ದಿ:01-01-2019	500.00
49.	ಹುಣಸೂರು ಪುರಸಭೆ	ಆಇ 31 ವೆಚ್ಚ-9/2019, ದಿ:01-01-2019	500.00
50.	ಹೊಸಪೇಟೆ ನಗರಸಭೆ	ಆಇ 55 ವೆಚ್ಚ-9/2019, ದಿ:01-01-2019	400.00
51.	ಬೀದರ್ ನಗರಸಭೆ	ಆಇ 53 ವೆಚ್ಚ-9/2019, ದಿ:01-01-2019	500.00
52.	ಅಥಣಿ ಪುರಸಭೆ	ಆಇ 50 ವೆಚ್ಚ-9/2019, ದಿ:01-01-2019	400.00
53.	ಐನಾಪುರ ಪಟ್ಟಣ ಪಂಚಾಯ್ತಿ	ಆಇ 28 ವೆಚ್ಚ-9/2019, ದಿ:01-01-2019	400.00
54.	ಶೇಡಬಾಳ ಪಟ್ಟಣ ಪಂಚಾಯ್ತಿ		
55.	ಉಗಾರಖುರ್ದ ಪುರಸಭೆ		
56.	ಶಿರಾ ನಗರಸಭೆ	ಆಇ 49 ವೆಚ್ಚ-9/2019, ದಿ:01-01-2019	400.00
57.	ಅಫ್ಜಲಪುರ ಪುರಸಭೆ	ಆಇ 27 ವೆಚ್ಚ-9/2019, ದಿ:01-01-2019	400.00
58.	ತಾವರಗೇರ ಪಟ್ಟಣ ಪಂಚಾಯ್ತಿ	ಆಇ 46 ವೆಚ್ಚ-9/2019, ದಿ:01-01-2019	600.00
59.	ಜಮಖಂಡಿ ನಗರಸಭೆ	ಆಇ 25 ವೆಚ್ಚ-9/2019, ದಿ:01-01-2019	400.00
60.	ಹರಿಹರ ನಗರಸಭೆ	ಆಇ 42 ವೆಚ್ಚ-9/2019, ದಿ:01-01-2019	800.00
61.	ಮುಳಬಾಗಿಲು ನಗರಸಭೆ	ಆಇ 24 ವೆಚ್ಚ-9/2019, ದಿ:01-01-2019	400.00
62.	ಚಡಚಣ ಪಟ್ಟಣ ಪಂಚಾಯ್ತಿ	ಆಇ 23 ವೆಚ್ಚ-9/2019, ದಿ:01-01-2019	400.00
63.	ಬೇಲೂರು ಪುರಸಭೆ	ಆಇ 38 ವೆಚ್ಚ-9/2019, ದಿ:01-01-2019	300.00
64.	ಸಕಲೇಶಪುರ ಪುರಸಭೆ	ಆಇ 22 ವೆಚ್ಚ-9/2019, ದಿ:01-01-2019	400.00

---4.

65.	ಹೆಚ್.ಡಿ ಕೋಟೆ ಪುರಸಭೆ	ಆಇ 30 ವೆಚ್ಚ-9/2019, ದಿ:01-01-2019	500.00
66.	ಸರಗೂರು ಪಟ್ಟಣ ಪಂಚಾಯ್ತಿ		
67.	ಹೊಸಕೋಟೆ ನಗರಸಭೆ	ಆಇ 21 ವೆಚ್ಚ-9/2019, ದಿ:01-01-2019	600.00
68.	ಪಿರಿಯಾಪಟ್ಟಣ ಪುರಸಭೆ	ಆಇ 20 ವೆಚ್ಚ-9/2019, ದಿ:01-01-2019	400.00
69	ಶಿಡ್ಲಘಟ್ಟ ನಗರಸಭೆ	ಆಇ 03 ವೆಚ್ಚ-9/2019, ದಿ:01-01-2019	400.00
70	ಮಸ್ಕಿ ನಗರಸಭೆ	ಆಇ 10 ವೆಚ್ಚ-9/2019, ದಿ:02-01-2019	500.00
71	ಬಂಗಾರಪೇಟೆ ಪುರಸಭೆ	ಆಇ 69 ವೆಚ್ಚ-9/2019, ದಿ:02-01-2019	300.00
72	ಗೋಕಾಕ್ ನಗರಸಭೆ	ಆಇ 75 ವೆಚ್ಚ-9/2019, ದಿ:04-01-2019	500.00
73.	ಕೆ.ಆರ್ ನಗರ ಪುರಸಭೆ	ಆಇ 76 ವೆಚ್ಚ-9/2019, ದಿ:05-01-2019	1000.00
	ಒಟ್ಟು		25300.00

ಷರತ್ತುಗಳು

1) ಈ ಆದೇಶದಲ್ಲಿ ಮಂಜೂರು ಮಾಡಿರುವ ಅನುದಾನಕ್ಕೆ ಮೇಲೆ ಓದಲಾದ (1)ರ ಆದೇಶದಲ್ಲಿ ನಿಗಧಿಪಡಿಸಿರುವ ಮಾರ್ಗಸೂಚಿಗಳನ್ವಯ ಕ್ರಿಯಾ ಯೋಜನೆ ಮತ್ತು ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಅನುಮೋದನೆ ಪಡೆಯತಕ್ಕದ್ದು.
2) ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳನ್ನು ಕೆ.ಟಿ.ಪಿ.ಪಿ ಕಾಯ್ದೆ-1999 ಮತ್ತು ಕೆ.ಟಿ.ಪಿ.ಪಿ ನಿಯಮಗಳು-2000 ಹಾಗೂ e-proc portal ಮುಖಾಂತರ ಕೈಗೊಂಡು, ಪ್ಯಾಕೇಜ್‌ಗಳ ಟೆಂಡರ್‌ಗಳಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದುಕೊಂಡು ಕ್ರಮವಹಿಸತಕ್ಕದ್ದು.
3) ಈ ಆದೇಶದಲ್ಲಿ ಅನುಮೋದನೆ ನೀಡಿರುವ ಕಾಮಗಾರಿಗಳನ್ನು ಪ್ಯಾಕೇಜ್‌ವಾರು ಟೆಂಡರ್ ಕರೆಯತಕ್ಕದ್ದು.
4) ಕಾಮಗಾರಿಗಳ ಗುಣಮಟ್ಟದ ತಪಾಸಣೆಯನ್ನು 3ನೇ ವ್ಯಕ್ತಿಯ ಮೂಲಕ ತಪಾಸಣೆಗೆ ಒಳಪಡಿಸತಕ್ಕದ್ದು.
5) ಈ ಆದೇಶದಲ್ಲಿ ಮಂಜೂರು ಮಾಡಿರುವ ಮೊತ್ತದ ಮಿತಿಯಲ್ಲಿಯೇ ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು. ಹೆಚ್ಚುವರಿಯಾದಲ್ಲಿ ಸರ್ಕಾರದಿಂದ ಯಾವುದೇ ವಿಧದ ಹೆಚ್ಚುವರಿ ಅನುದಾನ ಒದಗಿಸಲಾಗುವುದಿಲ್ಲ.
6) ಕಾಮಗಾರಿಗಳಿಗೆ ಮೇಲೆ ಓದಲಾದ (1)ರ ಆದೇಶದನ್ವಯ ಟೆಂಡರ್ ಪ್ರಕ್ರಿಯೆ ಕೈಗೊಂಡು ಅನುದಾನ ಬಿಡುಗಡೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22860665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂ:23589/ಪೌಆನಿ/23/ಟಿಎಂಯುಸಿ/2014 ದಿನಾಂಕ:04.01.2020.

ಇವರಿಗೆ,

ಜಿಲ್ಲಾಧಿಕಾರಿಗಳು,
ಕಲಬುರಗಿ ಜಿಲ್ಲೆ,
ಕಲಬುರಗಿ.

ಮಾನ್ಯರೆ,

ವಿಷಯ: ಕಲಬುರ್ಗಿ ಜಿಲ್ಲೆಯ, ಕಮಲಾಪುರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು.

ಉಲ್ಲೇಖ:
1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು, ದಿ: 31.12.2019.
2) ಸರ್ಕಾರದ ಅಧಿಸೂಚನೆ ಸಂಖ್ಯೆ ನಅಇ 60 ಎಂಎಲ್‌ಆರ್ 2018, ದಿ: 31.12.2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಪತ್ರದಲ್ಲಿ ಕಮಲಾಪುರ ತಾಲ್ಲೂಕಿನ ಕಮಲಾಪುರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಸರ್ಕಾರದಿಂದ ಹೊರಡಿಸಲಾದ ಉಲ್ಲೇಖ (2)ರ ಕರಡು ಅಧಿಸೂಚನೆಯನ್ನು ಸಂಬಂಧಿಸಿದ ಪ್ರದೇಶದ ವ್ಯಾಪ್ತಿಯಲ್ಲಿ ಎದ್ದುಕಾಣುವ (Conspicuous) ಸ್ಥಳಗಳಲ್ಲಿ ಪ್ರಚುರಪಡಿಸಿ ಸ್ವೀಕೃತವಾಗುವ ಸಲಹೆ/ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ಸರ್ಕಾರಕ್ಕೆ ಕಳುಹಿಸಲು ಕೋರಲಾಗಿದೆ.

ಆದ್ದರಿಂದ ಕಲಬುರ್ಗಿ ಜಿಲ್ಲೆಯ ಕಮಲಾಪುರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಹೊರಡಿಸಿರುವ ಕರಡು ಅಧಿಸೂಚನೆಯನ್ನು ಪ್ರಚುರಪಡಿಸಿ, ಪ್ರಚುರಪಡಿಸಿದ ಕುರಿತು ಸೂಕ್ತ ದಾಖಲೆಗಳನ್ನು ಕಳುಹಿಸಲು ಹಾಗೂ ನಿಗದಿತ ಕಾಲಾವಧಿಯೊಳಗೆ ತಮ್ಮ ಹಂತದಲ್ಲಿ ಸಲಹೆ/ಆಕ್ಷೇಪಣೆಗಳು ಸಲ್ಲಿಕೆಯಾಗಿದ್ದಲ್ಲಿ ಅವುಗಳನ್ನು ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿಯನ್ನು ಕಳುಹಿಸುವಂತೆ ಕೋರಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ದಿನಾಂಕ ರಂದು
06 JAN 2020
ಕ್ರ.ಸಂ.............ರಲ್ಲಿ ರವಾನಿಸಲಾಗಿದೆ,
ರವಾನೆ ಸಹಾಯಕರು

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂ. 23589 ಡಿಎಂಎ 23 ಟಿಪಿಯುಪಿ 2017-18 ದಿನಾಂಕ: 08 .06.2018.

ಇವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಮಾನ್ಯರೇ,

ವಿಷಯ : ಕಲಬುರಗಿ ಜಿಲ್ಲೆಯ ಕಮಲಾಪೂರ ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು.

ಉಲ್ಲೇಖ : 1. ಸರ್ಕಾರದ ಪತ್ರ ಸಂ:ನಅಇ 60 ಎಂಎಲ್ಆರ್ 2018, ದಿನಾಂಕ: 09.05.2018.
2. ಜಿಲ್ಲಾಧಿಕಾರಿಗಳು, ಕಲಬುರಗಿ ರವರ ಪತ್ರ ಸಂ:ಜಿಪಕೋ/ಇತರೆ/109/2013-14, ದಿನಾಂಕ: 26.05.2018.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಸರ್ಕಾರದ ಪತ್ರದಲ್ಲಿ ಕಲಬುರ್ಗಿ ಜಿಲ್ಲೆಯ ಕಮಲಾಪೂರ ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯತಿಯನ್ನಾಗಿ ಮೇಲ್ದರ್ಜೆಗೇರಿಸುವ ಸಂಬಂಧ ಉದ್ದೇಶಿತ ಪಟ್ಟಣ ಪಂಚಾಯತಿಗೆ ಸೇರ್ಪಡೆಯಾಗುವ ಗ್ರಾಮಗಳ ವಿವರ ಹಾಗೂ ಬೌಂಡರಿ/ಚೆಕ್ಕುಬಂದಿ ವಿವರಗಳನ್ನು ನಿಗದಿತ ಶೆಡ್ಯೂಲ್ –ಎ ಮತ್ತು ಶೆಡ್ಯೂಲ್ –ಬಿ ನಮೂನೆಯಲ್ಲಿ ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಒದಗಿಸುವಂತೆ ಕೋರಲಾಗಿದೆ.

ಅದರಂತೆ ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ ರವರಿಂದ ಉಲ್ಲೇಖ (2) ರ ಪತ್ರದಲ್ಲಿ ಮಾಹಿತಿಯನ್ನು ಪಡೆಯಲಾಗಿದ್ದು, ಸದರಿ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ದಿನಾಂಕ ರಂದು
11 JUN 2018
ಕ್ರ.ಸಂ............ರಲ್ಲಿ ರವಾನಿಸಲಾಗಿದೆ.
ರವಾನೆ ಸಹಾಯಕರು.

ತಮ್ಮ ವಿಶ್ವಾಸಿ,

KPM 08/6/18
ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

(9)

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080-22867172 / 22866302
ಫ್ಯಾಕ್ಸ್:080-22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂ: 23193 ಶಿಪಾಖ 22 ಪಿಪಂಯುಸಿ 2017-18 ದಿನಾಂಕ: 23.07.2019

ಇವರಿಗೆ,
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು

ಮಾನ್ಯರೇ,

ವಿಷಯ: ವಿಜಯಪುರ ಜಿಲ್ಲೆಯ ಬಬಲೇಶ್ವರ ಮತ್ತು ತಿಕೋಟಾ ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯತಿಗಳನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು.

ಉಲ್ಲೇಖ:
1) ಸರ್ಕಾರದ ಪತ್ರ ಸಂ:ನಅಇ 02 ಎಂಎಲ್ಆರ್ 2018, 03.03.2018 ಮತ್ತು ನಅಇ 05 ಎಂಎಲ್ಆರ್ 2018, ದಿ:15.10.2018.
2) ಈ ನಿರ್ದೇಶನಾಲಯದ ಸಮಸಂಖ್ಯೆ ಪತ್ರ ದಿ:15.03.2018, ದಿ:29.03.2018, ದಿ:14.08.2018 ಮತ್ತು ದಿ:09.11.2018.
3) ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ ರವರ ಪತ್ರ ಸಂ:ಜಿನಕೋ-1/ಪಪಂ/ಸಿಆರ್-62/2017-18, ದಿ:24.06.2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಸರ್ಕಾರದ ಪತ್ರಗಳಲ್ಲಿ ವಿಜಯಪುರ ಜಿಲ್ಲೆಯ ಬಬಲೇಶ್ವರ ಮತ್ತು ತಿಕೋಟಾ ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯತಿಗಳನ್ನಾಗಿ ಮೇಲ್ದರ್ಜೆಗೇರಿಸುವ ಸಂಬಂಧ ಉದ್ದೇಶಿತ ಪಟ್ಟಣ ಪಂಚಾಯತಿಗೆ ಸೇರ್ಪಡೆಯಾಗುವ ಗ್ರಾಮಗಳ ವಿವರ ಹಾಗೂ ಬೌಂಡರಿ/ಚೆಕ್ಕುಬಂದಿ ವಿವರಗಳನ್ನು ನಿಗದಿತ ಶೆಡ್ಯೂಲ್ -ಎ ಮತ್ತು ಶೆಡ್ಯೂಲ್ -ಬಿ ನಮೂನೆಯಲ್ಲಿ ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಒದಗಿಸುವಂತೆ ಕೋರಲಾಗಿದ್ದು, ಉಲ್ಲೇಖ (2) ಪತ್ರಗಳನ್ವಯ ಸರ್ಕಾರದಿಂದ ಅಪೇಕ್ಷಿಸಲಾದ ಮಾಹಿತಿಯನ್ನು ಒದಗಿಸುವಂತೆ ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ ರವರನ್ನು ಕೋರಲಾಗಿತ್ತು.

ಅದರಂತೆ ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ ರವರು ಉಲ್ಲೇಖ (3) ರ ಪತ್ರದಲ್ಲಿ ಮಾಹಿತಿಯನ್ನು ಸಲ್ಲಿಸಿದ್ದು, ಸದರಿ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ದಿನಾಂಕ ರಂದು
24 JUL 2019
ಕ್ರ.ಸಂ..............ರಲ್ಲಿ ದಾಖಲಿಸಲಾಗಿದೆ.
ದಾಖಲೆ ಸಹಾಯಕರು

ತಮ್ಮ ವಿಶ್ವಾಸಿ,

ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080– 22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001

ಸಂ:23193/ನಿಪಾಂಅ/22/ತಿಕೋಟಾ/2014 ದಿನಾಂಕ:04.01.2020.

ಇವರಿಗೆ,

ಜಿಲ್ಲಾಧಿಕಾರಿಗಳು,
ವಿಜಯಪುರ ಜಿಲ್ಲೆ,
ವಿಜಯಪುರ.

ಮಾನ್ಯರೆ,

ವಿಷಯ: ವಿಜಯಪುರ ಜಿಲ್ಲೆಯ ತಿಕೋಟಾ ಗ್ರಾಮವನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು.

ಉಲ್ಲೇಖ:
1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು, ದಿ: 31.12.2019.
2) ಸರ್ಕಾರದ ಅಧಿಸೂಚನೆ ಸಂಖ್ಯೆ ನಅಇ 05 ಎಂಎಲ್‌ಆರ್ 2018, ದಿ: 31.12.2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಪತ್ರದಲ್ಲಿ ವಿಜಯಪುರ ತಾಲ್ಲೂಕಿನ ತಿಕೋಟಾ ಗ್ರಾಮವನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಸರ್ಕಾರದಿಂದ ಹೊರಡಿಸಲಾದ ಉಲ್ಲೇಖ (2)ರ ಕರಡು ಅಧಿಸೂಚನೆಯನ್ನು ಸಂಬಂಧಿಸಿದ ಪ್ರದೇಶದ ವ್ಯಾಪ್ತಿಯಲ್ಲಿ ಎದ್ದುಕಾಣುವ (Conspicuous) ಸ್ಥಳಗಳಲ್ಲಿ ಪ್ರಚುರಪಡಿಸಿ ಸ್ವೀಕೃತವಾಗುವ ಸಲಹೆ/ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ಸರ್ಕಾರಕ್ಕೆ ಕಳುಹಿಸಲು ಕೋರಲಾಗಿದೆ.

ಆದ್ದರಿಂದ ವಿಜಯಪುರ ಜಿಲ್ಲೆಯ ತಿಕೋಟಾ ಗ್ರಾಮವನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಹೊರಡಿಸಿರುವ ಕರಡು ಅಧಿಸೂಚನೆಯನ್ನು ಪ್ರಚುರಪಡಿಸಿ, ಪ್ರಚುರಪಡಿಸಿದ ಕುರಿತು ಸೂಕ್ತ ದಾಖಲೆಗಳನ್ನು ಕಳುಹಿಸಲು ಹಾಗೂ ನಿಗದಿತ ಕಾಲಾವಧಿಯೊಳಗೆ ತಮ್ಮ ಹಂತದಲ್ಲಿ ಸಲಹೆ/ಆಕ್ಷೇಪಣೆಗಳು ಸಲ್ಲಿಕೆಯಾಗಿದ್ದಲ್ಲಿ ಅವುಗಳನ್ನು ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿಯನ್ನು ಕಳುಹಿಸುವಂತೆ ಕೋರಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು 4/01/2020.
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

O/C

ದಿನಾಂಕ ರಂದು
6996
06 JAN 2020
ಕ್ರ.ಸಂ. 6996 ರಲ್ಲಿ ರವಾನಿಸಲಾಗಿದೆ,
ರವಾನೆ ಸಹಾಯಕರು.

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080-22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂ: 23191 ಪೌಆನಿ 22 ಪಿಪಿಎಂಸಿ 2017-18

ದಿನಾಂಕ: 26 .07.2019.

ಇವರಿಗೆ,
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ವಿಜಯಪುರ ಜಿಲ್ಲೆಯ ಬಬಲೇಶ್ವರ ಮತ್ತು ತಿಕೋಟಾ ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯತಿಗಳನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು.

ಉಲ್ಲೇಖ : 1) ಸರ್ಕಾರದ ಪತ್ರ ಸಂ:ನಅಇ 02 ಎಂಎಲ್‌ಆರ್ 2018, 03.03.2018 ಮತ್ತು ನಅಇ 05 ಎಂಎಲ್‌ಆರ್ 2018, ದಿ:15.10.2018.
2) ಈ ನಿರ್ದೇಶನಾಲಯದ ಸಮಸಂಖ್ಯೆ ಪತ್ರ ದಿ:15.03.2018, ದಿ:29.05.2018, ದಿ:14.08.2018 ಮತ್ತು ದಿ:09.11.2018.
3) ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ ರವರ ಪತ್ರ ಸಂ:ಜಿಪಕೋ-1/ಪಪಂ/ಸಿಆರ್-62/2017-18, ದಿ:24.06.2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಸರ್ಕಾರದ ಪತ್ರಗಳಲ್ಲಿ ವಿಜಯಪುರ ಜಿಲ್ಲೆಯ ಬಬಲೇಶ್ವರ ಮತ್ತು ತಿಕೋಟಾ ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯತಿಗಳನ್ನಾಗಿ ಮೇಲ್ದರ್ಜೆಗೇರಿಸುವ ಸಂಬಂಧ ಉದ್ದೇಶಿತ ಪಟ್ಟಣ ಪಂಚಾಯತಿಗೆ ಸೇರ್ಪಡೆಯಾಗುವ ಗ್ರಾಮಗಳ ವಿವರ ಹಾಗೂ ಬೌಂಡರಿ/ಚೆಕ್ಕುಬಂದಿ ವಿವರಗಳನ್ನು ನಿಗದಿತ ಶೆಡ್ಯೂಲ್ -ಎ ಮತ್ತು ಶೆಡ್ಯೂಲ್ -ಬಿ ನಮೂನೆಯಲ್ಲಿ ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಒದಗಿಸುವಂತೆ ಕೋರಲಾಗಿದ್ದು, ಉಲ್ಲೇಖ (2) ಪತ್ರಗಳನ್ವಯ ಸರ್ಕಾರದಿಂದ ಅಪೇಕ್ಷಿಸಲಾದ ಮಾಹಿತಿಯನ್ನು ಒದಗಿಸುವಂತೆ ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ ರವರನ್ನು ಕೋರಲಾಗಿತ್ತು.

ಅದರಂತೆ ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ ರವರು ಉಲ್ಲೇಖ (3) ರ ಪತ್ರದಲ್ಲಿ ಮಾಹಿತಿಯನ್ನು ಸಲ್ಲಿಸಿದ್ದು, ಸದರಿ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ದಿನಾಂಕ ರಂದು
24 JUL 2019
ಕ್ರ.ಸಂ..............ರಲ್ಲಿ ರವಾನಿಸಲಾಗಿದೆ.
ರವಾನೆ ಸಹಾಯಕರು

ತಮ್ಮ ವಿಶ್ವಾಸಿ,

ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ಫ್ಯಾಕ್ಸ್: 080-22863570 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂ:880/ಪಿಎಂಎ/01/ಟಿಪಿಯುಪಿ/2014(ಭಾಗ) ದಿನಾಂಕ:22.02.2020.

ಇವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಮಾನ್ಯರೇ,

ವಿಷಯ : ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಅಜ್ಜಂಪುರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ.

ಉಲ್ಲೇಖ :
1. ಸರ್ಕಾರದ ಪತ್ರ ಸಂಖ್ಯೆ: ನಅಇ 67 ಎಂಎಲ್ಆರ್ 2017, ದಿ: 21.12.2019
2. ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ರವರ ಪತ್ರಸಂಖ್ಯೆ:ಡಿಯುಡಿಸಿ(1)/ಸಿಆರ್/78/2013-14, ದಿ:11.02.2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಪತ್ರದಲ್ಲಿ ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಅಜ್ಜಂಪುರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ದಿ:09.12.2019ರ ಕರಡು ಅಧಿಸೂಚನೆ ಪ್ರತಿಯನ್ನು ಲಗತ್ತಿಸಿ ಕಳುಹಿಸಿದ್ದು, ಸದರಿ ಅಧಿಸೂಚನೆಗೆ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾದಲ್ಲಿ ಅವುಗಳನ್ನು ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸಲು ಕೋರಲಾಗಿದೆ. ಅದರಂತೆ ಉಲ್ಲೇಖ (2)ರ ಪತ್ರದಲ್ಲಿ ಜಿಲ್ಲಾಧಿಕಾರಿಗಳಿಂದ ವರದಿಯನ್ನು ಪಡೆಯಲಾಗಿದೆ.

ಪರಿಶೀಲಿಸಲಾಗಿ, ಸದರಿ ಕರಡು ಅಧಿಸೂಚನೆಗೆ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿಲ್ಲವೆಂದು ವರದಿ ಸಲ್ಲಿಸುತ್ತಾ, ಅಜ್ಜಂಪುರ ಗ್ರಾಮ ಪಂಚಾಯಿತಿಯ ಚುನಾಯಿತ ಸದಸ್ಯರ ಅವಧಿ ದಿ:18.05.2020 ರ ವರೆಗೆ ಇದ್ದು ಅವಧಿ ಪೂರ್ಣಗೊಳ್ಳುವವರೆಗೂ ಚುನಾಯಿತ ಸದಸ್ಯರ ಅವಧಿಯನ್ನು ಮುಂದುವರೆಸಲು ಕೋರಿ ಅಜ್ಜಂಪುರ ಗ್ರಾಮ ಪಂಚಾಯಿತಿಯ ಅಧ್ಯಕ್ಷರು/ಉಪಾಧ್ಯಕ್ಷರು/ಸದಸ್ಯರು ದಿ:27.12.2019 ರಂದು ಮನವಿ ಸಲ್ಲಿಸಿರುವ ಅಂಶವನ್ನು ಜಿಲ್ಲಾಧಿಕಾರಿರವರು ತಿಳಿಸಿರುತ್ತಾರೆ. ಅಲ್ಲದೆ ಕರಡು ಅಧಿಸೂಚನೆಯ ಶೆಡ್ಯೂಲ್ 'ಎ' ನಲ್ಲಿ ಅಜ್ಜಂಪುರ ಗ್ರಾಮ ಪಂಚಾಯಿತಿಯು ತರೀಕೆರೆ ತಾಲ್ಲೂಕು ಎಂದು ನಮೂದಿಸಲಾಗಿದ್ದು, ಅಜ್ಜಂಪುರ ತಾಲ್ಲೂಲು ಕೇಂದ್ರವಾಗಿರುವುದರಿಂದ ತರೀಕೆರೆ ತಾಲ್ಲೂಕು ಎಂಬುದನ್ನು ಅಜ್ಜಂಪುರ ತಾಲ್ಲೂಕುಎಂದು ತಿದ್ದುಪಡಿ ಮಾಡಬೇಕೆಂದು ಕೋರಿರುತ್ತಾರೆ. ಈ ನಿರ್ದೇಶನಾಲಯದಲ್ಲಿಯೂ ಸಹ ಕರಡು ಅಧಿಸೂಚನೆಗೆ ಯಾವುದೇ ಆಕ್ಷೇಪಣೆಗಳು ಸಲ್ಲಿಕೆಯಾಗಿರುವುದಿಲ್ಲ.

ಆದ್ದರಿಂದ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಇವರ ವರದಿಯನ್ನು ಲಗತ್ತಿಸಿ ಕಳುಹಿಸುತ್ತಾ, ಅಜ್ಜಂಪುರ ತಾಲ್ಲೂಕಿನ ಅಜ್ಜಂಪುರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಅಂತಿಮ ಅಧಿಸೂಚನೆ ಹೊರಡಿಸುವ ಬಗ್ಗೆ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.

O/C

ದಿನಾಂಕ ರಂದು
24 FEB 2020
ಕ್ರ.ಸಂ............ರಲ್ಲಿ ರವಾನಿಸಲಾಗಿದೆ.
ರವಾನೆ ಸಹಾಯಕರು

ತಮ್ಮ ವಿಶ್ವಾಸಿ,
(ಸಹಿ)
ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂ: 26095 ಡಿಎಂಎ 40 ಟಿಪಿಯುಪಿ 2018-19 ದಿನಾಂಕ: ೨೫/10/2019.

ಇವರಿಗೆ,

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಮಾನ್ಯರೇ,

ವಿಷಯ : ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ಹೊಳೆಹೊನ್ನೂರು ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ.

ಉಲ್ಲೇಖ : 1. ಈ ನಿರ್ದೇಶನಾಲಯದ ಸಮಸಂಖ್ಯೆ ಪತ್ರದ ದಿ: 20-11-2018.
2. ಸರ್ಕಾರದ ಪತ್ರ ಸಂಖ್ಯೆ: ನಅಇ 14 ಎಂಎಲ್ಆರ್ 2019, ದಿ: 14-10-2019.
3. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಶಿವಮೊಗ್ಗ ಜಿಲ್ಲೆ ಇವರ ಪತ್ರ ಸಂಖ್ಯೆ:ಎಸ್‌ಎಮ್‌ಜಿಡಿಸಿ-ಡಿಯುಡಿಸಿ/ಇಎಸ್‌ಟಿ1/77/2019, ದಿ:17-10-2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ಹೊಳೆಹೊನ್ನೂರು ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಉಲ್ಲೇಖ (1)ರಂತೆ ಸಲ್ಲಿಸಲಾಗಿದ್ದ, ಪ್ರಸ್ತಾವನೆಗೆ ಉಲ್ಲೇಖ (2)ರ ಸರ್ಕಾರದ ಪತ್ರದಲ್ಲಿ "Details of the staff of the Gram Panchayat and what Directorate of Municipal Administration intends to do with them if the proposal is agreed to" ಕೋರಲಾಗಿದೆ.

ಅದರಂತೆ ಹೊಳೆಹೊನ್ನೂರು ಗ್ರಾಮ ಪಂಚಾಯತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರವನ್ನು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಶಿವಮೊಗ್ಗ ಜಿಲ್ಲೆ ರವರು ಉಲ್ಲೇಖ (3)ರ ಪತ್ರದಂತೆ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಹೊಳೆಹೊನ್ನೂರು ಗ್ರಾಮ ಪಂಚಾಯತಿಯನ್ನು ಮೇಲ್ದರ್ಜೆಗೇರಿಸಿದ ನಂತರ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಕರ್ನಾಟಕ ಪುರಸಭೆಗಳ ಅಧಿನಿಯಮ 1964 ಕಲಂ 357(ಛ)ರನ್ವಯ ಪೌರಸೇವಾ ನೌಕರರೆಂದು ಪರಿಗಣಿಸುವ ಕುರಿತು ನಿಯಮಾನುಸಾರ ಕ್ರಮ ವಹಿಸಲಾಗುವುದು ಎಂಬುದಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ದಿನಾಂಕ 28 OCT 2019 ರಂದು
ಕ್ರ.ಸಂ............ರಲ್ಲಿ ರವಾನಿಸಲಾಗಿದೆ.
ರವಾನೆ ಸಹಾಯಕರು

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು-560001

ಸಂ: 25732/ಡಿಎಂಎ/33/ಟಿಪಿಯುಪಿ/2018-19 ದಿನಾಂಕ:29.05.2019.

ಇವರಿಗೆ,
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಮಾನ್ಯರೇ,

ವಿಷಯ : ಉಡುಪಿ ಜಿಲ್ಲೆ ಬೈಂದೂರನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು.

ಉಲ್ಲೇಖ : ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ, ಉಡುಪಿ ಇವರ ಪತ್ರ ಸಂ:6159: DCUDP-21011(21)11/2018-19 DUD, ದಿ:13.02.2019.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಡುಪಿ ಜಿಲ್ಲೆ ಬೈಂದೂರನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರಿಂದ ಉಲ್ಲೇಖಿತ ಪತ್ರದಲ್ಲಿ ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಉಡುಪಿ ಜಿಲ್ಲೆ ಬೈಂದೂರು ತಾಲ್ಲೂಕಿನ ಬೈಂದೂರು ಗ್ರಾಮ ಪಂಚಾಯಿತಿ, ಉಪ್ಪುಂದ ಗ್ರಾಮ ಪಂಚಾಯಿತಿ ಮತ್ತು ಪಡುವರಿ ಗ್ರಾಮ ಪಂಚಾಯಿತಿಗಳನ್ನು ಒಗ್ಗೂಡಿಸಿ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾಪಿಸಿದ್ದು, ಅನುಬಂಧಗಳಲ್ಲಿ ಸಲ್ಲಿಸಿರುವ ಮಾಹಿತಿಯನುಸಾರ ಸದರಿ ಮೂರು ಗ್ರಾಮ ಪಂಚಾಯಿತಿಗಳ ಒಟ್ಟು ಜನಸಂಖ್ಯೆ 2011ರ ಜನಗಣತಿಯನುಸಾರ 24957 ಮತ್ತು ಒಟ್ಟು ವಿಸ್ತೀರ್ಣವು 54.24 ಚದುರ ಕಿ.ಮೀ ಇದ್ದು, ಜನಸಾಂದ್ರತೆಯು ಪ್ರತಿ ಚ.ಕೀ ಗೆ 433.43 ಆಗುತ್ತದೆ. ಕೃಷಿಯೇತರ ಚಟುವಟಿಕೆಗಳು ಶೇ.55 ರಷ್ಟು ಇರುತ್ತದೆ ಹಾಗೂ ಮೇಲ್ದರ್ಜೆಗೇರಿಸುವ ಕುರಿತು ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಂದ ನಿರ್ಣಯ ಕೈಗೊಳ್ಳಲಾಗಿರುತ್ತದೆ. ಜನಸಂಖ್ಯೆ ಆಧಾರದ ಮೇಲೆ ಪುರಸಭೆಯಾಗುವ ಸಾಧ್ಯತೆ ಇದ್ದರೂ ಸಹ. ಜನಸಾಂದ್ರತೆಯು ಕೇವಲ ಪ್ರತಿ ಚ.ಕಿ.ಮೀ ಗೆ 433.43 ಆಗುತ್ತದೆ.

ಆದ್ದರಿಂದ ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ಕಲಂ 3 ಮತ್ತು 347 ರನ್ವಯ ಬೈಂದೂರು ಪಟ್ಟಣ ಪಂಚಾಯಿತಿಯಾಗಲು ಅರ್ಹವಾಗಿರುವುದರಿಂದ ಬೈಂದೂರು ಗ್ರಾಮ ಪಂಚಾಯಿತಿ, ಉಪ್ಪುಂದ ಗ್ರಾಮ ಪಂಚಾಯಿತಿ ಮತ್ತು ಪಡುವರಿ ಗ್ರಾಮ ಪಂಚಾಯಿತಿಗಳನ್ನು ಒಗ್ಗೂಡಿಸಿ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ರವರ ಪ್ರಸ್ತಾವನೆಯನ್ನು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.

ದಿನಾಂಕ ರಂದು
30 MAY 2019
ಕ್ರ.ಸಂ............ರಲ್ಲಿ ರವಾನಿಸಲಾಗಿದೆ,
ರವಾನೆ ಸಹಾಯಕರು

ತಮ್ಮ ವಿಶ್ವಾಸಿ,

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

(88)

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080– 22867172 / 22866302
ಫ್ಯಾಕ್ಸ್: 080–22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001

ಸಂ:25732/ಡಿಎಂಎ/33/ಟಿಪಿಯುಪಿ/2014

ದಿನಾಂಕ:04.01.2020.

ಇವರಿಗೆ,

ಜಿಲ್ಲಾಧಿಕಾರಿಗಳು,
ಉಡುಪಿ ಜಿಲ್ಲೆ,
ಉಡುಪಿ.

ಮಾನ್ಯರೆ,

ವಿಷಯ: ಉಡುಪಿ ಜಿಲ್ಲೆ ಬೈಂದೂರು ತಾಲ್ಲೂಕು ಬೈಂದೂರು ಗ್ರಾಮ ಪಂಚಾಯಿತಿ, ಯಡ್ತರೆ ಗ್ರಾಮ ಪಂಚಾಯಿತಿ ಮತ್ತು ಪಡುವರಿ ಗ್ರಾಮ ಪಂಚಾಯಿತಿಯನ್ನು ಒಗ್ಗೂಡಿಸಿ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು.

ಉಲ್ಲೇಖ:
1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು, ದಿ: 31.12.2019.
2) ಸರ್ಕಾರದ ಅಧಿಸೂಚನೆ ಸಂಖ್ಯೆ ನಅಇ 06 ಎಂಎಲ್‌ಆರ್ 2019, ದಿ: 31.12.2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಪತ್ರದಲ್ಲಿ ಬೈಂದೂರು ತಾಲ್ಲೂಕಿನ ಬೈಂದೂರು ಗ್ರಾಮ ಪಂಚಾಯಿತಿ, ಯಡ್ತರೆ ಗ್ರಾಮ ಪಂಚಾಯಿತಿ ಮತ್ತು ಪಡುವರಿ ಗ್ರಾಮ ಪಂಚಾಯಿತಿಯನ್ನು ಒಗ್ಗೂಡಿಸಿ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಸರ್ಕಾರದಿಂದ ಹೊರಡಿಸಲಾದ ಉಲ್ಲೇಖ (2)ರ ಕರಡು ಅಧಿಸೂಚನೆಯನ್ನು ಸಂಬಂಧಿಸಿದ ಪ್ರದೇಶದ ವ್ಯಾಪ್ತಿಯಲ್ಲಿ ಎದ್ದುಕಾಣುವ (Conspicuous) ಸ್ಥಳಗಳಲ್ಲಿ ಪ್ರಚುರಪಡಿಸಿ ಸ್ವೀಕೃತವಾಗುವ ಸಲಹೆ/ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ಸರ್ಕಾರಕ್ಕೆ ಕಳುಹಿಸಲು ಕೋರಲಾಗಿದೆ.

ಆದ್ದರಿಂದ ಉಡುಪಿ ಜಿಲ್ಲೆಯ ಬೈಂದೂರು ತಾಲ್ಲೂಕಿನ ಬೈಂದೂರು ಗ್ರಾಮ ಪಂಚಾಯಿತಿ, ಯಡ್ತರೆ ಗ್ರಾಮ ಪಂಚಾಯಿತಿ ಮತ್ತು ಪಡುವರಿ ಗ್ರಾಮ ಪಂಚಾಯಿತಿಯನ್ನು ಒಗ್ಗೂಡಿಸಿ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಹೊರಡಿಸಿರುವ ಕರಡು ಅಧಿಸೂಚನೆಯನ್ನು ಪ್ರಚುರಪಡಿಸಿ, ಪ್ರಚುರಪಡಿಸಿದ ಕುರಿತು ಸೂಕ್ತ ದಾಖಲೆಗಳನ್ನು ಕಳುಹಿಸಲು ಹಾಗೂ ನಿಗದಿತ ಕಾಲಾವಧಿಯೊಳಗೆ ತಮ್ಮ ಹಂತದಲ್ಲಿ ಸಲಹೆ/ಆಕ್ಷೇಪಣೆಗಳು ಸಲ್ಲಿಕೆಯಾಗಿದ್ದಲ್ಲಿ ಅವುಗಳನ್ನು ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿಯನ್ನು ಕಳುಹಿಸುವಂತೆ ಕೋರಿದೆ.

ತಮ್ಮ ವಿಶ್ವಾಸಿ,

04/01/2020

ನಿರ್ದೇಶಕರು ಪರವಾಗಿ
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

O/C

15

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
Website: www.municipaladmn.gov.in

9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂ:29236/ಡಿಎಂಎ/27/ಟಿಪಿಯುಪಿ/2018-19

ದಿನಾಂಕ:[illegible].11.2019.

ಇವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಕಾಗವಾಡ ಗ್ರಾಮವನ್ನು ಹಿಂದಿನ ಸರ್ಕಾರವು ತಾಲ್ಲೂಕು ಕೇಂದ್ರ ಎಂದು ಘೋಷಿಸಿ ಮೇಲ್ದರ್ಜೆಗೇರಿಸಿರುವ ಹಿನ್ನಲೆಯಲ್ಲಿ ಸದರಿ ಗ್ರಾಮ ಪಂಚಾಯಿತಿಯನ್ನು ಮೇಲ್ದರ್ಜೆಗೇರಿಸುವ ಕುರಿತು.

ಉಲ್ಲೇಖ:
1. ಶ್ರೀ ಮಹಾಂತೇಶ ಮ. ಕವಟಗಿಮಠ, ಸರ್ಕಾರದ ಮುಖ್ಯ ಸಚೇತಕರು ಕರ್ನಾಟಕ ವಿಧಾನ ಪರಿಷತ್ತು ರವರ ಪತ್ರ ಸಂ: ವಿಪಸ/2/2019-20.
2. ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರ ಪತ್ರ ಸಂ: ಬಿಜಿಎಂ:ಡಿಯುಡಿಸಿ-1:ಸಿಆರ್-128:2019-20, ದಿನಾಂಕ:10.10.2019.
3. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಳಗಾವಿ ರವರ ಪತ್ರ ಸಂ: ಬಿಜಿಎಂ:ಡಿಯುಡಿಸಿ-1:ಸಿಆರ್-128:2019-20/737, ದಿ: 07.11.2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಪತ್ರದಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಕಾಗವಾಡ ಗ್ರಾಮವನ್ನು ಹಿಂದಿನ ಸರ್ಕಾರವು ತಾಲ್ಲೂಕು ಕೇಂದ್ರ ಎಂದು ಘೋಷಿಸಿ ಮೇಲ್ದರ್ಜೆಗೇರಿಸಿರುವ ಹಿನ್ನಲೆಯಲ್ಲಿ ಸದರಿ ಗ್ರಾಮ ಪಂಚಾಯಿತಿಯನ್ನು ಮೇಲ್ದರ್ಜೆಗೇರಿಸುವ ಕುರಿತು ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಲಾಗಿದ್ದು, ಅದರಂತೆ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ರವರಿಂದ ಸ್ವೀಕೃತವಾದ ಉಲ್ಲೇಖ (2)ರ ಪ್ರಸ್ತಾವನೆಯಲ್ಲಿ ಅಪೂರ್ಣ ಮಾಹಿತಿ ಇದ್ದ ಕಾರಣ ಸೂಕ್ತ ದಾಖಲೆಗಳನ್ನು ಸಲ್ಲಿಸುವಂತೆ ದಿ: 04.11.2019ರ ನಿರ್ದೇಶನಾಲಯದ ಪತ್ರದಲ್ಲಿ ಕೋರಲಾಗಿತ್ತು. ಉಲ್ಲೇಖ (3)ರ ಪತ್ರದಲ್ಲಿ ಕಾಗವಾಡ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ದೃಢೀಕೃತ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, 2011ರ ಜನಗಣತಿಯನುಸಾರ ಒಟ್ಟು ಜನಸಂಖ್ಯೆ 13936 ಇದ್ದು, ಸದರಿ ಪ್ರದೇಶಗಳ ವ್ಯಾಪ್ತಿಯು ಒಟ್ಟು ವಿಸ್ತೀರ್ಣ 28.07 ಪ್ರತಿ ಚ.ಕಿ.ಮೀ ಗೆ ಹಾಗೂ ಪ್ರಸ್ತಾಪಿತ ಗ್ರಾಮ ಪಂಚಾಯಿತಿಯ ಜನಸಾಂದ್ರತೆಯು ಪ್ರತಿ ಚ.ಕಿ.ಮೀ ಗೆ 496 ಇರುತ್ತದೆ. ಕಾಗವಾಡ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸುವ ಸಂಬಂಧ ಗ್ರಾಮ ಪಂಚಾಯಿತಿಯು ದಿ:07-01-2019 ರಲ್ಲಿ ತೀರ್ಮಾನ ಕೈಗೊಂಡಿರುತ್ತಾರೆ. ಪ್ರಸ್ತಾಪಿತ ಪ್ರದೇಶಗಳಲ್ಲಿ ಕೃಷಿಯೇತರ ಚಟುವಟಿಕೆಗಳು ಶೇ. 50% ಕಿಂತ ಹೆಚ್ಚಿಗೆ ಇದ್ದು, ಉದ್ದೇಶಿತ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ವಿವರ, ಚಕ್ಕುಬಂದಿಯ ವಿವರವನ್ನು ನಿಗದಿತ ನಮೂನೆ ಅನುಸೂಚಿ 'ಎ' ಮತ್ತು 'ಬಿ' ರಲ್ಲಿ ನಕ್ಷೆಯೊಂದಿಗೆ ಒದಗಿಸಿರುತ್ತಾರೆ.

ಆದ್ದರಿಂದ ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕು ಕಾಗವಾಡ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸಲು ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ಕಲಂ 349 ರನ್ವಯ ಅರ್ಹವಿರುವುದರಿಂದ ಕಾಗವಾಡ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸುವ ಬಗ್ಗೆ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ರವರ ಪ್ರಸ್ತಾವನೆಯನ್ನು ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

22/11

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ಪ್ರತಿಯನ್ನು: ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ರವರಿಗೆ ಮಾಹಿತಿಗಾಗಿ

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

16

ಸಂ: 24773 ಡಿಎಂಎ 7 ಟಿಪಿಯುಪಿ 2018–19 ದಿನಾಂಕ: 30 .11.2019.

ಇವರಿಗೆ,
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಮಾನ್ಯರೇ,

ವಿಷಯ : ಹೆಬ್ರಿ ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು.

ಉಲ್ಲೇಖ: 1.ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ, ಉಡುಪಿ ಇವರ ಪತ್ರ ಸಂಖ್ಯೆ: [illegible] UDP-21011(12)/69/2017-DUDC-UDUPI DC, ದಿ:19.05.2018
2.ಈ ನಿರ್ದೇಶನಾಲಯದ ಸಮಸಂಖ್ಯೆ ಪತ್ರ ದಿ:18.06.2018.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಪತ್ರದಲ್ಲಿ ನೂತನವಾಗಿ ತಾಲ್ಲೂಕು ಪ್ರದೇಶವೆಂದು ಘೋಷಿಸಲ್ಪಟ್ಟಿರುವ ಹೆಬ್ರಿ ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯತಿಯನ್ನಾಗಿ ಮೇಲ್ದರ್ಜೆಗೇರಿಸಲು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಸದರಿ ಗ್ರಾಮ ಪಂಚಾಯತಿಯು 2011 ರ ಜನಗಣತಿ ಪ್ರಕಾರ 6006 ಜನಸಂಖ್ಯೆ, 28.80 ಚ.ಕಿ.ಮೀ ವಿಸ್ತೀರ್ಣ, ಹಾಗೂ ಜನಸಾಂದ್ರತೆ ಪ್ರತಿ ಚ.ಕಿ.ಮೀ ಗೆ 209 ಮತ್ತು ಕೃಷಿಯೇತರ ಚಟುವಟಿಕೆಯ ಪ್ರಮಾಣವು ಶೇಕಡಾ 55 ರಷ್ಟು ಹೊಂದಿರುವುದಾಗಿ ತಿಳಿಸಲಾಗಿದೆ.

ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ಕಲಂ 349 ರಲ್ಲಿ ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯತಿಯನ್ನಾಗಿ ಪರಿವರ್ತಿಸಲು ಆ ಪ್ರದೇಶದ ಜನಸಂಖ್ಯೆ ಕನಿಷ್ಠ 10000 ರಿಂದ 20000, ಜನಸಾಂದ್ರತೆ ಪ್ರತಿ ಚ.ಕಿ.ಮೀ ಕನಿಷ್ಠ 400 ಹಾಗೂ ಕೃಷಿಯೇತರ ಚಟುವಟಿಕೆ ಶೇ 50 ಕ್ಕಿಂತ ಕಡಿಮೆ ಇಲ್ಲದಿರುವ ಮಾನದಂಡವಿರುತ್ತದೆ. ಅಲ್ಲದೇ ಆ ಪ್ರದೇಶವು ತಾಲ್ಲೂಕು ಕೇಂದ್ರಸ್ಥಾನವಿದ್ದಲ್ಲಿ ಜನಸಂಖ್ಯೆ 10000 ಕ್ಕಿಂತ ಕಡಿಮೆ ಇದ್ದರೂ ಪರಿವರ್ತಿಸಲು ಅವಕಾಶವಿರುತ್ತದೆ. ಆದರೆ ಪ್ರಸ್ತುತ ಪ್ರಕರಣದಲ್ಲಿ ಹೆಬ್ರಿ ಗ್ರಾಮ ಪಂಚಾಯತಿಯ ಜನಸಂಖ್ಯೆಯ ಪ್ರಮಾಣ ಕಡಿಮೆ ಇರುವುದಲ್ಲದೆ, ಜನಸಾಂದ್ರತೆಯ ಪ್ರಮಾಣವು 400 ಕ್ಕಿಂತ ಕಡಿಮೆ ಇರುವುದು ಕಂಡು ಬರುತ್ತದೆ.

ಆದ್ದರಿಂದ ಹೆಬ್ರಿ ಗ್ರಾಮ ಪಂಚಾಯತಿಯು ತಾಲ್ಲೂಕು ಪ್ರದೇಶವಾಗಿದ್ದರೂ ಸಹ ಜನಸಾಂದ್ರತೆಯಲ್ಲಿ ಅರ್ಹತೆ ಹೊಂದಿಲ್ಲವಾದ್ದರಿಂದ ಹೆಬ್ರಿ ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯತಿಯನ್ನಾಗಿ ಮೇಲ್ದರ್ಜೆಗೇರಿಸಲು ನಿಯಮಗಳಲ್ಲಿ ಅವಕಾಶವಿಲ್ಲದ ಕಾರಣ ಪ್ರಸ್ತುತ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಿರುವುದಿಲ್ಲವೆಂದು ಉಲ್ಲೇಖ (2)ರ ಪತ್ರದಲ್ಲಿ ಜಿಲ್ಲಾಧಿಕಾರಿಗಳಿಗೆ ಈಗಾಗಲೇ ತಿಳಿಸಲಾಗಿದೆ. ತಮ್ಮ ಕಛೇರಿ ದೂರವಾಣಿ ನಿರ್ದೇಶನದ ಮೇರೆಗೆ ಈ ಅಂಶವನ್ನು ಅವಗಾಹನೆಗೆ ಸಲ್ಲಿಸುತ್ತಾ ಉಲ್ಲೇಖ (1)ರ ಪ್ರಸ್ತಾವನೆಯನ್ನು ತಮಗೆ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ದಿನಾಂಕ ರಂದು
02 DEC 2019
ಕ್ರ.ಸಂ..............ರಲ್ಲಿ ರವಾನಿಸಲಾಗಿದೆ,
ರವಾನೆ ಸಹಾಯಕರು.

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080– 22867172 / 22866302
ಫ್ಯಾಕ್ಸ್: 080–22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂ:29311/ಡಿಎಂಎ/29/ಟಿಪಿಯುಪಿ/2019-20 ದಿನಾಂಕ: 16.11.2019.

ಇವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಗಬ್ಬೂರು, ಜಾಲಹಳ್ಳಿ ಮತ್ತು ಅರಕೇರಾ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು.

ಉಲ್ಲೇಖ: ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ರಾಯಚೂರು ರವರ ಪತ್ರ ಸಂಖ್ಯೆ: ರಾಜಿನಕೋ/ಇತರೆ/2019-10, ದಿ: 17.10.2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕಿನ ಗಬ್ಬೂರು, ಜಾಲಹಳ್ಳಿ ಮತ್ತು ಅರಕೇರಾ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಮೇಲ್ದರ್ಜೆಗೇರಿಸುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪರಿಶೀಲಿಸಲಾಗಿ, ಗಬ್ಬೂರು ಗ್ರಾಮ ಪಂಚಾಯಿತಿ 2011ರ ಜನಗಣತಿ 10197 ಇದ್ದು, ವಿಸ್ತೀರ್ಣ 6.36 ಚ.ಕಿ.ಮೀ, ಜನಸಾಂದ್ರತೆ ಪ್ರತಿ ಚ.ಕಿ.ಮೀ ಗೆ 1325, ಕೃಷಿಯೇತರ ಚಟುವಟಿಕೆಗಳು ಶೇ 60% ಇರುವುದಾಗಿ ಅನುಬಂಧ ಎ ಮತ್ತು ಬಿ ರಲ್ಲಿ ಮಾಹಿತಿಯು ಒದಗಿಸಿರುತ್ತಾರೆ. ಸಾಮಾನ್ಯ ಸಭೆಯ ನಡವಳಿ, ಉದ್ದೇಶಿತ ಪಟ್ಟಣ ಪಂಚಾಯಿತಿ ನಕ್ಷೆ, ಜನಸಂಖ್ಯೆ ಪ್ರಮಾಣ ಪತ್ರ ಮತ್ತು ಗಬ್ಬೂರು ಗ್ರಾಮದ ಪ್ರದೇಶ ಹಾಗೂ ಚೆಕ್ಕುಬಂದಿ ವಿವರವನ್ನು ಅನುಸೂಚಿ ಎ ಮತ್ತು ಬಿ ದೃಢೀಕರಿಸಿ ನೀಡಿರುತ್ತಾರೆ.

ಜಾಲಹಳ್ಳಿ ಗ್ರಾಮ ಪಂಚಾಯಿತಿ 2011ರ ಜನಗಣತಿ 13063 ಇದ್ದು, ವಿಸ್ತೀರ್ಣ 9.36 ಚ.ಕಿ.ಮೀ, ಜನಸಾಂದ್ರತೆ ಚ.ಕಿ.ಮೀ ಗೆ 1416, ಕೃಷಿಯೇತರ ಚಟುವಟಿಕೆಗಳು ಶೇ 65% ಇರುವುದಾಗಿ ಅನುಬಂಧ ಎ ಮತ್ತು ಬಿ ರಲ್ಲಿ ಮಾಹಿತಿಯು ಒದಗಿಸಿರುತ್ತಾರೆ. ವಿಶೇಷ ಸಭೆಯ ನಡವಳಿ, ಉದ್ದೇಶಿತ ಪಟ್ಟಣ ಪಂಚಾಯಿತಿ ನಕ್ಷೆ, ಜನಸಂಖ್ಯೆ ಪ್ರಮಾಣ ಪತ್ರ ಮತ್ತು ಜಾಲಹಳ್ಳಿ ಗ್ರಾಮದ ಪ್ರದೇಶ ಹಾಗೂ ಚೆಕ್ಕುಬಂದಿ ವಿವರವನ್ನು ಅನುಸೂಚಿ ಎ ಮತ್ತು ಬಿ ದೃಢೀಕರಿಸಿ ನೀಡಿರುತ್ತಾರೆ.

ಅರಕೇರಾ ಗ್ರಾಮ ಪಂಚಾಯಿತಿ 2011ರ ಜನಗಣತಿ 10150 ಇದ್ದು, ವಿಸ್ತೀರ್ಣ 3795.56 ಹೆಕ್ಟರ್, ಜನಸಾಂದ್ರತೆ ಪ್ರತಿ ಚ.ಕಿ.ಮೀ ಗೆ 209, ಕೃಷಿಯೇತರ ಚಟುವಟಿಕೆಗಳು ಶೇ 70% ಇರುವುದಾಗಿ ಅನುಬಂಧ ಎ ಮತ್ತು ಬಿ ರಲ್ಲಿ ಮಾಹಿತಿಯು ಒದಗಿಸಿರುತ್ತಾರೆ. ಸಾಮಾನ್ಯ ಸಭೆಯ ನಡವಳಿ, ಉದ್ದೇಶಿತ ಪಟ್ಟಣ ಪಂಚಾಯಿತಿ ನಕ್ಷೆ, ಜನಸಂಖ್ಯೆ ಪ್ರಮಾಣ ಪತ್ರ, ಅರಕೇರಾ ಗ್ರಾಮದ ಪ್ರದೇಶ ಹಾಗೂ ಚೆಕ್ಕುಬಂದಿ ವಿವರವನ್ನು ಅನುಸೂಚಿ ಎ ಮತ್ತು ಬಿ ದೃಢೀಕರಿಸಿ ನೀಡಿರುತ್ತಾರೆ.

ಆದ್ದರಿಂದ ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ಕಲಂ 3 ಮತ್ತು 349 ರನ್ವಯ ದೇವದುರ್ಗ ತಾಲ್ಲೂಕಿನ ಗಬ್ಬೂರು, ಜಾಲಹಳ್ಳಿ ಮತ್ತು ಅರಕೇರಾ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಪರಿವರ್ತಿಸುವ ಕುರಿತು ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ರವರು ಪ್ರಸ್ತಾವನೆಯನ್ನು ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ಪ್ರತಿಯನ್ನು: ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ರವರಿಗೆ ಮಾಹಿತಿಗಾಗಿ.

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22865576 / 22861606
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂ:24916/ಡಿಎಂಎ/13/ಟಿಪಿಯುಪಿ/2018-19 ದಿನಾಂಕ:18.01.2020.

ಇವರಿಗೆ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಮಾನ್ಯರೇ,

ವಿಷಯ : ಯಾದಗಿರಿ ಜಿಲ್ಲೆ ವಡಗೇರಾ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ.

ಉಲ್ಲೇಖ : 1. ಜಿಲ್ಲಾಧಿಕಾರಿಗಳು, ಯಾದಗಿರಿ ಜಿಲ್ಲೆ ರವರ ಪತ್ರ ಸಂಖ್ಯೆ: ಜಿನಕೋ/ಇತರೆ/ಅಪಗ್ರೇಡ್/ವಡಗೇರಾ/2017-18, ದಿ: 14.06.2018.
2. ಈ ನಿರ್ದೇಶನಾಲಯದಿಂದ ಸರ್ಕಾರಕ್ಕೆ ಸಲ್ಲಿಸಿದ ಸಮಪತ್ರದ ದಿ: 30.11.2019.
3. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಯಾದಗಿರಿ ಜಿಲ್ಲೆ, ಯಾದಗಿರಿ ರವರ ಪತ್ರ ಸಂಖ್ಯೆ: ಜಿನಕೋ/ ಇತರೆ/ ಅಪ್‌ಗ್ರೇಡ್/ವಡಗೇರಾ/2017-18/1738, ದಿ:24.12.2019

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರಂತೆ ವಡಗೇರಾ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಸಂಬಂಧ ಸ್ವೀಕೃತವಾದ ಪ್ರಸ್ತಾವನೆಯನ್ನು ಪರಿಶೀಲಿಸಿ ವಡಗೇರಾ ಗ್ರಾಮ ಪಂಚಾಯಿತಿಯು ತಾಲ್ಲೂಕು ಪ್ರದೇಶವಾಗಿದ್ದರೂ ಸಹ ಜನಸಾಂದ್ರತೆಯಲ್ಲಿ ಅರ್ಹತೆ ಹೊಂದಿಲ್ಲವಾದ್ದರಿಂದ ವಡಗೇರಾ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ನಿಯಮಗಳಲ್ಲಿ ಅವಕಾಶವಿಲ್ಲವಾದ್ದರಿಂದ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಿರುವುದಿಲ್ಲವೆಂದು ಜಿಲ್ಲಾಧಿಕಾರಿಗಳು, ಯಾದಗಿರಿ ಜಿಲ್ಲೆ, ಯಾದಗಿರಿ ರವರಿಗೆ ನಿರ್ದೇಶನಾಲಯದ ದಿ:02.08.2018ರ ಪತ್ರದಲ್ಲಿ ಈಗಾಗಲೇ ತಿಳಿಸಲಾಗಿತ್ತು, ಅಲ್ಲದೆ ತಮ್ಮ ಕಛೇರಿ ದೂರವಾಣಿ ನಿರ್ದೇಶನದ ಮೇರೆಗೆ ಈ ಅಂಶವನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ, ಉಲ್ಲೇಖ (1)ರ ಪ್ರಸ್ತಾವನೆಯನ್ನು ಉಲ್ಲೇಖ (2)ರ ಪತ್ರದಲ್ಲಿ ತಮಗೆ ಸಲ್ಲಿಸಲಾಗಿರುತ್ತದೆ.

ಮುಂದುವರೆದು ಉಲ್ಲೇಖ (3)ರ ಪತ್ರದಲ್ಲಿ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಯಾದಗಿರಿ ಜಿಲ್ಲೆ, ಯಾದಗಿರಿ ರವರು ವಡಗೇರಾ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಅದರನುಸಾರ ಪರಿಶೀಲಿಸಲಾಗಿ 2011-2018 ರ ಜನಗಣತಿ ಮಾಹಿತಿ ಪ್ರಕಾರ ಒಟ್ಟು ಜನ ಸಂಖ್ಯೆ: 12052, ಗ್ರಾಮದ ವಿಸ್ತೀರ್ಣ 28.278 ಚ.ಕಿ.ಮೀ ಮತ್ತು ಜನಸಾಂದ್ರತೆ 426.197 ಇರುವುದಾಗಿ ವರದಿ ಮಾಡಿರುತ್ತಾರೆ. ಆದರೆ 2011 ರ ಜನಗಣತಿ ಅನುಸಾರ ವಡಗೇರಾ ಗ್ರಾಮ ಪಂಚಾಯಿತಿಯ ಜನಸಂಖ್ಯೆ 10488 ಇದ್ದು, ಜನಸಾಂದ್ರತೆಯು ಪ್ರತಿ ಚ.ಕಿ.ಮೀಗೆ 371 ಆಗುತ್ತದೆ.

ಆದ್ದರಿಂದ, ಯಾದಗಿರಿ ಜಿಲ್ಲೆ, ವಡಗೇರಾ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಅಗತ್ಯ ಕ್ರಮಕ್ಕಾಗಿ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಯಾದಗಿರಿ ಜಿಲ್ಲೆ ರವರಿಂದ ಉಲ್ಲೇಖ (3)ರಂತೆ ಸ್ವೀಕೃತವಾಗಿರುವ ಪರಿಷ್ಕೃತ ಪ್ರಸ್ತಾವನೆಯನ್ನು ಸಹ ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

O/C

ದಿನಾಂಕ ರಂದು
18 JAN 2020
ರಲ್ಲಿ ರವಾನಿಸಲಾಗಿದೆ,
ರವಾನೆ ಸಹಾಯಕರು.

...ರ್ದೇಶಕರ ಕಛೇರಿ
ಪೌರಾ...ಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ಫ್ಯಾಕ್ಸ್: 080-22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂ:29984/ಡಿಎಂಎ/52/ಟಿಪಿಯುಪಿ/2019-20 ದಿನಾಂಕ: 16.01.2020.

ಇವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು

ಮಾನ್ಯರೇ,

ವಿಷಯ : ಬಾಗಲಕೋಟೆ ಜಿಲ್ಲೆಯ, ಮುಧೋಳ್ ತಾಲ್ಲೂಕಿನ ಲೋಕಾಪೂರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು.

ಉಲ್ಲೇಖ : ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ ರವರ ಪತ್ರಸಂಖ್ಯೆ:ಜಿನಕೋಬಾ:3:ಲೋಕಾಪೂರ:ಪ.ಪಂ:2019-20, ದಿ:13.01.2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬಾಗಲಕೋಟೆ ಜಿಲ್ಲೆಯ, ಮುಧೋಳ್ ತಾಲ್ಲೂಕಿನ ಲೋಕಾಪೂರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಸಂಬಂಧ ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ರವರು ಉಲ್ಲೇಖಿತ ಪತ್ರದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, 2011ರ ಜನಗಣತಿಯನುಸಾರ ಲೋಕಾಪೂರ ಗ್ರಾಮ ಪಂಚಾಯಿತಿಯ ಒಟ್ಟು ಜನಸಂಖ್ಯೆ 12790 ಇದ್ದು, ಸದರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಟ್ಟು ವಿಸ್ತೀರ್ಣ 21.15 ಪ್ರತಿ ಚ.ಕಿ.ಮೀ ಇರುತ್ತದೆ. ಅದರನ್ವಯ ಜನಸಾಂದ್ರತೆಯು ಪ್ರತಿ ಚ.ಕಿ.ಮೀ ಗೆ 605 ಆಗುತ್ತದೆ. ಲೋಕಾಪೂರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸುವ ಸಂಬಂಧ ಗ್ರಾಮ ಪಂಚಾಯಿತಿಯು ದಿ:08-12-2019 ರಲ್ಲಿ ತೀರ್ಮಾನ ಕೈಗೊಂಡಿರುತ್ತಾರೆ. ಪ್ರಸ್ತಾಪಿತ ಪ್ರದೇಶಗಳಲ್ಲಿ ಕೃಷಿಯೇತರ ಚಟುವಟಿಕೆಗಳು ಶೇ. 50% ಕಿಂತ ಹೆಚ್ಚಿಗೆ ಇದ್ದು, ಉದ್ದೇಶಿತ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ವಿವರ, ಚಕ್ಕುಬಂದಿಯ ವಿವರವನ್ನು ನಿಗದಿತ ನಮೂನೆ ಅನುಸೂಚಿ 'ಎ' ಮತ್ತು 'ಬಿ' ರಲ್ಲಿ ನಕ್ಷೆಯೊಂದಿಗೆ ಒದಗಿಸಿರುತ್ತಾರೆ.

ಆದ್ದರಿಂದ ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ನಿಯಮ 3, 9 ಹಾಗೂ 349 ರನ್ವಯ ಲೋಕಾಪೂರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಅಗತ್ಯ ಕ್ರಮಕ್ಕಾಗಿ ಜಿಲ್ಲಾಧಿಕಾರಿಗಳು, ಬಾಗಲಕೋಟೆ ರವರಿಂದ ಸ್ವೀಕೃತವಾಗಿರುವ ಪ್ರಸ್ತಾವನೆಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

O/C

ದಿನಾಂಕ ರಂದು
18 JAN 2020
ಕ್ರ.ಸಂ..............ರಲ್ಲಿ ರವಾನಿಸಲಾಗಿದೆ
ರವಾನೆ ಸಹಾಯಕರು

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ: 080- [illegible]
ಫ್ಯಾಕ್ಸ್: 080- [illegible]
Email. [illegible]@gmail.com
Website. www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂ: [illegible]/2016-17 ದಿನಾಂಕ: [illegible].01.2020.

ಇವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ದೊಡ್ಡಬಳ್ಳಾಪುರ ತಾಲ್ಲೂಕಿನ ಬಾಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ: ನಅಇ 60 ಎಂಎಲ್‌ಆರ್ 2016(ಭಾಗ), ದಿ: 26-12-2019.
2. ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ರವರ ಪತ್ರಸಂಖ್ಯೆ/ಜಿಆಕಶಾಖೆ/(ಪಿ3)/ಪಟ್ಟಣಪಂ/ಸಿಆರ್/27/2013-14, ದಿ:03.01.2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಪತ್ರದನ್ವಯ ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ದೊಡ್ಡಬಳ್ಳಾಪುರ ತಾಲ್ಲೂಕಿನ ಬಾಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಸಂಬಂಧ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರಿಂದ ಉಲ್ಲೇಖ (2)ರ ಪತ್ರದಲ್ಲಿ ಪ್ರಸ್ತಾವನೆಯನ್ನು ಪಡೆಯಲಾಗಿದೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, 2011ರ ಜನಗಣತಿಯನುಸಾರ ಬಾಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿಯ ಒಟ್ಟು ಜನಸಂಖ್ಯೆ 18706 ಇದ್ದು, ಸದರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಟ್ಟು ವಿಸ್ತೀರ್ಣ 17.176 ಪ್ರತಿ ಚ.ಕಿ.ಮೀ ಇರುತ್ತದೆ. ಅದರನ್ವಯ ಜನಸಾಂದ್ರತೆಯು ಪ್ರತಿ ಚ.ಕಿ.ಮೀ ಗೆ 1089 ಆಗುತ್ತದೆ. ಬಾಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸುವ ಸಂಬಂಧ ಗ್ರಾಮ ಪಂಚಾಯಿತಿಯು ದಿ:29.09.2016 ರಲ್ಲಿ ತೀರ್ಮಾನ ಕೈಗೊಂಡಿರುತ್ತಾರೆ. ಪ್ರಸ್ತಾಪಿತ ಪ್ರದೇಶಗಳಲ್ಲಿ ಕೃಷಿಯೇತರ ಚಟುವಟಿಕೆಗಳು ಶೇ. 50% ಕಿಂತ ಹೆಚ್ಚಿಗೆ ಇದ್ದು, ಉದ್ದೇಶಿತ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ವಿವರ, ಚಕ್ಕುಬಂದಿಯ ವಿವರವನ್ನು ನಿಗದಿತ ನಮೂನೆ ಅನುಸೂಚಿ 'ಎ' ಮತ್ತು 'ಬಿ' ರಲ್ಲಿ ನಕ್ಷೆಯೊಂದಿಗೆ ಒದಗಿಸಿರುತ್ತಾರೆ.

ಆದ್ದರಿಂದ ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ನಿಯಮ 3, 9 ಹಾಗೂ 349 ರನ್ವಯ ಬಾಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಅಗತ್ಯ ಕ್ರಮಕ್ಕಾಗಿ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರಿಂದ ಸ್ವೀಕೃತವಾಗಿರುವ ಪ್ರಸ್ತಾವನೆಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿದೆ.

ದಿನಾಂಕ ರಂದು
18 JAN 2020
ಕ್ರ.ಸಂ..............ರಲ್ಲಿ ರವಾನಿಸಲಾಗಿದೆ.
ರವಾನೆ ಸಹಾಯಕರು

ತಮ್ಮ ವಿಶ್ವಾಸಿ,

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22363576 / 22860665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು 560001.

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ಸಂ:30095/ಡಿಎಂಎ/54/ಟಿಪಿಯುಪಿ/2019-20 ದಿನಾಂಕ: 6 .02.2020.

ಇವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಮಾನ್ಯರೇ,

ವಿಷಯ : ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ, ಆನವಟ್ಟಿ, ಕುಬಟೂರು, ಸಮನವಳ್ಳಿ ಮತ್ತು ತಲ್ಲೂರು ಗ್ರಾಮ ಪಂಚಾಯಿತಿಗಳನ್ನು ಸೇರಿಸಿ ಆನವಟ್ಟಿ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು.

ಉಲ್ಲೇಖ : ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ರವರ ಪತ್ರ ಸಂಖ್ಯೆ: ಎಸ್‌ಎಂಜಿಡಿಸಿ/ಸಿಎಸ್‌ಎಸ್2/11/2020/ಎಸ್‌ಎಂಜಿಡಿಸಿ_ಡಿಯುಡಿಸಿ/ಎಸ್‌ಓಚ್ ಐಡಿ(27263/19-20), ದಿ: 22.01.2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ, ಆನವಟ್ಟಿ, ಕುಬಟೂರು, ಸಮನವಳ್ಳಿ ಮತ್ತು ತಲ್ಲೂರು ಗ್ರಾಮಪಂಚಾಯಿತಿಗಳನ್ನು ಸೇರಿಸಿ ಆನವಟ್ಟಿ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, 2011ರ ಜನಗಣತಿಯನುಸಾರ ಆನವಟ್ಟಿ, ಕುಬಟೂರು, ಸಮನವಳ್ಳಿ ಮತ್ತು ತಲ್ಲೂರು ಗ್ರಾಮ ಪಂಚಾಯಿತಿಗಳ ಒಟ್ಟು ಜನಸಂಖ್ಯೆ 17684 ಇದ್ದು, ಸದರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಟ್ಟು ವಿಸ್ತೀರ್ಣ 35.02 ಪ್ರತಿ ಚ.ಕಿ.ಮೀ ಇರುತ್ತದೆ. ಅದರನ್ವಯ ಜನಸಾಂದ್ರತೆಯು ಪ್ರತಿ ಚ.ಕಿ.ಮೀ ಗೆ 505 ಆಗುತ್ತದೆ. ಆನವಟ್ಟಿ, ಕುಬಟೂರು, ಸಮನವಳ್ಳಿ ಮತ್ತು ತಲ್ಲೂರು ಗ್ರಾಮ ಪಂಚಾಯಿತಿಗಳನ್ನು ಸೇರಿಸಿ ಆನವಟ್ಟಿ ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸುವ ಸಂಬಂಧ ಆನವಟ್ಟಿ, ಕುಬಟೂರು, ಸಮನವಳ್ಳಿ ಮತ್ತು ತಲ್ಲೂರು ಗ್ರಾಮ ಪಂಚಾಯಿತಿಗಳು ಸಾಮಾನ್ಯ ಸಭೆಯಲ್ಲಿ ತೀರ್ಮಾನ ಕೈಗೊಂಡಿರುತ್ತಾರೆ. ಪ್ರಸ್ತಾಪಿತ ಪ್ರದೇಶಗಳಲ್ಲಿ ಕೃಷಿಯೇತರ ಚಟುವಟಿಕೆಗಳು ಶೇ. 50% ಕಿಂತ ಹೆಚ್ಚಿಗೆ ಇದ್ದು, ಉದ್ದೇಶಿತ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ವಿವರ, ಚಕ್ಕುಬಂದಿಯ ವಿವರವನ್ನು ನಿಗದಿತ ನಮೂನೆ ಅನುಸೂಚಿ 'ಎ' ಮತ್ತು 'ಬಿ' ರಲ್ಲಿ ನಕ್ಷೆಯೊಂದಿಗೆ ಒದಗಿಸಿರುತ್ತಾರೆ.

ಆದ್ದರಿಂದ ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ನಿಯಮ 3, 9 ಹಾಗೂ 349 ರನ್ವಯ ಆನವಟ್ಟಿ, ಕುಬಟೂರು, ಸಮನವಳ್ಳಿ ಮತ್ತು ತಲ್ಲೂರು ಗ್ರಾಮ ಪಂಚಾಯಿತಿಗಳನ್ನು ಸೇರಿಸಿ ಆನವಟ್ಟಿ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಅರ್ಹವಿರುತ್ತದೆ. ಆದ್ದರಿಂದ ಈ ಕುರಿತು ಅಗತ್ಯ ಕ್ರಮಕ್ಕಾಗಿ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ರವರಿಂದ ಸ್ವೀಕೃತವಾಗಿರುವ ಪ್ರಸ್ತಾವನೆಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿದೆ.

ತಮ್ಮ ವಿಶ್ವಾಸಿ,
(ಸಹಿ)
ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

O/C

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080– 22867172 / 22866302
ಫ್ಯಾಕ್ಸ್: 080–22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂ:28446/ಡಿಎಂಎ/15/ಟಿಪಿಯುಡಿ/2019–20 ದಿನಾಂಕ: 6.02.2020.

ಇವರಿಗೆ,
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು

ಮಾನ್ಯರೇ,

ವಿಷಯ : ರಾಮನಗರ ಜಿಲ್ಲೆಯ, ಕನಕಪುರ ತಾಲ್ಲೂಕಿನ, ಹಾರೋಹಳ್ಳಿ ಗ್ರಾಮ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು.

ಉಲ್ಲೇಖ : ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ, ರವರ ಪತ್ರಸಂಖ್ಯೆ/ಜಿಸಕೋ/ ಎಂಯುಎನ್(1)/ಹಾರೋಹಳ್ಳಿ (ಮೇಲ್ದರ್ಜೆ)/ಸಿಆರ್/09/2019–20, ದಿ:14.01.2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಮನಗರ ಜಿಲ್ಲೆಯ, ಕನಕಪುರ ತಾಲ್ಲೂಕಿನ ಹಾರೋಹಳ್ಳಿ ಗ್ರಾಮ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಸಂಬಂಧ ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, 2011ರ ಜನಗಣತಿಯನುಸಾರ ಹಾರೋಹಳ್ಳಿ ಗ್ರಾಮ ಪಂಚಾಯಿತಿಯ ಒಟ್ಟು ಜನಸಂಖ್ಯೆ 13043 ಇದ್ದು, ಸದರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಟ್ಟು ವಿಸ್ತೀರ್ಣ 19.32 ಪ್ರತಿ ಚ.ಕಿ.ಮೀ ಇರುತ್ತದೆ. ಅದರನ್ವಯ ಜನಸಾಂದ್ರತೆಯು ಪ್ರತಿ ಚ.ಕಿ.ಮೀ ಗೆ 675 ಆಗುತ್ತದೆ. ಹಾರೋಹಳ್ಳಿ ಗ್ರಾಮ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಪರಿವರ್ತಿಸುವ ಸಂಬಂಧ ಗ್ರಾಮ ಪಂಚಾಯಿತಿಯು ದಿ:07.06.2016 ರಲ್ಲಿ ತೀರ್ಮಾನ ಕೈಗೊಂಡಿರುತ್ತಾರೆ. ಪ್ರಸ್ತಾಪಿತ ಪ್ರದೇಶಗಳಲ್ಲಿ ಕೃಷಿಯೇತರ ಚಟುವಟಿಕೆಗಳು ಶೇ. 50% ಕಿಂತ ಹೆಚ್ಚಿಗೆ ಇದ್ದು, ಉದ್ದೇಶಿತ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ವಿವರ, ಚಕ್ಕುಬಂದಿಯ ವಿವರವನ್ನು ನಿಗದಿತ ನಮೂನೆ ಅನುಸೂಚಿ 'ಎ' ಮತ್ತು 'ಬಿ' ರಲ್ಲಿ ನಕ್ಷೆಯೊಂದಿಗೆ ಒದಗಿಸಿರುತ್ತಾರೆ.

ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ 3, 9 ಮತ್ತು 349 ಗಳನ್ವಯ ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುವುದು.

1. ಆ ಗ್ರಾಮ ಪಂಚಾಯಿತಿಯ ಪ್ರದೇಶದ ಜನಸಂಖ್ಯೆ 10,000 ಕ್ಕೆ ಕಡಿಮೆ ಇಲ್ಲದಂತೆ ಹಾಗೂ 20,000 ಕ್ಕೆ ಹೆಚ್ಚಿಲ್ಲದಂತಿರಬೇಕು,
2. ಅಂತಹ ಪ್ರದೇಶದ ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚದುರ ಕಿ.ಮೀ. ವಿಸ್ತೀರ್ಣಕ್ಕೆ 400 ಕ್ಕಿಂತ ಕಡಿಮೆ ಇಲ್ಲದಿರುವುದು,
3. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ.50 ಕ್ಕಿಂತ ಕಡಿಮೆ ಇಲ್ಲದಿರುವುದು.

ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ ನಿಯಮ 3(1), 3(2) ಮತ್ತು 9 ಗಳನ್ವಯ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುವುದು.

1. ಆ ಪ್ರದೇಶದ ಜನಸಂಖ್ಯೆ 20,000 ಕ್ಕೆ ಕಡಿಮೆ ಇಲ್ಲದಂತೆ ಹಾಗೂ 50,000 ಕ್ಕೆ ಹೆಚ್ಚಿಲ್ಲದಂತಿರಬೇಕು,
2. ಅಂತಹ ಪ್ರದೇಶದ ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚದುರ ಕಿ.ಮೀ. ವಿಸ್ತೀರ್ಣಕ್ಕೆ 1500 ಕ್ಕಿಂತ ಕಡಿಮೆ ಇಲ್ಲದಿರುವುದು,
3. ಹಿಂದಿನ ನಿಕಟಪೂರ್ವ ಜನಗಣತಿಯಲ್ಲಿ ಅಂತಹ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಲ್ಲದ ಇತರ ಸಂಪನ್ಮೂಲಗಳಿಂದ ಉತ್ಪಾದಿತವಾದ ರಾಜಸ್ವ ವಾರ್ಷಿಕ ಒಂಭತ್ತು ಲಕ್ಷ ಅಥವಾ ವಾರ್ಷಿಕ ತಲಾ ಒಬ್ಬರಿಗೆ 45 ರೂಪಾಯಿಗಳ ದರದಂತೆ ಲೆಕ್ಕಾಚಾರವಾದ ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತಕ್ಕಿಂತ ಕಡಿಮೆ ಇರದ ಹೊರತು,
4. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ.50 ಕ್ಕಿಂತ ಕಡಿಮೆ ಇಲ್ಲದಿರುವುದು.

ಆದ್ದರಿಂದ ಪ್ರಸ್ತಾಪಿತ ಹಾರೋಹಳ್ಳಿ ಗ್ರಾಮ ಪಂಚಾಯಿತಿಯು ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸಲು ಅರ್ಹವಿರುವುದರಿಂದ, ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಅಗತ್ಯ ಕ್ರಮಕ್ಕಾಗಿ ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ರವರ ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಿ ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,
[illegible] [illegible]
ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

O/C

ದಿನಾಂಕ ರಂದು
11 FEB 2020
ಕ್ರ.ಸಂ..............ರಲ್ಲಿ ರವಾನಿಸಲಾಗಿದೆ.
ರವಾನೆ ಸಹಾಯಕರು

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22861665
Email. dmabir@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂ:26094/ಡಿಎಂಎ/39/ಟಿಪಿಯುಪಿ/2017-18 ದಿನಾಂಕ: 13.02.2020.

ಇವರಿಗೆ,
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಮಾನ್ಯರೇ,

ವಿಷಯ : ಬೆಂಗಳೂರು ನಗರ ಜಿಲ್ಲೆಯ, ಬೆಂಗಳೂರು ಉತ್ತರ ತಾಲ್ಲೂಕಿನ ಮಾದನಾಯಕನಹಳ್ಳಿ ಗ್ರಾಮ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ.

ಉಲ್ಲೇಖ :
1. ಸರ್ಕಾರದ ಪತ್ರ ಸಂಖ್ಯೆ: ನಅಇ 26 ಎಂಎಲ್ಆರ್ 2019, ದಿ: 31.12.2019.
2. ಜಿಲ್ಲಾಧಿಕಾರಿಗಳು, ನಗರ ಜಿಲ್ಲೆ, ರವರ ಪತ್ರ ಸಂಖ್ಯೆ: ಜಿಸಕೋ/ಸಾ.ಶಾ/ಸಿಆರ್/120/2018-19, ದಿ: 04.02.2020.
3. ಈ ನಿರ್ದೇಶನಾಲಯದ ಸಮಸಂಖ್ಯೆ ಪತ್ರದ ದಿ: 16.01.2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಪತ್ರದಲ್ಲಿ ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ಉತ್ತರ ತಾಲ್ಲೂಕಿನ ಮಾದನಾಯಕನಹಳ್ಳಿ ಗ್ರಾಮ ಪಂಚಾಯಿತಿಯೊಂದಿಗೆ ಮಾದವಾರ ಗ್ರಾಮ ಪಂಚಾಯಿತಿ ಮತ್ತು ಸಿದ್ದನಹೊಸಹಳ್ಳಿ ಗ್ರಾಮ ಪಂಚಾಯಿತಿಗಳನ್ನು ಒಟ್ಟುಗೂಡಿಸಿ ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ದಿ:31.12.2019 ರ ಕರಡು ಅಧಿಸೂಚನೆ ಪ್ರತಿಯನ್ನು ಲಗತ್ತಿಸಿ ಕಳುಹಿಸಿದ್ದು, ಸದರಿ ಅಧಿಸೂಚನೆಗೆ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾದಲ್ಲಿ ಅವುಗಳನ್ನು ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸಲು ಕೋರಲಾಗಿತ್ತು. ಸದರಿ ಕರಡು ಅಧಿಸೂಚನೆಗೆ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿಲ್ಲವೆಂದು, ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರು ಉಲ್ಲೇಖ (2)ರ ಪತ್ರದಲ್ಲಿ ವರದಿ ಸಲ್ಲಿಸಿರುತ್ತಾರೆ.

ಈಗಾಗಲೇ ಸದರಿ ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ, ಶ್ರೀಕಂಠಪುರ (ಅಂಚೆಪಾಳ್ಯ) ಗ್ರಾಮಸ್ಥರು ದಿ: 06.01.2020 ರಂದು ಈ ನಿರ್ದೇಶನಾಲಯಕ್ಕೆ ಮನವಿ ಸಲ್ಲಿಸಿ ಶ್ರೀಕಂಠಪುರ (ಅಂಚೆಪಾಳ್ಯ) ಗ್ರಾಮ ಪಂಚಾಯಿತಿಯನ್ನು ಮಾದನಾಯಕನಹಳ್ಳಿ ಪುರಸಭೆ ವ್ಯಾಪ್ತಿಗೆ ಸೇರ್ಪಡೆಗೊಳಿಸಿ ಅಧಿಸೂಚನೆ ಹೊರಡಿಸುವಂತೆ ಕೋರಿರುತ್ತಾರೆ. ಹಾಗೂ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರು ಹೊಸದಾಗಿ ರಚಿಸಲಾಗುವ ಮಾದನಾಯಕನಹಳ್ಳಿ ಪುರಸಭೆಗೆ ಲಕ್ಷ್ಮೀಪುರ, ಚಿಕ್ಕಬಿದರಕಲ್ಲು ಹಾಗೂ ಶ್ರೀಕಂಠಪುರ ಗ್ರಾಮ ಪಂಚಾಯಿತಿಗಳನ್ನು ಸೇರ್ಪಡೆಗೊಳಿಸಿಕೊಂಡು ನಗರಸಭೆಯನ್ನಾಗಿ ಪರಿವರ್ತಿಸಲು ದಿ:13.01.2020 ರ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸಿದ್ದು, ಈ 2 ಅಂಶಗಳನ್ನು ಉಲ್ಲೇಖಿಸಿ ಪ್ರಸ್ತಾವನೆಯನ್ನು ಒಳಗೊಂಡ ವರದಿಯನ್ನು ಉಲ್ಲೇಖ (3)ರಲ್ಲಿ ಈಗಾಗಲೇ ತಮಗೆ ಸಲ್ಲಿಸಲಾಗಿದೆ.

ಆದ್ದರಿಂದ, ಹಾಲಿ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರು ಉಲ್ಲೇಖ (2)ರ ಪತ್ರದಲ್ಲಿ ಮಾದನಾಯಕನಹಳ್ಳಿ ಗ್ರಾಮ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಪರಿವರ್ತಿಸಲು ಹೊರಡಿಸಿರುವ ಕರಡು ಅಧಿಸೂಚನೆಗೆ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿಲ್ಲ ಎಂಬುದಾಗಿ ಸಲ್ಲಿಸಿರುವ ವರದಿಯನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 22864302
ಫ್ಯಾಕ್ಸ್: 080-22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂ:28446/ಡಿಎಂಎ/15/ಟಿಪಿಐಹುಹ/2019-20 ದಿನಾಂಕ:27.01.2020

ಇವರಿಗೆ,
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ
ವಿಕಾಸಸೌಧ, ಬೆಂಗಳೂರು

ಮಾನ್ಯರೇ,

ವಿಷಯ : ಬೆಂಗಳೂರು ನಗರ ಜಿಲ್ಲೆಯ, ಆನೇಕಲ್ ತಾಲ್ಲೂಕಿನ ಶಾಂತಿಪುರ ಗ್ರಾಮ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೇಗೇರಿಸುವ ಕುರಿತು.

ಉಲ್ಲೇಖ : ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ರವರ ಪತ್ರಸಂಖ್ಯೆ/ಜಿನಕೋ/ಶಾಖಾ/ಸಿಆರ್/49/2018-19, ದಿ:23.01.2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ನಗರ ಜಿಲ್ಲೆಯ, ಆನೇಕಲ್ ತಾಲ್ಲೂಕಿನ ಶಾಂತಿಪುರ ಗ್ರಾಮ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೇಗೇರಿಸುವ ಸಂಬಂಧ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, 2011ರ ಜನಗಣತಿಯನುಸಾರ ಶಾಂತಿಪುರ ಗ್ರಾಮ ಪಂಚಾಯಿತಿಯ ಒಟ್ಟು ಜನಸಂಖ್ಯೆ 11535 ಇದ್ದು, ಸದರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಟ್ಟು ವಿಸ್ತೀರ್ಣ 7.77 ಪ್ರತಿ ಚ.ಕಿ.ಮೀ ಇರುತ್ತದೆ. ಅದರನ್ವಯ ಜನಸಾಂದ್ರತೆಯು ಪ್ರತಿ ಚ.ಕಿ.ಮೀ ಗೆ 1484 ಆಗುತ್ತದೆ. ಶಾಂತಿಪುರ ಗ್ರಾಮ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಪರಿವರ್ತಿಸುವ ಸಂಬಂಧ ಗ್ರಾಮ ಪಂಚಾಯಿತಿಯು ದಿ:20.06.2019 ರಲ್ಲಿ ತೀರ್ಮಾನ ಕೈಗೊಂಡಿರುತ್ತಾರೆ. ಪ್ರಸ್ತಾಪಿತ ಪ್ರದೇಶಗಳಲ್ಲಿ ಕೃಷಿಯೇತರ ಚಟುವಟಿಕೆಗಳು ಶೇ. 50% ಕಿಂತ ಹೆಚ್ಚಿಗೆ ಇದ್ದು, ಉದ್ದೇಶಿತ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ವಿವರ, ಚಕ್ಕುಬಂದಿಯ ವಿವರವನ್ನು ನಿಗದಿತ ನಮೂನೆ ಅನುಸೂಚಿ 'ಎ' ಮತ್ತು 'ಬಿ' ರಲ್ಲಿ ನಕ್ಷೆಯೊಂದಿಗೆ ಒದಗಿಸಿರುತ್ತಾರೆ.

ಆದ್ದರಿಂದ ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ನಿಯಮ 3, 9 ಹಾಗೂ 349 ರನ್ವಯ ಶಾಂತಿಪುರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯಾಗಿ ಪರಿವರ್ತಿಸಲು ಅರ್ಹವಿದ್ದು, ಮೇಲ್ದರ್ಜೇಗೇರಿಸುವ ಕುರಿತು ಅಗತ್ಯ ಕ್ರಮಕ್ಕಾಗಿ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರಿಂದ ಸ್ವೀಕೃತವಾಗಿರುವ ಪ್ರಸ್ತಾವನೆಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು 560001

ಸಂ: 25614 ಡಿಎಂಎ 31 ಟಿಪಿಯುಪಿ 2018-19

ದಿನಾಂಕ: 16 /01/2019.

ಇವರಿಗೆ,
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಮಾನ್ಯರೇ,

ವಿಷಯ : ಸೊರಬ ಪಟ್ಟಣ ಪಂಚಾಯತಿಯನ್ನು ಪುರಸಭೆಯಾಗಿ ಪರಿವರ್ತಿಸುವ (ಮೇಲ್ದರ್ಜೆಗೇರಿಸುವ) ಕುರಿತು.

ಉಲ್ಲೇಖ : ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ಇವರ ಪತ್ರ ಸಂಖ್ಯೆ SMGDC.DUDC/CR(3)MIS-068/17-18(79134-11852/17-18), ದಿ:24.12.2018.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ಇವರ ಸೊರಬ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಪರಿವರ್ತಿಸುವ ಕುರಿತು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸೊರಬ ಪಟ್ಟಣ ಪಂಚಾಯಿತಿಯ ಜನಸಂಖ್ಯೆಯು 2011ರ ಜನಗಣತಿಯನುಸಾರ 11332 ಇದ್ದು, ಅದಕ್ಕೆ ಸೇರ್ಪಗೊಳಿಸಲು ಉದ್ದೇಶಿಸಿರುವ ಕೊಡಕಣಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೊಡಕಣಿ, ವಿದ್ಯುತ್‌ನಗರ, ಕಾನುಕೊಪ್ಪ, ಕುಣಜಿಬೈಲು, ಚಿಕ್ಕಶಕುನ ಮತ್ತು ಸಿಗೇಹಳ್ಳಿಯ ಸಂಪೂರ್ಣ ಕಂದಾಯ ಗ್ರಾಮದ ವ್ಯಾಪ್ತಿ, ಹಳೇಸೊರಬ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳೇಸೊರಬ, ಜಯಂತಿ ಗ್ರಾಮ, ಹೊಸಪೇಟೆ ಬಡಾವಣೆ, ಜಂಗಿನಕೊಪ್ಪ, ರಾಜೂನಗರ, ತಿರುಮಲಾಪುರ, ಮರೂರು, ಶೆಟ್ಟರ್ ಕಾಲೋನಿ(ನಡಹಳ್ಳಿ)ಯ ಸಂಪೂರ್ಣ ಕಂದಾಯ ಗ್ರಾಮದ ವ್ಯಾಪ್ತಿಯ ಜನಸಂಖ್ಯೆ ಸೇರಿ ಒಟ್ಟು 20118 ಆಗುವುದಾಗಿ, ಸೇರ್ಪಡೆಗೊಳ್ಳುವ ಪ್ರದೇಶಗಳ ವ್ಯಾಪ್ತಿಯ ವಿಸ್ತೀರ್ಣ ಸೇರಿ ಒಟ್ಟು ವಿಸ್ತೀರ್ಣ 13.39 ಚದುರ.ಕೀಮಿ ಆಗುವುದಾಗಿ ತಿಳಿಸಲಾಗಿದೆ. ಜನಸಾಂದ್ರತೆಯು ಪ್ರತಿ ಚ.ಕೀ.ಮೀಗೆ 1502 ಆಗುತ್ತದೆ.

ಸೇರ್ಪಡೆಗೊಳ್ಳಲು ಉದ್ದೇಶಿಸಿರುವ ಕೊಡಕಣಿ ಗ್ರಾಮ ಪಂಚಾಯಿತಿಯ ಪ್ರದೇಶಗಳಿಗೆ ಸಂಬಂಧಿಸಿದಂತೆ ದಿ:28.07.2018 ರ ವಿಷಯ ಸಂಖ್ಯೆ 01 ರಲ್ಲಿ ಗ್ರಾಮ ಪಂಚಾಯತಿ ನಡವಳಿ, ಹಳೇಸೊರಬ ಗ್ರಾಮ ಪಂಚಾಯತಿಯ ಪ್ರದೇಶಗಳಿಗೆ ಸಂಬಂಧಿಸಿದಂತೆ ದಿ:10.07.2018 ರ ವಿಷಯ ಸಂಖ್ಯೆ 05/14 ರಲ್ಲಿ ಗ್ರಾಮ ಪಂಚಾಯಿತಿ ನಡವಳಿ ಆಗಿದ್ದು, ಸೊರಬ ಪಟ್ಟಣ ವ್ಯಾಪ್ತಿಗೆ ಸೇರ್ಪಡೆಗೊಳಿಸಲು ಪ್ರಸ್ತಾಪಿಸಿರುವ ಗ್ರಾಮಗಳನ್ನು ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಸೇರ್ಪಡೆಗೊಳಿಸಲು ತೀರ್ಮಾನ ಕೈಗೊಂಡಿರುತ್ತಾರೆ. ಅದೇ ರೀತಿ ಸದರಿ ಪ್ರದೇಶಗಳನ್ನು ಪಟ್ಟಣ ವ್ಯಾಪ್ತಿಗೆ ಸೇರ್ಪಡೆಗೊಳಿಸಿ ಕೊಳ್ಳಲು ಪಟ್ಟಣ ಪಂಚಾಯಿತಿಯಿಂದ ದಿ:25.07.2018 ರ ವಿಷಯ ಸಂಖ್ಯೆ 21/1 ರಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ. ಈ ಎಲ್ಲ ಪ್ರದೇಶಗಳಲ್ಲಿ ಕೃಷಿಯೇತರ ಚಟುವಟಿಕೆಗಳು ಶೇ.68 ರಷ್ಟು ಇದ್ದು, ವಾರ್ಷಿಕ ರಾಜಸ್ವ ಆದಾಯವು 9 ಲಕ್ಷಕ್ಕೂ ಹೆಚ್ಚಿರುತ್ತದೆ. ನಿಗದಿತ ನಮೂನೆಗಳಲ್ಲಿ ಉದ್ದೇಶಿತ ಪುರಸಭೆ ವ್ಯಾಪ್ತಿಯ ವಿವರ, ಚಕ್ಕುಬಂದಿ ಮತ್ತು ನಕ್ಷೆಯನ್ನು ಒದಗಿಸಿರುತ್ತಾರೆ. ಮತ್ತು ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ರವರು ಸೊರಬ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಪರಿವರ್ತಿಸಲು ಶಿಫಾರಸ್ಸು ಮಾಡಿರುತ್ತಾರೆ.

-2-

ಆದ್ದರಿಂದ ಸೊರಬ ಪಟ್ಟಣ ಪಂಚಾಯಿತಿಗೆ ಪ್ರಸ್ತಾವನೆಯಲ್ಲಿ ತಿಳಿಸಿರುವ ಕೊಡಕಣಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೊಡಕಣಿ, ವಿದ್ಯುತ್‌ನಗರ, ಕಾನುಕೊಪ್ಪ, ಕುಣಜಿಬೈಲು, ಚಿಕ್ಕಶಕುನ ಮತ್ತು ಸಿಗೇಹಳ್ಳಿಯ ಸಂಪೂರ್ಣ ಕಂದಾಯ ಗ್ರಾಮದ ವ್ಯಾಪ್ತಿ, ಹಳೇಸೊರಬ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳೇಸೊರಬ, ಜಯಂತಿ ಗ್ರಾಮ, ಹೊಸಪೇಟೆ ಬಡಾವಣೆ, ಜಂಗಿನಕೊಪ್ಪ, ರಾಜೀವನಗರ, ತಿರುಮಲಾಪುರ, ಮರೂರು, ಶೆಟ್ಟರ್ ಕಾಲೋನಿ(ವಡಹಳ್ಳಿ)ಯ ಸಂಪೂರ್ಣ ಕಂದಾಯ ಗ್ರಾಮದ ವ್ಯಾಪ್ತಿಯ ಪ್ರದೇಶಗಳನ್ನು ಸೇರ್ಪಡೆಗೊಳಿಸಿಕೊಂಡು ಪುರಸಭೆಯನ್ನಾಗಿ ಪರಿವರ್ತಿಸಲು ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ಕಲಂ 3(1) ಹಾಗೂ 3(2) ರನ್ವಯ ಅರ್ಹವಿರುವುದರಿಂದ ಸೊರಬ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಪರಿವರ್ತಿಸುವ ಬಗ್ಗೆ ಶಿವಮೊಗ್ಗ ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಪ್ರಸ್ತಾವನೆ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

(ಸಹಿ)

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ರವಾನೆ
17 [illegible]
ಕ್ರ.ಸಂ. .... ರಲ್ಲಿ ರವಾನಿಸಲಾಗಿದೆ
ರವಾನೆ ಸಹಾಯಕರು

<u>**ಕರ್ನಾಟಕ ಸರ್ಕಾರ**</u>

ಸಂಖ್ಯೆ:ನಅಇ 69 ಎಸ್‌ಎಫ್ ಸಿ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 05-03-2020.

128
U/S
06/03/2020

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

ಇವರಿಗೆ,
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ) ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:308ಕ್ಕೆ ಉತ್ತರಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ) ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:308ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

ಲಲಿತಾಬಾಯಿ.ಕೆ

(ಲಲಿತಾಬಾಯಿ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಪ್ರತಿ ಅಗತ್ಯ ಕ್ರಮಕ್ಕಾಗಿ:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
2) ಸರ್ಕಾರದ ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ (ಸಮನ್ವಯ).

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	೩೦೮
ಸದಸ್ಯರ ಹೆಸರು	:	ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರಿಸಬೇಕಾದ ದಿನಾಂಕ	:	06-03-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ವಿಜಯಪುರ ಜಿಲ್ಲೆಯ ಇಂಡಿ ಪಟ್ಟಣದ ಬೀದಿ ಬದಿಯ ವ್ಯಾಪಾರಿಗಳಿಗೆ ಅನುಕೂಲವಾಗುವಂತೆ ಹಾಗೂ ಪುರಸಭೆಗೂ ಆದಾಯ ಬರುವಂತೆ ಪುರಸಭೆಯ ಜಮೀನಿನಲ್ಲಿ ಮೆಗಾ ಮಾರುಕಟ್ಟೆ ನಿರ್ಮಾಣ ಮಾಡಲು ನೀಲಾ ನಕಾಶೆ ಹಾಗೂ ಅಂದಾಜು ಪಟ್ಟಿ ತಯಾರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ವಿಜಯಪುರ ಜಿಲ್ಲೆಯ ಇಂಡಿ ಪಟ್ಟಣದ ಬೀದಿ ಬದಿಯ ವ್ಯಾಪಾರಿಗಳಿಗೆ ಅನುಕೂಲವಾಗುವಂತೆ ಹಾಗೂ ಪುರಸಭೆಗೂ ಆದಾಯ ಬರುವಂತೆ ಪುರಸಭೆಯ ಜಮೀನಿನಲ್ಲಿ ಮೆಗಾ ಮಾರುಕಟ್ಟೆ ನಿರ್ಮಾಣ ಮಾಡಲು ನೀಲಾ ನಕಾಶೆ ಹಾಗೂ ಅಂದಾಜು ಪಟ್ಟಿ ತಯಾರಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
(ಆ)	2019-20ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನದಲ್ಲಿ ಮಂಜೂರು ಮಾಡಲಾಗಿದೆಯೇ;	ಸರ್ಕಾರವು ಆದೇಶ ಸಂಖ್ಯೆ: ನಅಇ 03 ಎಸ್‌ಎಫ್‌ಸಿ 2019 ದಿ: 09-01-2019ರನ್ವಯ ಇಂಡಿ ಪುರಸಭೆ ವ್ಯಾಪ್ತಿಯಲ್ಲಿ ಮೆಗಾ ಮಾರುಕಟ್ಟೆ ನಿರ್ಮಾಣಕ್ಕಾಗಿ ರೂ.800.00 ಲಕ್ಷಗಳ ವಿಶೇಷ ಅನುದಾನವನ್ನು ಮಂಜೂರು ಮಾಡಿ ಆದೇಶಿಸಿರುತ್ತದೆ.
(ಇ)	ಹಾಗಿದ್ದಲ್ಲಿ ಸದರಿ ಅನುದಾನವನ್ನು ತಡೆ ಹಿಡಿಯಲು/ ಹಿಂಪಡೆಯಲು/ ರದ್ದುಪಡಿಸಲು ಕಾರಣಗಳಾವುವು; (ವಿವರ ನೀಡುವುದು)	ಇಂಡಿ ಪುರಸಭೆಗೆ ಮಂಜೂರು ಮಾಡಲಾಗಿದ್ದ ರೂ.800.00 ಲಕ್ಷಗಳ ವಿಶೇಷ ಅನುದಾನವನ್ನು ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 551 ವೆಚ್ಚ-9, ದಿನಾಂಕ: 04-09-2019 ರಲ್ಲಿ ನೀಡಿರುವ ನಿರ್ದೇಶದನ್ವಯ ಸರ್ಕಾರವು ಪತ್ರ ಸಂಖ್ಯೆ:ನಅಇ 222 ಎಸ್‌ಎಫ್‌ಸಿ 2019 ದಿ:13-09-2019 ರಲ್ಲಿ ತಡೆ ಹಿಡಿಯಲಾಗಿರುತ್ತದೆ.
(ಈ)	ಸದರಿ ಮಾರುಕಟ್ಟೆ ನಿರ್ಮಾಣ ಮಾಡಲು ಸರ್ಕಾರ ಆಸಕ್ತಿ ಹೊಂದಿದೆಯೇ; ಹೊಂದಿದ್ದರೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು; ಯಾವ ನಿಗದಿತ ಕಾಲಾವಧಿಯೊಳಗೆ ಕಾಮಗಾರಿಯನ್ನು ಕೈಗೊಳ್ಳಲಾಗುವುದು? (ವಿವರ ನೀಡುವುದು)	

ಕಡತ ಸಂಖ್ಯೆ: ನಅಇ 69 ಎಸ್.ಎಫ್.ಸಿ 2020

(ನಾರಾಯಣ ಗೌಡ)
ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 64 ಎಸ್‌ಎಫ್ ಸಿ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 05-03-2020.

76

415
06/03/2020

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ರಾಜೀವ್.ಪಿ (ಕುಡಚಿ) ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:496ಕ್ಕೆ ಉತ್ತರಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ರಾಜೀವ್.ಪಿ (ಕುಡಚಿ) ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:496ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

ಲಲಿತಾಬಾಯಿ.ಕೆ

(ಲಲಿತಾಬಾಯಿ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಪ್ರತಿ ಅಗತ್ಯ ಕ್ರಮಕ್ಕಾಗಿ:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
2) ಸರ್ಕಾರದ ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ (ಸಮನ್ವಯ).

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	496
ಸದಸ್ಯರ ಹೆಸರು	:	ಶ್ರೀ ರಾಜೀವ್. ಪಿ
ಉತ್ತರಿಸಬೇಕಾದ ದಿನಾಂಕ	:	06-03-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕುಡ ಚಿ ಮತ ಕ್ಷೇತ್ರದಲ್ಲಿರುವ ಹಾರೂಗೇರಿ ಮತ್ತು ಮುಗಳಖೋಡ ಪುರಸಭೆಗಳು ಸ್ವಂತ ಕಟ್ಟಡಗಳಲ್ಲದೆ ಚಿಕ್ಕ ಕೊಠಡಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಕುಡ ಚಿ ಮತ ಕ್ಷೇತ್ರದಲ್ಲಿರುವಗ್ರಾಮ ಪಂಚಾಯಿತಿಯಿಂದ ಮೇಲ್ದರ್ಜೆಗೇರಿಸಲಾದ ನಗರ ಸ್ಥಳೀಯ ಸಂಸ್ಥೆಗಳಿಗೆ ಹೊಸ ಕಟ್ಟಡಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ಈ ಪುರಸಭೆಯ ಸ್ವಂತ ಕಟ್ಟಡಗಳ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ ಮಾಡದಿರಲು ಕಾರಣಗಳೇನು: ಯಾವಾಗ ಬಿಡುಗಡೆ ಮಾಡಲಾಗುವುದು ?	ಹೊಸದಾಗಿ ಮೇಲ್ದರ್ಜೆಗೇರಿಸಲಾದ ನಗರ ಸ್ಥಳೀಯ ಸಂಸ್ಥೆಗಳಿಗೆ ಎಸ್.ಎಫ್.ಸಿ ಮುಕ್ತನಿಧಿ ಮತ್ತು 14ನೇ ಹಣಕಾಸು ಆಯೋಗದ ಅನುದಾನದಡಿ ಪ್ರತಿ ವರ್ಷ ಅನುದಾನವನ್ನು ಹಂಚಿಕೆ ಮಾಡಿ ಬಿಡುಗಡೆಗೊಳಿಸಲಾಗುತ್ತಿದೆ. ವಿವರಗಳು ಈ ಕೆಳಕಂಡಂತಿರುತ್ತದೆ:

(ರೂ. ಲಕ್ಷಗಳಲ್ಲಿ)

ಕ್ರ. ಸಂ	ನಗರ ಸ್ಥಳೀಯ ಸಂಸ್ಥೆ	14ನೇ ಹಣಕಾಸು	ಎಸ್.ಎ ಫ್.ಸಿ ಮುಕ್ತ ನಿಧಿ	ಎಸ್.ಎ ಫ್.ಸಿ ವಿಶೇಷ ಅನುದಾನ
1	ಹಾರೂಗೇರಿ	416	219	50.00
2	ಮುಗಳಖೋಡ	336	194	75.00
	ಒಟ್ಟು	**752.00**	**413.00**	**125.00**

ಮೇಲ್ಕಂಡ ಅನುದಾನಡಿ ಹಾರೂಗೇರಿ ಮತ್ತು ಮುಗಳಖೋಡ ಪುರಸಭೆಗಳು ಕಛೇರಿ ಕಟ್ಟಡಗಳಿಗೆ ಅಗತ್ಯವಿರುವ ಅನುದಾನವನ್ನು ಕಾಯ್ದಿರಿಸಿಕೊಳ್ಳಲು ಮಾರ್ಗಸೂಚಿಗಳಲ್ಲಿ ಅವಕಾಶವಿರುತ್ತದೆ.

ಕಡತ ಸಂಖ್ಯೆ: ನಅಇ 64 ಎಸ್.ಎಫ್.ಸಿ 2020

(ನಾರಾಯಣಗೌಡ)
ಪೌರಾಡಳಿತ ಹಾಗೂ ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು.

ಕರ್ನಾಟಕ ಸರ್ಕಾರ

ಸಂ: ನಅಇ 70 ಸಿ.ಎಸ್.ಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:-05-03-2020

33
U/S
06/03/2020

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: **477** ಕ್ಕೆ ಉತ್ತರಿಸುವ ಕುರಿತು.

*** <> ***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: **477** ರ ಉತ್ತರದ 50 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

ಲಲಿತಾಬಾಯಿ.ಕೆ

(ಲಲಿತಾಬಾಯಿ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿಗಳು (ಪಿ.ಎಂ.ಸಿ),
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	477
ಸದಸ್ಯರ ಹೆಸರು	:	ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
ಉತ್ತರಿಸಬೇಕಾದ ದಿನಾಂಕ	:	06-03-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕೇಂದ್ರ ಸರಕಾರ ಪ್ರಾಯೋಜಿತ ಅಮೃತ್ ಯೋಜನೆ ಅನುಷ್ಠಾನಕ್ಕಿರುವ ಮಾನದಂಡಗಳಾವುವು;	ಕೇಂದ್ರ ಸರ್ಕಾರವು 'ಅಮೃತ್' ಯೋಜನೆಯನ್ನು ಜಾರಿಗೊಳಿಸಿದ್ದು, ಸದರಿ ಯೋಜನೆಯನ್ನು 2015ನೇ ಸಾಲಿನ ಜುಲೈ ತಿಂಗಳಲ್ಲಿ ಪ್ರಾರಂಭಿಸಲಾಗಿದೆ. ದೇಶದ 500 ನಗರಗಳು ಈ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿದ್ದು, ಸದರಿ ಯೋಜನೆಗೆ ಆಯ್ಕೆಯಾಗಲು ನಗರಗಳಿಗೆ ಈ ಕೆಳಕಂಡ ಮಾನದಂಡವು ಅನ್ವಯವಾಗುತ್ತದೆ. 1. ಒಂದು ಲಕ್ಷಕ್ಕಿಂತ ಹೆಚ್ಚಿನ ಜನ ಸಂಖ್ಯೆ ಇರುವ ನಗರ ಮತ್ತು ಪಟ್ಟಣಗಳು. 2. ಎಲ್ಲಾ ರಾಜ್ಯದ ರಾಜಧಾನಿಗಳು / ಪಟ್ಟಣಗಳು (ಮೇಲೆ ಕ್ರ.ಸಂ.(1) ರಲ್ಲಿ ಒಳಪಡದ) 3. 'ಹೃದಯ್' ಯೋಜನೆಯಡಿ ಕೇಂದ್ರ ನಗರಾಭಿವೃದ್ಧಿ ಮಂತ್ರಾಲಯದಿಂದ ಪಾರಂಪರಿಕ ನಗರ/ ಪಟ್ಟಣವೆಂದು ವರ್ಗೀಕರಿಸಿದ ಎಲ್ಲಾ ನಗರಗಳು / ಪಟ್ಟಣಗಳು. 4. 75000 ಕ್ಕಿಂತ ಹೆಚ್ಚಿನ, 1 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಮುಖ್ಯ ನದಿಗಳ ದಡದ ಮೇಲಿರುವ 13 ನಗರಗಳು/ ಪಟ್ಟಣಗಳು. 5. ಬೆಟ್ಟ ರಾಜ್ಯ, ದ್ವೀಪ ಮತ್ತು ಪ್ರವಾಸಿ ತಾಣಗಳ 10 ನಗರಗಳು (ಪ್ರತಿ ರಾಜ್ಯದಲ್ಲಿ ಒಂದಕ್ಕಿಂತ ಹೆಚ್ಚಿಲ್ಲದಂತೆ)
ಆ)	2019-20ನೇ ಸಾಲಿನಲ್ಲಿ ರಾಜ್ಯದ ಯಾವ ಯಾವ ಪುರಸಭೆ ಮತ್ತು ಪಟ್ಟಣ ಪಂಚಾಯ್ತಿಗಳನ್ನು ಈ ಯೋಜನೆಯಡಿ ಕೈಗೆತ್ತಿಕೊಂಡು ಅಭಿವೃದ್ಧಿಪಡಿಸಲಾಗುತ್ತಿದೆ; (ಯೋಜನಾವಾರು ನಗರಗಳ ಪಟ್ಟಿ ನೀಡುವುದು):	2015-16ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ 1 ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ 26 ನಗರಗಳು ಮತ್ತು 1 ಪಾರಂಪರಿಕ ಪಟ್ಟಣವಾದ ಬಾದಾಮಿಯು 'ಅಮೃತ್' ಯೋಜನೆಯಡಿ ಆಯ್ಕೆಯಾಗಿರುತ್ತದೆ. ವಿವರಗಳು ಈ ಕೆಳಕಂಡಂತಿವೆ:

ಕ್ರ. ಸಂ.	ನಗರ/ಪಟ್ಟಣ ಹೆಸರು	ಕ್ರ. ಸಂ.	ನಗರ/ಪಟ್ಟಣ ಹೆಸರು
1	ಬೆಂಗಳೂರು ನಗರ	15	ಚಿಕ್ಕಮಗಳೂರು
2	ಬೆಳಗಾವಿ	16	ಚಿತ್ರದುರ್ಗ
3	ಬಳ್ಳಾರಿ	17	ಗದಗ-ಬೆಟಗೇರಿ
4	ದಾವಣಗೆರೆ	18	ಗಂಗಾವತಿ
5	ಹುಬ್ಬಳ್ಳಿ-ಧಾರವಾಡ	19	ಹಾಸನ
6	ಕಲಬುರಗಿ	20	ಹೊಸಪೇಟೆ
7	ಮಂಗಳೂರು	21	ಕೋಲಾರ
8	ಮೈಸೂರು	22	ಮಂಡ್ಯ
9	ಶಿವಮೊಗ್ಗ	23	ರಾಯಚೂರು
10	ತುಮಕೂರು	24	ರಾಣೆಬೆನ್ನೂರು
11	ವಿಜಯಪುರ	25	ರಾಬರ್ಟಸನ್‌ಪೇಟೆ
12	ಬಾಗಲಕೋಟೆ	26	ಉಡುಪಿ
13	ಭದ್ರಾವತಿ	27	ಬಾದಾಮಿ (ಪಾರಂಪರಿಕ ಪಟ್ಟಣ)
14	ಬೀದರ್		

ಇ)	ಬೆಳಗಾವಿ ಜಿಲ್ಲೆ ಕಿತ್ತೂರು ಮತ್ತು ಎಂ.ಕೆ. ಹುಬ್ಬಳ್ಳಿ ಪಟ್ಟಣ ಪಂಚಾಯ್ತಿಗಳಿಗೆ ಈ ಮೊದಲು ಅಮೃತ್ ಯೋಜನೆಯಡಿ ಅನುದಾನ ಬಿಡುಗಡೆ ಮಾಡಲಾಗಿದೆಯೆ; ಬಿಡುಗಡೆ ಮಾಡಿದ್ದಲ್ಲಿ ಯಾವ ಯಾವ ಯೋಜನೆಗಳಿಗೆ ಬಿಡುಗಡೆ ಮಾಡಲಾಗಿದೆ;	ಬೆಳಗಾವಿ ಜಿಲ್ಲೆಯ ಕಿತ್ತೂರು ಮತ್ತು ಎಂ.ಕೆ ಹುಬ್ಬಳ್ಳಿ ಪಟ್ಟಣ ಪಂಚಾಯಿತಿಗಳು ಕೇಂದ್ರ ಪುರಸ್ಕೃತ 'ಅಮೃತ್ ಯೋಜನೆಯ ಮಾನದಂಡದನ್ವಯ 'ಅಮೃತ್' ಯೋಜನೆಯಡಿ ಆಯ್ಕೆಯಾಗಲು ಅರ್ಹತೆ ಇರುವುದಿಲ್ಲವಾದ್ದರಿಂದ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ.
ಈ)	ಹಾಗಿದ್ದಲ್ಲಿ, ಈ ಯೋಜನೆಯಡಿ ಅನುದಾನ ಬಿಡುಗಡೆಗೆ ಯಾವ ಕ್ರಮ ಕೈಗೊಳ್ಳಲಾಗುವುದು?	ಅನ್ವಯಿಸುವುದಿಲ್ಲ.

ಸಂಖ್ಯೆ: ನಅಇ 70 ಸಿಎಸ್ಎಸ್ 2020

(ನಾರಾಯಣ ಗೌಡ)
ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 67 ಸಿಎಸ್ಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:05-03-2020

104
u/s
06/03/2020

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,

ಇವರಿಗೆ:

ಕಾರ್ಯದರ್ಶಿಗಳು
ಕರ್ನಾಟಕ ವಿಧಾನಸಭೆ
ವಿಧಾನ ಸೌಧ
ಬೆಂಗಳೂರು.

ಮಾನ್ಯರೆ,

ವಿಷಯ:- ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ಶಿವಾನಂದ ಪಾಟೀಲ್ (ಬಸವನಬಾಗೇವಾಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:579ಕ್ಕೆ ಉತ್ತರ ನೀಡುವ ಕುರಿತು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನಸಭೆ ಸದಸ್ಯರಾದ ಸದಸ್ಯರಾದ ಶ್ರೀ ಶಿವಾನಂದ ಪಾಟೀಲ್ (ಬಸವನಬಾಗೇವಾಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:579 ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿ ಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

ಲಲಿತಾಬಾಯಿ.ಕೆ

(ಲಲಿತಾಬಾಯಿ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಮೇಕೋ),
ನಗರಾಭಿವೃದ್ಧಿ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	579
ಸದಸ್ಯರ ಹೆಸರು	:	ಶ್ರೀ ಶಿವಾನಂದ ಪಾಟೀಲ್ (ಬಸವನಬಾಗೇವಾಡಿ)
ಉತ್ತರಿಸಬೇಕಾದ ದಿನಾಂಕ	:	06-03-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ವಿಜಯಪುರ ಜಿಲ್ಲೆ ನಿಡಗುಂದಿ, ಕೋಲಾರ ಮತ್ತು ಮನಗೂಳಿ ಪಟ್ಟಣಗಳಲ್ಲಿ ಘನತ್ಯಾಜ್ಯ ವಸ್ತುಗಳನ್ನು ಸದ್ಯಕ್ಕೆ ಯಾವ ಸ್ಥಳಗಳಲ್ಲಿ ವಿಲೇವಾರಿ ಮಾಡಲಾಗುತ್ತಿದೆ.	ನಿಡಗುಂದಿ, ಕೋಲಾರ ಮತ್ತು ಮನಗೂಳಿ ಪಟ್ಟಣ ಪಂಚಾಯಿತಿಗಳು ಇತ್ತೀಚೆಗೆ ನಗರ ಸ್ಥಳೀಯ ಸಂಸ್ಥೆಗಳಾಗಿ ಮೇಲ್ದರ್ಜೆಗೇರಿಸಲ್ಪಟ್ಟವಾಗಿರುತ್ತದೆ. ಹಾಲಿ ನಿಡಗುಂದಿ, ಕೋಲ್ಹಾರ ಮತ್ತು ಮನಗೂಳಿ ಪಟ್ಟಣ ಪಂಚಾಯಿತಿಗಳಲ್ಲಿ ಪ್ರತಿ ದಿನ ಉತ್ಪಾದನೆಯಾಗುವ ಘನತ್ಯಾಜ್ಯವನ್ನು ಮೂಲದಲ್ಲಿಯೇ ವಿಂಗಡಿಸಿ ಹಸಿ ಕಸದಿಂದ ಗೊಬ್ಬರ ತಯಾರಿಸಲಾಗುತ್ತಿದ್ದು, ಒಣ ಕಸವನ್ನು ಹತ್ತಿರದ ಸಿಮೆಂಟ್ ಕಾರ್ಖಾನೆಗೆ ಕಳುಹಿಸಲು ಯೋಜನೆ ರೂಪಿಸಲಾಗಿರುತ್ತದೆ. ಸದರಿ ಪಟ್ಟಣ ಪಂಚಾಯತಿಗಳಿಗೆ ತ್ಯಾಜ್ಯ ವಿಲೇವಾರಿಗೆ ಅಗತ್ಯ ನೆಲಭರ್ತಿ ಜಾಗವನ್ನು ಹೊಂದಲು ಪ್ರಯತ್ನಿಸುತ್ತಿದ್ದು, ವಿಲೇವಾರಿ ಜಮೀನುಗಳು ಲಭ್ಯವಾದ ನಂತರ ಘನ ತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುವುದು.
ಆ)	ಈ ಪಟ್ಟಣಗಳಲ್ಲಿ ಘನ ತ್ಯಾಜ್ಯ ವಿಲೇವಾರಿ ಘಟಕಗಳನ್ನು ಸ್ಥಾಪಿಸಲು ಜಮೀನುಗಳನ್ನು ಗುರುತಿಸಲಾಗಿದೆಯೇ	ಹೌದು
30) ವ್ಯವಸ್ಥಾಪಕ ನಿರ್ದೇಶಕರು, ಕೆಯುಐಡಿಎಫ್‌ಸಿ
31) ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
32) ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಗೃಹ ಇಲಾಖೆ
33) ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಹಣಕಾಸು ಇಲಾಖೆ
34) ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮೂಲಸೌಕರ್ಯ ಅಭಿವೃದ್ಧಿ ಇಲಾಖೆ
35) ಉಪ ಕಾರ್ಯದರ್ಶಿ, ಸಚಿವಸಂಪುಟ, ವಿಧಾನ ಸೌಧ
36) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಅನುಬಂಧ-63

ಬೀದರ್ ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಯೋಜನಾವಾರು ಮಂಜೂರಾಗಿರುವ ಅನುದಾನ ವಿವರಗಳು

ಕ್ರಸಂ	ಯೋಜನೆ	ನಗರ ಸ್ಥಳೀಯ ಸಂಸ್ಥೆಗಳು	ಅನುದಾನ
1	ನಗರೋತ್ಥಾನ (ಮುನಿಸಿಪಾಲಿಟಿ) ಹಂತ-3ರ ಯೋಜನೆ	ಬೀದರ್ ನಗರಸಭೆ	3500
		ಬಸವ ಕಲ್ಯಾಣ ನಗರಸಭೆ	2500
		ಭಾಲ್ಕಿ ಪುರಸಭೆ	750
		ಚಿಟ್‌ಗುಪ್ಪ ಪುರಸಭೆ	750
		ಹುಮ್ನಾಬಾದ್ ಪುರಸಭೆ	750
		ಔರಾದ್ ಪ.ಪಂ	200
		ಹಳ್ಳಿಖೇಡ್ ಪುರಸಭೆ	1000
2	ನಗರೋತ್ಥಾನ (ಮುನಿಸಿಪಾಲಿಟಿ) ಹಂತ-3ರ ಯೋಜನೆಯಡಿ ವಿಶೇಷ ಅನುದಾನ	ಬೀದರ್ ನಗರಸಭೆ	2500
		ಭಾಲ್ಕಿ ಪುರಸಭೆ	2500
3	ನಗರೋತ್ಥಾನ (ಮುನಿಸಿಪಾಲಿಟಿ) ಹಂತ-3ರ ಯೋಜನೆಯಡಿ ಶೇಕಡ 4ರ ಪ್ರೋತ್ಸಾಹ ಧನ	ಬೀದರ್ ನಗರಸಭೆ	1000
		ಹುಮ್ನಾಬಾದ್ ಪುರಸಭೆ	2000
		ಬಸವ ಕಲ್ಯಾಣ ನಗರಸಭೆ ಮತ್ತು	500
		ಭಾಲ್ಕಿ ಪುರಸಭೆ	3775
ಒಟ್ಟು			**21725**

ಮುಖ್ಯ ಅಭಿಯಂತರರು
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

ಅನುಬಂಧ - 3

(34)

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮಾನ್ಯ ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಕಾರ್ಯಕ್ರಮದ 3ನೇ ಹಂತದ ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ನಅಇ 16 ಸಮಸ 2009, ದಿನಾಂಕ:24-06-2009.
2. ಸರ್ಕಾರದ ಆದೇಶ ಸಂಖ್ಯೆ: ನಅಇ 25 ಸಮಸ 2012, ದಿನಾಂಕ: 13-09-2012 ಮತ್ತು 07-11-2012.
3. ಪೌರಾಡಳಿತ ನಿರ್ದೇಶನಾಲಯದ ಕಡತ ಸಂಖ್ಯೆ: ಪೌನಿ/ ತಾಂತ್ರಿಕ/ ಸಿಎಂಎಸ್‌ಎಂಟಿಡಿಪಿ/ 3ನೇ ಹಂತ/ ಮಾ.ಸೂ/ 69/ 2015-16.
4. ಪೌರಾಡಳಿತ ನಿರ್ದೇಶನಾಲಯದ ಪತ್ರ ಸಂಖ್ಯೆ: ಪೌನಿ/ತಾಂತ್ರಿಕ/ ಸಿಎಂಎಸ್‌ಎಂಟಿಡಿಪಿ/ 3ನೇಹಂತ/ ಮಾ.ಸೂ/ 69/ 2015-16, ದಿನಾಂಕ: 10-06-2016.
5. ರಾಜ್ಯ ಸಚಿವ ಸಂಪುಟದ ದಿನಾಂಕ: 28-09-2016ರಂದು ನಡೆದ ಸಭೆಯ ವಿಷಯ ಸಂಖ್ಯೆ: ಸಿ-467/2016ರ ನಡವಳಿಗಳು.

****

ಪ್ರಸ್ತಾವನೆ:

ಕರ್ನಾಟಕದ ಒಟ್ಟು ಜನಸಂಖ್ಯೆ 61.13 ದಶಲಕ್ಷದಲ್ಲಿ (2011 ರ ಜನಗಣತಿಯ ಪ್ರಕಾರ) ಸುಮಾರು 23.6 ದಶಲಕ್ಷ ಜನಸಂಖ್ಯೆ ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ, ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 38.57% ಜನಸಂಖ್ಯೆಯು ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ತೀವ್ರವೇಗದ ನಗರೀಕರಣ ಎಲ್ಲಾ ನಗರಗಳು/ಪಟ್ಟಣಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯನ್ನು ಉಂಟು ಮಾಡಿದೆ. ಮೂಲಭೂತ ಸೌಲಭ್ಯಗಳ ಕೊರತೆಯನ್ನು ನೀಗಿಸಲು ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಸಮಗ್ರ ಅಭಿವೃದ್ಧಿ ಮೇಲೆ ಕೇಂದ್ರೀಕರಿಸಲು ರಾಜ್ಯ ಸರ್ಕಾರವು ಈ ಪಟ್ಟಣಗಳಲ್ಲಿ ಪೌರಸೇವೆಗಳನ್ನು ಮೇಲ್ದರ್ಜೆಗೇರಿಸುವುದು ಮತ್ತು ವಿಸ್ತರಿಸುವುದು ಅವಶ್ಯಕವೆಂದು ಭಾವಿಸಿ, ವಿವಿಧ ಕ್ಷೇತ್ರಗಳಲ್ಲಿ ಮೂಲಭೂತ ಸೌಲಭ್ಯಗಳ ಮೇಲ್ದರ್ಜೆ ಮತ್ತು ನಾಗರೀಕರಿಗೆ ಸೇವೆಗಳನ್ನು ತಲುಪಿಸುವ ಬಗ್ಗೆ ಸುಧಾರಣೆಗಳು ಅತ್ಯಗತ್ಯವಾಗಿರುವುದರಿಂದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸೇವಾಮಟ್ಟದ ಮಾನದಂಡಗಳನ್ವಯ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗಿದೆ. ಈ ಉದ್ದೇಶವನ್ನು ಸಾಧಿಸುವ ಸಲುವಾಗಿ ಮೇಲೆ ಓದಲಾದ (1) ಮತ್ತು (2) ರ ಆದೇಶಗಳಲ್ಲಿ ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಕಾರ್ಯಕ್ರಮ (ಸಿಎಂಎಸ್‌ಎಂಟಿಡಿಪಿ) ಮೊದಲನೇ ಮತ್ತು ಎರಡನೇ ಹಂತದ ಯೋಜನೆಗಳನ್ನು ಕ್ರಮವಾಗಿ 2009-10 ಮತ್ತು 2012-13 ನೇ ಸಾಲಿನಲ್ಲಿ ಅನುಷ್ಠಾನಕ್ಕೆ ತರಲಾಯಿತು.

ನಗರೋತ್ಥಾನ ಸಿಎಂಎಸ್‌ಎಂಟಿಡಿಪಿ ಮೊದಲನೇ ಹಂತದ ಯೋಜನೆಯಲ್ಲಿ ರಾಜ್ಯದ 211 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ರೂ.1454.00 ಕೋಟಿಗಳ ಅನುದಾನದಿಂದ ಅನುಷ್ಠಾನಗೊಳಿಸಲು 2009-10ನೇ ಸಾಲಿನಿಂದ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಯಿತು. ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈ ಯೋಜನೆಯಡಿ ಎಲ್ಲಾ ಕ್ಷೇತ್ರಗಳಲ್ಲಿ ಪರಿಣಾಮಕಾರಿಯಾಗಿ ಮೂಲಭೂತ ಸೌಕರ್ಯಗಳು /ಸ್ವತ್ತುಗಳ ಸೃಜನೆಯಲ್ಲಿ ಸುಧಾರಣೆ ಕಾಣಬಹುದಾಗಿರುತ್ತದೆ. ಅನುಮೋದನೆಯಾದ ಒಟ್ಟು 8301 ಕಾಮಗಾರಿಗಳ ಪೈಕಿ ಆಗಸ್ಟ್ 2016ರ ಅಂತ್ಯಕ್ಕೆ 7854 ಕಾಮಗಾರಿಗಳು ಪೂರ್ಣಗೊಂಡಿವೆ.

ನಗರೋತ್ಥಾನ ಸಿಎಂಎಸ್‌ಎಂಟಿಡಿಪಿ ಎರಡನೇ ಹಂತದ ಯೋಜನೆಯನ್ನು ರಾಜ್ಯ [illegible] ಸಂಸ್ಥೆಗಳ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಲು 2012-13ನೇ ಸಾಲಿನಿಂದ ಯೋಜನೆಯನ್ನು [illegible] ತರಲಾಯಿತು. ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈ ಯೋಜನೆಯಡಿ [illegible] ಸೌಕರ್ಯಗಳಲ್ಲಿ ಸುಧಾರಣೆ ಕಾಣಬಹುದಾಗಿರುತ್ತದೆ. ಅನುಮೋದನೆಯಾದ ಒಟ್ಟು 2050 ಕಾಮಗಾರಿ [illegible] ಆಗಸ್ಟ್-2016ರ ಅಂತ್ಯಕ್ಕೆ 1500 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಮಾನ್ಯ ಮುಖ್ಯಮಂತ್ರಿಗಳು ದಿನಾಂಕ:18-03-2016ರ ಆಯ-ವ್ಯಯ [illegible] ಭಾಷಣದಲ್ಲಿ ಸಿಎಂಎಸ್‌ಎಂಟಿಡಿಪಿ ನಗರೋತ್ಥಾನ 3ನೇ ಹಂತದ ಯೋಜನೆಯನ್ನು ಘೋಷಣೆ ಮಾಡಿದ್ದು, ಪೂರ್ವ ಸಿದ್ಧತಾ ಕಾರ್ಯಗಳಿಗಾಗಿ 2016-17ನೇ ಸಾಲಿನ ಆಯ-ವ್ಯಯದಲ್ಲಿ ರೂ.25 ಕೋಟಿಗಳ ಅನುದಾನವನ್ನು ಮೀಸಲಿರಿಸಲಾಗಿದೆ.

ಮೇಲೆ ಓದಲಾದ (3) ಮತ್ತು (4)ರ ಪೌರಾಡಳಿತ ನಿರ್ದೇಶನಾಲಯದ ಕಡತ ಮತ್ತು ಪತ್ರದಲ್ಲಿ ಸಿಎಂಎಸ್‌ಎಂಟಿಡಿಪಿ ಮೂರನೇ ಹಂತದ ಯೋಜನೆಯನ್ನು 264 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೈಗೆತ್ತಿಕೊಳ್ಳಲು ರೂ. 2836.50 ಕೋಟಿಗಳ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ನಗರೋತ್ಥಾನ ಸಿಎಂಎಸ್‌ಎಂಟಿಡಿಪಿ ಮೊದಲನೇ ಮತ್ತು ಎರಡನೇ ಹಂತದ ಯೋಜನೆಯಂತೆ 3ನೇ ಹಂತದ ಯೋಜನೆಗೂ ಸಹಾ ಪ್ರಸ್ತಾಪಿಸಿರುವ ಒಟ್ಟು ಹಂಚಿಕೆಯಲ್ಲಿ ಸರ್ಕಾರವು ಶೇಕಡ 50 ರಷ್ಟು ಹಂಚಿಕೆಯನ್ನು ಅನುದಾನದ ರೂಪದಲ್ಲಿ ಮತ್ತು ಉಳಿದ ಶೇಕಡ 50 ರಷ್ಟು ಹಂಚಿಕೆಯನ್ನು ಕೆಯುಐಡಿಎಫ್‌ಸಿಯ Karnataka Water and Sanitation Pooled Fund Trust ನ ವತಿಯಿಂದ ಸಾಲದ ಮುಖಾಂತರ ಭರಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ನಅಇ 88 ಸಮಸ 2015,
ಬೆಂಗಳೂರು, ದಿನಾಂಕ:29-11-2016

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯಡಿ ರಾಜ್ಯದ ಸಣ್ಣ ಮತ್ತು ಮಧ್ಯಮ ಪಟ್ಟಣಗಳನ್ನು ಅಭಿವೃದ್ಧಿ ಪಡಿಸಲು ಈ ಕೆಳಕಂಡಂತೆ ಮಂಜೂರಾತಿ ನೀಡಿದೆ.

1 ನಗರೋತ್ಥಾನ (ಮುನಿಸಿಪಾಲ್ಟಿ) ಮೂರನೇ ಹಂತದ ಯೋಜನೆಯಡಿ ಒಟ್ಟಾರೆ ರೂ.2836.50 ಕೋಟಿಗಳ (ರೂ. ಎರಡು ಸಾವಿರದ ಎಂಟು ನೂರ ಮೂವತ್ತಾರು ಕೋಟಿಗಳು ಮತ್ತು ಐವತ್ತು ಲಕ್ಷಗಳು ಮಾತ್ರ) ಮೊತ್ತದಲ್ಲಿ ಈ ಕೆಳಗೆ ನಿಗದಿಪಡಿಸಿರುವ ನಗರ ಸ್ಥಳೀಯ ಸಂಸ್ಥೆವಾರು ಹಂಚಿಕೆಯಂತೆ ಕ್ರಿಯಾ ಯೋಜನೆ ರೂಪಿಸಲು ಅನುಮೋದನೆ ನೀಡಿದೆ.

(ರೂ.ಕೋಟಿಗಳಲ್ಲಿ)

ಕ್ರ. ಸಂ.	ವರ್ಗ	ನಗರ ಸ್ಥಳೀಯ ಸಂಸ್ಥೆಗಳ ಸಂಖ್ಯೆ	ನಗರೋತ್ಥಾನ (ಮುನಿಸಿಪಾಲ್ಟಿ) 3ನೇ ಹಂತದ ಯೋಜನೆಗೆ ನಿಗದಿಪಡಿಸಲಾದ ಹಂಚಿಕೆ	
			ಹಂಚಿಕೆ	ಮೊತ್ತ
1	ಜಿಲ್ಲಾ ಕೇಂದ್ರದ ನಗರಸಭೆಗಳು ಹಾಗೂ ಗ್ರೇಡ್-1 ನಗರಸಭೆಗಳು	23	35.00	805.00
2	ಇತರೆ ನಗರಸಭೆಗಳು	34	25.00	850.00
3	ಹಾಲಿ ಇರುವ ಪುರಸಭೆಗಳು	79	7.50	592.50
4	ಪಟ್ಟಣ ಪಂಚಾಯಿತಿ ಯಿಂದ ಮೇಲ್ದರ್ಜೆಗೆ ಏರಿಸಿದ ಪುರಸಭೆಗಳು	18	7.50	135.00
5	ಹೊಸದಾಗಿ ಸೃಜಿಸಲಾದ ಪುರಸಭೆಗಳು	16	10.00	160.00
6	ಹೊಸದಾಗಿ ಸೃಜಿಸಲಾದ ಪಟ್ಟಣ ಪಂಚಾಯಿತಿ	38	5.00	190.00
7	ಹಾಲಿ ಇರುವ ಪಟ್ಟಣ ಪಂಚಾಯಿತಿಗಳು	52	2.00	104.00
8	ಅಧಿಸೂಚಿತ ಪ್ರದೇಶ ಸಮಿತಿಗಳು	4	0.00	0.00
ಒಟ್ಟು		264		2836.50

2 ನಗರೋತ್ಥಾನ (ಮುನಿಸಿಪಾಲ್ಟಿ) 3ನೇ ಹಂತದ ಯೋಜನೆಗೆ ನಿಗದಿಪಡಿಸಿರುವ ಒಟ್ಟು ರೂ.2836.50 ಕೋಟಿ ಮೊತ್ತದಲ್ಲಿ ಶೇ.3ರಷ್ಟು ಅನುದಾನವನ್ನು ಅಂದರೆ ರೂ.85.00 ಕೋಟಿಗಳನ್ನು ಪಿ.ಎಂ.ಸಿ. ಹಾಗೂ ನಗರೋತ್ಥಾನ ಕೋಶದ ವೆಚ್ಚಗಳಿಗೆ ನಿಗದಿಪಡಿಸಲು ಅನುಮೋದನೆ ನೀಡಿದೆ.

3 ಮೇಲಿನ ಒಟ್ಟು ಹಂಚಿಕೆಯಲ್ಲಿ ಸರ್ಕಾರವು ಶೇಕಡ 50 ರಷ್ಟು ಹಂಚಿಕೆಯನ್ನು ಅನುದಾನದ ರೂಪದಲ್ಲಿ ಮತ್ತು ಉಳಿದ ಶೇಕಡ 50 ರಷ್ಟು ಹಂಚಿಕೆಯನ್ನು ಕೆಯುಐಡಿಎಫ್‌ಸಿಯ Karnataka Water and Sanitation Pooled Fund Trust ನ ವತಿಯಿಂದ ಸಾಲದ ಮುಖಾಂತರ ಭರಿಸಿ 2017-18 ನೇ ಸಾಲಿನಿಂದ 2018-19ನೇ ಸಾಲಿನ ಅವಧಿಯಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಿದೆ

4 ಹಿಂದುಳಿದ ಪಟ್ಟಣಗಳಾದ ಬೀದರ್ ನಗರಸಭೆ ಮತ್ತು ಭಾಲ್ಕಿ ಪುರಸಭೆಗಳಿಗೆ ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯಡಿ ಹೆಚ್ಚುವರಿಯಾಗಿ ತಲಾ ರೂ. 25 ಕೋಟಿಗಳಂತೆ ಒಟ್ಟು ರೂ. 50 ಕೋಟಿ (ರೂ. ಐವತ್ತು ಕೋಟಿಗಳು ಮಾತ್ರ) ಗಳ ಮೊತ್ತವನ್ನು ಸರ್ಕಾರವು ಮಂಜೂರು ಮಾಡಿದೆ.

5 ನಗರೋತ್ಥಾನ (ಮುನಿಸಿಪಾಲ್ಟಿ) 3ನೇ ಹಂತದ ಯೋಜನೆಯ ಪೂರ್ವ ಸಿದ್ಧತಾ ಕಾರ್ಯಗಳಿಗಾಗಿ 2016-17ನೇ ಸಾಲಿನ ಆಯ-ವ್ಯಯದಲ್ಲಿ ಮೀಸಲಿರಿಸಿರುವ ರೂ.25.00 ಕೋಟಿಗಳ ಬದಲಾಗಿ ರೂ.50.00 ಕೋಟಿಗಳನ್ನು ಒದಗಿಸಲು ಅನುಮೋದನೆ ನೀಡಿದೆ.

6 ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯಿಂದ ರೂ. 270 ಕೋಟಿಗಳು ಕಡಿಮೆ ಆಗದಂತೆ ಮೊತ್ತವನ್ನು ನಗರ ಸ್ಥಳೀಯ ಸಂಸ್ಥೆಗಳ ವಂತಿಕೆಯಾಗಿ ಅಮೃತ್ ಯೋಜನೆಗೆ ನೀಡಲು ಸರ್ಕಾರವು ಅನುಮೋದನೆ ನೀಡಿದೆ.

7 ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯ ಅನುದಾನ ಮತ್ತು ಸಾಲದ ಮೊತ್ತವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆಗೊಳಿಸಲಾಗುವುದು ಮತ್ತು ಜಿಲ್ಲಾಧಿಕಾರಿಗಳು ಯೋಜನೆಯನ್ನು ಅನುಷ್ಠಾನಗೊಳಿಸಿ ಹಣಬಳಕೆ ಪ್ರಮಾಣ ಪತ್ರ ಮತ್ತು ಯೋಜನೆಯ ಮುಕ್ತಾಯ ಪ್ರಮಾಣ ಪತ್ರಗಳನ್ನು ಸಲ್ಲಿಸಲು ಜವಾಬ್ದಾರರಾಗಿರುತ್ತಾರೆ.

8 ಇನ್ನು ಮುಂದೆ ಸಿಎಂಎಸ್‌ಎಂಟಿಡಿಪಿ ನಗರೋತ್ಥಾನ 3ನೇ ಹಂತದ ಯೋಜನೆ ಎಂಬುದರ ಬದಲಾಗಿ ನಗರೋತ್ಥಾನ (ಮುನಿಸಿಪಾಲ್ಟಿ)-3 ಯೋಜನೆ ಎಂದು ಮರು ನಾಮಕರಣ ಮಾಡಲು ಅನುಮೋದನೆ ನೀಡಿದೆ.

9 ಕಾಮಗಾರಿಗಳ ಆಯ್ಕೆ ಮತ್ತು ಆದ್ಯತೆ :-

9.1 **ಕುಡಿಯುವ ನೀರಿನ ಕಾಮಗಾರಿಗಳು:-**

i) ಕುಡಿಯುವ ನೀರಿನ ಕಾಮಗಾರಿಗಳನ್ನು ಪ್ರಥಮ ಆದ್ಯತೆ ಮೇರೆಗೆ ಪರಿಗಣಿಸುವುದು. ಸೇವಾ ಮಟ್ಟದ ಮಾನದಂಡದಂತೆ ಪ್ರತಿ ವ್ಯಕ್ತಿಗೆ 135 ಎಲ್‌ಪಿಸಿಡಿ ನೀರು ಮತ್ತು ಶೇ100ರಷ್ಟು ನಗರ ವ್ಯಾಪ್ತಿಯನ್ನು ಆವರಿಸುವಂತೆ ನೀರು ಸರಬರಾಜು ಮಾಡಲು ಕಾಮಗಾರಿಗಳನ್ನು ಕೈಗೊಳ್ಳುವುದು.

ii) ಕೇಂದ್ರ ಸರ್ಕಾರದ ಅನುದಾನದಡಿ ಕುಡಿಯುವ ನೀರು ಮತ್ತು ಒಳಚರಂಡಿ ಕಾಮಗಾರಿಗಳಿಗೆ ನೀಡಬೇಕಾದ ಸ್ಥಳೀಯ ಸಂಸ್ಥೆಯ ವಂತಿಕೆಯ ಪೂರ್ಣ ಮೊತ್ತವನ್ನು ಲಭ್ಯವಿರುವ ನಗರೋತ್ಥಾನ (ಮುನಿಸಿಪಾಲ್ಟಿ)-3 ಅನುದಾನದಡಿ ಭರಿಸುವುದು.

iii) ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ, 24/7 ನೀರು ಸರಬರಾಜು ಯೋಜನೆಗಳನ್ನು ಅನುಷ್ಠಾನಗೊಳಿಸಲು ಇರುವಂತಹ ಮಾನದಂಡಗಳು ಹಾಗೂ ವಿಶಿಷ್ಟ ವಿವರಣೆಗಳನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.

9.2. ರಸ್ತೆ ಅಭಿವೃದ್ಧಿ ಕಾಮಗಾರಿಗಳು:-

i) ರಸ್ತೆ ಅಭಿವೃದ್ಧಿ ಕಾಮಗಾರಿ, ರಸ್ತೆ ಬದಿ ಚರಂಡಿ ನಿರ್ಮಾಣ ಕಾಮಗಾರಿ, ಫುಟ್‌ಪಾತ್ ಮತ್ತು ಟ್ರಾಫಿಕ್ ಮ್ಯಾನೇಜ್‌ಮೆಂಟ್ ಅಭಿವೃದ್ಧಿ ಕಾಮಗಾರಿಗಳು, <u>ಹಂಚಿಕೆ:-</u> ಕುಡಿಯುವ ನೀರಿನ ಕಾಮಗಾರಿಗಳ ವೆಚ್ಚದ ನಂತರ ಉಳಿಯುವ ಮೊತ್ತದಲ್ಲಿ ಶೇಕಡ 70% ರಷ್ಟು ಮೊತ್ತ.

ii) ಸಿ.ಸಿ ರಸ್ತೆಗಳಾಗಿದ್ದಲ್ಲಿ, ಉಪಯುಕ್ತತಾ ಕಾರಿಡಾರ್ (Utility Corridor) ನಿರ್ಮಿಸುವುದು ಕಡ್ಡಾಯವಾಗಿರುತ್ತದೆ. ತೆಗೆದುಕೊಳ್ಳಲಾಗುವ ರಸ್ತೆಗಳೊಂದಿಗೆ ಚರಂಡಿ ಹಾಗೂ ಫುಟ್‌ಪಾತ್‌ಗಳ ಅಭಿವೃದ್ಧಿ ಕೈಗೊಳ್ಳತಕ್ಕದ್ದು.

9.3 ಮಳೆ ನೀರು ಚರಂಡಿ ಅಭಿವೃದ್ಧಿ ಕಾಮಗಾರಿಗಳು:

ಮಳೆ ನೀರು ಚರಂಡಿ ಅಭಿವೃದ್ಧಿ ಕಾಮಗಾರಿಗಳು ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಯೋಜನೆಯನ್ವಯ ಪ್ರವಾಹ ಉಂಟಾಗುವ ಪ್ರದೇಶಗಳನ್ನು ಗುರುತಿಸಿ ಮಳೆ ನೀರು ಚರಂಡಿಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳತಕ್ಕದ್ದು.

<u>ಹಂಚಿಕೆ:-</u> ಕುಡಿಯುವ ನೀರಿನ ಕಾಮಗಾರಿಗಳ ವೆಚ್ಚದ ನಂತರ ಉಳಿಯುವ ಮೊತ್ತದಲ್ಲಿ ಶೇಕಡ 10% ರಷ್ಟು ಮೊತ್ತ.

9.4. ಇತರೆ ಅಭಿವೃದ್ಧಿ ಕಾಮಗಾರಿಗಳು:

ಮೇಲೆ ತಿಳಿಸಿರುವ ಕಾಮಗಾರಿಗಳ ಹಂಚಿಕೆಯನ್ನು ಹೊರತುಪಡಿಸಿ ಉಳಿದ ಹಂಚಿಕೆ ಮೊತ್ತದಲ್ಲಿ ಕಛೇರಿ ಕಟ್ಟಡ ನಿರ್ಮಾಣ, ಸಮುದಾಯ ಮತ್ತು ಸಾರ್ವಜನಿಕ ಶೌಚಾಲಯ ನಿರ್ಮಾಣ, ಆಧುನಿಕ ಬಸ್ ನಿಲ್ದಾಣ ನಿರ್ಮಾಣ, ಮಾರುಕಟ್ಟೆ ಸಂಕೀರ್ಣ ನಿರ್ಮಾಣ ಕೈಗೊಳ್ಳಬಹುದಾಗಿದೆ.

ಮೇಲ್ಕಂಡ ಕಾಮಗಾರಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ವಾಸಿಸುತ್ತಿರುವ ಪ್ರದೇಶಗಳಲ್ಲಿ ಕ್ರಮವಾಗಿ ಶೇಕಡ 17.15 ಮತ್ತು ಶೇಕಡ 6.95 ರಷ್ಟು ಮೊತ್ತ ಸೇರಿದಂತೆ ಒಟ್ಟಾರೆ ಶೇಕಡ 24.10 ರಷ್ಟು ಮೊತ್ತದ ಕಾಮಗಾರಿಗಳನ್ನು ಕ್ರಿಯಾಯೋಜನೆಯಲ್ಲಿ ಕಡ್ಡಾಯವಾಗಿ ಅಳವಡಿಸಿಕೊಳ್ಳತಕ್ಕದ್ದು.

10 ಕ್ರಿಯಾಯೋಜನೆ ಅನುಮೋದನೆ:-

ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆ ಅಡಿಯಲ್ಲಿ ನಗರ ಸ್ಥಳೀಯ ಸಂಸ್ಥೆಗೆ ನಿಗದಿಪಡಿಸಲಾದ ಹಂಚಿಕೆಯಲ್ಲಿ ಶೇಕಡ 85 ರಷ್ಟು ಅನುದಾನಕ್ಕೆ ಕ್ರಿಯಾಯೋಜನೆಯನ್ನು ತಯಾರಿಸುವುದು. ಉಳಿದ ಶೇಕಡ 15 ರಷ್ಟು ಹಂಚಿಕೆಯನ್ನು ನಗರ ಸ್ಥಳೀಯ ಸಂಸ್ಥೆಗಳು ಸಾಧಿಸಲಾಗುವ ಸುಧಾರಣೆಗಳನ್ನು ಆಧರಿಸಿ, ನಿಗಧಿತ ಸಮಯದಲ್ಲಿ ಉತ್ತಮ ಸಾಧನೆಗಳನ್ನು ಸಾಧಿಸಿದ ನಗರ ಸ್ಥಳೀಯ ಸಂಸ್ಥೆಗಳಿಗೆ ಕಂಡಿಕೆ-21 ರಲ್ಲಿ ವಿವರಿಸಿರುವಂತೆ ಮೊತ್ತವನ್ನು ಬಿಡುಗಡೆ

ಮಾಡಲು ಕ್ರಮವಹಿಸಲಾಗುತ್ತದೆ. ಜಿಲ್ಲಾಧಿಕಾರಿಗಳು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಕ್ರಿಯಾಯೋಜನೆಯನ್ನು ಯೋಜನೆಯ ಮಾರ್ಗಸೂಚಿಗಳ ಪ್ರಕಾರ ಪರಿಶೀಲಿಸಿ, ಕ್ರೋಢೀಕರಿಸಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಮಟ್ಟದ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯುವುದು ಹಾಗೂ ಮಾರ್ಗಸೂಚಿಯಂತೆ ಅನುಮೋದನೆಗೊಂಡ ಕಾಮಗಾರಿಗಳ ಕ್ರಿಯಾ ಯೋಜನೆಗೆ ಜಿಲ್ಲಾಧಿಕಾರಿಗಳು ಅನುಮೋದನೆ ನೀಡಿ ಆದೇಶ ಹೊರಡಿಸಿ ಪ್ರತಿಯನ್ನು ಪೌರಾಡಳಿತ ನಿರ್ದೇಶಕರು ಹಾಗೂ ಸರ್ಕಾರಕ್ಕೆ ಕಡ್ಡಾಯವಾಗಿ ಸಲ್ಲಿಸುವುದು ಹಾಗೂ ಸಕ್ಷಮ ಪ್ರಾಧಿಕಾರಗಳಿಂದ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಪಡೆಯುವುದು. ಕ್ರಿಯಾ ಯೋಜನೆಯನ್ನು ತಯಾರಿಸುವುದರಲ್ಲಿ ಮಾರ್ಗಸೂಚಿಗಳನ್ನು ಪಾಲಿಸುವುದು ಹಾಗೂ ಹಂಚಿಕೆಯ ಮೊತ್ತ ಹಾಗೂ ವಿಧಾನಗಳನ್ನು ಪಾಲಿಸುವುದರಲ್ಲಿ ಶೇ.1 ರಷ್ಟು ವಿಚಲನೆ (deviation) ಇದ್ದರೂ ಕೂಡ, ಅಂತಹ ಕ್ರಿಯಾ ಯೋಜನೆಗಳನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸತಕ್ಕದ್ದು. ಉದಾ:-ದಿನಂಪ್ರತಿ 135 LPCD ನೀರಿನ ವ್ಯವಸ್ಥೆ ಇಲ್ಲದಿದ್ದಾಗ ಬೇರೆ ಯಾವುದೇ ಕಾಮಗಾರಿಗಳನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸತಕ್ಕದ್ದಲ್ಲ. ಒಂದು ವೇಳೆ ಕುಡಿಯುವ ನೀರಿನ ಯೋಜನೆಗೆ ಸಂಪೂರ್ಣ ಹಣ ಇಡದೆ ರಸ್ತೆ ಕೆಲಸ ತೆಗೆದುಕೊಳ್ಳಬೇಕಿದ್ದಲ್ಲಿ ಅಂತಹ ಕ್ರಿಯಾ ಯೋಜನೆಗಳನ್ನು ಜಿಲ್ಲಾ ಮಟ್ಟದಲ್ಲಿ ಅನುಮೋದಿಸತಕ್ಕದ್ದಲ್ಲ. ಅದೇ ರೀತಿ, ಕಾಮಗಾರಿಗಳ ಕನಿಷ್ಠ ಗಾತ್ರ ಹಾಗೂ ಇನ್ನುಳಿದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಕ್ರಿಯಾ ಯೋಜನೆಯು ಮಾರ್ಗಸೂಚಿಗಳನ್ವಯ ಇಲ್ಲದೆ ಇದ್ದರೆ ಹಾಗೂ ಸರ್ಕಾರದ ಪೂರ್ವಾನುಮತಿ ಪಡೆಯದೇ ಇದ್ದಲ್ಲಿ, ಅನುದಾನವನ್ನು ಕಡಿತಗೊಳಿಸಲು ನಗರಾಭಿವೃದ್ಧಿ ಇಲಾಖೆಯು ಕ್ರಮವಹಿಸಲಿದೆ.

11 ಕಾಮಗಾರಿಗಳ ಕನಿಷ್ಠ ಗಾತ್ರ :-

ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆ ಅಡಿಯಲ್ಲಿ ನಗರಸಭೆ ವ್ಯಾಪ್ತಿಯಲ್ಲಿ ಪ್ರತಿ ಕಾಮಗಾರಿಯ ಕನಿಷ್ಟ ಮೊತ್ತವನ್ನು ರೂ. 50.00 ಲಕ್ಷಗಳಿಗೆ ಹಾಗೂ ಪುರಸಭೆಗಳು, ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಪ್ರತಿ ಕಾಮಗಾರಿಯ ಕನಿಷ್ಟ ಮೊತ್ತವನ್ನು ರೂ. 25.00 ಲಕ್ಷಗಳಿಗೆ ನಿಗದಿಪಡಿಸಲಾಗಿದೆ.

11.1. ಕಾಮಗಾರಿಗಳ ಪ್ಯಾಕೇಜ್ ವಿವರ:-

i) ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆ ಅಡಿಯಲ್ಲಿ ನಗರ ಸ್ಥಳೀಯ ಸಂಸ್ಥೆವಾರು ಪ್ಯಾಕೇಜ್ ಟೆಂಡರ್‌ಗಳನ್ನು ಕರೆಯಲು ಅನುಮೋದನೆ ನೀಡಿದೆ. ಸದರಿ ಟೆಂಡರ್‌ಗಳಿಗೆ ಜಿಲ್ಲಾಧಿಕಾರಿಗಳು, ಜಿಲ್ಲಾ ನಗರಾಭಿವೃದ್ಧಿ ಕೋಶ ಮತ್ತು ಯೋಜನಾ ಅನುಷ್ಠಾನ ಸಮಾಲೋಚಕರ ನೆರವಿನೊಂದಿಗೆ ಟೆಂಡರ್ ಕರೆಯುವುದು.

ii) ನಗರೋತ್ಥಾನ ಯೋಜನೆಯ ಮಾರ್ಗಸೂಚಿಗಳನುಸಾರ ಡಿಪಿಆರ್ ಗಳನ್ನು ಸಿದ್ಧಪಡಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಲು ರಾಜ್ಯ ಮಟ್ಟದ ಸಮಿತಿಗೆ ಸಲ್ಲಿಸಿ ಅದರ ಅನುಮೋದನೆಯೊಂದಿಗೆ ಅನುಷ್ಠಾನಮಾಡುವುದು

iii) ಸಂಬಂಧಿಸಿದ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾನಗರಾಭಿವೃದ್ಧಿ ಕೋಶಗಳ ಮುಖಾಂತರ ಟೆಂಡರ್‌ಗಳನ್ನು ನಗರ ಸ್ಥಳೀಯ ಸಂಸ್ಥೆವಾರು ಪ್ಯಾಕೇಜ್ ಮಾಡಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ರಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಕರೆಯುವುದು.

iv) ಯೋಜನಾ ನಿರ್ದೇಶಕರು, ಜಿಲ್ಲಾನಗರಾಭಿವೃದ್ಧಿ ಕೋಶರವರು ಯೋಜನಾ ಅನುಷ್ಠಾನ ಸಮಾಲೋಚಕರ ನೆರವಿನಿಂದ ಸ್ವೀಕೃತವಾದ ಟೆಂಡರ್ (ತಾಂತ್ರಿಕ ಮತ್ತು ಆರ್ಥಿಕ) ಗಳನ್ನು ಮೌಲ್ಯಮಾಪನ ಮಾಡಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇರುವ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯ ಮುಂದೆ ಮಂಡಿಸುವುದು.

v) ಸಂಬಂಧಿಸಿದ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾನಗರಾಭಿವೃದ್ಧಿ ಕೋಶಗಳು ಸಕ್ಷಮ ಪ್ರಾಧಿಕಾರಗಳಿಂದ ಟೆಂಡರ್ ಅನುಮೋದನೆ ಪಡೆದು ಕಾಮಗಾರಿಗಳನ್ನು ಅರ್ಹ ಗುತ್ತಿಗೆದಾರರಿಗೆ ವಹಿಸಲು ಗುತ್ತಿಗೆ ಕರಾರು ಮಾಡಿಕೊಳ್ಳಲು ಹಾಗೂ ಕಾಮಗಾರಿಗಳ ಕಾರ್ಯಾದೇಶವನ್ನು ನೀಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

12 ಗುಣಮಟ್ಟ ನಿಯಂತ್ರಣ:-

ಕಾಮಗಾರಿಗಳ ಗುಣಮಟ್ಟ ಹಾಗೂ ಪರಿಮಾಣಗಳನ್ನು ಖಚಿತಪಡಿಸಿಕೊಳ್ಳುವುದು ಯೋಜನಾ ಅನುಷ್ಠಾನ ಸಮಾಲೋಚಕರ ಕರ್ತವ್ಯವಾಗಿರುತ್ತದೆ. ಯೋಜನಾ ಅನುಷ್ಠಾನ ಸಮಾಲೋಚಕರ ಜೊತೆಗೆ ಕಾಮಗಾರಿಗಳ ಗುಣಮಟ್ಟ ಮತ್ತು ಸ್ವಲ್ಪ ಮಟ್ಟಿಗೆ ಪರಿಮಾಣಗಳನ್ನು ಹೋಲಿಸಿ ನೋಡಲು ಪಿಎಂಜಿಎಸ್‌ವೈ ಮಾದರಿಯಲ್ಲಿ ರಾಜ್ಯ/ರಾಷ್ಟ್ರೀಯ ಗುಣಮಟ್ಟ ನಿಯಂತ್ರಕರನ್ನು ನಗರಾಭಿವೃದ್ಧಿ ಇಲಾಖೆಯು ನೇಮಿಸಲಿದೆ.

13 **ಯೋಜನೆಯ ಅನುಷ್ಠಾನದ ವ್ಯವಸ್ಥೆ ಮತ್ತು ಮೌಲ್ಯಮಾಪನ :-**

i) ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯ ಕಾರ್ಯಕ್ರಮವನ್ನು ಜಾರಿ ಮಾಡಲು ಪೌರಾಡಳಿತ ನಿರ್ದೇಶನಾಲಯವು ನೋಡಲ್ ಏಜೆನ್ಸಿಯಾಗಿ ಕರ್ತವ್ಯ ನಿರ್ವಹಿಸುತ್ತದೆ. ಯೋಜನೆಯ ಒಟ್ಟಾರೆ ಮೇಲ್ವಿಚಾರಣೆ ಮತ್ತು ಅನುಷ್ಠಾನದ ಜವಾಬ್ದಾರಿಯನ್ನು ನಗರಾಭಿವೃದ್ಧಿ ಇಲಾಖೆಯು ಹೊಂದಿರುತ್ತದೆ.

ii) ಪೌರಾಡಳಿತ ನಿರ್ದೇಶನಾಲಯವು ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯ ಮೌಲ್ಯಮಾಪನವನ್ನು ಏಕಕಾಲದಲ್ಲಿ ಒಟ್ಟಿಗೆ ನಡೆಸತಕ್ಕದ್ದು. ಯೋಜನೆಯ ಮೌಲ್ಯಮಾಪನದಿಂದಾಗಿ ಯಾವುದಾದರೂ ಬದಲಾವಣೆ/ತಿದ್ದುಪಡಿಗಳು ಅವಶ್ಯಕತೆ ಇದ್ದರೆ, ಅವುಗಳನ್ನು ಅಳವಡಿಸಿ ಯೋಜನೆಯ ಕಾಮಗಾರಿಗಳನ್ನು ಗುಣಮಟ್ಟದಿಂದ ಹಾಗೂ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲು ಪೌರಾಡಳಿತ ನಿರ್ದೇಶನಾಲಯವು ಕ್ರಮವಹಿಸತಕ್ಕದ್ದು.

14 **ನಗರೋತ್ಥಾನ ಜಿಲ್ಲಾ ಮಟ್ಟದ ಸಮಿತಿ ಮತ್ತು ಅದರ ಕರ್ತವ್ಯಗಳು:-**

14.1. ನಗರೋತ್ಥಾನ ಜಿಲ್ಲಾ ಮಟ್ಟದ ಸಮಿತಿಯು ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರುತ್ತದೆ.

1	ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಸಚಿವರು	ಅಧ್ಯಕ್ಷರು
2	ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು	ಸದಸ್ಯರು
3	ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯ ಸ್ಥಳೀಯ ಶಾಸಕರು	ಸದಸ್ಯರು
4	ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು	ಸದಸ್ಯರು
5	ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯ ಪೌರಾಯುಕ್ತರು/ ಮುಖ್ಯಾಧಿಕಾರಿಗಳು	ಸದಸ್ಯರು
6	ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಹಾಗೂ ಜಿಲ್ಲಾ ನಗರಾಭಿವೃದ್ಧಿ ಕೋಶ	ಸದಸ್ಯರು
7	ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ	ಸದಸ್ಯ ಕಾರ್ಯದರ್ಶಿಗಳು

14.2. ನಗರೋತ್ಥಾನ ಜಿಲ್ಲಾ ಮಟ್ಟದ ಸಮಿತಿಯು ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸುವುದು:-

i) ಜಿಲ್ಲಾಧಿಕಾರಿಗಳು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಕ್ರಿಯಾಯೋಜನೆಗಳನ್ನು ಯೋಜನೆಯ ಮಾರ್ಗಸೂಚಿಗಳಂತೆ ಪರಿಶೀಲಿಸಿ, ಕ್ರೋಢೀಕರಿಸಿ, ಜಿಲ್ಲಾ ಮಟ್ಟದ ಸಮಿತಿಯ ಮುಂದೆ ಮಂಡಿಸಿದ ಕ್ರಿಯಾಯೋಜನೆಗೆ ಅನುಮೋದನೆ ನೀಡುವುದು.

(28)

ii) ಜಿಲ್ಲಾ ಮಟ್ಟದ ಸಮಿತಿಯು ಪ್ರತಿ ಎರಡು ತಿಂಗಳಿಗೊಮ್ಮೆ ಯೋಜನೆಯ ಪ್ರಗತಿ ಪರಿಶೀಲನೆ ಕೈಗೊಳ್ಳತಕ್ಕದ್ದು. ಜಿಲ್ಲಾ ನಗರಾಭಿವೃದ್ಧಿ ಕೋಶವು ಪ್ರತಿ ಮಾಹೆ ಯೋಜನೆಯ ಪ್ರಗತಿಯನ್ನು ಪೌರಾಡಳಿತ ನಿರ್ದೇಶನಾಲಯದ ಪೌರಸುಧಾರಣಾ ಕೋಶದ ವೆಬ್‌ಸೈಟ್‌ನಲ್ಲಿ ಆನ್ ಲೈನ್ ಮುಖಾಂತರ ವರದಿ ಮಾಡತಕ್ಕದ್ದು.

iii) ನಗರೋತ್ಥಾನ ಜಿಲ್ಲಾ ಮಟ್ಟದ ಸಮಿತಿಯು ಯಾವುದೇ ಕಾರಣಕ್ಕೂ ಕಾಮಗಾರಿಗಳ ಬದಲಾವಣೆಗೆ ಅವಕಾಶ ನೀಡಬಾರದು. ಒಂದು ವೇಳೆ ಬದಲಾವಣೆ ಅತ್ಯವಶ್ಯಕತೆ ಇದ್ದಲ್ಲಿ, ನಗರೋತ್ಥಾನ ಜಿಲ್ಲಾ ಮಟ್ಟದ ಸಮಿತಿಯು ಬದಲಿ ಕಾಮಗಾರಿ ಪ್ರಸ್ತಾವನೆಯನ್ನು ಬದಲಾವಣೆಗೆ ಅವಶ್ಯಕವಿರುವ ಕಾರಣಗಳನ್ನು ಮತ್ತು ಬದಲಾವಣೆ ಅನುಮೋದಿಸದೆ ಇದ್ದಲ್ಲಿ ಉಂಟಾಗುವ ಪರಿಣಾಮಗಳನ್ನು ನಮೂದಿಸಿ, ಜಿಲ್ಲಾಧಿಕಾರಿಗಳು ಮಾರ್ಗಸೂಚಿಗಳಂತೆ ಇರದ ಕ್ರಿಯಾಯೋಜನೆ ಮತ್ತು ಬದಲಿ ಕ್ರಿಯಾಯೋಜನೆಗಳನ್ನು ಪೌರಾಡಳಿತ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು. ಪೌರಾಡಳಿತ ನಿರ್ದೇಶಕರು ಸದರಿ ಪ್ರಸ್ತಾವನೆಗಳನ್ನು ರಾಜ್ಯ ಮಟ್ಟದ ಸಮಿತಿಯ ಮುಂದೆ ಸೂಕ್ತ ಕ್ರಮಕ್ಕಾಗಿ ಮಂಡಿಸುವುದು.

15. ನಗರೋತ್ಥಾನ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ:-

15.1. ನಗರೋತ್ಥಾನ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯು ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರುತ್ತದೆ:-

1	ಜಿಲ್ಲಾಧಿಕಾರಿಗಳು	ಅಧ್ಯಕ್ಷರು
2	ಪೌರಾಯುಕ್ತರು/ ಮುಖ್ಯಾಧಿಕಾರಿಗಳು, ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು	ಸದಸ್ಯರು
3	ಕಾರ್ಯಪಾಲಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ	ಸದಸ್ಯರು
4	ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ	ಸದಸ್ಯರು
5	ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ	ಸದಸ್ಯ ಕಾರ್ಯದರ್ಶಿಗಳು

15.2. ನಗರೋತ್ಥಾನ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯು ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು:-

i) ಕ್ರಿಯಾ ಯೋಜನೆಯನ್ನು ತಯಾರಿಸುವುದು ಮತ್ತು ಅಂತಿಮಗೊಳಿಸುವುದು.

ii) ಯೋಜನಾ ಅನುಷ್ಠಾನ ಸಮಾಲೋಚಕರ ಆಯ್ಕೆ.

iii) ಯೋಜನಾ ಅನುಷ್ಠಾನ ಸಮಾಲೋಚಕರು ಸಲ್ಲಿಸುವ ವಿಸ್ತೃತ ಯೋಜನಾ ವರದಿಗಳನ್ನು ಪರಿಶೀಲಿಸಿ ರಾಜ್ಯ ಮಟ್ಟದ ಸಮಿತಿಯಿಂದ ಅನುಮೋದನೆ ಪಡೆದುಕೊಂಡು ಕಾಮಗಾರಿಗಳ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳತಕ್ಕದ್ದು.

iv) ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ, ತಾಂತ್ರಿಕ ಮಂಜೂರಾತಿ, ಟೆಂಡರ್‌ನ ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ಗಳಿಗೆ ಅನುಮೋದನೆ ಮತ್ತು ಗುತ್ತಿಗೆದಾರರಿಗೆ ಗುತ್ತಿಗೆ ಕರಾರು ಮಾಡುವುದು ಸೇರಿದಂತೆ ವಿವಿಧ ಅನುಮೋದನೆಗಳನ್ನು ಮೇಲ್ವಿಚಾರಣೆ ಮಾಡುವುದು.

v) ಯೋಜನೆಯ ಪ್ರಗತಿಯನ್ನು ವೇಳಾಪಟ್ಟಿಯಂತೆ ಕಾಲಕಾಲಕ್ಕೆ ಪರಿಶೀಲನೆ ಹಾಗೂ ಮೇಲ್ವಿಚಾರಣೆ ಕೈಗೊಳ್ಳತಕ್ಕದ್ದು.

4

16. ಟೆಂಡರ್‌ಗಳ ಅನುಮೋದನೆ:-

ಆರ್ಥಿಕ ಇಲಾಖೆಯ ಅಧಿಕಾರ ಪ್ರತ್ಯಾಯೋಜನೆಯಂತೆ ಸಕ್ಷಮ ಪ್ರಾಧಿಕಾರಗಳು ಟೆಂಡರ್‌ಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಅನುಮೋದನೆ ನೀಡತಕ್ಕದ್ದು.

17. ನಗರೋತ್ಥಾನ ರಾಜ್ಯ ಮಟ್ಟದ ಸಮಿತಿ ಮತ್ತು ಅದರ ಕರ್ತವ್ಯಗಳು:-

17.1. ನಗರೋತ್ಥಾನ ರಾಜ್ಯ ಮಟ್ಟದ ಸಮಿತಿಯು ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರುತ್ತದೆ:-

1	ಮಾನ್ಯ ಪೌರಾಡಳಿತ ಸಚಿವರು	ಅಧ್ಯಕ್ಷರು
2	ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ	ಸದಸ್ಯರು
3	ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ	ಸದಸ್ಯರು
4	ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ	ಸದಸ್ಯ ಕಾರ್ಯದರ್ಶಿಗಳು
5	ಸರ್ಕಾರದ ಉಪ ಕಾರ್ಯದರ್ಶಿ-2, ನಗರಾಭಿವೃದ್ಧಿ ಇಲಾಖೆ	ಸದಸ್ಯರು
6	ಅಧೀಕ್ಷಕ ಅಭಿಯಂತರರು, ತಾಂತ್ರಿಕ ಕೋಶ, ನಗರಾಭಿವೃದ್ಧಿ ಇಲಾಖೆ	ಸದಸ್ಯರು
7	ಅಧೀಕ್ಷಕ ಅಭಿಯಂತರರು, ಪೌರಾಡಳಿತ ನಿರ್ದೇಶನಾಲಯ	ಸದಸ್ಯ
8	ಜಂಟಿ ನಿರ್ದೇಶಕರು (ಅಭಿವೃದ್ಧಿ) ಪೌರಾಡಳಿತ ನಿರ್ದೇಶನಾಲಯ	ಸದಸ್ಯರು

17.2. ನಗರೋತ್ಥಾನ ರಾಜ್ಯ ಮಟ್ಟದ ಸಮಿತಿಯು ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು :-

i) ಯೋಜನೆಯ ಪ್ರಗತಿ ಪರಿಶೀಲನೆ ಹಾಗೂ ಮೇಲ್ವಿಚಾರಣೆ.

ii) ಯೋಜನೆಯ ಮಾರ್ಗಸೂಚಿಗಳಂತೆ ಇರದ ಕ್ರಿಯಾಯೋಜನೆ ಮತ್ತು ಬದಲಿ ಕ್ರಿಯಾಯೋಜನೆಗಳನ್ನು ಜಿಲ್ಲಾಮಟ್ಟದ ಸಮಿತಿಯ ಶಿಫಾರಸ್ಸಿನಂತೆ ನಗರಸ್ಥಳೀಯ ಸಂಸ್ಥೆಯ ಅವಶ್ಯಕತೆಗೆ ಅನುಗುಣವಾಗಿ ಅನುಮೋದನೆ ನೀಡುವುದು.

iii) ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಅಗತ್ಯವಿರುವ ಬದಲಾವಣೆಗಳ ಬಗ್ಗೆ ಸಲಹೆಗಳನ್ನು ನೀಡುವುದು.

18. ಯೋಜನಾ ಅನುಷ್ಠಾನ ಸಮಾಲೋಚಕರು:-

18.1. ಯೋಜನಾ ಅನುಷ್ಠಾನ ಸಮಾಲೋಚಕರ ಸೇವೆಯನ್ನು ಜಿಲ್ಲಾಧಿಕಾರಿಗಳು ಸರ್ಕಾರದಿಂದ ಅನುಮೋದಿಸಲ್ಪಟ್ಟಿರುವ bid document ಗಳನ್ನು ಬಳಸಿಕೊಂಡು ತಮ್ಮ ಹಂತದಲ್ಲಿಯೇ ಟೆಂಡರ್ ಕರೆದು ನೇಮಿಸಿಕೊಳ್ಳಬಹುದು ಅಥವಾ ಕೆ.ಯು.ಐ.ಡಿ.ಎಫ್.ಸಿ ಸಂಸ್ಥೆಯು ಅಂತಿಮಗೊಳಿಸಿರುವ ಪಟ್ಟಿಯಿಂದ ಯೋಜನಾ ಅನುಷ್ಠಾನ ಸಮಾಲೋಚಕರ ಸೇವೆಯನ್ನು ಉಪಯೋಗಿಸಿಕೊಳ್ಳತಕ್ಕದ್ದು. ಕೆ.ಯು.ಐ.ಡಿ.ಎಫ್.ಸಿ ಸಂಸ್ಥೆಯು ಅಂತಿಮಗೊಳಿಸಿರುವ ಯೋಜನಾ ಅನುಷ್ಠಾನ ಸಮಾಲೋಚಕರ ಪಟ್ಟಿಯು ಜಿಲ್ಲಾಧಿಕಾರಿಗಳಿಗೆ ಹೆಚ್ಚುವರಿ ಆಯ್ಕೆಯಾಗಿ ಲಭ್ಯವಾಗುವುದರಿಂದ, ಜಿಲ್ಲಾಧಿಕಾರಿಗಳು ಯಾವುದೇ ಯೋಜನಾ ಅನುಷ್ಠಾನ ಸಮಾಲೋಚಕರನ್ನು ಜಿಲ್ಲೆಗೆ ಸಂಪೂರ್ಣವಾಗಿ ಅಥವಾ ಸರ್ಕಾರದ ಅನುಮೋದನೆಯಂತೆ ಜಿಲ್ಲೆಯನ್ನು ಒಂದಕ್ಕಿಂತ ಹೆಚ್ಚುವರಿಯಾಗಿ ವಿಭಜನೆ ಮಾಡಿ ನೇಮಿಸತಕ್ಕದ್ದು. ಆದರೆ, ಒಂದೇ ನಗರ ಸ್ಥಳೀಯ ಸಂಸ್ಥೆಗೆ ಒಂದಕ್ಕಿಂತ ಹೆಚ್ಚು ಯೋಜನಾ ಅನುಷ್ಠಾನ ಸಮಾಲೋಚಕರನ್ನು ನೇಮಿಸುವಂತಿಲ್ಲ.

ಯೋಜನಾ ಅನುಷ್ಠಾನ ಸಮಾಲೋಚಕರ ಕರ್ತವ್ಯಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.

18.2. ಸರ್ಕಾರವು ಯೋಜನಾ ಅನುಷ್ಠಾನ ಸಮಾಲೋಚಕರ ವೆಚ್ಚವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುತ್ತದೆ ಮತ್ತು ಜಿಲ್ಲಾಧಿಕಾರಿಗಳು ಯೋಜನಾ ಅನುಷ್ಠಾನ ಸಮಾಲೋಚಕರು (ಪಿಎಂಸಿ) ಗಳ ವೆಚ್ಚವನ್ನು ಭರಿಸತಕ್ಕದ್ದು.

18.3. ಜಿಲ್ಲಾಧಿಕಾರಿಗಳು ಯೋಜನಾ ಅನುಷ್ಠಾನ ಸಮಾಲೋಚಕರುಗಳನ್ನು ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯ ಅನುಮೋದನೆ ಪಡೆದು ನೇಮಿಸಿಕೊಳ್ಳುವುದು. ಸಮಾಲೋಚಕರನ್ನು ಆರ್ಥಿಕ ಇಲಾಖೆಯ ಮಾರ್ಗಸೂಚಿಗಳಂತೆ ಗುಣಮಟ್ಟ ಮತ್ತು ಮೌಲ್ಯದ ಆಧಾರ (Quality & Cost Based Selection (QCBS)) ದ ಮೇಲೆ ಹಾಗೂ ಗುಣಮಟ್ಟ (Quality) ಕ್ಕೆ ಶೇಕಡ 75 ರಷ್ಟು ವೈಟೇಜ್ ಮತ್ತು ಮೌಲ್ಯ (Cost) ಕ್ಕೆ ಶೇಕಡ 25 ರಷ್ಟು ವೈಟೇಜ್ ನೀಡಿ ಆಯ್ಕೆ ಮಾಡಿಕೊಳ್ಳತಕ್ಕದ್ದು.

19. ನಗರೋತ್ಥಾನ ಕೋಶ:-

ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯನ್ನು ಅನುಷ್ಠಾನಗೊಳಿಸಲು ಸಿಎಂಎಸ್‌ಎಂಟಿಡಿಪಿ ಎರಡನೇ ಹಂತದ ಯೋಜನೆಯಲ್ಲಿರುವ ಪೌರಾಡಳಿತ ನಿರ್ದೇಶನಾಲಯದ ನಗರೋತ್ಥಾನ ಕೋಶವನ್ನು ಮೂರನೇ ಹಂತದ ಯೋಜನಾ ಅವಧಿಗೆ ಮುಂದುವರೆಸಿದೆ. ನಗರೋತ್ಥಾನ ಕೋಶಕ್ಕೆ ಹೆಚ್ಚುವರಿ ಸಿಬ್ಬಂದಿಗಳು ಅವಶ್ಯವಿದ್ದಲ್ಲಿ ರಾಜ್ಯ ಮಟ್ಟದ ಸಮಿತಿಯ ಅನುಮೋದನೆ ಪಡೆದು ನೇಮಿಸಿಕೊಳ್ಳತಕ್ಕದ್ದು. ನಗರೋತ್ಥಾನ ಕೋಶದ ವೆಚ್ಚವನ್ನು ಪೌರಾಡಳಿತ ನಿರ್ದೇಶಕರು ಭರಿಸತಕ್ಕದ್ದು.

20. ಅನುದಾನ, ಸಾಲದ ಬಿಡುಗಡೆ ಹಾಗೂ ಬಳಕೆ:-

ಅನುದಾನ ಮತ್ತು ಸಾಲದ ಮೊತ್ತವನ್ನು ಯಾವುದೇ ಜಿಲ್ಲೆಗೆ ಪ್ರತ್ಯೇಕವಾಗಿ ಬಿಡುಗಡೆ ಮಾಡದೆ, ಜಿಲ್ಲಾಧಿಕಾರಿಗಳ ಅವಶ್ಯಕತೆಗೆ ಅನುಗುಣವಾಗಿ ಡ್ರಾ ಮಾಡಲು ಅನುಕೂಲವಾಗುವ ರೀತಿಯಲ್ಲಿ ಪೌರಾಡಳಿತ ನಿರ್ದೇಶಕರು ಹಾಗೂ 30 ಜಿಲ್ಲಾಧಿಕಾರಿಗಳ ಹೆಸರಿನಲ್ಲಿ ಜಂಟಿ ಖಾತೆಗಳನ್ನು ತೆರೆದು ನಿರ್ವಹಿಸಲು ಅವಶ್ಯಕವಿರುವ ವಿಸ್ತೃತ ಮಾರ್ಗಸೂಚಿಗಳನ್ನು ಪೌರಾಡಳಿತ ನಿರ್ದೇಶನಾಲಯವು ಹೊರಡಿಸತಕ್ಕದ್ದು.

21. ಉತ್ತಮ ಸಾಧನೆಗೈದ ನಗರ ಸ್ಥಳೀಯ ಸಂಸ್ಥೆಗಳಿಗೆ ಪ್ರೋತ್ಸಾಹಸುಧಾರಣೆಗೆ ಮನ್ನಣೆ:

21.1. ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯಡಿ ನಗರ ಸ್ಥಳೀಯ ಸಂಸ್ಥೆಗೆ ನಿಗದಿಪಡಿಸಲಾದ ಹಂಚಿಕೆಯ ಶೇಕಡ 85 ರಷ್ಟು ಮೊತ್ತಕ್ಕೆ ಕ್ರಿಯಾಯೋಜನೆಯನ್ನು ತಯಾರಿಸುವುದು, ಉಳಿದ ಶೇಕಡ 15 ರಷ್ಟು ಹಂಚಿಕೆಯನ್ನು ನಗರ ಸ್ಥಳೀಯ ಸಂಸ್ಥೆಗಳು ಸಾಧಿಸಲಾಗುವ ಸುಧಾರಣೆಗಳನ್ನು ಆಧರಿಸಿ, ನಿಗದಿತ ಸಮಯದಲ್ಲಿ ಉತ್ತಮ ಸಾದನೆಗಳನ್ನು ಸಾಧಿಸಿದ ನಗರ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಮೊತ್ತವನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತದೆ. ನಿಗದಿತ ಸಮಯದಲ್ಲಿ ಸಾಧನೆ ಮಾಡದ ನಗರ ಸ್ಥಳೀಯ ಸಂಸ್ಥೆಗಳಿಗೆ ಶೇಕಡ 10 ರಷ್ಟು ಹಂಚಿಕೆಯನ್ನು ತಡೆಹಿಡಿಯಲಾಗುವುದು.

21.2.ನಗರ ಸ್ಥಳೀಯ ಸಂಸ್ಥೆಗಳು ಈ ಕೆಳಕಂಡ ಸಾಧನೆಗಳನ್ನು ಕೈಗೊಳ್ಳಬೇಕಾಗಿರುತ್ತದೆ.

i) ಮನೆ ಮನೆಗಳಿಂದ ಕಸ ಸಂಗ್ರಹಣೆ.
ii) ಮೂಲದಲ್ಲಿ ಕಸವನ್ನು ಬೇರ್ಪಡಿಸಲು ಕ್ರಮವಹಿಸುವುದು.
iii) ಬಯಲು ಬಹಿರ್ದೆಸೆ ಮುಕ್ತ ವ್ಯವಸ್ಥೆ ಸಾಧಿಸುವುದು.
iv) ನಗರ ಸ್ಥಳೀಯ ಸಂಸ್ಥೆಯನ್ನು ಗಣಕೀಕರಣಗೊಳಿಸುವುದು.
v) ಶೇಕಡ 100 ರಷ್ಟು ನೀರು ಸರಬರಾಜಿನ ಕರವನ್ನು ವಸೂಲಿ ಮಾಡುವುದು.
vi) ನಗರ ಸ್ಥಳೀಯ ಸಂಸ್ಥೆಗಳು ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಕಾಮಗಾರಿಗಳನ್ನು GIS ನಲ್ಲಿ ಅಳವಡಿಸುವುದು ಹಾಗೂ GIS ನಕ್ಷೆಗಳನ್ನು ನವೀಕರಿಸುವುದು.
vii) ಅನಧಿಕೃತ ಕಟ್ಟಡ ಮತ್ತು ಬಡಾವಣೆಗಳನ್ನು ನಿಯಂತ್ರಿಸುವುದು.

ಸುಧಾರಣೆಯಲ್ಲಿನ ಸಾಧನೆಗಳ ಬಗ್ಗೆ ಅಂಕಿ ಅಂಶಗಳನ್ನು DMA ರವರು ತಯಾರಿಸಿ, ಸರ್ಕಾರದ ಅನುಮೋದನೆಯನ್ನು ಪಡೆದು, ಈ ಸುಧಾರಣೆಗೆ ನಿಗದಿಯಾದ ಮೊತ್ತವನ್ನು ವಿನಿಯೋಗಿಸತಕ್ಕದ್ದು.

22. ಅನುಷ್ಠಾನದ ವೇಳಾಪಟ್ಟಿ :-

2016-17ನೇ ಸಾಲಿನಲ್ಲಿ ಪೂರ್ವಸಿದ್ಧತಾ ಕಾರ್ಯಕ್ರಮವನ್ನು ಹಮ್ಮಿಕೊಂಡು 2017-18 ರಿಂದ 2018-2019 ರವರೆಗೆ ಈ ಕೆಳಕಂಡಂತೆ ಅನುಷ್ಠಾನಗೊಳಿಸತಕ್ಕದ್ದು. :-

1. ಡಿ.ಪಿ.ಆರ್ ಸಮಾಲೋಚಕರು ಹಾಗೂ ಜಿಲ್ಲಾ ಅನುಷ್ಠಾನ ಸಮಾಲೋಚಕರ ನೇಮಕಾತಿ- ಅಕ್ಟೋಬರ್-2016.
2. ಅಂದಾಜು ಪತ್ರಿಕೆಗಳ ತಯಾರಿಕೆ/ ತಾಂತ್ರಿಕ ಅನುಮೋದನೆ- ಜನವರಿ-2017.
3. ಟೆಂಡರ್ ಪ್ರಕ್ರಿಯೆ- ಫೆಬ್ರವರಿ-2017.
4. ಶೇ.5 ರಷ್ಟು ಆರ್ಥಿಕ ಪ್ರಗತಿ- ಮಾರ್ಚ್-2017.
5. ಶೇ.75 ರಷ್ಟು ಆರ್ಥಿಕ ಪ್ರಗತಿ- ಮಾರ್ಚ್-2018.
6. ಶೇ.100 ರಷ್ಟು ಆರ್ಥಿಕ ಪ್ರಗತಿ- ಮಾರ್ಚ್-2019.

ಈ ಆದೇಶವನ್ನು ಸಚಿವ ಸಂಪುಟದ ವಿಷಯ ಸಂಖ್ಯೆ: ಸಿ/467/2016, ದಿನಾಂಕ:28-09-2016ರ ಅನುಮೋದನೆಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
[signature] 1/11/16
(ಕೆ. ಎಸ್. ಭಾಗ್ಯಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಯೋಮೇಕೋ).

ಇವರಿಗೆ:

1) ಮಹಾಲೇಖಪಾಲಕರು (ಲೆಕ್ಕ ಮತ್ತು ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಧಾನ ಸೌಧ, ಬೆಂಗಳೂರು.
6) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
7) ಮಾನ್ಯ ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
8) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಬೆಂಗಳೂರು.
9) ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
10) ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
11) ಎಲ್ಲಾ ವಿಭಾಗೀಯ ಆಯುಕ್ತರು.
12) ವ್ಯವಸ್ಥಾಪಕ ನಿರ್ದೇಶಕರು, ಕೆಯುಐಡಿಎಫ್‌ಸಿ, ಬೆಂಗಳೂರು
13) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
14) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
15) ಮಾನ್ಯ ಪೌರಾಡಳಿತ ಸಚಿವರ ಆಪ್ತ ಕಾರ್ಯದರ್ಶಿಗಳು.
16) ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರುಗಳ ಆಪ್ತ ಕಾರ್ಯದರ್ಶಿಗಳು.
17) ಸರ್ಕಾರದ ಉಪ ಕಾರ್ಯದರ್ಶಿಗಳು, ಸಚಿವ ಸಂಪುಟ ಶಾಖೆ, ವಿಧಾನ ಸೌಧ, ಬೆಂಗಳೂರು.

18) ಸರ್ಕಾರದ ಉಪ ಕಾರ್ಯದರ್ಶಿಗಳು 1, 2 & 3 ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.

19) ಜಂಟಿ ನಿರ್ದೇಶಕರು (ಯೋಜನೆ), ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.

20) ಸಂಬಂಧಿಸಿದ ಎಲ್ಲಾ ಅಧ್ಯಕ್ಷರುಗಳು, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿ-ಪೌರಾಡಳಿತ ನಿರ್ದೇಶನಾಲಯದ ಮುಖಾಂತರ

21) ಸಂಬಂಧಿಸಿದ ಎಲ್ಲಾ ಆಯುಕ್ತರು/ಮುಖ್ಯಾಧಿಕಾರಿಗಳು, ನಗರಸಭೆ / ಪುರಸಭೆ / ಪಟ್ಟಣ ಪಂಚಾಯತಿ-ಪೌರಾಡಳಿತ ನಿರ್ದೇಶನಾಲಯದ ಮುಖಾಂತರ

22) ಸರ್ಕಾರದ ಅಧೀನ ಕಾರ್ಯದರ್ಶಿ, (ವೆಚ್ಚ 3 & 9), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.

23) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

29/11/16

ಅನುಬಂಧ - 5

(193)

ಪೌರಾಡಳಿತ ನಿರ್ದೇಶನಾಲಯದ ನಡವಳಿಗಳು

ವಿಷಯ : ಬೀದರ್ ಜಿಲ್ಲೆಯ ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯ ನಗರ ಸ್ಥಳೀಯ ಸಂಸ್ಥೆಗಳ ಕ್ರಿಯಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ: 1) ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ ರವರ ಪತ್ರ ಸಂಖ್ಯೆ: ಎಂಯುಎನ್/ಕಾಮಗಾರಿ/ಸಿಆರ್-25/2016-17 ದಿನಾಂಕ: 24-04-2017.

2) ದಿನಾಂಕ: 22-04-2017ರಂದು ಮಾನ್ಯ ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಮಟ್ಟದ ನಗರೋತ್ಥಾನ ಜಿಲ್ಲಾ ಮಟ್ಟದ ಸಮಿತಿಯ ಸಭೆಯ ನಡವಳಿಗಳು

3) ದಿನಾಂಕ: 20-04-2017ರಂದು ಮಾನ್ಯ ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯ ರಾಜ್ಯ ಮಟ್ಟದ ಸಮಿತಿಯ ಸಭೆಯ ನಡವಳಿಗಳು

*****

ಪ್ರಸ್ತಾವನೆ :

ದಿನಾಂಕ: 22-04-2017ರಂದು ಮಾನ್ಯ ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ನಗರೋತ್ಥಾನ ಜಿಲ್ಲಾ ಮಟ್ಟದ ಸಮಿತಿ ಸಭೆಯು ಬೀದರ್ ಜಿಲ್ಲೆಯ ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯ ನಗರ ಸ್ಥಳೀಯ ಸಂಸ್ಥೆಗಳ ಕ್ರಿಯಯೋಜನೆಗೆ ಅನುಮೋದನೆ ನೀಡಲು ಶಿಫಾರಸ್ಸು ಮಾಡಿರುತ್ತದೆ. ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ ರವರು ದಿನಾಂಕ: 24-04-2017ರ ಪತ್ರದಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯ ಕ್ರಿಯಾಯೋಜನೆಗೆ ಅನುಮೋದನೆ ನೀಡಲು ಕೋರಿರುತ್ತಾರೆ. ವಿವರಗಳು ಕೆಳಕಂಡಂತಿವೆ.

ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯ ಅನುದಾನ :

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ನಗರ ಸ್ಥಳೀಯ ಸಂಸ್ಥೆಯ ಹೆಸರು	ಹಂಚಿಕೆಯ ಮೊತ್ತ	ಶೇಕಡ 85 ರಷ್ಟು ಮೊತ್ತ	ಪರಿಶಿಷ್ಟ ಜಾತಿ (SCP) ಗೆ ಕಾಯ್ದಿರಿಸಿದ ಮೊತ್ತ (ಶೇಕಡ 17.15 ರಷ್ಟು)	ಪರಿಶಿಷ್ಟ ಪಂಗಡ (TSP) ಗೆ ಕಾಯ್ದಿರಿಸಿದ ಮೊತ್ತ (ಶೇಕಡ 6.95 ರಷ್ಟು)	ಉಳಿದ ಮೊತ್ತ
1	ಬೀದರ್ ನಗರಸಭೆ	3500.00	2975.00	510.21	206.76	2258.03
2	ಬಸವಕಲ್ಯಾಣ ನಗರಸಭೆ	2500.00	2125.00	364.44	147.69	1612.87
3	ಹುಮ್ನಾಬಾದ್ ಪುರಸಭೆ	750.00	637.50	109.33	44.31	483.86
4	ಭಾಲ್ಕಿ ಪುರಸಭೆ	750.00	637.50	109.33	44.31	483.86
5	ಚಿಟಗುಪ್ಪ ಪುರಸಭೆ	750.00	637.50	109.33	44.31	483.86
6	ಔರಾದ್ ಪಟ್ಟಣ ಪಂಚಾಯಿತಿ	200.00	170.00	29.16	11.82	129.02
	ಒಟ್ಟು	8450.00	7182.50	1231.80	499.20	5451.50

4

ಬೀದರ್ ನಗರಸಭೆ ಮತ್ತು ಭಾಲ್ಕಿ ಪುರಸಭೆಯ ವಿಶೇಷ ಅನುದಾನ :

ಕ್ರಮ ಸಂಖ್ಯೆ	ನಗರ ಸ್ಥಳೀಯ ಸಂಸ್ಥೆಯ ಹೆಸರು	ಹಂಚಿಕೆಯ ಮೊತ್ತ	ಪರಿಶಿಷ್ಟ ಜಾತಿ (SCP) ಗೆ ಕಾಯ್ದಿರಿಸಿದ ಮೊತ್ತ (ಶೇಕಡ 17.15 ರಷ್ಟು)	ಪರಿಶಿಷ್ಟ ಪಂಗಡ (TSP) ಗೆ ಕಾಯ್ದಿರಿಸಿದ ಮೊತ್ತ (ಶೇಕಡ 6.95 ರಷ್ಟು)	ಉಳಿದ ಮೊತ್ತ
1	ಬೀದರ್ ನಗರಸಭೆ	2500.00	428.75	173.75	1897.50
2	ಭಾಲ್ಕಿ ಪುರಸಭೆ	2500.00	428.75	173.75	1897.50
	ಒಟ್ಟು	5000.00	857.50	347.50	3795.00

ಬೀದರ್ ಜಿಲ್ಲೆಯ ನಗರೊತ್ಥಾನ (ಮುನಿಸಿಪಾಲಿಟಿ)-3 ಯೋಜನೆ ಮತ್ತು ಬೀದರ್ ನಗರಸಭೆ ಮತ್ತು ಭಾಲ್ಕಿ ಪುರಸಭೆಯ ವಿಶೇಷ ಅನುದಾನದ ಪ್ರಸ್ತಾವನೆಗಳನ್ನು ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯ ರಾಜ್ಯ ಮಟ್ಟದ ಸಮಿತಿಯ ಅಧ್ಯಕ್ಷರಾದ ಮಾನ್ಯ ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರ ಅನುಮೋದನೆಗೆ ಕಡತದಲ್ಲಿ ಸಲ್ಲಿಸಲಾಗಿತ್ತು. ಮಾನ್ಯ ಸಚಿವರು ಸದರಿ ಕ್ರಿಯಾಯೋಜನೆಯನ್ನು ಕಡತದಲ್ಲಿ ದಿನಾಂಕ: 26-04-2017 ರಂದು ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಕ್ರಿಯಾಯೋಜನೆಯನ್ನು ದಿನಾಂಕ: 20-04-2017 ರಂದು ನಡೆದ ನಗರೊತ್ಥಾನ (ಮುನಿಸಿಪಾಲಿಟಿ)-3 ಯೋಜನೆಯ ರಾಜ್ಯ ಮಟ್ಟದ ಸಮಿತಿಯ ನಡವಳಿಗಳಂತೆ ಅನುಮೋದಿಸಿರುತ್ತಾರೆ. ಆದುದರಿಂದ ಕೆಳಕಂಡಂತೆ ಆದೇಶಿಸಿದೆ.

ಆದೇಶ ಸಂಖ್ಯೆ: ಪೌನಿ/ತಾಂತ್ರಿಕ/ನಗರೋತ್ಥಾನ/ಮುನಿಸಿಪಾಲಿಟಿ-3/ನಗರೋತ್ಥಾನ ಕೋಶ/ಸಿಆರ್-01/2017-18
ದಿನಾಂಕ: 03-05-2017

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯ ಬೀದರ್ ಜಿಲ್ಲೆಯ ನಗರೊತ್ಥಾನ (ಮುನಿಸಿಪಾಲಿಟಿ)-3 ಯೋಜನೆಯ ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳು ಮತ್ತು ಬೀದರ್ ನಗರಸಭೆ ಮತ್ತು ಭಾಲ್ಕಿ ಪುರಸಭೆಯ ವಿಶೇಷ ಅನುದಾನದ ಕ್ರಿಯಾಯೋಜನೆಯನ್ನು ಅನುಬಂಧ-01ರಲ್ಲಿ ತಿಳಿಸಿರುವ ಕಾಮಗಾರಿಗಳ ಕ್ರಿಯಾಯೋಜನೆಗೆ ಈ ಕೆಳಕಂಡ ಷರತ್ತುಗೊಳಪಟ್ಟು ಕೆಳಗಿನ ಕೋಷ್ಟಕದಂತೆ ಅನುಮೋದನೆ ನೀಡಿದೆ.

ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ನಗರೊತ್ಥಾನ (ಮುನಿಸಿಪಾಲಿಟಿ)-3 ರ ಕ್ರಿಯಾಯೋಜನೆ :

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ನಗರ ಸ್ಥಳೀಯ ಸಂಸ್ಥೆಯ ಹೆಸರು	ಹಂಚಿಕೆಯ ಮೊತ್ತ	ಪಿಎಂಸಿ ಮತ್ತು ನಗರೋತ್ಥಾನ ಕೋಶಕ್ಕೆ ಮೀಸಲಿರಿಸಿದ ಮೊತ್ತ	ಪರಿಶಿಷ್ಟ ಜಾತಿ (SCP) ಯ ಕ್ರಿಯಾಯೋಜನೆ (17.15%)		ಪರಿಶಿಷ್ಟ ಜಾತಿ (TSP) ಯ ಕ್ರಿಯಾಯೋಜನೆ ಮೊತ್ತ (6.95%)		ಉಳಿದ ಕ್ರಿಯಾಯೋಜನೆಯ ಮೊತ್ತ		ಅನುಮೋದಿತ ಒಟ್ಟು ಕ್ರಿಯಾಯೋಜನೆಯ ಮೊತ್ತ	
				ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
1	2	3	4	5	6	7	8	9	10	11=(5+7+9)	12=(6+8+10)
1	ಬೀದರ್ ನಗರಸಭೆ	3500.00	105.00	07	510.21	03	206.76	13	2258.03	23	2975.00
2	ಬಸವಕಲ್ಯಾಣ ನಗರಸಭೆ	2500.00	75.00	02	364.44	01	147.69	13	1612.87	16	2125.00
3	ಹುಮನಾಬಾದ ಪುರಸಭೆ (*)	750.00	22.50	01	154.00	--	--	10	483.50	11	637.50

4	ಚಿಟಗುಪ್ಪ ಪುರಸಭೆ	750.00	22.50	02	109.50	02	44.50	06	483.50	10	637.50
5	ಭಾಲ್ಕಿ ಪುರಸಭೆ	750.00	22.50	03	109.33	02	44.31	14	483.86	19	637.50
6	ಔರಾದ ಪಟ್ಟಣ ಪಂಚಾಯಿತಿ	200.00	6.00	01	29.16	01	11.81	05	129.03	07	170.00
	ಒಟ್ಟು	8450.00	253.50	16	1276.64	9	455.07	61	5450.79	86	7182.50

(*) ಹುಮ್ನಾಬಾದ್ ಪುರಸಭೆಯ ವ್ಯಾಪ್ತಿಯಲ್ಲಿ SCP ಮತ್ತು TSP ಯೋಜನೆಯಡಿ ವಾರ್ಡ್ ನಂ. 1 ಮತ್ತು 6ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ವಾಸಿಸುವ ಪ್ರದೇಶದ ಅನುಕೂಲಕ್ಕಾಗಿ 5 ಲಕ್ಷ ಲೀಟರ್ ಸಾಮರ್ಥ್ಯದ ಒಂದು OHT ಯನ್ನು ನಿರ್ಮಾಣ ಮಾಡಲು ಅನುಮೋದನೆ ನೀಡಲಾಗಿದೆ. ಈ ಕಾಮಗಾರಿಯನ್ನು SCP ಮತ್ತು TSP ಗಳ ಮೊತ್ತಕ್ಕೆ ವರ್ಗೀಕರಣ ಮಾಡಲು ಸಾಧ್ಯವಿಲ್ಲದಿರುವ ಪ್ರಯುಕ್ತ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಅನುಮೋದನೆ ನೀಡಲಾಗಿದೆ.

ಬೀದರ್ ನಗರಸಭೆ ಮತ್ತು ಭಾಲ್ಕಿ ಪುರಸಭೆಯ ವಿಶೇಷ ಅನುದಾನದ ಕ್ರಿಯಾಯೋಜನೆ :

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ನಗರ ಸ್ಥಳೀಯ ಸಂಸ್ಥೆಯ ಹೆಸರು	ಹಂಚಿಕೆಯ ಮೊತ್ತ	ಪಿಎಂಸಿ ಮತ್ತು ನಗರೋತ್ಥಾನ ಕೋಶಕ್ಕೆ ಮೀಸಲಿರಿಸಿದ ಮೊತ್ತ	ಪರಿಶಿಷ್ಟ ಜಾತಿ (SCP) ಯ ಕ್ರಿಯಾಯೋಜನೆ (17.15%)		ಪರಿಶಿಷ್ಟ ಜಾತಿ (TSP) ಯ ಕ್ರಿಯಾಯೋಜನೆ ಮೊತ್ತ (6.95%)		ಉಳಿದ ಕ್ರಿಯಾಯೋಜನೆಯ ಮೊತ್ತ		ಅನುಮೋದಿತ ಒಟ್ಟು ಕ್ರಿಯಾಯೋಜನೆಯ ಮೊತ್ತ	
				ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
1	2	3	4	5	6	7	8	9	10	11=(5+7+9)	12=(6+8+10)
1	ಬೀದರ್ ನಗರಸಭೆ	2500.00	75.00	05	428.75	03	173.75	23	1822.50	31	2425.00
2	ಭಾಲ್ಕಿ ಪುರಸಭೆ	2500.00	75.00	09	428.75	02	173.75	42	1822.50	53	2425.00
	ಒಟ್ಟು	5000.00	150.00	14	857.50	5	347.50	65	3645.00	84	4850.00

ಷರತ್ತುಗಳು :

1) ಕ್ರಿಯಾಯೋಜನೆಯ ಕಾಮಗಾರಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 88 ನಮನ 2015 ದಿನಾಂಕ: 29-11-2016ರ ಆದೇಶದಲ್ಲಿ ಹೊರಡಿಸಿರುವ ಮಾರ್ಗಸೂಚಿಗಳಂತೆ ಅನುಷ್ಠಾನಗೊಳಿಸತಕ್ಕದ್ದು.
2) ಜಿಲ್ಲಾಧಿಕಾರಿಗಳು ಬೀದರ್ ಜಿಲ್ಲೆಯ ಟೆಂಡರ್ ಕರೆಯುವ ಮುನ್ನ ಅಮೃತ್ ಯೋಜನೆಯ ಕಾಮಗಾರಿಗೆ ನೀಡಬೇಕಾಗಿರುವ ನಗರಸಭೆಯ ಬಾಕಿ ವಂತಿಕೆ ಮೊತ್ತವಾದ ರೂ. 13.27 ಕೋಟಿಗಳನ್ನು 2018-19 ಮತ್ತು 2019-20ನೇ ಸಾಲಿನ ಎಸ್.ಎಫ್.ಸಿ, 14ನೇ ಹಣಕಾಸು ಮತ್ತು ಇತರೆ ಯೋಜನೆಗಳ ಅನುದಾನದಿಂದ ಭರಿಸುವ ಬಗ್ಗೆ ಬೀದರ್ ನಗರಸಭೆಯ ಸಾಮಾನ್ಯ ಸಭೆಯ ಠರಾವನ್ನು ಪಡೆದುಕೊಳ್ಳತಕ್ಕದ್ದು.
3) ಜಿಲ್ಲಾಧಿಕಾರಿಗಳು ಅನುಮೋದಿತ ಕ್ರಿಯಾಯೋಜನೆಯಂತೆ ಯೋಜನಾ ಸಮಾಲೋಚಕರಿಂದ ವಿಸ್ತೃತ ಯೋಜನಾ ವರದಿಗಳನ್ನು ತಯಾರಿಸಿ ಸಕ್ಷಮ ಪ್ರಾಧಿಕಾರಗಳಿಂದ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ಪಡೆಯತಕ್ಕದ್ದು.

4) ಯೋಜನೆಯ ಮಾರ್ಗಸೂಚಿಗಳಂತೆ ನಗರ ಸ್ಥಳೀಯ ಸಂಸ್ಥೆವಾರು ಕಾಮಗಾರಿಗಳನ್ನು ಒಟ್ಟುಗೂಡಿಸಿ ಪ್ಯಾಕೇಜ್ ಟೆಂಡರ ಕರೆಯತಕ್ಕದ್ದು.

5) ಜಿಲ್ಲಾಧಿಕಾರಿಗಳು ನಗರ ಸ್ಥಳೀಯ ಸಂಸ್ಥೆವಾರು ಪ್ಯಾಕೇಜ್ ಮಾಡಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ರಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಕರೆಯತಕ್ಕದ್ದು.

6) ಜಿಲ್ಲಾಧಿಕಾರಿಗಳು ಟೆಂಡರ್‌ಗಳಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 184 ಎಂಎನ್‌ಇ 2015 ದಿನಾಂಕ: 11-11-2016 ರಲ್ಲಿ ಅಧಿಕಾರ ಪ್ರತ್ಯಾಯೋಜಿಸಿರುವ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯತಕ್ಕದ್ದು.

7) ಜಿಲ್ಲಾಧಿಕಾರಿಗಳು ಕಾಮಗಾರಿಗಳ ಗುಣಮಟ್ಟ ಮತ್ತು ಪರಿಮಾಣಗಳನ್ನು ಯೋಜನಾ ಸಮಾಲೋಚಕರ ಮುಖಾಂತರ ಖಚಿತಪಡಿಸಿಕೊಂಡು ಗುತ್ತಿಗೆದಾರರಿಗೆ ಹಣ ಪಾವತಿಸತಕ್ಕದ್ದು.

8) ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಾಗ ಕಾಮಗಾರಿಗಳಿಗೆ ತಗಲಬಹುದಾದ ಮೊತ್ತವು ಹೆಚ್ಚುವರಿಯಾಗಿದ್ದಲ್ಲಿ ಸದರಿ ವೆಚ್ಚಗಳನ್ನು ಆಯಾ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಸಂಪನ್ಮೂಲಗಳಿಂದ ಭರಿಸತಕ್ಕದ್ದು.

ಬೀದರ್ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಕ್ರಿಯಾಯೋಜನೆಗಳ ಅನುಮೋದನೆಯನ್ನು ನಗರೋತ್ಥಾನ (ಮುನಿಸಿಪಾಲಿಟಿ)-3 ರ ಯೋಜನೆಯ ರಾಜ್ಯ ಮಟ್ಟದ ಸಮಿತಿಯ ಅಧ್ಯಕ್ಷರಾದ ಮಾನ್ಯ ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರ ಅನುಮೋದನೆಯಂತೆ ಹೊರಡಿಸಲಾಗಿದೆ.

03/05/17
ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ

ಪ್ರತಿಯನ್ನು :

1) ಮಹಾಲೇಖಪಾಲಕರು (ಲೆಕ್ಕ ಮತ್ತು ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
3) ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ, ಬೀದರ್
4) ಜಂಟಿ ನಿರ್ದೇಶಕರು (ಯೋಜನೆ), ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
5) ಉಪ ಕಾರ್ಯದರ್ಶಿಗಳು-2, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
6) ಮಾನ್ಯ ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರ ಆಪ್ತ ಕಾರ್ಯದರ್ಶಿಗಳು.
7) ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೀದರ್ ಜಿಲ್ಲೆ, ಬೀದರ್.
8) ಪೌರಾಯುಕ್ತರು, ನಗರಸಭೆ, ಬೀದರ್ ಮತ್ತು ಬಸವಕಲ್ಯಾಣ.
9) ಮುಖ್ಯಾಧಿಕಾರಿಗಳು, ಪುರಸಭೆ, ಹುಮ್ನಾಬಾದ್, ಬಾಲ್ಕಿ ಮತ್ತು ಚಿಟಗುಪ್ಪ.
10) ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ಔರಾದ್.
11) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಅನುಬಂಧ - 5

(254)

ಪೌರಾಡಳಿತ ನಿರ್ದೇಶನಾಲಯದ ನಡವಳಿಗಳು

ವಿಷಯ: ಬೀದರ್ ಜಿಲ್ಲೆಯ ಬೀದರ್ ನಗರಸಭೆಯ ವ್ಯಾಪ್ತಿಯಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ)-3ರ ಯೋಜನೆಯ ವಿಶೇಷ ಅನುದಾನದ ಬದಲಿ ಕಾಮಗಾರಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ: 1) ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ, ಬೀದರ್ ರವರ ಪತ್ರ ಸಂಖ್ಯೆ: ಎಂಯುಎಸ್/ಕಾಮಗಾರಿ/ಸಿಆರ್-25/2016-17, ದಿನಾಂಕ: 07-06-2017

2) ಪೌರಾಡಳಿತ ನಿರ್ದೇಶನಾಲಯದ ಆದೇಶ ಸಂಖ್ಯೆ: ಪೌನಿ/ತಾಂತ್ರಿಕ/ನಗರೋತ್ಥಾನ/ಮುನಿಸಿಪಾಲಿಟಿ-3/ನಗರೋತ್ಥಾನ ಕೋಶ/ಸಿಆರ್-01/2017-18 ದಿನಾಂಕ: 03-05-2017

*****

ಪ್ರಸ್ತಾವನೆ :

ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ, ಬೀದರ್ ರವರು ದಿನಾಂಕ: 07-06-2017ರ ಪತ್ರದಲ್ಲಿ ಬೀದರ್ ಜಿಲ್ಲೆಯ ಬೀದರ್ ನಗರಸಭೆಯ ವ್ಯಾಪ್ತಿಯಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ)-3ರ ಯೋಜನೆಯ ವಿಶೇಷ ಅನುದಾನದ ಬದಲಿ ಕಾಮಗಾರಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಲು ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಬೀದರ್ ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರು ಶಿಫಾರಸ್ಸು ಮಾಡಿರುತ್ತಾರೆ. ಪ್ರಸ್ತಾವನೆಯನ್ನು ಪೌರಾಡಳಿತ ನಿರ್ದೇಶನಾಲಯದಲ್ಲಿ ಪರಿಶೀಲಿಸಲಾಯಿತು. ಉಲ್ಲೇಖ (2) ದಿನಾಂಕ: 03-05-2017 ರ ಆದೇಶದಲ್ಲಿ ಬೀದರ್ ಜಿಲ್ಲೆಯ ಬೀದರ್ ನಗರಸಭೆಯ ವ್ಯಾಪ್ತಿಯಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ)-3ರ ಯೋಜನೆಯ ವಿಶೇಷ ಅನುದಾನದ ಕಾಮಗಾರಿಗಳ ಕ್ರಿಯಾಯೋಜನೆಗೆ ಪೌರಾಡಳಿತ ನಿರ್ದೇಶಕರು ಅನುಮೋದನೆ ನೀಡಿರುತ್ತಾರೆ. ವಿವರಗಳು ಕೆಳಕಂಡಂತಿವೆ.

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ನಗರ ಸ್ಥಳೀಯ ಸಂಸ್ಥೆಯ ಹೆಸರು	ಹಂಚಿಕೆಯ ಮೊತ್ತ	ಪರಿಶಿಷ್ಟ ಜಾತಿ (SCP) ಗೆ ಕಾಯ್ದಿರಿಸಿದ ಮೊತ್ತ (ಶೇಕಡ 17.15 ರಷ್ಟು)	ಪರಿಶಿಷ್ಟ ಪಂಗಡ (TSP) ಗೆ ಕಾಯ್ದಿರಿಸಿದ ಮೊತ್ತ (ಶೇಕಡ 6.95 ರಷ್ಟು)	ಉಳಿದ ಮೊತ್ತ
1	ಬೀದರ್ ನಗರಸಭೆ	2500.00	428.75	173.75	1897.50

ನಗರೊತ್ಥಾನ (ಮುನಿಸಿಪಾಲಿಟಿ)-3 ಯೋಜನೆಯ ರಾಜ್ಯ ಮಟ್ಟದ ಸಮಿತಿಯ ಅಧ್ಯಕ್ಷರಾದ ಮಾನ್ಯ ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ದಿನಾಂಕ: 23-05-2017 ಮತ್ತು 24-05-2017 ರಂದು ರಾಜ್ಯದ ಎಲ್ಲಾ ಯೋಜನಾ ನಿರ್ದೇಶಕರು ಮತ್ತು ಅಭಿಯಂತರರುಗಳೊಂದಿಗೆ ನಡೆದ ಪರಿಶೀಲನಾ ಸಭೆಯಲ್ಲಿ ಜಿಲ್ಲೆಗಳಿಂದ ಸಲ್ಲಿಕೆಯಾಗುವ ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯ ಕ್ರಿಯಾಯೋಜನೆಗಳು ಯೊಜನೆಯ ಮಾರ್ಗಸೂಚಿಗಳಂತೆ ಮತ್ತು ದಿನಾಂಕ: 20-04-2017 ರ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳಿಗೆ ಅನುಗುಣವಾಗಿ ಇದ್ದಲ್ಲಿ, ಅಂತಹ ಕ್ರಿಯಾಯೋಜನೆಗಳಿಗೆ ಅನುಮೋದನೆ ನೀಡಿ ತದನಂತರ ಪ್ರಸ್ತಾವನೆಯನ್ನು ಘಟನೋತ್ತರ ಮಂಜೂರಾತಿಗಾಗಿ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳ ಮುಖಾಂತರ ಸಲ್ಲಿಸುವಂತೆ ಸೂಚನೆಯನ್ನು ನೀಡಿರುತ್ತಾರೆ. ಆದುದರಿಂದ ಮಾನ್ಯ ಸಚಿವರ ಘಟನೋತ್ತರ ಮಂಜೂರಾತಿ ನಿರೀಕ್ಷಿಸಿ ಬೀದರ್ ನಗರಸಭೆಯ ನಗರೋತ್ಥಾನ (ಮುನಿಸಿಪಾಲಿಟಿ)-3ರ ಯೋಜನೆಯ ವಿಶೇಷ ಅನುದಾನದ ಬದಲಿ ಕಾಮಗಾರಿಗಳ ಕ್ರಿಯಾಯೋಜನೆಗೆ ಈ ಕೆಳಕಂಡಂತೆ ಅನುಮೋದನೆ ನೀಡಿ ಆದೇಶಿಸಿದೆ.

O/C

ಆದೇಶ ಸಂಖ್ಯೆ: 19787 DMA 13 TNAGT 2017-18 ದಿನಾಂಕ: 17-06-20[illegible]

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತ[illegible] ಅನುದಾನದ ಯೋಜನೆಯಲ್ಲಿ ಬೀದರ್ ಜಿಲ್ಲೆಯ ಬೀದರ್ ನಗರಸಭೆಯ ಬದಲಿ ಕಾಮಗಾರಿಗಳ ಕ್ರಿಯಾಯೋ[illegible] ಅನುಬಂಧ-01ರಲ್ಲಿ ತಿಳಿಸಿರುವ ಕಾಮಗಾರಿಗಳ ಕ್ರಿಯಾಯೋಜನೆಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು [illegible] ಕೋಷ್ಟಕದಂತೆ ಅನುಮೋದನೆ ನೀಡಿದೆ.

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ನಗರ ಸ್ಥಳೀಯ ಸಂಸ್ಥೆಯ ಹೆಸರು	ಹಂಚಿಕೆಯ ಮೊತ್ತ	ಪಿಎಂಸಿ ಮತ್ತು ನಗರೋತ್ಥಾನ ಕೋಶಕ್ಕೆ ಮೀಸಲಿರಿಸಿದ ಮೊತ್ತ	ಪರಿಶಿಷ್ಟ ಜಾತಿ (SCP) ಯ ಕ್ರಿಯಾಯೋಜನೆ (17.15%)		ಪರಿಶಿಷ್ಟ ಜಾತಿ (TSP) ಯ ಕ್ರಿಯಾಯೋಜನೆ ಮೊತ್ತ (6.95%)		ಉಳಿದ ಕ್ರಿಯಾಯೋಜನೆಯ ಮೊತ್ತ		ಅನುಮೋದಿತ ಕ್ರಿಯಾಯೋಜನೆಯ	
				ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
1	2	3	4	5	6	7	8	9	10	11=(5+7+9)	12=(4+6+8+10
1	ಬೀದರ್ ನಗರಸಭೆ	2500.00	75.00	05	428.75	03	173.75	23	1822.50	31	2500.00

ಷರತ್ತುಗಳು :

1) ಕ್ರಿಯಾಯೋಜನೆಯ ಕಾಮಗಾರಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 88 ಸಮಸ 2015 ದಿನಾಂಕ: 29-11-2016 ಮತ್ತು 22-04-2017ರ ಆದೇಶಗಳಲ್ಲಿ ಹೊರಡಿಸಿರುವ ಮಾರ್ಗಸೂಚಿಗಳಂತೆ ಅನುಷ್ಠಾನಗೊಳಿಸತಕ್ಕದ್ದು.

2) ಜಿಲ್ಲಾಧಿಕಾರಿಗಳು ಅನುಮೋದಿತ ಕ್ರಿಯಾಯೋಜನೆಯಂತೆ ಯೋಜನಾ ಸಮಾಲೋಚಕರಿಂದ ವಿಸ್ತೃತ ಯೋಜನಾ ವರದಿಗಳನ್ನು ತಯಾರಿಸಿ ಸಕ್ಷಮ ಪ್ರಾಧಿಕಾರಗಳಿಂದ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ಪಡೆಯತಕ್ಕದ್ದು.

3) ಯೋಜನೆಯ ಮಾರ್ಗಸೂಚಿಗಳಂತೆ ನಗರ ಸ್ಥಳೀಯ ಸಂಸ್ಥೆವಾರು ಕಾಮಗಾರಿಗಳನ್ನು ಒಟ್ಟುಗೂಡಿಸಿ ಪ್ಯಾಕೇಜ್ ಟೆಂಡರ್ ಕರೆಯತಕ್ಕದ್ದು.

4) ಜಿಲ್ಲಾಧಿಕಾರಿಗಳು ನಗರ ಸ್ಥಳೀಯ ಸಂಸ್ಥೆವಾರು ಪ್ಯಾಕೇಜ್ ಮಾಡಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ರಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಕರೆಯತಕ್ಕದ್ದು.

5) ಜಿಲ್ಲಾಧಿಕಾರಿಗಳು ಸರ್ಕಾರದ ಆದೇಶ ಸಂಖ್ಯೆ: ನಅಇ 184 ಎಂಎನ್‌ಇ 2015 (ಭಾಗ-1) ದಿನಾಂಕ: 30-11-2016 ರಲ್ಲಿ ಅಧಿಕಾರ ಪ್ರತ್ಯಾಯೋಜಿಸಿರುವಂತೆ ಯೋಜನೆಯ ಕರಡು ಟೆಂಡರ್ ದಸ್ತಾವೇಜು (ಡಿಟಿಎಸ್)ಗಳಿಗೆ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯತಕ್ಕದ್ದು.

6) ಜಿಲ್ಲಾಧಿಕಾರಿಗಳು ಸರ್ಕಾರದ ಆದೇಶ ಸಂಖ್ಯೆ ನಅಇ 184 ಎಂಎಸ್‌ಇ 2015 ದಿನಾಂಕ: 11-11-2016 ರಲ್ಲಿ ಅಧಿಕಾರ ಪ್ರತ್ಯಾಯೋಜಿಸಿರುವಂತೆ ಸಕ್ಷಮ ಪ್ರಾಧಿಕಾರಗಳಿಂದ ಯೋಜನೆಯ ಟೆಂಡರ್‌ಗಳಿಗೆ ಅನುಮೋದನೆ ಪಡೆಯತಕ್ಕದ್ದು.

252

7) ಜಿಲ್ಲಾಧಿಕಾರಿಗಳು ಕಾಮಗಾರಿಗಳ ಗುಣಮಟ್ಟ ಮತ್ತು ಪರಿಮಾಣಗಳನ್ನು ಯೋಜನಾ ಸಮಾಲೋಚಕರ ಮುಖಾಂತರ ಖಚಿತಪಡಿಸಿಕೊಂಡು ಗುತ್ತಿಗೆದಾರರಿಗೆ ಹಣ ಪಾವತಿಸತಕ್ಕದ್ದು.

8) ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಾಗ ಕಾಮಗಾರಿಗಳಿಗೆ ತಗಲಬಹುದಾದ ಮೊತ್ತವು ಹೆಚ್ಚುವರಿಯಾಗಿದ್ದಲ್ಲಿ ಸದರಿ ವೆಚ್ಚಗಳನ್ನು ಆಯಾ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಸಂಪನ್ಮೂಲಗಳಿಂದ ಭರಿಸತಕ್ಕದ್ದು.

ಬೀದರ್ ಜಿಲ್ಲೆಯ ಬೀದರ್ ನಗರಸಭೆಯ ನಗರೋತ್ಥಾನ ವಿಶೇಷ ಅನುದಾನದ ಯೋಜನೆಯಲ್ಲಿ ಬದಲಿ ಕಾಮಗಾರಿಗಳ ಕ್ರಿಯಾಯೋಜನೆಯ ಅನುಮೋದನೆಯನ್ನು ನಗರೋತ್ಥಾನ (ಮುನಿಸಿಪಾಲಿಟಿ)-3 ರ ಯೋಜನೆಯ ರಾಜ್ಯ ಮಟ್ಟದ ಸಮಿತಿಯ ಅಧ್ಯಕ್ಷರಾದ ಮಾನ್ಯ ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರ ಘಟನೋತ್ತರ ಮಂಜೂರಾತಿ ನಿರೀಕ್ಷಿಸಿ ಅನುಮೋದಿಸಲಾಗಿದೆ.

17/06/17
ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ

ಪ್ರತಿಯನ್ನು :

1) ಮಹಾಲೇಖಪಾಲಕರು (ಲೆಕ್ಕ ಮತ್ತು ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
3) ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ, ಬೀದರ್
4) ಜಂಟಿ ನಿರ್ದೇಶಕರು (ಯೋಜನೆ), ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
5) ಉಪ ಕಾರ್ಯದರ್ಶಿಗಳು-2, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
6) ಮಾನ್ಯ ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರ ಆಪ್ತ ಕಾರ್ಯದರ್ಶಿಗಳು.
7) ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೀದರ್ ಜಿಲ್ಲೆ, ಬೀದರ್
8) ಪೌರಾಯುಕ್ತರು, ನಗರಸಭೆ, ಬೀದರ್ ರವರಿಗೆ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೀದರ್ ಜಿಲ್ಲೆ, ಬೀದರ್ ರವರ ಮುಖಾಂತರ
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

19 JUN 2017
ದಿನಾಂಕ ರಂದು,
ಸಂ...535...ರಲ್ಲಿ ರವಾನಿಸಲಾಗಿದೆ,
ರವಾನೆ ಸಹಾಯಕರು

10

ಅನುಬಂಧ - 5

362

ಪೌರಾಡಳಿತ ನಿರ್ದೇಶನಾಲಯದ ನಡವಳಿಗಳು

ವಿಷಯ : ಬೀದರ್ ಜಿಲ್ಲೆಯ ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯ ಹಳ್ಳಿಖೇಡ ಪುರಸಭೆಯ ಕ್ರಿಯಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ: 1) ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೀದರ್ ಜಿಲ್ಲೆ ರವರ ಪತ್ರ ಸಂಖ್ಯೆ ಎಂಯುಎನ್/ಕಾಮುಗಾರಿ/ಸಿಆರ್-81/2017-18 ದಿನಾಂಕ: 23-03-2018.

2) ದಿನಾಂಕ: 28-02-2018ರಂದು ಮಾನ್ಯ ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಮಟ್ಟದ ನಗರೋತ್ಥಾನ ಜಿಲ್ಲಾ ಮಟ್ಟದ ಸಮಿತಿಯ ಸಭೆಯ ನಡವಳಿಗಳು

3) ದಿನಾಂಕ: 24-03-2018ರಂದು ಮಾನ್ಯ ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯ ರಾಜ್ಯ ಮಟ್ಟದ ಸಮಿತಿಯ ಸಭೆಯ ನಡವಳಿಗಳು

*****

ಪ್ರಸ್ತಾವನೆ :

ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೀದರ್ ಜಿಲ್ಲೆ ರವರು ದಿನಾಂಕ: 23-03-2018ರ ಪತ್ರದಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯ ಹಳ್ಳಿಖೇಡ ಪುರಸಭೆಯ ಕ್ರಿಯಯೋಜನೆಗೆ ಅನುಮೋದನೆ ನೀಡಲು ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪೌರಾಡಳಿತ ನಿರ್ದೇಶನಾಲಯದಲ್ಲಿ ಪರಿಶೀಲಿಸಲಾಗಿ, ದಿನಾಂಕ: 28-02-2018ರಂದು ಮಾನ್ಯ ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ನಗರೋತ್ಥಾನ ಜಿಲ್ಲಾ ಮಟ್ಟದ ಸಮಿತಿ ಸಭೆಯು ಬೀದರ್ ಜಿಲ್ಲೆಯ ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯ ಹಳ್ಳಿಖೇಡ ಪುರಸಭೆಯ ಕ್ರಿಯಯೋಜನೆಗೆ ಅನುಮೋದನೆ ನೀಡಲು ಶಿಫಾರಸ್ಸು ಮಾಡಿರುತ್ತದೆ. ವಿವರಗಳು ಕೆಳಕಂಡಂತಿವೆ.

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ನಗರ ಸ್ಥಳೀಯ ಸಂಸ್ಥೆಯ ಹೆಸರು	ಹಂಚಿಕೆಯ ಮೊತ್ತ	ಶೇಕಡ 85 ರಷ್ಟು ಮೊತ್ತ	ಪರಿಶಿಷ್ಟ ಜಾತಿ (SCP) ಗೆ ಕಾಯ್ದಿರಿಸಿದ ಮೊತ್ತ (ಶೇಕಡ 17.15 ರಷ್ಟು)	ಪರಿಶಿಷ್ಟ ಪಂಗಡ (TSP) ಗೆ ಕಾಯ್ದಿರಿಸಿದ ಮೊತ್ತ (ಶೇಕಡ 6.95 ರಷ್ಟು)	ಉಳಿದ ಮೊತ್ತ
1	ಹಳ್ಳಿಖೇಡ ಪುರಸಭೆ	1000.00	850.00	145.78	59.08	645.14

ಹಳ್ಳಿಖೇಡ ಪುರಸಭೆಯ ಕ್ರಿಯಾಯೋಜನೆಯ ಪ್ರಸ್ತಾವನೆಯನ್ನು ದಿನಾಂಕ: 24-03-2018ರಂದು ಮಾನ್ಯ ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯ ರಾಜ್ಯ ಮಟ್ಟದ ಸಮಿತಿ ಸಭೆಯ ಮುಂದೆ ಮಂಡಿಸಿದಾಗ ಸಮಿತಿಯು ಕೆಳಕಂಡಂತೆ ತೀರ್ಮಾನಿಸಿರುತ್ತದೆ.

ಸಮಿತಿಯು ವಿಸ್ತೃತ ಚರ್ಚೆಯ ನಂತರ, ಬೀದರ್ ಜಿಲ್ಲೆಯ ಹಳ್ಳಿಖೇಡ ಪುರಸಭೆಯ ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯ ಹಂಚಿಕೆ ಮೊತ್ತ ರೂ. 1000 ಲಕ್ಷಗಳಲ್ಲಿ ಶೇಕಡ 85 ರಷ್ಟು ಅಂದರೆ ರೂ. 850 ಲಕ್ಷಗಳ ಕಾಮಗಾರಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಿತು.

ಆದುದರಿಂದ ಕೆಳಕಂಡಂತೆ ಆದೇಶಿಸಿದೆ.

ಆದೇಶ ಸಂಖ್ಯೆ: 19787 DMA 13 TNAGT 2017-18 ದಿನಾಂಕ: 26-03-2018 ಪ್ರತಿಯನ್ನು :

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯಡಿ ಬೀದರ್ ಜಿಲ್ಲೆಯ ಹಳ್ಳಿಖೇಡ ಪುರಸಭೆಯ ಕ್ರಿಯಾಯೋಜನೆಯನ್ನು ಅನುಬಂಧ-01ರಲ್ಲಿ ತಿಳಿಸಿರುವ ಕಾಮಗಾರಿಗಳ ಕ್ರಿಯಾಯೋಜನೆಗೆ ಈ ಕೆಳಕಂಡ ಷರತ್ತುಗೊಳಪಟ್ಟು ಅನುಮೋದನೆ ನೀಡಿದೆ. 1) 2)

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ನಗರ ಸ್ಥಳೀಯ ಸಂಸ್ಥೆಯ ಹೆಸರು	ಹಂಚಿಕೆಯ ಮೊತ್ತ	ಪಿಎಂಸಿ ಮತ್ತು ನಗರೋತ್ಥಾನ ಕೋಶಕ್ಕೆ ಮೀಸಲಿರಿಸಿದ ಮೊತ್ತ	ಪರಿಶಿಷ್ಟ ಜಾತಿ (SCP) ಯ ಕ್ರಿಯಾಯೋಜನೆ (17.15%)		ಪರಿಶಿಷ್ಟ ಜಾತಿ (TSP) ಯ ಕ್ರಿಯಾಯೋಜನೆ ಮೊತ್ತ (6.95%)		ಉಳಿದ ಕ್ರಿಯಾಯೋಜನೆಯ ಮೊತ್ತ		ಅನುಮೋದಿತ ಒಟ್ಟು ಕ್ರಿಯಾಯೋಜನೆಯ ಮೊತ್ತ	
				ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
1	2	3	4	5	6	7	8	9	10	11=(5+7+9)	12=(6+8+10)
1	ಹಳ್ಳಿಖೇಡ ಪುರಸಭೆ	1000.00	30.00	04	145.78	1	59.08	19	645.14	24	850.00

ಷರತ್ತುಗಳು :

1) ಕ್ರಿಯಾಯೋಜನೆಯ ಕಾಮಗಾರಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 88 ಸಮಸ 2015 ದಿನಾಂಕ: 29-11-2016 ಮತ್ತು ಸರ್ಕಾರದ ಆದೇಶ ಸಂಖ್ಯೆ: ನಅಇ 127 ಸಮಸ 2017 ದಿನಾಂಕ: 22-04-2017 ಮತ್ತು 15-03-2018 ರ ಆದೇಶಗಳಲ್ಲಿ ಹೊರಡಿಸಿರುವ ಮಾರ್ಗಸೂಚಿಗಳಂತೆ ಅನುಷ್ಠಾನಗೊಳಿಸತಕ್ಕದ್ದು.
2) ಜಿಲ್ಲಾಧಿಕಾರಿಗಳು ಅನುಮೋದಿತ ಕ್ರಿಯಾಯೋಜನೆಯಂತೆ ಯೋಜನಾ ಸಮಾಲೋಚಕರಿಂದ ವಿಸ್ತೃತ ಯೋಜನಾ ವರದಿಗಳನ್ನು ತಯಾರಿಸಿ ಸಕ್ಷಮ ಪ್ರಾಧಿಕಾರಗಳಿಂದ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ಪಡೆಯತಕ್ಕದ್ದು.
3) ಯೋಜನೆಯ ಮಾರ್ಗಸೂಚಿಗಳಂತೆ ನಗರ ಸ್ಥಳೀಯ ಸಂಸ್ಥೆವಾರು ಕಾಮಗಾರಿಗಳನ್ನು ಒಟ್ಟುಗೂಡಿಸಿ ಪ್ಯಾಕೇಜ್ ಟೆಂಡರ್ ಕರೆಯತಕ್ಕದ್ದು.
4) ಜಿಲ್ಲಾಧಿಕಾರಿಗಳು ನಗರ ಸ್ಥಳೀಯ ಸಂಸ್ಥೆವಾರು ಪ್ಯಾಕೇಜ್ ಮಾಡಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ರಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಕರೆಯತಕ್ಕದ್ದು.
5) ಜಿಲ್ಲಾಧಿಕಾರಿಗಳು ಟೆಂಡರ್‌ಗಳಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 184 ಎಂಎನ್‌ಇ 2015 ದಿನಾಂಕ: 11-11-2016 ರಲ್ಲಿ ಅಧಿಕಾರ ಪ್ರತ್ಯಾಯೋಜಿಸಿರುವ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯತಕ್ಕದ್ದು.
6) ಜಿಲ್ಲಾಧಿಕಾರಿಗಳು ಕಾಮಗಾರಿಗಳ ಗುಣಮಟ್ಟ ಮತ್ತು ಪರಿಮಾಣಗಳನ್ನು ಯೋಜನಾ ಸಮಾಲೋಚಕರ ಮುಖಾಂತರ ಖಚಿತಪಡಿಸಿಕೊಂಡು ಗುತ್ತಿಗೆದಾರರಿಗೆ ಹಣ ಪಾವತಿಸತಕ್ಕದ್ದು.
7) ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಾಗ ಕಾಮಗಾರಿಗಳಿಗೆ ತಗಲಬಹುದಾದ ಮೊತ್ತವು ಹೆಚ್ಚುವರಿಯಾಗಿದ್ದಲ್ಲಿ ಸದರಿ ವೆಚ್ಚಗಳನ್ನು ಆಯಾ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಸಂಪನ್ಮೂಲಗಳಿಂದ ಭರಿಸತಕ್ಕದ್ದು.

26/03/18

ನಿರ್ದೇಶಕರು

ಪೌರಾಡಳಿತ ನಿರ್ದೇಶನಾಲಯ

ಪ್ರತಿಯನ್ನು :

1) ಮಹಾಲೇಖಪಾಲಕರು (ಲೆಕ್ಕ ಮತ್ತು ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
3) ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ, ಬೀದರ್
4) ಜಂಟಿ ನಿರ್ದೇಶಕರು (ಯೋಜನೆ), ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
5) ಉಪ ಕಾರ್ಯದರ್ಶಿಗಳು-2, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
6) ಮಾನ್ಯ ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರ ಆಪ್ತ ಕಾರ್ಯದರ್ಶಿಗಳು.
7) ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೀದರ್ ಜಿಲ್ಲೆ, ಬೀದರ್.
8) ಮುಖ್ಯಾಧಿಕಾರಿಗಳು, ಪುರಸಭೆ, ಹಳ್ಳಿಖೇಡ
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಅನುಬಂಧ-5.

(68)

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೀದರ ಜಿಲ್ಲೆಯ ಬೀದರ ನಗರಸಭೆ ವ್ಯಾಪ್ತಿಯಲ್ಲಿ ರೂ.10.00 ಕೋಟಿ ಮೊತ್ತದ-01 ಕಾಮಗಾರಿಗೆ ಮತ್ತು ಭಾಲ್ಕಿ ಪುರಸಭೆ ವ್ಯಾಪ್ತಿಯಲ್ಲಿ ರೂ.20.00 ಕೋಟಿ ಮೊತ್ತದ 10 ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: (1) ಸರ್ಕಾರದ ಆದೇಶ ಸಂಖ್ಯೆ ನಅಇ 88 ಸಮಸ 2015, ದಿನಾಂಕ:29.11.2016.

(2) ಜಿಲ್ಲಾಧಿಕಾರಿ, ಬೀದರ್ ಜಿಲ್ಲೆ ರವರ ಪತ್ರ ಸಂಖ್ಯೆ: ಎಂಯುಎಸ್/ ಕಾಮಗಾರಿ/ ಸಿಆರ್- / 2017-18, ದಿನಾಂಕ:26.01.2018.

(3) ಪೌರಾಡಳಿತ ನಿರ್ದೇಶನಾಲಯದ ಪತ್ರ ಸಂಖ್ಯೆ:23447 DMA 57 TMISC 2017-18, ದಿನಾಂಕ:01-02-2018.

****

ಪ್ರಸ್ತಾವನೆ

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಬೀದರ್ ಜಿಲ್ಲಾಧಿಕಾರಿಗಳ ಪತ್ರದಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯಡಿ ಉತ್ತಮ ಸಾಧನೆ ಮಾಡಿದ ನಗರ ಸ್ಥಳೀಯ ಸಂಸ್ಥೆಗಳಿಗೆ ಪ್ರೋತ್ಸಾಹಧನವನ್ನು ನೀಡಲು ದಿನಾಂಕ:29-11-2016 ರ ಆದೇಶದಲ್ಲಿ ಅವಕಾಶ ಕಲ್ಪಿಸಲಾದ ಶೇ.15 ರಷ್ಟು ಅನುದಾನದಲ್ಲಿ ಶೇ.4ರಷ್ಟು ಮೊತ್ತವನ್ನು ತೀವ್ರ ಮೂಲಭೂತ ಸೌಕರ್ಯ ಕೊರತೆ ಎದುರಿಸುತ್ತಿರುವ ನಗರ ಸ್ಥಳೀಯ ಸಂಸ್ಥೆಗಳ ಮೂಲಭೂತಸೌಕರ್ಯ ಅಭಿವೃದ್ಧಿಗಾಗಿ ಉಪಯೋಗಿಸಲು ಮಾನ್ಯ ಪೌರಾಡಳಿತ ಸಚಿವರಿಗೆ ಅಧಿಕಾರ ನೀಡಲಾಗಿರುತ್ತದೆ. ಅದರಂತೆ ಬೀದರ ಜಿಲ್ಲಾಧಿಕಾರಿಗಳು ದಿನಾಂಕ:26-01-2018 ರ ಪತ್ರದಲ್ಲಿ ಬೀದರ ಜಿಲ್ಲೆಯ ಈ ಕೆಳಕಂಡ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

(ರೂ. ಲಕ್ಷಗಳಲ್ಲಿ)

ಕ್ರ ಸಂ	ನಗರ ಸ್ಥಳೀಯ ಸಂಸ್ಥೆಯ ಹೆಸರು	ಪ್ರಸ್ತಾಪಿಸಿರುವ ಕಾಮಗಾರಿಯ ಸಂಖ್ಯೆ	ಪ್ರಸ್ತಾಪಿತ ಕಾಮಗಾರಿಗಳ ಮೊತ್ತ
1	ನಗರಸಭೆ ಬೀದರ	01	1000.00
2	ಪುರಸಭೆ ಭಾಲ್ಕಿ	10	2000.00
3	ಹಳ್ಳಿಖೇಡ ಪುರಸಭೆ	10	500.00
4	ಬಸವಕಲ್ಯಾಣ ನಗರಸಭೆ	1	500.00
ಒಟ್ಟು		22	4000.00

ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ಪತ್ರದಲ್ಲಿ ದಿನಾಂಕ:31-01-2018 ರಂದು ಮಾನ್ಯ ಪೌರಾಡಳಿತ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯ ರಾಜ್ಯ ಮಟ್ಟದ ಸಮಿತಿಯ ತೀರ್ಮಾನದಂತೆ ಬೀದರ ಜಿಲ್ಲೆಯ ಬೀದರ ನಗರಸಭೆ ವ್ಯಾಪ್ತಿಯಲ್ಲಿ ರೂ.10.00 ಕೋಟಿ ಮೊತ್ತದ 01 ಕಾಮಗಾರಿಗೆ ಮತ್ತು ಭಾಲ್ಕಿ ಪುರಸಭೆ ವ್ಯಾಪ್ತಿಯಲ್ಲಿ ರೂ.20.00 ಕೋಟಿ ಮೊತ್ತದ 10 ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ತೀರ್ಮಾನ ತೆಗೆದುಕೊಳ್ಳಲು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯರವರು ಕೋರಿರುತ್ತಾರೆ.

—2

ಪೌರಾಡಳಿತ ನಿರ್ದೇಶನಾಲಯದ ಪ್ರಸ್ತಾವನೆಯನ್ನು ಕೂಲಂಕುಶವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ: ನಅಇ 119 ಸಮುಸ 2018,
ಬೆಂಗಳೂರು, ದಿನಾಂಕ:02-02-2018.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯಡಿ ಶೇ.4 ರ ಪ್ರೋತ್ಸಾಹ ಧನದ ಅನುದಾನದಲ್ಲಿ ಬೀದರ ಜಿಲ್ಲೆಯ ಬೀದರ ನಗರಸಭೆ ವ್ಯಾಪ್ತಿಯಲ್ಲಿ ರೂ.10.00 ಕೋಟಿ ಮೊತ್ತದ 01 ಕಾಮಗಾರಿಗೆ ಮತ್ತು ಭಾಲ್ಕಿ ಪುರಸಭೆ ವ್ಯಾಪ್ತಿಯಲ್ಲಿ ರೂ.20.00 ಕೋಟಿ ಮೊತ್ತದ 10 ಕಾಮಗಾರಿಗಳ ಕ್ರಿಯಾ ಯೋಜನೆಗೆ ಈ ಕೆಳಕಂಡಂತೆ ಅನುಮೋದನೆ ನೀಡಿ ಆದೇಶಿಸಿದೆ.

A. ಬೀದರ ನಗರಸಭೆ ವ್ಯಾಪ್ತಿಯಲ್ಲಿನ ಕಾಮಗಾರಿಗಳ ವಿವರ:

(ರೂ.ಲಕ್ಷಗಳಲ್ಲಿ)

ಕ್ರ ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ
1	ಬೀದರ ನಗರದಲ್ಲಿ ನೌಬಾದ ಬಸವೇಶ್ವರ ಸರ್ಕಲ್‌ದಿಂದ ಶಹಾಪುರಗೇಟವರೆಗೆ ರಸ್ತೆ ಅಭಿವೃದ್ಧಿ, ಚರಂಡಿ ನಿರ್ಮಾಣ ಹಾಗೂ ಪಾದಾಚಾರಿ ರಸ್ತೆ ನಿರ್ಮಾಣ ಮಾಡುವುದು.	1000.00
	ಒಟ್ಟು	1000.00

B. ಭಾಲ್ಕಿ ಪುರಸಭೆ ವ್ಯಾಪ್ತಿಯಲ್ಲಿನ ಕಾಮಗಾರಿಗಳ ವಿವರ:

(ರೂ.ಲಕ್ಷಗಳಲ್ಲಿ)

ಕ್ರ ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ
1	ಭಾಲ್ಕಿ ಪಟ್ಟಣದಲ್ಲಿ ಗಾಂಧಿ ವೃತ್ತದಿಂದ ಶಿವಾಜಿ ವೃತ್ತದವರೆಗೆ ರಸ್ತೆ ಅಭಿವೃದ್ಧಿಪಡಿಸುವುದು.	390.00
2	ಭಾಲ್ಕಿ ಪಟ್ಟಣದಲ್ಲಿ ವಿವೇಕಾನಂದ ವೃತ್ತದಿಂದ ಮರೂರ ಕ್ರಾಸ್ ವರೆಗೆ (ವಾಯಾ ಬಸ್ ನಿಲ್ದಾಣ) ಚರಂಡಿ, ಫುಟ್‌ಪಾತ್ ಸೆಂಟರ್ ಮೆಡಿಯನ್ ಮತ್ತು ವಿದ್ಯುತ್ ಕಂಬಗಳ ಜೊತೆ ಎಲ್‌ಇಡಿ ಬೀದಿ ದೀಪಗಳನ್ನು ಅಳವಡಿಸುವುದು.	500.00
3	ಭಾಲ್ಕಿ ಪಟ್ಟಣದಲ್ಲಿ ವಿವೇಕಾನಂದ ವೃತ್ತದಿಂದ ಮರೂರ ಕ್ರಾಸ್ ವರೆಗೆ (ವಾಯಾ ಬಸ್ ನಿಲ್ದಾಣ) ರಸ್ತೆ ಅಭಿವೃದ್ಧಿ ಕಾಮಗಾರಿ	190.00
4	ಭಾಲ್ಕಿ ಪುರಸಭೆಯ ಘನತ್ಯಾಜ್ಯ ವಸ್ತು ವಿಲೇವಾರಿ ಜಾಗಕ್ಕೆ ಖಂಡ್ರೆ ತಾಂಡಾದಿಂದ ನೆಲಭರ್ತಿ ಜಾಗದ ವರೆಗೆ ರಸ್ತೆ ಅಭಿವೃದ್ಧಿಪಡಿಸುವುದು.	90.00
5	ಭಾಲ್ಕಿ ಪಟ್ಟಣದ ಫುಲೆ ಚೌಕದಿಂದ ರಾಜೀವ ಗಾಂಧಿ ಚೌಕವರೆಗೆ (ವಾಯಾ ಅಂಚೆ ಕಚೇರಿ) ರಸ್ತೆ ಅಭಿವೃದ್ಧಿ ಪಡಿಸುವುದು	200.00
6	ಭಾಲ್ಕಿ ಪಟ್ಟಣದ ಸುಭಾಷ ಚೌಕದಿಂದ ರೈಲ್ವೆ ಸ್ಟೇಷನ್ ವರೆಗೆ ರಸ್ತೆ ಅಭಿವೃದ್ಧಿಪಡಿಸುವುದು	140.00
7	ಭಾಲ್ಕಿ ಪಟ್ಟಣದ ಬೊಮಗೊಂಡೇಶ್ವರ ವೃತ್ತದಿಂದ ವಾಯಾ ಹಿರೇಮಠ, ಚೌಡಿ, ಗಡಿವರೆಗೆ ರಸ್ತೆ ಅಭಿವೃದ್ಧಿಪಡಿಸುವುದು.	135.00
8	ಭಾಲ್ಕಿ ಪಟ್ಟಣದ ಕೆ.ಜಿ.ಎನ್. ಕಾಲೋನಿ ಮತ್ತು ಕಲ್ಯಾಣಿ ಕಾಲೋನಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ ಮಾಡುವುದು.	100.00
9	ಭಾಲ್ಕಿ ಪಟ್ಟಣದ ಭಾಲ್ಕಿ-ಉದಗೀರ್ ರಸ್ತೆಯಿಂದ ಸಿದ್ಧಾರ್ಥ ಕಾಲೋನಿವರೆಗೆ (ವಾಯಾ ಕಲ್ಯಾಣಿ ಕಾಲೋನಿ) ರಸ್ತೆ ಅಭಿವೃದ್ಧಿಪಡಿಸುವುದು	130.00
10	ಭಾಲ್ಕಿ ಪಟ್ಟಣದ ಬೊಮಗೊಂಡೇಶ್ವರ ವೃತ್ತದಿಂದ ಲೆಕ್ಚರ್ ಕಾಲೋನಿಯ ತಳವಾಡ ಕ್ರಾಸ್ ವರೆಗೆ (ವಾಯಾ ಮೌನೇಶ್ವರ ದೇವಸ್ಥಾನ) ರಸ್ತೆ ಅಭಿವೃದ್ಧಿಪಡಿಸುವುದು.	125.00
	ಒಟ್ಟು	2000.00

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಆದೇಶದಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯಡಿ ವಿಧಿಸಿರುವ ನಿಬಂಧನೆಗಳು ಹಾಗೂ ಮಾರ್ಗಸೂಚಿಗಳನ್ವಯ ಈ ಆದೇಶದಲ್ಲಿ ಅನುಮೋದನೆ ನೀಡಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು.

(66)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಲತಾಬಾಯಿ.ಕೆ
(ಲತಾಬಾಯಿ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ(ಯೋಮೇಕೋ).
ನಗರಾಭಿವೃದ್ಧಿ ಇಲಾಖೆ

ಇವರಿಗೆ :-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
3. ಜಿಲ್ಲಾಧಿಕಾರಿಗಳು, ಬೀದರ ಜಿಲ್ಲೆ, ಬೀದರ.
4. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೀದರ ಜಿಲ್ಲೆ.
5. ಪೌರಾಯುಕ್ತರು, ನಗರಸಭೆ, ಬೀದರ, ಬೀದರ ಜಿಲ್ಲೆ.
6. ಮುಖ್ಯಾಧಿಕಾರಿಗಳು, ಪುರಸಭೆ, ಭಾಲ್ಕಿ, ಬೀದರ, ಬೀದರ ಜಿಲ್ಲೆ.
7. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.
8. ಮಾನ್ಯ ಪೌರಾಡಳಿತ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
9. ಬೀದರ ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಕಾರ್ಯದರ್ಶಿ, ಬೀದರ ಜಿಲ್ಲೆ.
10. ಉಪ ಕಾರ್ಯದರ್ಶಿಗಳು-2, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
11. ಶಾಖೆ/ಹೆಪ್ರ/ಇಲಾಖಾ ವೆಬ್ ಸೈಟ್/ಕಂಪೆಂಡಿಯಂ/ಪಿ.ಎಂ.ಸಿ.ಕೋಶ, ಪೌ.ನಿ.ರ ಕಚೇರಿ.

ಅನುಬಂಧ - 85.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೀದರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-3 ಯೋಜನೆಯಲ್ಲಿ ಶೇಕಡ 4 ರ ಪ್ರೋತ್ಸಾಹ ಧನದ ಅನುದಾನದಲ್ಲಿ ಕೈಗೊಳ್ಳಲಿರುವ ಕಾಮಗಾರಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: (1) ಸರ್ಕಾರದ ಆದೇಶ ಸಂಖ್ಯೆ ನಅಇ 88 ಸಮಸ 2015, ದಿನಾಂಕ:29.11.2016.

(2) ಸರ್ಕಾರದ ಆದೇಶ ಸಂಖ್ಯೆ:ನಅಇ 48 ಸಮಸ 2018, ದಿನಾಂಕ:23-01-2018 ಮತ್ತು 02-02-2018.

(3) ಪೌರಾಡಳಿತ ನಿರ್ದೇಶನಾಲಯದ ಪತ್ರ ಸಂಖ್ಯೆ:23447 DMA 57 TMISC 2017-18, ದಿನಾಂಕ:21-02-2018.

(4) ದಿನಾಂಕ: 17-02-2018 ರಂದು ಮಾನ್ಯ ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯ ರಾಜ್ಯ ಮಟ್ಟದ ಸಮಿತಿಯ ಆರನೇ ಸಭೆಯ ನಡವಳಿಗಳು.

****

ಪ್ರಸ್ತಾವನೆ

ಮೇಲೆ ಓದಲಾದ (2) ರ ಆದೇಶದಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯಡಿ ಉತ್ತಮ ಸಾಧನೆ ಮಾಡಿದ ನಗರ ಸ್ಥಳೀಯ ಸಂಸ್ಥೆಗಳಿಗೆ ಪ್ರೋತ್ಸಾಹಧನವನ್ನು ನೀಡಲು ಮೇಲೆ ಓದಲಾದ (1) ರ ದಿನಾಂಕ:29-11-2016 ರ ಆದೇಶದಲ್ಲಿ ಅವಕಾಶ ಕಲ್ಪಿಸಲಾದ ಶೇ.15 ರಷ್ಟು ಅನುದಾನದಲ್ಲಿ ಶೇ.4ರಷ್ಟು ಮೊತ್ತವನ್ನು ತೀವ್ರ ಮೂಲಭೂತ ಸೌಕರ್ಯ ಕೊರತೆ ಎದುರಿಸುತ್ತಿರುವ ನಗರ ಸ್ಥಳೀಯ ಸಂಸ್ಥೆಗಳ ಮೂಲಭೂತಸೌಕರ್ಯ ಅಭಿವೃದ್ಧಿಗಾಗಿ ಉಪಯೋಗಿಸಲು ಮಾನ್ಯ ಪೌರಾಡಳಿತ ಸಚಿವರಿಗೆ ಅಧಿಕಾರ ನೀಡಲಾಗಿರುತ್ತದೆ. ಅದರಂತೆ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯರವರು ದಿನಾಂಕ:21-02-2018 ರ ಪತ್ರದಲ್ಲಿ ಬೀದರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ನಗರ ಸ್ಥಳೀಯ ಸಂಸ್ಥೆಯ ಹೆಸರು	ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ
1	ಬೀದರ್	ಬೀದರ್ ನಗರಸಭೆ	36	1000.00
2		ಭಾಲ್ಕಿ ಪುರಸಭೆ	46	1000.00
3		ಬಸವಕಲ್ಯಾಣ ನಗರಸಭೆ	01	500.00
4		ಹುಮನಾಬಾದ್ ಪುರಸಭೆ	10	500.00
		ಒಟ್ಟು	93	3000.00

ಮೇಲ್ಕಂಡ ಪ್ರಸ್ತಾವನೆಗೆ ದಿನಾಂಕ:17-02-2018 ರಂದು ಮಾನ್ಯ ಪೌರಾಡಳಿತ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಸಮಿತಿ ಸಭೆಯ ಮುಂದೆ ಮಂಡಿಸಿದಾಗ ಸಮಿತಿ ಕೆಳಕಂಡಂತೆ ತೀರ್ಮಾನಿಸಿರುತ್ತದೆ.

ಸಮಿತಿಯು ವಿಸ್ತೃತ ಚರ್ಚೆಯ ನಂತರ, ತೀವ್ರ ಮೂಲಭೂತ ಸೌಕರ್ಯದ ಕೊರತೆ ಎದುರಿಸುತ್ತಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಶೇಕಡ 4ರ ಪ್ರೋತ್ಸಾಹ ಧನದ ಅನುದಾನದಲ್ಲಿ ಗದಗ ಜಿಲ್ಲೆಗೆ ರೂ. 800 ಲಕ್ಷಗಳನ್ನು, ಕಲಬುರಗಿ ಜಿಲ್ಲೆಗೆ ರೂ. 900 ಲಕ್ಷಗಳನ್ನು, ಯಾದಗಿರಿ ಜಿಲ್ಲೆಗೆ ರೂ. 300 ಲಕ್ಷಗಳನ್ನು, ಬೀದರ್ ಜಿಲ್ಲೆಗೆ ರೂ. 3000 ಲಕ್ಷಗಳನ್ನು ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ರೂ. 200 ಲಕ್ಷಗಳನ್ನು ಒಟ್ಟಾರೆ ರೂ. 5200 ಲಕ್ಷಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಿತು. ಮುಂದುವರೆದಂತೆ ತೀವ್ರ ಮೂಲಭೂತ ಸೌಕರ್ಯದ ಕೊರತೆ ಎದುರಿಸುತ್ತಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಶೇಕಡ 4ರ ಪ್ರೋತ್ಸಾಹ ಧನದ ಅನುದಾನದ ಕಾಮಗಾರಿಗಳನ್ನು ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯ ಮಾರ್ಗಸೂಚಿಗಳಂತೆ ಅನುಷ್ಠಾನಗೊಳಿಸಲು ಸಮಿತಿ ಸಭೆಯು ನಿರ್ಣಯಿಸಿರುತ್ತದೆ.

15

ಈ ಅಂಶಗಳ ಹಿನ್ನೆಲೆಯಲ್ಲಿ ದಿನಾಂಕ:17-02-2018ರ ಸಮಿತಿ ಸಭೆಯಲ್ಲಿ ತೀರ್ಮಾನಿಸಿ ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯಲ್ಲಿ ತೀವ್ರ ಮೂಲಭೂತ ಸೌಕರ್ಯದ ಕೊರತೆ ಎದುರಿಸುತ್ತಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಶೇಕಡ 4ರ ಪ್ರೋತ್ಸಾಹ ಧನದ ಅನುದಾನದಲ್ಲಿ ರೂ.5200.00 ಲಕ್ಷಗಳ ಕ್ರಿಯಾಯೋಜನೆಯಲ್ಲಿ ಬೀದರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ ರೂ.3000.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವಂತೆ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯರವರು ಸರ್ಕಾರವನ್ನು ಕೋರಿರುತ್ತಾರೆ.

ಪೌರಾಡಳಿತ ನಿರ್ದೇಶನಾಲಯದ ಪ್ರಸ್ತಾವನೆಯನ್ನು ಕೂಲಂಕುಶವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ: ನಅಇ 227 ಸಮಸ 2018,
ಬೆಂಗಳೂರು, ದಿನಾಂಕ:22-02-2018.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯಡಿ ತೀವ್ರ ಮೂಲಭೂತ ಸೌಕರ್ಯದ ಕೊರತೆ ಎದುರಿಸುತ್ತಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಶೇಕಡ 4ರ ಪ್ರೋತ್ಸಾಹ ಧನದ ಅನುದಾನದಲ್ಲಿ ಬೀದರ ಜಿಲ್ಲೆಯ ಬೀದರ್ ನಗರಸಭೆ, ಬಸವಕಲ್ಯಾಣ ನಗರಸಭೆ, ಭಾಲ್ಕಿ ಪುರಸಭೆ ಹಾಗೂ ಹುಮನಾಬಾದ್ ಪುರಸಭೆಗಳಿಗೆ ರೂ.3000.00 ಲಕ್ಷಗಳ ಕಾಮಗಾರಿಗಳ ಕ್ರಿಯಾಯೋಜನೆಗೆ ಅನುಬಂಧ-1 ರಲ್ಲಿ ತಿಳಿಸಿರುವಂತೆ ಅನುಮೋದನೆ ನೀಡಿ ಆದೇಶಿಸಿದೆ.

ಮೇಲೆ ಓದಲಾದ (1) ರ ಆದೇಶದಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯಡಿ ವಿಧಿಸಿರುವ ನಿಬಂಧನೆಗಳು ಹಾಗೂ ಮಾರ್ಗಸೂಚಿಗಳನ್ವಯ ಈ ಆದೇಶದಲ್ಲಿ ಅನುಮೋದನೆ ನೀಡಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಲಲಿತಾಬಾಯಿ. ಕೆ
(ಲಲಿತಾಬಾಯಿ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ(ಯೋಮೇಕೋ).
ನಗರಾಭಿವೃದ್ಧಿ ಇಲಾಖೆ

ಇವರಿಗೆ :-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
3. ಜಿಲ್ಲಾಧಿಕಾರಿಗಳು, ಬೀದರ ಜಿಲ್ಲೆ, ಬೀದರ.
4. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೀದರ ಜಿಲ್ಲೆ.
5. ಪೌರಾಯುಕ್ತರು, ನಗರಸಭೆ, ಬೀದರ/ ಬಸವಕಲ್ಯಾಣ .
6. ಮುಖ್ಯಾಧಿಕಾರಿಗಳು, ಪುರಸಭೆ, ಭಾಲ್ಕಿ/ ಹುಮನಾಬಾದ್.
7. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.
8. ಮಾನ್ಯ ಪೌರಾಡಳಿತ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
9. ಬೀದರ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಕಾರ್ಯದರ್ಶಿ.
10. ಉಪ ಕಾರ್ಯದರ್ಶಿಗಳು-2, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
11. ಶಾಖಾ/ಹೆಪ್ರ/ಇಲಾಖಾ ವೆಬ್ ಸೈಟ್/ಕಂಪೆಂಡಿಯಂ/ಪಿ.ಎಂ.ಸಿ.ಕೋಶ, ಪೌ.ನಿ.ರ ಕಛೇರಿ.

ಸರ್ಕಾರದ ಆದೇಶ ಸಂಖ್ಯೆ:ನಅಇ 227 ಸಮಸ 2018 ದಿನಾಂಕ:22-02-2018 ಕ್ಕೆ

ಅನುಬಂಧ-01

ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯ ಶೇಕಡ 4% ರಷ್ಟು ಪ್ರೋತ್ಸಾಹ ಧನದ ಅನುದಾನದಡಿ ಬೀದರ್ ಜಿಲ್ಲೆಯ ವಿವಿಧ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕೈಗೊಳ್ಳಲು ಅನುಮೋದಿಸಿರುವ ಕಾಮಗಾರಿಗಳ ವಿವರ:

ಬೀದರ ನಗರಸಭೆ

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)
1	Construction of CC Road & RCC Drain at various places in Ward No. 01	20.00
2	Construction of CC Road & RCC Drain at Gowli Wada, Ansari Galli, & Darzi Galli in Ward No. 02	20.00
3	Construction of CC Road & RCC Drain at Mustaid Pura in Ward No. 03	20.00
4	Construction of CC Road & RCC Drain Kulsoom Galli, Raja Bagh & Hara Taziya at Pansal Taleem in Ward No. 04	20.00
5	Construction of CC Road & RCC Drain at Pansal Taleem, Brahmanwadi & Komti Galli in Ward No. 05	20.00
6	Construction of CC Road & RCC Drain at Noor Khan Taleem, Quadriya Ground & Parkota in Ward No. 06	20.00
7	Construction of CC Road & RCC Drain at Ahmed Bagh & Gole Khana in Ward No. 07	20.00
8	Construction of CC Road & RCC Drain at Maniyar Taleem, Dhobi Galli in Ward No. 08	20.00
9	Construction of CC Road & RCC Drain at Talghat in Ward No. 09	20.00
10	Construction of CC Road & RCC Drain at Bheem Nagar & Ram Mandir area in Ward No. 10	20.00
11	Construction of CC Road & RCC Drain at Shamshiya Colony, Multani Colony & Rohelle Galli in Ward No. 11	20.00
12	Construction of CC Road & RCC Drain at Multani Colony in Ward No. 12	20.00
13	Construction of CC Road & RCC Drain at Labour Colony, Yousuf Pura, & Afzal pura in Ward No. 13	20.00
14	Construction of CC Road & RCC Drain at Labour Colony, Devraj Urs Colony, SC Galli in Ward No. 14	20.00
15	Construction of CC Road & RCC Drain at Navadgeri in Ward No. 15	20.00
16	Construction of CC Road & RCC Drain at KHB Colony & Jail Colony in Ward No. 16	25.00
17	Construction of CC Road & RCC Drain near MI Office Pratap Nagar, KHB Colony at Naubad & Shiv Nagar North in Ward No. 17	25.00
ಆ)	ಜಿಲ್ಲೆಯಲ್ಲಿ ಮರಳು ತೆಗೆಯಲು ಎಷ್ಟು ನಿಕ್ಷೇಪವನ್ನು ಗುರುತಿಸಲಾಗಿದೆ, ಯಾವ ಮಾನದಂಡದ ಆಧಾರದಲ್ಲಿ ಸ್ಥಳವನ್ನು ಗುರುತಿಸಲಾಗಿದೆ;	ಕೊಡಗು ಜಿಲ್ಲಾ ವ್ಯಾಪ್ತಿಯ ಕಾವೇರಿ, ಹೇಮಾವತಿ ಮತ್ತು ಲಕ್ಷ್ಮಣತೀರ್ಥ ನದಿ ಪಾತ್ರಗಳಲ್ಲಿ ಒಟ್ಟು 17 ಮರಳು ನಿಕ್ಷೇಪಗಳಿರುವ ಬ್ಲಾಕ್‌ಗಳನ್ನು ಗುರುತಿಸಿ ಸಾರ್ವಜನಿಕ ಟೆಂಡರ್ ಕಂ ಇ-ಹರಾಜು ಮೂಲಕ ಗುತ್ತಿಗೆ ಮಂಜೂರು ಮಾಡಲಾಗಿರುತ್ತದೆ. ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಾವಳಿ, 2016 ಹಾಗೂ ಸುಸ್ಥಿರ ಮರಳು ಗಣಿಗಾರಿಕೆ ಮಾರ್ಗಸೂಚಿ-2016 ರಂತೆ ನದಿ ಪಾತ್ರಗಳಲ್ಲಿ ಮರಳು ಗಣಿಗಾರಿಕೆಗಾಗಿ ಮರಳು ನಿಕ್ಷೇಪಗಳನ್ನು ಗುರುತಿಸಲಾಗುವುದು. ಮೇಲ್ಕಂಡ ನಿಯಮ ಹಾಗೂ ಮಾರ್ಗಸೂಚಿ ಗಳನ್ವಯ ನದಿ ಪಾತ್ರಗಳಲ್ಲಿ ಮರಳು ನಿಕ್ಷೇಪಗಳನ್ನು ಈ ಕೆಳಕಂಡ ಪ್ರಮುಖ ಮಾನದಂಡಗಳ ಆಧಾರದ ಮೇಲೆ ಗುರುತಿಸಲಾಗುವುದು. 1. ನದಿ ಪಾತ್ರಗಳಲ್ಲಿ ಮರಳು ಲಭ್ಯತೆಯ ಆಧಾರದ ಮೇಲೆ ಮರಳು ನಿಕ್ಷೇಪಗಳನ್ನು ಗುರುತಿಸಲಾಗುವುದು. 2. ಕುಡಿಯುವ ನೀರಿನ ಸರಬರಾಜು ಮೂಲದಿಂದ 500 ಮೀ. ಪರಿವ್ಯಾಪ್ತಿಯ ಅಂತರ ಕಾಯ್ದುಕೊಂಡು ಮರಳು ನಿಕ್ಷೇಪಗಳನ್ನು ಗುರುತಿಸಲಾಗುವುದು.

		• ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆಯಿಂದ ನದಿಗೆ ವಿರುದ್ಧವಾದ ದಿಕ್ಕಿಗೆ (Upstream) 250 ಮೀ. ಅಂತರ ಹಾಗೂ ಸೇತುವೆಯಿಂದ ನದಿ ಹರಿಯುವ ದಿಕ್ಕಿಗೆ (Downstream) 500 ಮೀ. ಅಂತವನ್ನು ಕಾಯ್ದುಕೊಂಡು ಮರಳು ಬ್ಲಾಕ್‌ಗಳನ್ನು ಗುರುತಿಸಲಾಗುವುದು.
ಇ)	ಜನಸಾಮಾನ್ಯರಿಗೆ ಮರಳು ಹಂಚಿಕೆ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು;	ರಾಜ್ಯದಲ್ಲಿ ಬೇಡಿಕೆಗೆ ತಕ್ಕಂತೆ ಮರಳನ್ನು ಪೂರೈಕೆ ಮಾಡಲು ಸರ್ಕಾರವು, ದಿನಾಂಕ 12.08.2016 ರಂದು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ, 1994 ಕ್ಕೆ ತಿದ್ದುಪಡಿ ತಂದು, ತಿದ್ದುಪಡಿ ನಿಯಮಾವಳಿ, 2016ನ್ನು ಜಾರಿಗೊಳಿಸಿರುತ್ತದೆ. ತಿದ್ದುಪಡಿ ನಿಯಮಾವಳಿಯ ಪ್ರಮುಖ ಅಂಶಗಳು ಈ ಕೆಳಕಂಡಂತಿರುತ್ತವೆ. • ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಾವಳಿ, 2016 ರ ನಿಯಮ 31-T ರಂತೆ, ಮರಳು ಬ್ಲಾಕ್‌ಗಳನ್ನು ಟೆಂಡರ್ ಕಂ ಹರಾಜು ಮೂಲಕ ವಿಲೇಪಡಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. • ತಿದ್ದುಪಡಿ ನಿಯಮ 31-S ರಂತೆ, ಸರ್ಕಾರಿ ಕಾಮಗಾರಿಗಳಿಗೆ ಮತ್ತು ಕಡಿಮೆ ವರಮಾನದ ಆಶ್ರಯ ಯೋಜನೆಗಳ ಮನೆಗಳ ನಿರ್ಮಾಣ ಕಾಮಗಾರಿಗಳಿಗೆ ಮರಳು ಬ್ಲಾಕ್‌ಗಳನ್ನು ಮೀಸಲಿರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. • ನಿಯಮ 31-ZA ರಂತೆ, ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ಅವಕಾಶ ಕಲ್ಪಿಸಲಾಗಿರುತ್ತದೆ. • ನಿಯಮ 31-ZB ರಂತೆ ಕರಾವಳಿ ನಿಯಂತ್ರಣ ವಲಯದಲ್ಲಿ MoEF ಮಾರ್ಗಸೂಚಿಯನ್ವಯ ಮರಳು ದಿಬ್ಬಗಳಿಂದ ಮರಳು ತೆಗೆಯಲು ಅವಕಾಶ ಕಲ್ಪಿಸಲಾಗಿರುತ್ತದೆ. • ನಿಯಮ 31-ZC ರಂತೆ, ಎಂ–ಸ್ಯಾಂಡ್ ಘಟಕ ಹೊಂದಿರುವವರಿಗೆ ಘಟಕದ 10 ಕಿ.ಮೀ ಪರಿವ್ಯಾಪ್ತಿಯಲ್ಲಿ ಹರಾಜು ರಹಿತವಾಗಿ ಕಲ್ಲು ಗಣಿ ಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಮುಂದುವರೆದು, ಎಂ–ಸ್ಯಾಂಡ್ ತಯಾರಿಸುವ ಉದ್ದೇಶಕ್ಕೆ ಹೊಂದಿರುವ ಕಟ್ಟಡ ಕಲ್ಲು ಗಣಿ ಗುತ್ತಿಗೆಗಳ ಅವಧಿಯನ್ನು ಮೂಲ ಗುತ್ತಿಗೆಯು ಮಂಜೂರಾದ ದಿನಾಂಕದಿಂದ 20 ವರ್ಷಗಳವರೆಗೆ ಅವಧಿ ವಿಸ್ತರಿಸಲು ಅವಕಾಶ ಕಲ್ಪಿಸಲಾಗಿದೆ. • ಮುಂದುವರೆದು, ದಿನಾಂಕ 16.11.2017 ರಂದು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ, 1994ಕ್ಕೆ ಮೊತ್ತೊಮ್ಮೆ ತಿದ್ದುಪಡಿ ತಂದಿರುತ್ತದೆ. ತಿದ್ದುಪಡಿ ನಿಯಮ 31-ZF & 31-ZG ರಲ್ಲಿ ವಿದೇಶದಿಂದ ಮರಳನ್ನು ಆಮದು ಮಾಡಿಕೊಂಡು ಸಾರ್ವಜನಿಕರಿಗೆ ವಿತರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

--3

ದಿನಾಂಕ 01.10.2019ರ ಸರ್ಕಾರದ ಆದೇಶ ಸಂಖ್ಯೆ: ಸಿಐ 213 ಎಂಎಂಎನ್ 2019 ರಂತೆ ಪ್ರವಾಹದಿಂದ ನದಿ ಪಾತ್ರದ ಪಕ್ಕದ ಕೃಷಿ ಜಮೀನುಗಳಲ್ಲಿ ಸಂಗ್ರಹವಾಗಿರುವ ಮರಳನ್ನು ತೆರವುಗೊಳಿಸಿ, ವಿಲೇಪಡಿಸಲು ಕೃಷಿ ಜಮೀನಿನ ಮಾಲೀಕರಿಗೆ ಅನುಮತಿ ನೀಡಲು ಅವಕಾಶ ಕಲ್ಪಿಸಲಾಗಿದೆ.

ಈ) ಜಿಲ್ಲೆಯಲ್ಲಿ ಎಷ್ಟು ಸ್ಥಳಗಳಲ್ಲಿ ಕಲ್ಲು ಕೋರೆಗಳವೆ; (ಪೂರ್ಣ ವಿವರ ನೀಡುವುದು)

ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ 23 ಕಟ್ಟಡ ಕಲ್ಲು ಹಾಗೂ 04 ಅಲಂಕಾರಿಕ ಶಿಲೆಯ ಕಲ್ಲು ಗಣಿ ಗುತ್ತಿಗೆಗಳು ಸೇರಿದಂತೆ ಒಟ್ಟು 27 ಕಟ್ಟಡ ಕಲ್ಲು ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತವೆ.

ಕೊಡಗು ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ಕಲ್ಲುಗಣಿ ಗುತ್ತಿಗೆಗಳ ವಿವರ

ತಾಲ್ಲೂಕು ಸೋಮವಾರ ಪೇಟೆ		ಖನಿಜ ಕಟ್ಟಡ ಕಲ್ಲು		
ಕ್ರ. ಸಂ.	ಅರ್ಜಿದಾರರ ಹೆಸರು, ವಿಳಾಸ ಮತ್ತು ಕಲ್ಲು ಗಣಿ ಗುತ್ತಿಗೆ ಸಂಖ್ಯೆ	ಗುತ್ತಿಗೆ ಮಂಜೂರಾದ ದಿನಾಂಕ/ ಅವಧಿ	ಗ್ರಾಮ & ಸರ್ವೆ ನಂ. & ವಿಸ್ತೀರ್ಣ (ಎಕರೆಗಳಲ್ಲಿ)	ಜಮೀನಿನ ವಿಧ ಸರ್ಕಾರಿ/ ಪಟ್ಟಾ
1	ಶ್ರೀ ಶ್ರೀಧರ್ ಕೆ. ವೈ ಸಿದ್ದಾಲಿಂಗಪುರ ಗ್ರಾಮ, ಸೋಮವಾರಪೇಟೆ ತಾಲ್ಲೂಕು ಕೆ.ಗಾ.ಗು.ಸಂ.13	05.03.2016 10 ವರ್ಷ	ಸಿದ್ದಲಿಂಗಪುರ 1/1 1–00	ಸರ್ಕಾರಿ
2	ಶ್ರೀ ಹೆಚ್.ಟಿ ರವಿ, ಯಲಕನೂರು ಗ್ರಾಮ, ಸೋಮವಾರಪೇಟೆ ಕೆ.ಗಾ.ಗು.ಸಂ.14	14.03.2016 10 ವರ್ಷ	ಯಲಕನೂರು 36/8 1–00	ಸರ್ಕಾರಿ
3	ಶ್ರೀ ಟಿ.ಆರ್ ವಿಜಯನ್, ಹೊಸಳ್ಳಿ ಗ್ರಾಮ, ಸೋಮವಾರ ಪೇಟೆ ತಾಲ್ಲೂಕು ಕೆ.ಗಾ.ಗು.ಸಂ.15	16.03.2016 10 ವರ್ಷ	ಹೊಸಳ್ಳಿ 27/1 1–00	ಸರ್ಕಾರಿ
4	ಶ್ರೀಮತಿ ಗಿಡ್ಡಮ್ಮ W/O ಪಿ.ಕರಿಯಪ್ಪ, ಸಿದ್ದಲಿಂಗಪುರ ಸ್ಟೋನ್ ಕ್ರಷರ್ ಬಿಟ್ಟಂಗಾಲ, ಕೋಣನೂರು ಹೋಬಳಿ, ಅರಕಲಗೋಡು ತಾ. ಹಾಸನ ಕೆ.ಗಾ.ಗು.ಸಂ.16	16.03.2016 20 ವರ್ಷ	ಸಿದ್ದಲಿಂಗಪುರ 1/1 2–00	ಸರ್ಕಾರಿ
5	ಶ್ರೀ ವಿ.ವಿ ಶೈಲಾ ಅಡಿನಾಡೂರು ಗ್ರಾಮ ಅಬ್ಬೂರು ಕಟ್ಟೆ ಅಂ. ಸೋಮವಾರಪೇಟೆ ತಾಲ್ಲೂಕು ಕೆ.ಗಾ.ಗು.ಸಂ.337	11.05.2016 w.e.f 10.09.2006 20 ವರ್ಷ	ಯಲಕನೂರು 36/8 1–20	ಸರ್ಕಾರಿ

	ಜಗದೀಶ್, ಕಾವೇರಿ ಬಡಾವಣೆ, ಕುಶಾಲನಗರ ಹೋಬಳಿ, ಸೋಮವಾರಪೇಟೆ ಕ.ಗಾ.ಗು.ಸಂ.18	11.05.2016 20 ವರ್ಷ	ಯಲಕನೂರು 36/8 2-00	ಸರ್ಕಾರಿ
7	ಶ್ರೀ ವಿ.ಎಂ ವಿಜಯ್ ಅಡಿನಾಡೂರು ಗ್ರಾಮ ಅಬ್ಬೂರು ಕಟ್ಟೆ ಅಂಚೆ ಸೋಮವಾರಪೇಟೆ ತಾ ಕ.ಗಾ.ಗು.ಸಂ.19	11.05.2016 20 ವರ್ಷ	ಯಲಕನೂರು 36/8 2-20	ಸರ್ಕಾರಿ
8	ಶ್ರೀ ವಿ.ಎಂ ವಿಜಯ್ ಅಡಿನಾಡೂರು ಗ್ರಾಮ ಅಬ್ಬೂರು ಕಟ್ಟೆ ಅಂಚೆ ಸೋಮವಾರಪೇಟೆ ತಾ ಕ.ಗಾ.ಗು.ಸಂ.20	11.05.2016 20 ವರ್ಷ	ಯಲಕನೂರು 36/3 1-00	ಸರ್ಕಾರಿ
9	ಶ್ರೀ ವಿ.ಎಂ ವಿಜಯ್ ಅಡಿನಾಡೂರು ಗ್ರಾಮ ಅಬ್ಬೂರು ಕಟ್ಟೆ ಅಂಚೆ ಸೋಮವಾರಪೇಟೆ ತಾಲ್ಲೂಕು, ಕ.ಗಾ.ಗು.ಸಂ.21	11.0520162 0 ವರ್ಷ	ಹೊಸಳ್ಳಿ 27/11-00	ಸರ್ಕಾರಿ
ಕ್ರ ಸಂ.	ಅರ್ಜಿದಾರರ ಹೆಸರು, ವಿಳಾಸ ಮತ್ತು ಕಲ್ಲು ಗಣಿ ಗುತ್ತಿಗೆ ಸಂಖ್ಯೆ	ಗುತ್ತಿಗೆ ಮಂಜೂರಾದ ದಿನಾಂಕ/ ಅವಧಿ	ಗ್ರಾಮ & ಸರ್ವೆ ನಂ. & ವಿಸ್ತೀರ್ಣ (ಎಕರೆಗಳಲ್ಲಿ)	ಜಮೀನಿನ ವಿಧ ಸರ್ಕಾರಿ/ ಪಟ್ಟಾ
10	ಶ್ರೀ ಸಿ.ಎನ್ ಸತೀಶ್ ಯಲಕನೂರು ಗ್ರಾಮ ಅಬ್ಬೂರು ಕಟ್ಟೆ ಅಂಚೆ ಸೋಮವಾರಪೇಟೆ ತಾ ಕ.ಗಾ.ಗು.ಸಂ.365	11.05.2016 10 ವರ್ಷ	ಯಲಕನೂರು 36/8 1-20	ಸರ್ಕಾರಿ
11	ಶ್ರೀಮತಿ ಪದ್ಮಿನಿ ಮುತ್ತಣ್ಣ, ನಂ:4/391, ಆರ್.ಕೆ ಲೇಔಟ್, ಕುಶಾಲನಗರ ಹೋಬಳಿ, ಸೋಮವಾರಪೇಟೆ ತಾಲ್ಲೂಕು. ಕ.ಗಾ.ಗು.ಸಂ.484(1)	03.03.2013 15 ವರ್ಷ	ಯಲಕನೂರು 36/6 3-00	ಸರ್ಕಾರಿ
12	ಶ್ರೀ ಜೆ.ಎಂ ಸುರೇಶ್ ನೇರುಗಳಲೆ ಗ್ರಾಮ, ಅಬ್ಬೂರುಕಟ್ಟೆ, ಸೋಮವಾರಪೇಟೆ ತಾಲ್ಲೂಕು ಕ.ಗಾ.ಗು.ಸಂ.25	08.05.2017 20 ವರ್ಷ	ನೇರುಗಳಲೆ 48/1 1-12	ಸರ್ಕಾರಿ ಜಮೀನು
13	ಶ್ರೀ ಜಿ.ಎಸ್ ಪೂವಯ್ಯ ಬಿನ್ ಲೇಟ್ ಶಿವಯ್ಯ ಅರೆಯೂರ್ ಗ್ರಾಮ, ಅಬ್ಬೂರುಕಟ್ಟೆ ಅಂಚೆ, ಸೋಮವಾರಪೇಟೆ ಕ.ಗಾ.ಗು.ಸಂ.26	08.05.2017 20 ವರ್ಷ	ಅರೆಯೂರು 1/21 1-00	ಸರ್ಕಾರಿ ಜಮೀನು
14	ಶ್ರೀ ಐ.ಪಿ ರಮೇಶ್ ಬಿನ್ ಐ.ಕೆ ಪೂವಯ್ಯ ಯಲಕನೂರು ಗ್ರಾಮ,	08.05.2017 20 ವರ್ಷ	ಯಲಕನೂರು 36/8 1-00	ಸರ್ಕಾರಿ ಜಮೀನು

	ಸೋಮವಾರಪೇಟೆ ಕ.ಗಾ.ಗು.ಸಂ.27			
15	ಶ್ರೀ ಆರ್.ಎನ್ ಬೆಳ್ಳಿಯಪ್ಪ ಅರೆಯೂರು ಗ್ರಾಮ, ಅಬ್ಬೂರುಕಟ್ಟೆ ಅಂಚೆ, ಸೋಮವಾರಪೇಟೆ ಕ.ಗಾ.ಗು.ಸಂ.316	08.05.2016 w.e.f 31.01.2006 20 ವರ್ಷ	ನೇರುಗಳಲೆ 48/1 2–00	ಸರ್ಕಾರಿ ಜಮೀನು
16	ಶ್ರೀ ಹೆಚ್.ಎಂ ನತೀಶ್ ಬಿನ್ ಮಂದಣ್ಣ, ಚೌಡ್ಲು ಗ್ರಾಮ, ಬಿಳಿಕಿಕೊಪ್ಪ, ಸೋಮವಾರಪೇಟೆ ತಾಲ್ಲೂಕು ಕ.ಗಾ.ಗು.ಸಂ.516	08.05.2016 w.e.f 24.11.2008 20 ವರ್ಷ	ಚೌಡ್ಲು 44/7 1–00	ಸರ್ಕಾರಿ ಜಮೀನು
17	ಶ್ರೀ ಟಿ. ನಾಗರಾಜು ಬಿನ್ ತಮ್ಮೇಗೌಡ ಸುಂದರನಗರ ಗ್ರಾಮ, ಕೂಡು ಮಂಗಳೂರು, ಕುಶಾಲ ನಗರ ಹೋ. ಸೋಮವಾರಪೇಟೆ ಕ.ಗಾ.ಗು.ಸಂ.46	20.06.2019 20 ವರ್ಷ	ಗುಮ್ಮನಕೊಲ್ಲಿ 1/2 1–00	ಸರ್ಕಾರಿ ಜಮೀನು
18	ಶ್ರೀ ಎ.ಎಂ ಅಶ್ರಫ್ ಬಿನ್ ಕೆ.ಎಂ ಅಹಮ್ಮದ್, ಯಲಕನೂರು ಹೊಸಳ್ಳಿ ಗ್ರಾಮ, ಸೋಮವಾರ ಪೇಟೆ ತಾಲ್ಲೂಕು, ಕೊಡಗು ಜಿಲ್ಲೆ. ಕ.ಗಾ.ಗು.ಸಂ.47	26.06.2019 20 ವರ್ಷ	ಹೊಸಳ್ಳಿ 27/16 1–20	ಪಟ್ಟಾ ಜಮೀನು
19	ಶ್ರೀ ವಿ.ಎಂ ವಿಜಯ್ ಅಡಿನಾಡೂರು ಗ್ರಾಮ ಅಬ್ಬೂರು ಕಟ್ಟೆ ಅಂಚೆ, ಸೋಮವಾರಪೇಟೆ ತಾ ಕ.ಗಾ.ಗು.ಸಂ.9	25.03.2017 w.e.f 10.09.2006 20 ವರ್ಷ	ಯಲಕನೂರು 36/8 1–20	ಸರ್ಕಾರಿ ಜಮೀನು

ತಾಲ್ಲೂಕು ವಿರಾಜಪೇಟೆ		ಖನಿಜ ಕಟ್ಟಡ ಕಲ್ಲು		
ಕ್ರ. ಸಂ.	ಅರ್ಜಿದಾರರ ಹೆಸರು, ವಿಳಾಸ ಮತ್ತು ಕಲ್ಲು ಗಣಿ ಗುತ್ತಿಗೆ ಸಂಖ್ಯೆ	ಗುತ್ತಿಗೆ ಮಂಜೂರಾದ ದಿನಾಂಕ/ ಅವಧಿ	ಗ್ರಾಮ & ಸರ್ವೆ ನಂ. & ವಿಸ್ತೀರ್ಣ (ಎಕರೆಗಳಲ್ಲಿ)	ಜಮೀನಿನ ವಿಧ ಸರ್ಕಾರಿ/ ಪಟ್ಟಾ
20	ಶ್ರೀ ಕೆ.ಎಂ ಬೋಪಣ್ಣ ಕಳತ್ಮಾಡು ಗ್ರಾಮ, ವಿರಾಜಪೇಟೆ ತಾಲ್ಲೂಕು ಕ.ಗಾ.ಗು.ಸಂ.23	02.07.2016 10 ವರ್ಷ	ಕಳತ್ಮಾಡು 83/1 1–00	ಪಟ್ಟಾ ಜಮೀನು
21	ಶ್ರೀ ಕೆ.ಎಂ ಬೋಪಣ್ಣ ಕಳತ್ಮಾಡು ಗ್ರಾಮ, ವಿರಾಜಪೇಟೆ ತಾಲ್ಲೂಕು ಕ.ಗಾ.ಗು.ಸಂ.24	02.07.2016 10 ವರ್ಷ	ಕಳತ್ಮಾಡು 107/1 1–00	ಪಟ್ಟಾ ಜಮೀನು

	ಗೋಲ್ಡನ್ ರಾಕ್ಸ್, ಹೆಗ್ಗಳ ಗ್ರಾಮ, ವಿರಾಜಪೇಟೆ ತಾಲ್ಲೂಕು ಕ.ಗಾ.ಗು.ಸಂ.503	08.05.2016 w.e.f 16.06.2003 20 ವರ್ಷ	ಹೆಗ್ಗಳ 127/2ಪಿ1 2–00	ಪಟ್ಟಾ ಜಮೀನು

ತಾಲ್ಲೂಕು ಮಡಿಕೇರಿ ಖನಿಜ ಕಟ್ಟಡ ಕಲ್ಲು

23	ಶ್ರೀ ಗಣೇಶ್ ಭಟ್ ಬಿನ್ ಸತ್ಯನಾರಾಯಣ ಭಟ್ ಒಡಬಾಯಿ ಹೌಸ್, ಸುಳ್ಯ, ದ.ಕ ಕ.ಗಾ.ಗು.ಸಂ.28	29.07.2017 20 ವರ್ಷ	ಪಿ ಪೆರಾಜೆ 36/1 1–20	ಸರ್ಕಾರಿ ಜಮೀನು

ತಾಲ್ಲೂಕು ವಿರಾಜಪೇಟೆ ಅಲಂಕಾರಿಕ ಶಿಲೆ

1	ಎಸ್.ಕೆ.ರಾಜ್‌ಕುಮಾರ್, ರಿಲಾಯನ್ಸ್ ಸ್ಟೇಷನರಿ ಮಾರ್ಟ್, #55, ಕಮರಿಷಿಯಲ್ ಸ್ಟ್ರೀಟ್, ಬೆಂಗಳೂರು–01 ಕ.ಗ.ಗು ಸಂಖ್ಯೆ: 845	02.08.2010 10 ವರ್ಷ	ಅಂದಗೋವೆ 84/1 2–00	ಪಟ್ಟಾ ಜಮೀನು
2	ಶ್ರೀ ಎ.ಎಂ ಸುರೇಶ್ ಅವರೆದಾಳು ಗ್ರಾಮ, ಸೋಮವಾರಪೇಟೆ ತಾಲ್ಲೂಕು ಕೊಡಗು ಜಿಲ್ಲೆ, ಕ.ಗ.ಗು ಸಂಖ್ಯೆ: 1	11.06.2015 10 ವರ್ಷ	ಅವರೆದಾಳು 131/ಪಿ 4–00	ಪಟ್ಟಾ ಜಮೀನು
3	ಶ್ರೀ ಎ.ಕೆ.ಸೆಂಥಿಲ್ ಕುಮಾರ್, ಬಿನ್ ಕೊಳಂದೈಯಪನ್, ಈರೋಡ್ ಜಿಲ್ಲೆ, ತಮಿಳುನಾಡು. ಕ.ಗ.ಗು ಸಂಖ್ಯೆ: 842	29.06.2010 10 ವರ್ಷ	ಶಿರಂಗಾಲ 55 0–35	ಪಟ್ಟಾ ಜಮೀನು
4	ಶಾಲಿಮಾರ್ ಗ್ರಾನೈಟ್ಸ್, ಪಾರ್ಟ್ನರ್ ಕೆ.ವಿ.ಭರತನ್, ತಳವಾಡಿ, ತಮಿಳುನಾಡು. 638461 ಕ.ಗ.ಗು ಸಂಖ್ಯೆ: 819	01.01.2009 10 ವರ್ಷ	ದೊಡ್ಡನಕೋಡ ೨ 3/32 1–20	ಪಟ್ಟಾ ಜಮೀನು

ಉ) ಎಷ್ಟು ಕ್ರಷರ್ ಕಾರ್ಯಾಚರಣೆಯಲ್ಲಿದೆ; ಯಾವ ಯಾವ ಕ್ರಷರ್ ಮತ್ತು ಕೋರೆಗೆ ಪರವಾನಿಗೆ ಎಷ್ಟು ಕಾಲಾವಕಾಶ ನೀಡಲಾಗಿದೆ; ಹೊಸದಾಗಿ ಪರವಾನಿಗೆ ನೀಡಲು ಅನುಸರಿಸಲಾಗಿರುವ

ಜಿಲ್ಲಾ ಕಲ್ಲು ಪುಡಿ ಮಾಡುವ ಘಟಕಗಳ ನಿಯಂತ್ರಣ ಪ್ರಾಧಿಕಾರದಿಂದ ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು **10** ಜಲ್ಲಿ ಕಲ್ಲು ಕ್ರಷರ್ ಘಟಕಗಳಿಗೆ **05** ವರ್ಷಗಳ ಅವಧಿಗೆ ಪರವಾನಿಗೆ ನೀಡಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತವೆ.

ಕ್ರ. ಸಂ	ಕ್ರಷರ್ ಮಾಲೀಕರ ಹೆಸರು ಮತ್ತು ವಿಳಾಸ	ತಾಲ್ಲೂಕು, ಗ್ರಾಮ & ಸ.ನಂ	ಸರ್ಕಾರಿ/ ಪಟ್ಟಾ	ವಿಸ್ತೀರ್ಣ ಎಕರೆಗಳಲ್ಲಿ
	1	2	3	4

	ಮಾನದಂಡವೇನು; (ಪೂರ್ಣ ವಿವರ ನೀಡುವುದು)	1	ಶ್ರೀ ವಿ.ಟಿ.ದಿನೇಶ್, ಕೆ.ಐ.ಎ.ಡಿ.ಬಿ ಇಂಡಸ್ಟ್ರೀಯಲ್ ಏರಿಯ, ಕುಡ್ಲೂರು ಗ್ರಾಮ, ಸೋಮವಾರಪೇಟೆ ತಾಲ್ಲೂಕು.	ಸೋಮವಾರಪೇಟೆ ಕುಡ್ಲೂರು ಪ್ಲಾಟ್ ನಂ: 24/10	ಕೆ.ಐ.ಎ.ಡಿ. ಬಿ ಜಾಗ	3–00
		2	ಶ್ರೀ ಹೆಚ್.ಟಿ.ರವಿ, ಕೆ.ಐ.ಎ.ಡಿ.ಬಿ ಇಂಡಸ್ಟ್ರೀಯಲ್ ಏರಿಯ, ಕುಡ್ಲೂರು ಗ್ರಾಮ, ಸೋಮವಾರಪೇಟೆ ತಾಲ್ಲೂಕು.	ಸೋಮವಾರಪೇಟೆ ಕುಡ್ಲೂರು 29 ಪಾರ್ಟ್ –2 29 ಪಾರ್ಟ್– 3	ಕೆ.ಐ.ಎ.ಡಿ. ಬಿ ಜಾಗ	1–00 1–50
		3	ಶ್ರೀ ಸಜೇಶ್ ಭರತನ್, ಗೋಲ್ಡನ್ ರಾಕ್ಸ್, ಹೆಗ್ಗಳ ಗ್ರಾಮ, ವಿರಾಜಪೇಟೆ ತಾಲ್ಲೂಕು	ವಿರಾಜಪೇಟೆ ಹೆಗ್ಗಳ ಹೆಗ್ಗಳ, 142/5ಪಿ1	ಪಟ್ಟಾ	1–50
		4	ಶ್ರೀ ಹೆಚ್.ಕೆ.ಮುತ್ತಣ್ಣ, ಕೆ.ಐ.ಎ.ಡಿ.ಬಿ ಇಂಡಸ್ಟ್ರೀಯಲ್ ಏರಿಯ, ಕುಡ್ಲೂರು ಗ್ರಾಮ, ಸೋಮವಾರಪೇಟೆ ತಾಲ್ಲೂಕು.	ಸೋಮವಾರಪೇಟೆ ಕುಡ್ಲೂರು ಪ್ಲಾಟ್ ನಂ: 24/18, 24/19	ಕೆ.ಐ.ಎ.ಡಿ. ಬಿ ಜಾಗ	1–33 (6632 Sq.mtr)
		5	ಶ್ರೀ ಡಿ.ಎಸ್.ಜಗದೀಶ್, ಮೆ॥ B.S.R ಸ್ಟೋನ್ ಕ್ರಷರ್, ಯಲಕನೂರು ಗ್ರಾಮ, ಸೋಮವಾರಪೇಟೆ ತಾಲ್ಲೂಕು.	ಸೋಮವಾರಪೇಟೆ ಯಲಕನೂರು ಯಲಕನೂರು, 36/64	ಪಟ್ಟಾ	1–00
		6	ಶ್ರೀ ಎ.ಎಂ.ಅಶ್ರಫ್, ಮೆ. ವಿನಾಯಕ ಸ್ಟೋನ್ ಕ್ರಷರ್, ಯಲಕನೂರು– ಹೊಸಳ್ಳಿ ಗ್ರಾಮ, ಸೋಮವಾರಪೇಟೆ ತಾಲ್ಲೂಕು	ಸೋಮವಾರಪೇಟೆ ಹೊಸಳ್ಳಿ ಹೊಸಳ್ಳಿ 27/16	ಪಟ್ಟಾ	1–00
		7	ಶ್ರೀಮತಿ ಗಿಡ್ಡಮ್ಮ, W/O ಪಿ.ಕರಿಯಪ್ಪ ಸಿದ್ದಲಿಂಗಪುರ ಸ್ಟೋನ್ ಕ್ರಷರ್, ಬಿಟ್ಟಂಗಾಲ, ಕೋಣನೂರು ಹೋ ಅರಕಲಗೋಡು ತಾ. ಹಾಸನ ಜಿ.	ಸೋಮವಾರಪೇಟೆ ಸಿದ್ದಲಿಂಗಪುರ 1/1	ಸರ್ಕಾರಿ	1–15
		8	ಶ್ರೀ ಕೆ.ಎಂ ಬೋಪಣ್ಣ ಕಳತ್ಮಾಡು ಗ್ರಾಮ, ವಿರಾಜಪೇಟೆ ತಾಲ್ಲೂಕು	ವಿರಾಜಪೇಟೆ ಕಳತ್ಮಾಡು 107/1	ಪಟ್ಟಾ	1–00
		9	ಶ್ರೀ ವಿಠಲಾಜಿ ಎನ್.ಎಂ., ಅಂದಗೋವೆ ಗ್ರಾಮ, ಸೋಮವಾರಪೇಟೆ ತಾಲ್ಲೂಕು	ಸೋಮವಾರಪೇಟೆ ಅಂದಗೋವೆ 180/4	ಪಟ್ಟಾ	3–00

10	ಬಿನ್ ಸತ್ಯನಾರಾಯಣ ಭಟ್, ಒಡಬಾಯಿ ಹೌಸ್, ಸುಳ್ಯ, ಮಡಿಕೇರಿ	ಪಿ.ಪೆರಾಜೆ 36/1		

ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ, 2011 ಹಾಗೂ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ನಿಯಮಾವಳಿ, 2012 ರಂತೆ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರಕ್ಕೆ ಕ್ರಷರ್ ಘಟಕಗಳನ್ನು ಸ್ಥಾಪಿಸಲು ಕ್ರಷರ್ ಸುರಕ್ಷಿತ ವಲಯ ಘೋಷಣೆ ಮತ್ತು ಸದರಿ ಸುರಕ್ಷಿತ ವಲಯದಲ್ಲಿ ಸ್ಥಾಪಿಸುವ ಘಟಕಗಳಿಗೆ ಕ್ರಷರ್ ಲೈಸೆನ್ಸ್ ನೀಡುವ ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ, 2011 ರ ಕಲಂ 6(3) ರಂತೆ, ಕಂದಾಯ, ಅರಣ್ಯ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಕ್ರಷರ್ ಪರವಾನಗಿ ಕೋರಿ ಸಲ್ಲಿಸಿರುವ ಅರ್ಜಿತ ಪ್ರದೇಶವನ್ನು ಜಂಟಿ ಸ್ಥಳ ಪರಿಶೀಲನೆ ನಡೆಸಿ ಕಲಂ 6 ಮತ್ತು 6(A) ರಲ್ಲಿನ ಕ್ರಷರ್ ಸುರಕ್ಷಿತ ವಲಯ ಘೋಷಣೆಗೆ ಅಗತ್ಯವಾಗಿರುವ ಷರತ್ತುಗಳು ಪಾಲನೆಯಾದಲ್ಲಿ, ಸದರಿ ವರದಿ ನೀಡಿದ ನಂತರ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದಿಂದ ಅರ್ಜಿತ ಪ್ರದೇಶವನ್ನು ಕ್ರಷರ್ ಸುರಕ್ಷಿತ ವಲಯವೆಂದು ಘೋಷಿಸಿ ಅಧಿಸೂಚನೆ ಹೊರಡಿಸಿ, ಫಾರಂ-ಬಿ1 ರಲ್ಲಿ ಅನುಪಾಲನಾ ಪ್ರಮಾಣ ಪತ್ರ ನೀಡಲಾಗುವುದು. ಸುರಕ್ಷಿತ ವಲಯ ಘೋಷಣೆ ಷರತ್ತು ಪೂರೈಸದ ಅರ್ಜಿಗಳನ್ನು ನಮೂನೆ-ಡಿ ರಲ್ಲಿ ತಿರಸ್ಕರಿಸಲಾಗುತ್ತದೆ. ನಮೂನೆ-ಬಿ1 ರಲ್ಲಿ ಸುರಕ್ಷಿತ ವಲಯ ಘೋಷಣೆ ಪ್ರಮಾಣ ಪತ್ರ ಪಡೆದ ಅರ್ಜಿದಾರರು, ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸಿಎಫ್‌ಇ (Consent for Establishment) ಹಾಗೂ ಸಿಎಫ್‌ಒ (Consent for Operation) ಪಡೆದು ಹಾಜರು ಪಡಿಸಿದ ನಂತರ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದಿಂದ ಫಾರಂ-ಸಿ' ರಲ್ಲಿ ಕ್ರಷರ್ ಲೈಸೆನ್ಸ್ ನೀಡಲಾಗುವುದು.

ಊ) ಈ ಜಿಲ್ಲೆಯಲ್ಲಿ ಹೊಸದಾಗಿ ಕಲ್ಲು ಗಣಿಗಾರಿಕೆ ನಡೆಸಲು ಬಂದ ಅರ್ಜಿಗಳು ಎಷ್ಟು; ಯಾರು ಯಾರು ಅರ್ಜಿ ಸಲ್ಲಿಸಿರುತ್ತಾರೆ; ಅರ್ಜಿ ಸಲ್ಲಿಸಲು ಇರುವ ಮಾನದಂಡಗಳೇನು? (ಅರ್ಜಿದಾರರ ವಿವರ ನೀಡುವುದು)

ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು **03** ಕಟ್ಟಡ ಕಲ್ಲು ಗಣಿಗಾರಿಕೆಗಾಗಿ ಅರ್ಜಿಗಳು ಸ್ವೀಕೃತಗೊಂಡಿರುತ್ತವೆ. ವಿವರಗಳು ಈ ಕೆಳಕಂಡಂತಿರುತ್ತವೆ.

ಕ್ರ ಸಂ	ಹೆಸರು ಮತ್ತು ವಿಳಾಸ	ಸರ್ವೆ ನಂ.	ಗ್ರಾಮ ಮತ್ತು ತಾಲ್ಲೂಕು	ವಿಸ್ತೀರ್ಣ (ಎಕರೆ ಗಳಲ್ಲಿ)
1.	ಶ್ರೀ. ವಿ.ಟಿ. ದಿನೇಶ್ ಕುಮಾರ್ ಬಿನ್ ತಿಮ್ಮಯ್ಯ, ಬೈಚನಹಳ್ಳಿ, ಕುಶಾಲನಗರ	36/8	ಯಲಕನೂರು ಸೋಮವಾರ ಪೇಟೆ	4-50
2.	ಶ್ರೀ. ವಿ.ಟಿ. ದಿನೇಶ್ ಕುಮಾರ್ ಬಿನ್ ತಿಮ್ಮಯ್ಯ, ಬೈಚನಹಳ್ಳಿ, ಕುಶಾಲನಗರ	13/1ಪಿ2	ಸೀಗೆಹೊಸೂರು ಸೋಮವಾರ ಪೇಟೆ	4-50

3.	ಶ್ರೀ. ವಿ.ಟಿ. ದಿನೇಶ್ ಕುಮಾರ್ ಬಿನ್ ತಿಮ್ಮಯ್ಯ, ಜೈಚನಹಳ್ಳಿ, ಕುಶಾಲನಗರ	36/8	ಯಲಕನೂರು ಸೋಮವಾರ ಪೇಟೆ	3–00

ಸರ್ಕಾರಿ ಜಮೀನುಗಳಲ್ಲಿನ ಖನಿಜ ನಿಕ್ಷೇಪಗಳನ್ನು ಹರಾಜು ಮೂಲಕ ವಿಲೇವಾರಿ ಮಾಡಬೇಕಿರುತ್ತದೆ. ಪಟ್ಟಾ ಜಮೀನುಗಳಲ್ಲಿನ ಖನಿಜ ನಿಕ್ಷೇಪಗಳನ್ನು ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಾವಳಿ, 2016ರ ನಿಯಮ 32 ರಂತೆ, ಸಂಬಂಧಿಸಿದ ಪಟ್ಟಾದಾರರಿಗೆ ಅಥವಾ ಪಟ್ಟಾದಾರರಿಂದ ಒಪ್ಪಿಗೆ ಪತ್ರ ಪಡೆದವರಿಗೆ ಕಲ್ಲುಗಣಿ ಲೈಸೆನ್ಸ್ ಮಂಜೂರು ಮಾಡಲಾಗುತ್ತದೆ. ಸದರಿ ಪಟ್ಟಾದಾರರು ಅಥವಾ ಪಟ್ಟಾದಾರರಿಂದ ಒಪ್ಪಿಗೆ ಪತ್ರ ಪಡೆದವರು ಸಂಬಂಧಿಸಿದ ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಮತ್ತು ಅರ್ಜಿತ ಪಟ್ಟಾ ಭೂಮಿ ಭೂಪರಿವರ್ತನೆಯಾಗಿರುವ ಬಗ್ಗೆ ಆದೇಶ ಮತ್ತು ಪರಿಸರ ಅನುಮತಿ ಪತ್ರ ಪಡೆದು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿದ ನಂತರ ಕಲ್ಲುಗಣಿ ಲೈಸೆನ್ಸ್ ಮಂಜೂರು ಮಾಡಲಾಗುತ್ತದೆ.

ಸಂಖ್ಯೆ: ಸಿಐ 84 ಎಂಎಂಎನ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಇಲಾಖೆ

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, ಡಾ. ಬಿ. ಆರ್. ಅಂಬೇಡ್ಕರ್ ರಸ್ತೆ,
ಬೆಂಗಳೂರು –560001. ದೂ. 22034319

ಸಂಖ್ಯೆ: ಸಿಐ 31 ಸಿಎಸ್‌ಸಿ 2020 | ದಿನಾಂಕ: 05.03.2020.

79
06/03/20

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
(ಎಂ.ಎಸ್.ಎಂ.ಇ. & ಗಣಿ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು–01.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು–01.

ಮಾನ್ಯರೆ,

ವಿಷಯ: ಮಾನ್ಯ ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ರಾಜೇಗೌಡ ಟಿ.ಡಿ. (ಶೃಂಗೇರಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 502ಕ್ಕೆ ಉತ್ತರಿಸುವ ಬಗ್ಗೆ.

* * * * *

ಮಾನ್ಯ ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ರಾಜೇಗೌಡ ಟಿ.ಡಿ. (ಶೃಂಗೇರಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 502ಕ್ಕೆ ದಿನಾಂಕ: 06.03.2020 ರಂದು ಕರ್ನಾಟಕ ವಿಧಾನ ಸಭೆ, ವಿಧಾನಸೌಧ, ಬೆಂಗಳೂರು, ಇಲ್ಲಿ ಉತ್ತರಿಸಬೇಕಾಗಿದ್ದು, ಸದರಿ ಪ್ರಶ್ನೆಯ ಉತ್ತರಗಳ 150 ಪ್ರತಿಗಳನ್ನು ಈ ಪತ್ರದೊಂದಿಗೆ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

5/3/2020
(ಸುಮತಿ ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ (ಸಪ್ರಕೈ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 502
ಸದಸ್ಯರ ಹೆಸರು : ಶ್ರೀ ರಾಜೇಗೌಡ ಟಿ.ಡಿ. (ಶೃಂಗೇರಿ)
ಉತ್ತರಿಸಬೇಕಾದ ದಿನಾಂಕ : 06.03.2020
ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರಂ.ಸ.	ಪ್ರಶ್ನೆ	ಉತ್ತರ
(ಅ)	ಶೃಂಗೇರಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಎನ್.ಆರ್.ಪುರ ತಾಲ್ಲೂಕು ಲಿಂಗಾಪುರ ಗ್ರಾಮದ ಸರ್ವೆ ನಂಬರ್ 23ರಲ್ಲಿ 7-20 ಎ/ಗು ಹಾಗೂ ಹಿಳುವಳಿ ಗ್ರಾಮದ ಸರ್ವೆ ನಂಬರ್ 79ರಲ್ಲಿ 2-20 ಎ/ಗು ಜಾಗವನ್ನು ಕೈಗಾರಿಕಾ ವಸಾಹತುಗೋಸ್ಕರ ಮಂಜೂರು ಮಾಡಲಾಗಿದ್ದು, ರೂ. 1.30 ಲಕ್ಷ ಅನುದಾನದಲ್ಲಿ ಮೂಲಸೌಕರ್ಯ ಒದಗಿಸಿ, ನಂತರ ಸದರಿ ಪ್ರದೇಶವು ಕಿರು ಅರಣ್ಯ ಪ್ರದೇಶವೆಂದು ಕಾಮಗಾರಿಗೆ ತಡೆ ನೀಡಿದ್ದು, ಅರಣ್ಯ ಪ್ರದೇಶಕ್ಕೆ 10 ಎಕರೆ ಪರ್ಯಾಯ ಜಾಗ ಕಲ್ಪಿಸಿ, ಕೈಗಾರಿಕಾ ಪ್ರದೇಶವನ್ನು ಸ್ಥಾಪಿಸಲಾಗುವುದೇ;	ಚಿಕ್ಕಮಗಳೂರು ಜಿಲ್ಲೆ ನರಸಿಂಹರಾಜಪುರ ತಾಲ್ಲೂಕಿನ ಲಿಂಗಾಪುರ ಗ್ರಾಮದ ಸರ್ವೆ ನಂ 23 ರಲ್ಲಿ 7-20 ಎಕರೆ ಹಾಗೂ ಹಿಳುವಳಿ ಗ್ರಾಮದ ಸರ್ವೆ ನಂ-79 ರಲ್ಲಿ 2-20 ಎಕರೆ ಅಂದರೆ ಒಟ್ಟು 10-00 ಎಕರೆ ಜಮೀನನ್ನು ನಿಗಮಕ್ಕೆ ಕೈಗಾರಿಕಾ ವಸಾಹತು ಸ್ಥಾಪನೆಗೆ ಮಂಜೂರಾಗಿದ್ದು, ಸದರಿ ಜಮೀನಿನಲ್ಲಿ ಕೈಗಾರಿಕಾ ವಸಾಹತುವನ್ನು ಅಭಿವೃದ್ಧಿಪಡಿಸಿ ಹಂಚಿಕೆ ಪ್ರಕ್ರಿಯೆ ಕೈಗೊಂಡ ಸಂದರ್ಭದಲ್ಲಿ ಅಭಿವೃದ್ಧಿಪಡಿಸಿರುವ ಜಮೀನು ಕಿರು ಅರಣ್ಯ ಪ್ರದೇಶದ ವ್ಯಾಪ್ತಿಗೆ ಒಳಪಡುವುದಾಗಿ ಸೂಚಿಸಿದ ಹಿನ್ನೆಲೆಯಲ್ಲಿ, ಕಿರು ಅರಣ್ಯ ಇಲಾಖೆಯೊಂದಿಗೆ ಪರಾಮರ್ಶೆ ನಡೆಸಲಾಗಿದ್ದು, ಈ ಸಂಬಂಧವಾಗಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿ ಮಾರ್ಗದರ್ಶನ ನೀಡಲಾದ ಹಿನ್ನೆಲೆಯಲ್ಲಿ, ಕೈಗಾರಿಕಾ ವಸಾಹತು ಅಭಿವೃದ್ಧಿಪಡಿಸಿರುವುದರಿಂದ ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕಾಗಿ ಬಳಸುವ ಸಂಬಂಧ ಕೇಂದ್ರ/ರಾಜ್ಯ ಸರ್ಕಾರದ ಅನುಮತಿ ಕೋರಿ ದಿನಾಂಕ 02.04.2019 ರಂದು ಅಗತ್ಯ ಪೂರಕ ದಾಖಲೆಗಳೊಂದಿಗೆ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲಾಗಿದೆ. ಈ ಬಗ್ಗೆ ಅರಣ್ಯ ಇಲಾಖೆಯಿಂದ ಸೂಕ್ತ ಪ್ರತಿಕ್ರಿಯೆಯನ್ನು ನಿರೀಕ್ಷಿಸಲಾಗಿದೆ. ಸದರಿ ಪ್ರಾಧಿಕಾರದಿಂದ ಪ್ರತಿಕ್ರಿಯೆ ಸ್ವೀಕೃತಗೊಂಡ ನಂತರದಲ್ಲಿ ಸದರಿ ವಿಷಯದ ಬಗ್ಗೆ ಮುಂದಿನ ಅವಶ್ಯ ಕ್ರಮ ಕೈಗೊಳ್ಳಲಾಗುವುದು ಹಾಗೂ ಸದರಿ ವಿಷಯವು ಇತ್ಯರ್ಥವಾಗದೇ ಇರುವ ಕಾರಣ ಪರ್ಯಾಯ ಜಾಗದ ಬಗ್ಗೆ ಪ್ರಸ್ತುತ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.
(ಆ)	ಸದರಿ ಕೈಗಾರಿಕಾ ವಸಾಹತು ಪ್ರದೇಶಾಭಿವೃದ್ಧಿಗೆ ಇಲ್ಲಿಯವರೆಗೂ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ? (ಆದೇಶದ ಪ್ರತಿಯೊಂದಿಗೆ ವಿವರ ನೀಡುವುದು)	ಸದರಿ ಕೈಗಾರಿಕಾ ವಸಾಹತು ಪ್ರದೇಶಾಭಿವೃದ್ಧಿಗೆ, ಕೆ.ಎಸ್.ಎಸ್.ಐ.ಡಿ.ಸಿ ವತಿಯಿಂದ ಒಟ್ಟು ರೂ.132.95 ಲಕ್ಷಗಳನ್ನು ಖರ್ಚು ಮಾಡಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿವೆ. ಸದರಿ ಕೈಗಾರಿಕಾ ಪ್ರದೇಶಾಭಿವೃದ್ಧಿಗೆ

ಕ್ರಂ.ಸ.	ಪ್ರಶ್ನೆ	ಉತ್ತರ
		ಸರ್ಕಾರದಿಂದ ಯಾವುದೇ ಅನುದಾನವು ಮಂಜೂರು ಆಗಿರುವುದಿಲ್ಲ). 1. ಒಟ್ಟು ಭೂ ಮೌಲ್ಯ ರೂ. 2,10,000/- 2. ಸಿವಿಲ್ ಕಾಮಗಾರಿಗಾಗಿ ಭರಿಸಿರುವ ವೆಚ್ಚ ರೂ.96,08,000/- 3. ವಿದ್ಯುಚಕ್ತಿ ಸಂಪರ್ಕಕ್ಕಾಗಿ ಭರಿಸಿರುವ ವೆಚ್ಚ ರೂ.34,77,000/-

ಸಿಐ 31 ಸಿಎಸ್‌ಸಿ 2020

(ಜಗದೀಶ ಶೆಟ್ಟರ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

107

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಇ 15 ಸಿಸಿಬಿ 2020 (ಇ-ಕಡತ)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 05.03.2020

4/5
6/3/20

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು-01

ಇವರಿಗೆ:

ಕಾರ್ಯದರ್ಶಿ, (ಪ್ರ)
ಕರ್ನಾಟಕ ವಿಧಾನ ಸಭೆ,
ಸಚಿವಾಲಯ, ವಿಧಾನ ಸೌಧ.

ಮಾನ್ಯರೆ,

ವಿಷಯ : ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್ (ಗೌರಿಬಿದನೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:613 ಕ್ಕೆ ಉತ್ತರ ನೀಡುವ ಬಗ್ಗೆ.

***

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್ (ಗೌರಿಬಿದನೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:613 ಕ್ಕೆ ಸಂಬಂಧಿಸಿದಂತೆ, ಉತ್ತರದ 100 ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

Chethana M 5/3

(ಚೇತನ.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ-3 (ಪ್ರ),
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಶಿವಶಂಕರ ರೆಡ್ಡಿ ಎನ್. ಹೆಚ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 613

ಉತ್ತರಿಸಬೇಕಾದ ದಿನಾಂಕ : 06.03.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ಅನ್ವಯಿಸುವಂತೆ ಸಹಕಾರ ಹಾಲು ಒಕ್ಕೂಟವನ್ನು ಜಿಲ್ಲೆಯ ಆಧಾರದ ಮೇಲೆ ವಿಭಜಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವಾಗ ಕ್ರಮ ವಹಿಸಲಾಗುವುದು;	ಹೌದು, ಸಾಧ್ಯತಾ ವರದಿ ಪಡೆಯಲು ಕ್ರಮವಿಡಲಾಗಿದೆ.
ಆ	ವಿಭಜಿಸಲು ಅಗತ್ಯ ಮಾನದಂಡಗಳೇನು;	ಎನ್.ಡಿ.ಡಿ.ಬಿ ಪ್ರಕಾರ ಹಾಲು ಒಕ್ಕೂಟಗಳನ್ನು ವಿಭಜಿಸಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಬೇಕಾಗಿರುತ್ತದೆ. 1. ಹಿಂದಿನ ಮತ್ತು ಮುಂದೆ ಅಪೇಕ್ಷಿಸುವ ಹಾಲಿನ ಪ್ರಮಾಣ. 2. ಘಟಕಗಳಲ್ಲಿ ಹಾಲು ಸಂಸ್ಕರಣಾ ಸಾಮರ್ಥ್ಯ. 3. ಸಂಬಂಧಪಟ್ಟ ಸ್ಥಳಗಳಲ್ಲಿ ಲಭ್ಯತೆ ಇರುವ ನಗರ ಮಾರುಕಟ್ಟೆ. 4. ಬೇರೆ ಸ್ಥಳಗಳಲ್ಲಿ ವ್ಯಾಪಾರದ ಬೆಳವಣಿಗೆಗೆ ಆಗಬಹುದಾದ ಅವಕಾಶ. 5. ವಿಭಜನೆಗೊಂಡ ಸಂಸ್ಥೆಗಳು ಸ್ವತಂತ್ರವಾಗಿ ಒಂದು ದಶಕದಲ್ಲಿ ಯಾವ ನಿಟ್ಟಿನಲ್ಲಿ ಬೆಳೆಯಬಹುದಾಗಿದೆ. 6. ಖಾಸಗಿಯವರಿಂದ ಬರಬಹುದಾದ ಸವಾಲುಗಳು.
ಇ	ಎನ್.ಡಿ.ಡಿ.ಬಿ.ಯವರ ಅನುಮತಿ ಅಗತ್ಯವಿದೆಯೇ; ಇದ್ದಲ್ಲಿ, ಎನ್.ಡಿ.ಡಿ.ಬಿ.ಯ ಅಭಿಪ್ರಾಯವೇನು;	ಹೌದು. ದಿನಾಂಕ: 28-02-2019 ರಂದು ಎನ್.ಡಿ.ಡಿ.ಬಿ ರವರು ವ್ಯವಸ್ಥಾಪಕ ನಿರ್ದೇಶಕರು, ಕೋಲಾರ-ಚಿಕ್ಕಬಳ್ಳಾಪುರ ಹಾಲು ಒಕ್ಕೂಟದವರಿಗೆ, ಕೋಲಾರ-ಚಿಕ್ಕಬಳ್ಳಾಪುರ ಹಾಲು ಒಕ್ಕೂಟವನ್ನು ಕೋಲಾರದಿಂದ ಚಿಕ್ಕಬಳ್ಳಾಪುರ ಜಿಲ್ಲೆಯನ್ನು ಬೇರ್ಪಡಿಸಿ, ಪ್ರತ್ಯೇಕ ಹಾಲು ಒಕ್ಕೂಟ ರಚಿಸುವ ಬಗ್ಗೆ ಈ ಕೆಳಕಂಡಂತೆ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. 1. ಕೋಲಾರ-ಚಿಕ್ಕಬಳ್ಳಾಪುರ ಹಾಲು ಒಕ್ಕೂಟವು ಕೇಂದ್ರ ಘಟಕ ಯೋಜನೆಯಡಿಯಲ್ಲಿ ಎನ್.ಡಿ.ಡಿ.ಬಿ ಯಿಂದ ಚರ ಮತ್ತು ಸ್ಥಿರಾಸ್ತಿಗಳ ಆಧಾರದ ಮೇಲೆ ಸಾಲ ಪಡೆಯಲಾಗಿದೆ. 2. ಎನ್.ಡಿ.ಡಿ.ಬಿ. ಯೊಂದಿಗೆ ಮಾಡಿಕೊಂಡಿರುವ ಕರಾರನ್ನು ಉಲ್ಲಂಘನೆ ಮಾಡಿದಲ್ಲಿ ಎನ್.ಡಿ.ಡಿ.ಬಿ ನೀಡಿರುವ ಸಂಪೂರ್ಣ ಸಾಲದ ಮೊತ್ತವನ್ನು ಬಡ್ಡಿಯೊಂದಿಗೆ ಹಿಂದಿರುಗಿಸಲು ತಿಳಿಸಿರುತ್ತಾರೆ. 3. ಎನ್.ಡಿ.ಡಿ.ಬಿ. ಯವರು ಕೋಲಾರ-ಚಿಕ್ಕಬಳ್ಳಾಪುರ ಹಾಲು ಒಕ್ಕೂಟವನ್ನು ಬೇರ್ಪಡಿಸಲು ಎರಡು ಸೀಮಿತ ಸಾಮರ್ಥ್ಯದ ವ್ಯಾಪಾರ ಘಟಕಗಳಿಗೆ ಪರಿವರ್ತನೆಯಾಗುತ್ತದೆ. ಇದರಿಂದ ಅವರ ಚಟುವಟಿಕೆಗಳೂ ಮತ್ತು ಆರ್ಥಿಕ ಸಾಧ್ಯತೆ ಮೇಲೆ ದುಷ್ಪರಿಣಾಮ ಬೀರುತ್ತದೆ ಮತ್ತು ಸಾಲ ಮರುಪಾವತಿ ಮೇಲೆ ಸಹ ಋಣಾತ್ಮಕ ಪರಿಣಾಮ ಬೀರುತ್ತದೆ. 4. ಆದುದರಿಂದ ಎನ್.ಡಿ.ಡಿ.ಬಿ.ಯವರಿಂದ ಪೂರ್ವಾನುಮತಿ ಪಡೆದ ನಂತರ ಒಕ್ಕೂಟವನ್ನು ಬೇರ್ಪಡಿಸಲು ಕ್ರಮವಿಡಬಹುದೆಂದು ಅಭಿಪ್ರಾಯಿಸಿರುತ್ತಾರೆ.

→

ಈ	ಚಿಕ್ಕಬಳ್ಳಾಪುರ-ಕೋಲಾರ ವಿಭಜಿಸಲು ಒಕ್ಕೂಟದ ಅನುಮೋದನೆ ಅಗತ್ಯವಿದೆಯೇ (ವಿವರ ಒದಗಿಸುವುದು)	ಹೌದು. ದಿನಾಂಕ:23.09.2016 ರಂದು ಜರುಗಿದ ಒಕ್ಕೂಟದ 2015-16ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಪ್ರತ್ಯೇಕ ಒಕ್ಕೂಟದ ರಚನೆಗೆ ಅನುಮೋದನೆ ನೀಡಲಾಗಿದೆ.
ಉ	ರಾಷ್ಟ್ರದ ಹೈನೋದ್ಯಮ ಇತ್ತೀಚಿನ ನೀತಿಯಂತೆ ವಿಭಜಿಸುವಂತಹ ಒಕ್ಕೂಟಗಳನ್ನು ಒಟ್ಟುಗೂಡಿಸುವುದು ಆರ್ಥಿಕ ದೃಷ್ಟಿಯಿಂದ ಒಳ್ಳೆಯದೆಂದು ಅಭಿಪ್ರಾಯ ಪಟ್ಟಿರುವುದು ನಿಜವೇ (ಪೂರಕ ಮಾಹಿತಿಯನ್ನು ಒದಗಿಸುವುದು)?	ಹೌದು. ದೇಶಾದ್ಯಂತ ಡೇರಿ ಉದ್ಯಮವನ್ನು ಸದೃಢಗೊಳಿಸಲು ಮತ್ತು ಗಾತ್ರವನ್ನು ಅವಲೋಕಿಸಿ, ಉತ್ತರ ಪ್ರದೇಶ ರಾಜ್ಯದ 58 ಹಾಲು ಒಕ್ಕೂಟಗಳನ್ನು ಒಟ್ಟುಗೂಡಿಸಿ 18 ಹಾಲು ಒಕ್ಕೂಟಗಳಾಗಿ ಮತ್ತು ಹರಿಯಾಣ ರಾಜ್ಯದ 11 ಹಾಲು ಒಕ್ಕೂಟಗಳನ್ನು ಒಟ್ಟುಗೂಡಿಸಿ 6 ಒಕ್ಕೂಟಗಳನ್ನಾಗಿ ಮರು ರಚಿಸಿರುತ್ತದೆ. ಹಾಗೆಯೇ ಗುಜರಾತ್ ರಾಜ್ಯದ 20-35 ಲಕ್ಷ ಲೀಟರ್ ಶೇಖರಣಾ ಸಾಮರ್ಥ್ಯ ಹೊಂದಿರುವ ದೊಡ್ಡ ಒಕ್ಕೂಟಗಳು ಕೂಡ ವಿಭಜನೆಗೆ ಚಿಂತನೆ ಮಾಡುತ್ತಿಲ್ಲವೆಂದು ಎನ್.ಡಿ.ಡಿ.ಬಿ.ಯವರು ಅಭಿಪ್ರಾಯಪಟ್ಟಿರುತ್ತಾರೆ.

ಸಂಖ್ಯೆ : ಸಿಒ 15 ಸಿಸಿಬಿ 2020

(ಎಸ್.ಟಿ ಸೋಮಶೇಖರ್)
ಸಹಕಾರ ಸಚಿವರು

<u>ಕರ್ನಾಟಕ ಸರ್ಕಾರ</u>

ಸಂಖ್ಯೆ: ನಅಇ 04 ಎಸಿಜಿ 2020(ಇ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 05.03.2020.

44
06/03/20

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸಭೆಯ ಸಚಿವಾಲಯ,
ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಗುತ್ತೇದಾರ್ ಸುಭಾಷ್ ರುಕ್ಮಯ್ಯ (ಆಳಂದ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 293ಕ್ಕೆ ಉತ್ತರ ಕಳುಹಿಸುವ ಬಗ್ಗೆ.

ಉಲ್ಲೇಖ: ವಿಧಾನ ಸಭೆಯ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ. 293/2020, ದಿನಾಂಕ: 25.02.2020.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಗುತ್ತೇದಾರ್ ಸುಭಾಷ್ ರುಕ್ಮಯ್ಯ (ಆಳಂದ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 293ಕ್ಕೆ ಉತ್ತರದ 100 ಪ್ರತಿಗಳನ್ನು ಮುಂದಿನ ಅಗತ್ಯ ಕ್ರಮಕ್ಕಾಗಿ ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

S. Venkatesh

(ಎಸ್. ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಮನಪಾ-2)

5/3/20

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 293
ಮಾನ್ಯ ಸದಸ್ಯರ ಹೆಸರು : ಶ್ರೀ ಗುತ್ತೇದಾರ್ ಸುಭಾಷ್ ರುಕ್ಮಯ್ಯ (ಆಳಂದ)
ಉತ್ತರಿಸುವ ದಿನಾಂಕ : 06.03.2020
ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
1.	ಮಹಾನಗರ ಪಾಲಿಕೆಗೆ ರೈತರ ಕೃಷಿ ಜಮೀನನ್ನು ಭೂ ಸ್ವಾಧೀನಪಡಿಸಿಕೊಳ್ಳದೇ ನೇರವಾಗಿ ರೈತರಿಂದ ಖರೀದಿಸಿ ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ಅವಕಾಶವಿದೆಯೇ;	ರೈತರ ಕೃಷಿ ಜಮೀನು ಭೂ ಸ್ವಾಧಿನ ಪಡಿಸಿಕೊಳ್ಳದೆ ರೈತರಿಂದ ನೇರವಾಗಿ ಖರೀದಿಸಬೇಕಾದಲ್ಲಿ ಸರ್ಕಾರಕ್ಕೆ ಸಕಾರಣಗಳನ್ನು ನೀಡಿ ಅದಕ್ಕೆ ನಿಯಮಾನುಸಾರ ಸರ್ಕಾರವು ಅನುಮತಿ ನೀಡಿದಲ್ಲಿ, ರೈತರಿಂದ ಕೃಷಿ ಜಮೀನು ಖರೀದಿಸಿ ನಿವೇಶನಗಳನ್ನು ಮಾಡಲು ಅವಕಾಶ ಇರುತ್ತದೆ.
2.	ಹಾಗಿದ್ದಲ್ಲಿ, ಕಲಬುರಗಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಬಡೇಪೂರ ಗ್ರಾಮದ ಯಾವುದಾದರೂ ರೈತರ ಕೃಷಿ ಜಮೀನನ್ನು ನೇರವಾಗಿ ರೈತರಿಂದ ಖರೀದಿಸಲಾಗಿದೆಯೇ;	ಬಡೇಪೂರ ಗ್ರಾಮದ ಯಾವುದೇ ಕೃಷಿ ಜಮೀನನ್ನು ರೈತರಿಂದ ನೇರವಾಗಿ ಖರೀದಿ ಮಾಡಿರುವುದಿಲ್ಲ.
3.	ಹಾಗಿದ್ದಲ್ಲಿ, ಬಡೇಪೂರ ಗ್ರಾಮದ ಯಾವ ಯಾವ ರೈತರು ಜಮೀನುಗಳನ್ನು ಖರೀದಿಸಲಾಗಿದೆ; ರೈತರಿಗೆ ಪಾವತಿಸಿರುವ ಮೊತ್ತವೆಷ್ಟು (ಚೆಕ್ ಸಂಖ್ಯೆ ರೈತರ ಹೆಸರು, ಎಕರೆ ಗುಂಟೆ ಸಹಿತ ಸಂಪೂರ್ಣವಾದ ದಾಖಲೆಗಳನ್ನು ನೀಡುವುದು)?	ಈ ಪ್ರಶ್ನೆ ಉದ್ಭವಿಸುವುದಿಲ್ಲ

ಕಡತ ಸಂಖ್ಯೆ: ನಅಇ 04 ಎಸಿಜಿ 2020(ಇ)

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

(61)

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 93 ಸಿಎಲ್‌ಎಸ್ 2020 (ಇ-ಕಡತ)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 05.03.2020

US
6/3/20

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು-01

ಇವರಿಗೆ:

ಕಾರ್ಯದರ್ಶಿ, (ಪ್ರ)
ಕರ್ನಾಟಕ ವಿಧಾನ ಸಭೆ,
ಸಚಿವಾಲಯ, ವಿಧಾನ ಸೌಧ.

ಮಾನ್ಯರೆ,

ವಿಷಯ : ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಖಾದರ್ ಯು.ಟಿ (ಮಂಗಳೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:489 ಕ್ಕೆ ಉತ್ತರ ನೀಡುವ ಬಗ್ಗೆ.

***

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಖಾದರ್ ಯು.ಟಿ (ಮಂಗಳೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:489 ಕ್ಕೆ ಸಂಬಂಧಿಸಿದಂತೆ, ಉತ್ತರದ 100 ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,
Chethana M 5/3
(ಚೇತನ.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ-3 (ಪ್ರ),
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಖಾದರ್ ಯು.ಟಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 489

ಉತ್ತರಿಸಬೇಕಾದ ದಿನಾಂಕ : 06.03.2020

ಕ್ರ	ಪ್ರಶ್ನೆ	ಉತ್ತರ
ಅ)	2020 ಮಾರ್ಚ ತಿಂಗಳವರೆಗೆ ಕೃಷಿ ಸಾಲ ಪಡೆದ ರೈತರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ;	ರಾಜ್ಯದ ರೈತರು ಸಹಕಾರ ಸಂಘಗಳಿಂದ/ಸಹಕಾರ ಬ್ಯಾಂಕುಗಳಿಂದ ಸಾಲ ಪಡೆದು ದಿನಾಂಕ:31.01.2020ಕ್ಕೆ ಸುಸ್ತಿಯಾಗಿರುವ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲಗಳ ಕಂತುಗಳ ಅಸಲನ್ನು ದಿನಾಂಕ:31.03.2020ರೊಳಗೆ ಸಂಬಂಧಪಟ್ಟ ಪತ್ತಿನ ಸಹಕಾರ ಸಂಘ/ಬ್ಯಾಂಕುಗಳಿಗೆ ಪೂರ್ತಿಯಾಗಿ ಮರುಪಾವತಿಸಿದಲ್ಲಿ ಈ ಮೊತ್ತಗಳಿಗೆ ಬಾಕಿ ಇರುವ ಬಡ್ಡಿಯನ್ನು ಮನ್ನಾ ಮಾಡಲು ದಿ.14-02-2020 ರಂದು ಆದೇಶ ಹೊರಡಿಸಲಾಗಿರುತ್ತದೆ.
ಆ)	ಸಾಲ ಬಾಕಿ ಉಳಿಸಿಕೊಂಡಿರುವ ರೈತರ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಿದಂತೆ ನಿಗದಿತವಾಗಿ ಸಾಲ ಮರು ಪಾವತಿಸಿದ ರೈತರ ಸಾಲದ ಜೊತೆಗೆ ಪಾವತಿಸಿದ ಬಡ್ಡಿ ಮನ್ನಾ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ?	ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಸಂಖ್ಯೆ : ಸಿಒ 93 ಸಿಎಲ್ಎಸ್ 2020

(ಎಸ್.ಟಿ ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 29 ಬೆಮಪ್ರಾ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 05.03.2020

19
ULS
06/03/2020

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ ಶ್ರೀ ಅಶೋಕ್ ನಾಯಕ್ ಕೆ.ಬಿ. ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 316 ಕ್ಕೆ ಉತ್ತರಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ಅಶೋಕ್ ನಾಯಕ್ ಕೆ.ಬಿ. ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 316 ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಸಿ.ಎಸ್. ಶಿವಕುಮಾರಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 316
ಸದಸ್ಯರ ಹೆಸರು : ಶ್ರೀ ಅಶೋಕ್ ನಾಯಕ್ ಕೆ.ಬಿ.(ಶಿವಮೊಗ್ಗ ಗ್ರಾಮಾಂತರ)
ಉತ್ತರಿಸುವ ದಿನಾಂಕ : 06/03/2020
ಉತ್ತರಿಸಬೇಕಾದವರು : ನಗರಾಭಿವೃದ್ಧಿ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು ಕೆರೆ ಅಭಿವೃದ್ಧಿ ಶುಲ್ಕವಾಗಿ ಇದುವರೆಗೂ ಸಂಗ್ರಹಿಸಿರುವ ಮೊತ್ತವೆಷ್ಟು; (ಪ್ರಾಧಿಕಾರವಾರು ಮಾಹಿತಿ ನೀಡುವುದು)	ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು ಕೆರೆ ಅಭಿವೃದ್ಧಿ ಶುಲ್ಕವಾಗಿ ಇದುವರೆಗೂ ಸಂಗ್ರಹಿಸಿರುವ ಒಟ್ಟು ಮೊತ್ತ ರೂ.255,18,40,521/- (ಪ್ರಾಧಿಕಾರವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ).
ಆ)	ಕೆರೆ ಅಭಿವೃದ್ಧಿಗಾಗಿ ಸಂಗ್ರಹಿಸಲಾದ ಮೊತ್ತದಿಂದ ಕ್ರಿಯಾ ಯೋಜನೆ ಸಿದ್ಧಪಡಿಸಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆಯೇ;	ಕೆರೆ ಅಭಿವೃದ್ಧಿಗಾಗಿ ಸಂಗ್ರಹಿಸಲಾದ ಮೊತ್ತದಿಂದ ಕೆಲವು ಪ್ರಾಧಿಕಾರಗಳು ಕ್ರಿಯಾ ಯೋಜನೆಯನ್ನು ಹಮ್ಮಿಕೊಂಡಿರುತ್ತವೆ, ಕೆಲವು ಪ್ರಾಧಿಕಾರಗಳು ಇನ್ನೂ ಹಮ್ಮಿಕೊಂಡಿರುವುದಿಲ್ಲ ಹಾಗೂ ಕೆಲವು ಪ್ರಾಧಿಕಾರಗಳ ಕ್ರಿಯಾ ಯೋಜನೆ ಪರಿಶೀಲನೆಯಲ್ಲಿರುತ್ತವೆ. ಆ ಬಗ್ಗೆ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.
ಇ)	ಕೆರೆ ಅಭಿವೃದ್ಧಿ ಶುಲ್ಕದಲ್ಲಿ ರಾಜ್ಯದಲ್ಲಿ ಇದುವರೆಗೂ ಎಷ್ಟು ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ; (ಜಿಲ್ಲಾವಾರು, ಪ್ರಾಧಿಕಾರವಾರು ಮಾಹಿತಿ ನೀಡುವುದು)	ಕೆರೆ ಅಭಿವೃದ್ಧಿ ಶುಲ್ಕದಲ್ಲಿ ರಾಜ್ಯದಲ್ಲಿ ಇದುವರೆಗೂ ಅಭಿವೃದ್ಧಿಪಡಿಸಿರುವ ಕೆರೆಗಳ ಜಿಲ್ಲಾವಾರು ಮತ್ತು ಪ್ರಾಧಿಕಾರವಾರು ವಿವರಗಳನ್ನು ಅನುಬಂಧ-3ರಲ್ಲಿ ನೀಡಲಾಗಿದೆ.
ಈ)	ಬಾಕಿ ಉಳಿದ ಅನುದಾನದಲ್ಲಿ ಕೆರೆಗಳ ಅಭಿವೃದ್ಧಿಯನ್ನು ಯಾವಾಗ ಕೈಗೊಳ್ಳಲಾಗುವುದು?	ಬಾಕಿ ಉಳಿದ ಅನುದಾನದಲ್ಲಿ ಕೆರೆಗಳ ಅಭಿವೃದ್ಧಿಯನ್ನು ಕೈಗೊಳ್ಳುವ ವಿವರಗಳನ್ನು ಅನುಬಂಧ-4ರಲ್ಲಿ ನೀಡಲಾಗಿದೆ.

ಸಂಖ್ಯೆ: ನಅಇ 29 ಬೆಮಪ್ರಾ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಅಶೋಕ್ ನಾಯಕ್ ಕೆ.ಬಿ. ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 316ಕ್ಕೆ ಅನುಬಂಧ

ಅನುಬಂಧ-1

ಕ್ರ ಸಂ.	ನಗರಾಭಿವೃದ್ಧಿ ಪ್ರಾಧಿಕಾರದ ಹೆಸರು	ಇದುವರೆಗೂ ಸಂಗ್ರಹಿಸಿರುವ ಮೊತ್ತ ರೂ.ಗಳಲ್ಲಿ
1.	ಶಿವಮೊಗ್ಗ-ಭದ್ರಾವತಿ	283026000
2.	ಕೆ.ಜಿ.ಎಫ್	22174724
3.	ತುಮಕೂರು	126700000
4.	ಚಿತ್ರದುರ್ಗ	50500000
5.	ದಾವಣಗೆರೆ-ಹರಿಹರ	126742000
6.	ರಾಮನಗರ	22647118
7.	ಕೋಲಾರ	10123457
8.	ಚಿಕ್ಕಬಳ್ಳಾಪುರ	96436700
9.	ಬೆಳಗಾವಿ	44114000
10.	ಗದಗ-ಬೆಟಗೇರಿ	50071553
11.	ಕಾರವಾರ	6660931
12.	ಹಾವೇರಿ	22677823
13.	ವಿಜಯಪುರ	162200000
14.	ಹುಬ್ಬಳ್ಳಿ-ಧಾರವಾಡ	213082554
15.	ಬೀದರ್	42255903
16.	ಬಳ್ಳಾರಿ	83110457
17.	ಕೊಪ್ಪಳ	25423245
18.	ರಾಯಚೂರು	104124812
19.	ಯಾದಗಿರಿ	31599524
20.	ವಿಜಯನಗರ ಪ್ರದೇಶ ನಗರಾಭಿವೃದ್ಧಿ ಪ್ರಾಧಿಕಾರ	35968970
21.	ಕಲಬುರಗಿ	184000000
22.	ಹೊಸಪೇಟೆ	27379122
23.	ಮೈಸೂರು	426843278
24.	ಮಂಗಳೂರು	168284746
25.	ಮಡಿಕೇರಿ	17359437
26.	ಹಾಸನ	30960417
27.	ಉಡುಪಿ	102970493
28.	ಚಿಕ್ಕಮಗಳೂರು	6489281
29.	ಚಾಮರಾಜನಗರ-ರಾಮಸಮುದ್ರ	19998976
30.	ಮಂಡ್ಯ	7915000
	ಒಟ್ಟು	**255,18,40,521/-**

(ಸಿ.ಎಸ್.ಶಿವಕುಮಾರಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಅನುಬಂಧ-2

<table>
<tr><th>ಕ್ರ ಸಂ.</th><th>ನಗರಾಭಿವೃದ್ಧಿ ಪ್ರಾಧಿಕಾರದ ಹೆಸರು</th><th>ಕೆರೆ ಅಭಿವೃದ್ಧಿಗಾಗಿ ಸಂಗ್ರಹಿಸಲಾದ ಮೊತ್ತದಿಂದ ಸಿದ್ಧಪಡಿಸಿರುವ ಕ್ರಿಯಾ ಯೋಜನೆಗಳು</th></tr>
<tr><td>1.</td><td>ಶಿವಮೊಗ್ಗ-ಭದ್ರಾವತಿ</td><td>ಕೆರೆ ಅಭಿವೃದ್ಧಿಗಾಗಿ ಸಂಗ್ರಹಿಸಲಾದ ಮೊತ್ತದಿಂದ 2019-20ನೇ ಸಾಲಿನಲ್ಲಿ ಶಿವಮೊಗ್ಗ ನಗರದ ಸೋಮಿನಕೊಪ್ಪ ಕೆರೆಯ ಅಭಿವೃದ್ಧಿಗಾಗಿ ರೂ.370.00 ಲಕ್ಷ ಮೊತ್ತಕ್ಕೆ ಟೆಂಡರ್ ಆಹ್ವಾನಿಸಲಾಗಿರುತ್ತದೆ ಮತ್ತು ಭದ್ರಾವತಿ ನಗರದ ಜನ್ನಾಪುರ ಕೆರೆಯ ಅಭಿವೃದ್ಧಿಗಾಗಿ ರೂ.508.00 ಲಕ್ಷಗಳಿಗೆ ಮತ್ತು ಶಿವಮೊಗ್ಗ ತಾಲ್ಲೂಕಿನ 5 ಕೆರೆಗಳನ್ನು ಅಭಿವೃದ್ಧಿಪಡಿಸಲು ಒಟ್ಟು ರೂ.230.00 ಲಕ್ಷಗಳಿಗೆ ಅಂದಾಜು ಪಟ್ಟಿ ತಯಾರಿಸಿ ಆಡಳಿತಾತ್ಮಕ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.</td></tr>
<tr><td>2.</td><td>ಕೆ.ಜಿ.ಎಫ್</td><td>ಲಕ್ಷ್ಮೀಸಾಗರ ಕೆರೆಯನ್ನು 2014-15ನೇ ಸಾಲಿನ ಸಾಲಿನಲ್ಲಿ ರೂ.20.00 ಲಕ್ಷ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ.</td></tr>
<tr><td>3.</td><td>ತುಮಕೂರು</td><td>
<table>
<tr><th>ಕ್ರ ಸಂ.</th><th>ಕಾಮಗಾರಿಯ ಹೆಸರು</th><th>ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ</th></tr>
<tr><td>1</td><td>ಗೂಳೂರು ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಎಲ್.ಸಿ.ಡಿ.ಎ.ಯಿಂದ ಅನುಮತಿ ಪಡೆದು, ನಿಯಮಾನುಸಾರ ಕೈಗೊಳ್ಳಲಾಗುತ್ತಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.</td><td>300.00</td></tr>
<tr><td>2</td><td>ಉಪ್ಪಾರಹಳ್ಳಿ ಕೆರೆಕಟ್ಟೆ ಅಭಿವೃದ್ಧಿ ಸಂಬಂಧ ಕ್ರಿಯಾ ಯೋಜನೆ ಅನುಮೋದನೆಯಾಗಿದ್ದು, ಕಾಮಗಾರಿಯನ್ನು ಕೈಗೊಳ್ಳಲು ಎಲ್.ಸಿ.ಡಿ.ಎ. ಯಿಂದ ಅನುಮತಿ ಪಡೆದು, ಟೆಂಡರ್ ಪ್ರಕ್ರಿಯೇ ಪ್ರಾರಂಭಿಸಲಾಗುವುದು.</td><td>213.00</td></tr>
<tr><td>3</td><td>ಮೈದಾಳ ಅಮಾನಿಕೆರೆ ಅಭಿವೃದ್ಧಿ ಸಂಬಂಧ ಕ್ರಿಯಾ ಯೋಜನೆ ಅನುಮೋದನೆಯಾಗಿದ್ದು, ಕಾಮಗಾರಿಯನ್ನು ಕೈಗೊಳ್ಳಲು ಎಲ್.ಸಿ.ಡಿ.ಎ ಯಿಂದ ಅನುಮತಿ ಪಡೆದು, ಟೆಂಡರ್ ಪ್ರಕ್ರಿಯೇ ಪ್ರಾರಂಭಿಸಲಾಗುವುದು.</td><td>112.00</td></tr>
<tr><td>4</td><td>ಮರಳೂರು ಮತ್ತು ಗಂಗಸಂದ್ರ ಹೊಸಕೆರೆ ಕಾಮಗಾರಿಯನ್ನು ಕೈಗೊಳ್ಳಲು ಕ್ರಿಯಾ ಯೋಜನೆ ಅನುಮೋದನೆಯಾಗಿದ್ದು, ಎಲ್.ಸಿ.ಡಿ.ಎ. ಯಿಂದ ಅನುಮತಿ ಪಡೆದು, ಟೆಂಡರ್ ಪ್ರಕ್ರಿಯೇ ಪ್ರಾರಂಭಿಸಲಾಗುವುದು.</td><td>438.00</td></tr>
<tr><td>5</td><td>ಕೆಸರುಮಡು ಜೋಗಿಕಟ್ಟೆ ಕೆರೆ ಅಭಿವೃದ್ಧಿ ಸಂಬಂಧ ಕ್ರಿಯಾ ಯೋಜನೆ ಅನುಮೋದನೆಯಾಗಿದ್ದು, ಕಾಮಗಾರಿಯನ್ನು ಕೈಗೊಳ್ಳಲು ಎಲ್.ಸಿ.ಡಿ.ಎ. ಯಿಂದ ಅನುಮತಿ ಪಡೆದು, ಟೆಂಡರ್ ಪ್ರಕ್ರಿಯೇ ಪ್ರಾರಂಭಿಸಲಾಗುವುದು.</td><td>199.50</td></tr>
</table>
</td></tr>
<tr><td>4.</td><td>ಚಿತ್ರದುರ್ಗ</td><td>ಚಿತ್ರದುರ್ಗ ನಗರದ ಅರಸನ ಕೆರೆಯನ್ನು ಅಭಿವೃದ್ಧಿಪಡಿಸಲು ರೂ.500.00 ಲಕ್ಷಗಳಿಗೆ ವಿಸ್ತೃತ ಯೋಜನೆಯನ್ನು ತಯಾರಿಸಿ, ದಿನಾಂಕ</td></tr>
</table>

<table>
<tr><td></td><td></td><td>26.08.2019ರಂದು ಸರ್ಕಾರದ ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಿದ್ದು, ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.</td></tr>
<tr><td>5.</td><td>ದಾವಣಗೆರೆ-ಹರಿಹರ</td><td>ದಾವಣಗೆರೆ ನಗರದ 5 ಕೆರೆಗಳನ್ನು ಅಭಿವೃದ್ಧಿಪಡಿಸಲು 2020-21ನೇ ಸಾಲಿನಲ್ಲಿ ಪ್ರಾಧಿಕಾರದ ಆಯವ್ಯಯದಲ್ಲಿ ಕ್ರಿಯಾ ಯೋಜನೆಯನ್ನು ಸೇರಿಸಿಕೊಳ್ಳಲಾಗುವುದು.</td></tr>
<tr><td>6.</td><td>ರಾಮನಗರ</td><td>ರಾಮನಗರ ರಂಗರಾಯರದೊಡ್ಡಿ ಕೆರೆ ಮತ್ತು ಚನ್ನಪಟ್ಟಣದ ಕುಡಿನೀರುಕಟ್ಟೆ ಕೆರೆಗಳ ಏರಿಗಳ ಮೇಲೆ ಉದ್ಯಾನವನ ಅಭಿವೃದ್ಧಿಪಡಿಸಲಾದ ಕ್ರಿಯಾ ಯೋಜನೆ ಸಿದ್ಧಪಡಿಸಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿರುತ್ತದೆ.</td></tr>
<tr><td>7.</td><td>ಕೋಲಾರ</td><td>ಇಲ್ಲ.</td></tr>
<tr><td>8.</td><td>ಚಿಕ್ಕಬಳ್ಳಾಪುರ</td><td>ಇಲ್ಲ.</td></tr>
<tr><td>9.</td><td>ಬೆಳಗಾವಿ</td><td>ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಸಭೆ ದಿನಾಂಕ 04.11.2019ರ ವಿಷಯ ಸಂಖ್ಯೆ 8ರಲ್ಲಿ ರೂ.150 ಲಕ್ಷಗಳನ್ನು ಬೆಳಗಾವಿ ದಕ್ಷಿಣ ವಿಧಾನಸಭಾ ಮತಕ್ಷೇತ್ರದಲ್ಲಿ ಬರುವ ಕೆರೆಗಳಿಗೆ ಹಾಗೂ ರೂ.50 ಲಕ್ಷಗಳನ್ನು ಉತ್ತರ ಮತಕ್ಷೇತ್ರದಲ್ಲಿ ಬರುವ ಕೆರೆಗಳಿಗೆ ವೆಚ್ಚ ಮಾಡಲು ತೀರ್ಮಾನಿಸಲಾಗಿದ್ದು, ವಿವರವಾದ ಯೋಜನಾ ವರದಿ ತಯಾರಿಕೆ ಪ್ರಗತಿಯಲ್ಲಿದೆ.</td></tr>
<tr><td>10.</td><td>ಗದಗ-ಬೆಟಗೇರಿ</td><td>2016-17ನೇ ಸಾಲಿನಲ್ಲಿ ಹಸಿರು ಕೆರೆಯನ್ನು ಅಭಿವೃದ್ಧಿಪಡಿಸಲು ರೂ.198.50 ಲಕ್ಷಗಳ ಮೊತ್ತಕ್ಕೆ ಕ್ರಿಯಾ ಯೋಜನೆ ಮಂಜೂರಾತಿ ಪಡೆದು ಕಾಮಗಾರಿ ಚಾಲ್ತಿಯಲ್ಲಿದೆ.</td></tr>
<tr><td>11.</td><td>ಕಾರವಾರ</td><td>ಇಲ್ಲ.</td></tr>
<tr><td>12.</td><td>ಹಾವೇರಿ</td><td>ಹಾವೇರಿ ನಗರದ ಮುಲ್ಲಾನ ಕೆರೆ ಹಾಗೂ ಈಜಾರಿ ಲಕಮಾಪುರ ಗ್ರಾಮದ ಶ್ರೀ ಬಸವಣ್ಣದೇವರ ಕೆರೆಗಳ ಕ್ರಿಯಾ ಯೋಜನೆ ಸಿದ್ಧಪಡಿಸಲಾಗಿದೆ.</td></tr>
<tr><td>13.</td><td>ವಿಜಯಪುರ</td><td>
<table>
<tr><th>ಕ್ರ. ಸಂ.</th><th>ಕಾಮಗಾರಿ ಹೆಸರು</th><th>ಅಂದಾಜು ರೂ.ಕೋಟಿಗಳಲ್ಲಿ</th></tr>
<tr><td>1</td><td>ವಿಜಯಪುರ ನಗರದ ಭೂತನಾಳ ಕೆರೆಯಲ್ಲಿ ಲ್ಯಾಂಡ್‌ಸ್ಕೇಪ್ ಮತ್ತು ಇತರೆ ನಾಗರೀಕ ಸೌಲಭ್ಯದ ಕಾಮಗಾರಿಗಳು</td><td>ರೂ.9.13</td></tr>
<tr><td>2</td><td>ಭೂತನಾಳ ಕೆರೆ ಅಭಿವೃದ್ಧಿ ಕಾಮಗಾರಿಗಳು (2ನೇ ಹಂತದ ಕಾಮಗಾರಿಗಳು)</td><td>ರೂ.4.00
ಸರ್ಕಾರದ ಆಡಳಿತಾತ್ಮಕ ಅನುಮೋದನೆಗಾಗಿ ಪ್ರಾಧಿಕಾರವು ಸಲ್ಲಿಸಿರುವ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.</td></tr>
</table>
</td></tr>
<tr><td>14.</td><td>ಹುಬ್ಬಳ್ಳಿ-ಧಾರವಾಡ</td><td>ಪ್ರಾಧಿಕಾರದಲ್ಲಿ ಸಂಗ್ರಹಿಸಲಾದ ಕೆರೆ ಅಭಿವೃದ್ಧಿ ಶುಲ್ಕ ಮೊತ್ತದ ಪೈಕಿ ರೂ.20.00 ಕೋಟಿಗಳನ್ನು ಒಟ್ಟು 4 ಕೆರೆಗಳನ್ನು ಅಭಿವೃದ್ಧಿಪಡಿಸಲು ದಿನಾಂಕ 21.12.2019ರ ಪ್ರಾಧಿಕಾರದ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಅದರನ್ವಯ ಡಿ.ಪಿ.ಆರ್.ಗಳನ್ನು ತಯಾರಿಸಲು ಲೋಕೋಪಯೋಗಿ ಇಲಾಖೆ ಹಾಗೂ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಪ್ರಾಧಿಕಾರದಿಂದ ಪತ್ರ ಬರೆಯಲಾಗಿರುತ್ತದೆ.</td></tr>
<tr><td>15.</td><td>ಬೀದರ್</td><td>ಇಲ್ಲ.</td></tr>
<tr><td>16.</td><td>ಬಳ್ಳಾರಿ</td><td>ಇಲ್ಲ.</td></tr>
</table>

17.	ಕೊಪ್ಪಳ	ಸಿರಸಪ್ಪಯ್ಯ ಮಠ (ಹಂದಿ ಕೆರೆ) ಕೆರೆಯನ್ನು ಅಭಿವೃದ್ಧಿಪಡಿಸುವ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸುವ ಸಂಬಂಧ ಕಾರ್ಯಾದೇಶವನ್ನು ನೀಡುವ ಕಾರ್ಯ ಪ್ರಗತಿಯಲ್ಲಿರುತ್ತದೆ.
18.	ರಾಯಚೂರು	ಇಲ್ಲ.
19.	ಯಾದಗಿರಿ	ಡಿ.ಪಿ.ಆರ್. ತಯಾರಿಸುವ ಕೆಲಸ ಪ್ರಗತಿಯಲ್ಲಿದೆ.
20.	ವಿಜಯನಗರ ಪ್ರದೇಶ ನಗರಾಭಿವೃದ್ಧಿ ಪ್ರಾಧಿಕಾರ	ದಿನಾಂಕ 29.02.2020 ರಂದು ನಡೆದ ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಸಾಮಾನ್ಯ ಸಭೆಯಲ್ಲಿ ಶಿವಪುರ ಕೆರೆ ಅಭಿವೃದ್ಧಿಪಡಿಸಲು ಜಿಲ್ಲಾ ಪಂಚಾಯತ್ ಮತ್ತು ಪ್ರಾಧಿಕಾರದಿಂದ ರೂ.99.80 ಲಕ್ಷಗಳಿಗೆ ಕ್ರಿಯಾ ಯೋಜನೆ ಹಮ್ಮಿಕೊಳ್ಳಲು ನಿರ್ಣಯಿಸಲಾಗಿರುತ್ತದೆ.
21.	ಕಲಬುರಗಿ	ಇಲ್ಲ.
22.	ಹೊಸಪೇಟೆ	ಇಲ್ಲ.
23.	ಮೈಸೂರು	ಹೌದು.
24.	ಮಂಗಳೂರು	16 ಕೆರೆಗಳ ಕ್ರಿಯಾ ಯೋಜನೆ ಸಿದ್ಧಪಡಿಸಲಾಗಿದೆ.
25.	ಮಡಿಕೇರಿ	ಇಲ್ಲ.
26.	ಹಾಸನ	ಹಾಸನ ತಾಲ್ಲೂಕು, ಕಸಬಾ ಹೋಬಳಿ, ಹಾಸನ ಗ್ರಾಮದ ಸ.ನಂ.388ರಲ್ಲಿನ 04ಎಕರೆ 09ಗುಂಟೆ ಸರ್ಕಾರಿ ಕೆರೆಯನ್ನು ಅಭಿವೃದ್ಧಿಪಡಿಸಲು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿದೆ.
27.	ಉಡುಪಿ	ಪ್ರಸ್ತುತ ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಮಣಿಪಾಲದಲ್ಲಿರುವ ಮಣ್ಣಪಳ್ಳ ಕೆರೆಯ ಹೂಳೆತ್ತುವ ಕಾಮಗಾರಿ, ಮೂಡುತೋನ್ಸೆ ಗ್ರಾಮದ ಸ.ನಂ.183 ರಲ್ಲಿರುವ 3.17 ಎಕರೆ ಸರ್ಕಾರಿ ಅಗಸನ ಕೆರೆ ಕಾಮಗಾರಿ ಇಂದ್ರಾಳಿ ಮಹಾಲಿಂಗೇಶ್ವರ ದೇವಸ್ಥಾನದ ಪಕ್ಕದ ಸರ್ಕಾರಿ ಕೆರೆ ಅಭಿವೃದ್ಧಿ, ಕೊಡವೂರು ಶಂಕರ ನಾರಾಯಣ ದೇವಸ್ಥಾನದ ತೀರ್ಥಕೆರೆ ಅಭಿವೃದ್ಧಿ, ಬಡಾನಿಡಿಯೂರು ಗ್ರಾಮದ ಸ.ನಂ.73/13ರಲ್ಲಿರುವ ಸರ್ಕಾರಿ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳುವ ಕ್ರಿಯಾ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.
28.	ಚಿಕ್ಕಮಗಳೂರು	ಕೆರೆಗಳು ಸಣ್ಣ ನೀರವಾರಿ ಇಲಾಖೆಯ ಉಸ್ತುವಾರಿಯಲ್ಲಿರುತ್ತವೆ.
29.	ಚಾಮರಾಜನಗರ–ರಾಮಸಮುದ್ರ	ಇಲ್ಲ.
30.	ಮಂಡ್ಯ	ಮಂಡ್ಯ ನಗರದ ವ್ಯಾಪ್ತಿಯ ಕೋಣನಹಳ್ಳಿ ಕೆರೆ ಅಭಿವೃದ್ಧಿಯನ್ನು ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ನಗರಸಭೆ, ಮಂಡ್ಯ ಸಹಯೋಗದಲ್ಲಿ ಕ್ರಿಯಾ ಯೋಜನೆ ಸಿದ್ಧಪಡಿಸಿ ಕಾರ್ಯಕ್ರಮ ಹಮ್ಮಿಕೊಳ್ಳಲು ಕ್ರಮವಹಿಸಲಾಗಿದೆ.

(ಸಿ.ಎಸ್.ಶಿವಕುಮಾರಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಅನುಬಂಧ-3

ಕ್ರ ಸಂ.	ಜಿಲ್ಲೆ	ನಗರಾಭಿವೃದ್ಧಿ ಪ್ರಾಧಿಕಾರದ ಹೆಸರು	ಕೆರೆ ಅಭಿವೃದ್ಧಿ ಶುಲ್ಕದಲ್ಲಿ ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಕೆರೆಗಳ ಅಭಿವೃದ್ಧಿ ಪಡಿಸಿರುವ ವಿವರ
1.	ಶಿವಮೊಗ್ಗ	ಶಿವಮೊಗ್ಗ-ಭದ್ರಾವತಿ	ಇದುವರೆಗೂ ಯಾವುದೇ ಕೆರೆ ಅಭಿವೃದ್ಧಿಯು ಪೂರ್ಣಗೊಂಡಿಲ್ಲ.
2.	ಕೋಲಾರ	ಕೆ.ಜಿ.ಎಫ್	ಲಕ್ಷ್ಮೀಸಾಗರ ಕೆರೆಯನ್ನು 2014-15ನೇ ಸಾಲಿನಲ್ಲಿ ರೂ.20.00 ಲಕ್ಷಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ.
3.	ತುಮಕೂರು	ತುಮಕೂರು	ಇದುವರೆಗೂ ಯಾವುದೇ ಕೆರೆ ಅಭಿವೃದ್ಧಿಯು ಪೂರ್ಣಗೊಂಡಿಲ್ಲ.
4.	ಚಿತ್ರದುರ್ಗ	ಚಿತ್ರದುರ್ಗ	ಇದುವರೆಗೂ ಯಾವುದೇ ಕೆರೆ ಅಭಿವೃದ್ಧಿಯು ಪೂರ್ಣಗೊಂಡಿಲ್ಲ.
5.	ದಾವಣಗೆರೆ	ದಾವಣಗೆರೆ-ಹರಿಹರ	ದಾವಣಗೆರೆ ಜಿಲ್ಲೆಯ ಕುಂದುವಾಡ ಕೆರೆಯನ್ನು ಪ್ರಾಧಿಕಾರದಿಂದ ಅಭಿವೃದ್ಧಿಪಡಿಸಲಾಗಿರುತ್ತದೆ.
6.	ರಾಮನಗರ	ರಾಮನಗರ	ಪ್ರಾಧಿಕಾರದ ವತಿಯಿಂದ ರಾಮನಗರದ ರಂಗರಾಯರದೊಡ್ಡಿ ಕೆರೆ ಮತ್ತು ಚನ್ನಪಟ್ಟಣದ ಕುಡಿನೀರುಕಟ್ಟೆ ಕೆರೆಗಳ ಏರಿಗಳ ಮೇಲೆ ಉದ್ಯಾನವನ ಅಭಿವೃದ್ಧಿಪಡಿಸಿ ನಿರ್ವಹಣೆ ಮಾಡಿ ಸಂಬಂಧಿತ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲಾಗಿರುತ್ತದೆ.
7.	ಕೋಲಾರ	ಕೋಲಾರ	ಇಲ್ಲ.
8.	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ಇಲ್ಲ.
9.	ಬೆಳಗಾವಿ	ಬೆಳಗಾವಿ	ಇಲ್ಲ.
10.	ಗದಗ	ಗದಗ-ಬೆಟಗೇರಿ	ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಹಸಿರು ಕೆರೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ.
11.	ಉತ್ತರ ಕನ್ನಡ	ಕಾರವಾರ	ಇಲ್ಲ.
12.	ಹಾವೇರಿ	ಹಾವೇರಿ	ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಎರಡು ಕೆರೆಗಳನ್ನು ಅಭಿವೃದ್ಧಿಪಡಿಸಲು ಕ್ರಮವಹಿಸಿದ್ದು ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. 1. ಹಾವೇರಿ ಶಹರದ ಮುಲ್ಲಾನಕೆರೆ ಅಭಿವೃದ್ಧಿ ರೂ.80.00 ಲಕ್ಷ. 2. ಹಾವೇರಿ ಶಹರದ ಇಜಾರಿ ಲಕಮಾಪುರ ಗ್ರಾಮದ ಶ್ರೀ ಬಸವಣ್ಣ ದೇವರ ಕೆರೆ ರೂ.99.82 ಲಕ್ಷ.
13.	ವಿಜಯಪುರ	ವಿಜಯಪುರ	ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ವಿಜಯಪುರ ನಗರದ ಭೂತನಾಳ ಕೆರೆ ಅಭಿವೃದ್ಧಿ ಕಾರ್ಯನಿರ್ವಹಿಸಲಾಗುತ್ತಿರುತ್ತದೆ.
14.	ಧಾರವಾಡ	ಹುಬ್ಬಳ್ಳಿ-ಧಾರವಾಡ	ಪ್ರಾಧಿಕಾರದ ಸಭೆ ತೀರ್ಮಾನದನ್ವಯ ರೂ.1.00 ಕೋಟಿ ವೆಚ್ಚದಲ್ಲಿ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ 4 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ.
15.	ಬೀದರ್	ಬೀದರ್	ಇಲ್ಲ.
16.	ಬಳ್ಳಾರಿ	ಬಳ್ಳಾರಿ	ಇಲ್ಲ.
17.	ಕೊಪ್ಪಳ	ಕೊಪ್ಪಳ	ಇದುವರೆಗೂ ಯಾವುದೇ ಕೆರೆ ಅಭಿವೃದ್ಧಿಯು ಪೂರ್ಣಗೊಂಡಿಲ್ಲ.
18.	ರಾಯಚೂರು	ರಾಯಚೂರು	ಇಲ್ಲ.

<table>
<tr><td>19.</td><td>ಯಾದಗಿರಿ</td><td>ಯಾದಗಿರಿ</td><td>ಇಲ್ಲ.</td></tr>
<tr><td>20.</td><td>ಬಳ್ಳಾರಿ</td><td>ವಿಜಯನಗರ ಪ್ರದೇಶ ನಗರಾಭಿವೃದ್ಧಿ ಪ್ರಾಧಿಕಾರ</td><td>ಇದುವರೆಗೂ ಯಾವುದೇ ಕೆರೆ ಅಭಿವೃದ್ಧಿಯು ಪೂರ್ಣಗೊಂಡಿಲ್ಲ.</td></tr>
<tr><td>21.</td><td>ಕಲಬುರಗಿ</td><td>ಕಲಬುರಗಿ</td><td>ಇಲ್ಲ.</td></tr>
<tr><td>22.</td><td>ಬಳ್ಳಾರಿ</td><td>ಹೊಸಪೇಟೆ</td><td>ಈ ಪ್ರಾಧಿಕಾರದ ಸ್ವಾಧೀನದಲ್ಲಿ ಯಾವುದೇ ಕೆರೆಗಳು ಇರುವುದಿಲ್ಲ.</td></tr>
<tr><td>23.</td><td>ಮೈಸೂರು</td><td>ಮೈಸೂರು</td><td>ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಕೆರೆ ಅಭಿವೃದ್ಧಿ ಶುಲ್ಕದಿಂದ ಅಭಿವೃದ್ಧಿಪಡಿಸಲಾಗಿರುವ ಕೆರೆಗಳ ವಿವರ ಈ ಕೆಳಕಂಡಂತಿದೆ;
<table>
<tr><th>ಕೆರೆಯ ಹೆಸರು</th><th>ಅಭಿವೃದ್ಧಿ ವೆಚ್ಚದ ಮೊತ್ತ ರೂ.ಲಕ್ಷಗಳಲ್ಲಿ</th></tr>
<tr><td>ಲಿಂಗಾಂಬುದಿ ಕೆರೆ</td><td>450.00</td></tr>
<tr><td>ಹಿನಕಲ್ ಕೆರೆ</td><td>84.70</td></tr>
<tr><td>ದೇವನೂರು ಕೆರೆ</td><td>264.06</td></tr>
<tr><td>ಆಲನಹಳ್ಳಿ ಗ್ರಾಮದ ಕಟ್ಟೆಗಳ ಅಭಿವೃದ್ಧಿ</td><td>340.00</td></tr>
<tr><td>ಒಟ್ಟು ವೆಚ್ಚ</td><td>832.76</td></tr>
</table></td></tr>
<tr><td>24.</td><td>ದಕ್ಷಿಣ ಕನ್ನಡ</td><td>ಮಂಗಳೂರು</td><td>ಪ್ರಾಧಿಕಾರದ ವ್ಯಾಪ್ತಿಯಲ್ಲಿ ಈಗಾಗಲೇ 5 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ.</td></tr>
<tr><td>25.</td><td>ಮಡಿಕೇರಿ</td><td>ಮಡಿಕೇರಿ</td><td>ಇಲ್ಲ.</td></tr>
<tr><td>26.</td><td>ಹಾಸನ</td><td>ಹಾಸನ</td><td>ಇಲ್ಲ.</td></tr>
<tr><td>27.</td><td>ಉಡುಪಿ</td><td>ಉಡುಪಿ</td><td>ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಇದುವರೆಗೂ 15 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ.</td></tr>
<tr><td>28.</td><td>ಚಿಕ್ಕಮಗಳೂರು</td><td>ಚಿಕ್ಕಮಗಳೂರು</td><td>ಇಲ್ಲ.</td></tr>
<tr><td>29.</td><td>ಚಾಮರಾಜನಗರ</td><td>ಚಾಮರಾಜನಗರ–ರಾಮಸಮುದ್ರ</td><td>ಈ ಪ್ರಾಧಿಕಾರದಿಂದ ಯಾವುದೇ ಕೆರೆಯನ್ನು ಇದುವರೆಗೂ ಅಭಿವೃದ್ಧಿಪಡಿಸಿರುವುದಿಲ್ಲ.</td></tr>
<tr><td>30.</td><td>ಮಂಡ್ಯ</td><td>ಮಂಡ್ಯ</td><td>ಇದುವರೆಗೂ ಯಾವುದೇ ಕೆರೆ ಅಭಿವೃದ್ಧಿಯು ಪೂರ್ಣಗೊಂಡಿಲ್ಲ.</td></tr>
</table>

(ಪಿ.ಎಸ್.ಶಿವಕುಮಾರಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಅನುಬಂಧ–4

ಕ್ರ ಸಂ.	ನಗರಾಭಿವೃದ್ಧಿ ಪ್ರಾಧಿಕಾರದ ಹೆಸರು	ಬಾಕಿ ಉಳಿದ ಅನುದಾನದಲ್ಲಿ ಕೆರೆಗಳ ಅಭಿವೃದ್ಧಿಯನ್ನು ಯಾವಾಗ ಕೈಗೊಳ್ಳಲಾವುದು ಎಂಬ ವಿವರ
1.	ಶಿವಮೊಗ್ಗ–ಭದ್ರಾವತಿ	ದಿನಾಂಕ 14.02.2020 ರಂದು ನಡೆದ ಪ್ರಾಧಿಕಾರದ ಸಭೆಯ ನಿರ್ಣಯದಂತೆ, ಕೆರೆ ಅಭಿವೃದ್ಧಿಪಡಿಸಲು 2020–21ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಅನುವು ಮಾಡಿಕೊಂಡಿದ್ದು, ಸಕ್ಷಮ ಪ್ರಾಧಿಕಾರದ ಅನುಮೋದನೆಯಾದ ನಂತರ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.
2.	ಕೆ.ಜಿ.ಎಫ್	ಈ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಕೆರೆ ಸಂರಕ್ಷಣಾ ಶುಲ್ಕವನ್ನು ವಿನಿಯೋಗಿಸಿಕೊಳ್ಳುವ ಮಾರ್ಗಸೂಚಿ ಯಂತೆ ಕ್ರಮವಹಿಸಲಾಗುವುದು.
3.	ತುಮಕೂರು	ಯಾವುದೇ ಅನುದಾನ ಬಾಕಿ ಉಳಿದಿರುವುದಿಲ್ಲ.
4.	ಚಿತ್ರದುರ್ಗ	ಆರ್ಥಿಕ ಸಂಪನ್ಮೂಲಗಳ ಕ್ರೂಢೀಕರಣೆಗೆ ಅನುಸಾರವಾಗಿ 2020–21ನೇ ಸಾಲಿನ ಪ್ರಾಧಿಕಾರದ ಆಯವ್ಯಯದಲ್ಲಿ ಕ್ರಿಯಾ ಯೋಜನೆಯಲ್ಲಿ ಸೇರಿಸಿಕೊಂಡು ಕೆರೆಗಳನ್ನು ಅಭಿವೃದ್ಧಿಪಡಿಸಲಾಗುವುದು.
5.	ದಾವಣಗೆರೆ–ಹರಿಹರ	2019–20ನೇ ಸಾಲಿನಲ್ಲಿ ದಾವಣಗೆರೆ ನಗರದ 5 ಕೆರೆಗಳನ್ನು ಅಭಿವೃದ್ಧಿಪಡಿಸಲು ಕ್ರಿಯಾ ಯೋಜನೆಯನ್ನು ತಯಾರಿಸಿ ಜಿಲ್ಲೆಯ ಕೆರೆ ಅಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ. 2020–21ನೇ ಸಾಲಿನ ಪ್ರಾಧಿಕಾರದ ಆಯವ್ಯಯದಲ್ಲಿ ಕ್ರಿಯಾ ಯೋಜನೆಗೆ ಸೇರಿಸಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು.
6.	ರಾಮನಗರ	ಇಲ್ಲ.
7.	ಕೋಲಾರ	ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು, ಕುಂಬಾರಹಳ್ಳಿ ಕೆರೆಯ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ರೂ.25.00 ಲಕ್ಷಗಳ ಕಾಮಗಾರಿಯನ್ನು ಠೇವಣಿ ದೇಣಿಗೆ ಮೂಲಕ ನಿರ್ವಹಿಸಲು ರೂ.25.00 ಲಕ್ಷಗಳಿಗೆ ಸಂಕ್ಷಿಪ್ತ ವರದಿ ಮತ್ತು ಅಂದಾಜುಪಟ್ಟಿಯನ್ನು ಅನುಮೋದನೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.
8.	ಚಿಕ್ಕಬಳ್ಳಾಪುರ	ಇಲ್ಲ.
9.	ಬೆಳಗಾವಿ	ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಮುಂಬರುವ ಸಭೆಯಲ್ಲಿ ಸದರಿ ವಿಷಯವನ್ನು ಮಂಡಿಸಿ ಕ್ರಮ ಜರುಗಿಸಲಾಗುವುದು.
10.	ಗದಗ–ಬೆಟಗೇರಿ	2020–21ನೇ ಸಾಲಿನಲ್ಲಿ ನಗರದ ವ್ಯಾಪ್ತಿಯಲ್ಲಿ ಆಯವ್ಯಯದಲ್ಲಿ ನಗರದ ವ್ಯಾಪ್ತಿಯಲ್ಲಿ ಇರುವ ಭೀಷ್ಮ ಕೆರೆ, ಸಿಂಹ ಕೆರೆಗಳನ್ನು ಅಭಿವೃದ್ಧಿಪಡಿಸಲಾಗುವುದು.
11.	ಕಾರವಾರ	ಕೆರೆ ಅಭಿವೃದ್ಧಿಗಾಗಿ ಯಾವುದೇ ಅನುದಾನ ಬಂದಿರುವುದಿಲ್ಲ. ಮುಂದುವರೆದು, ಕಾರವಾರ ಸ್ಥಳೀಯ ಯೋಜನಾ ಪ್ರದೇಶ ಪ್ರದೇಶದಲ್ಲಿ ಇರುವ ಕೆರೆಗಳ ಸಮೀಕ್ಷೆ ಮಾಡಿ ಕೆರೆಯ ಅಭಿವೃದ್ಧಿಗಾಗಿ ಸಭೆಯಲ್ಲಿ ನಿರ್ಧರಿಸಿ ಕೆರೆಯನ್ನು ಗುರುತಿಸಿ ಈ ಬಗ್ಗೆ ಕ್ರಿಯಾ ಯೋಜನೆಯನ್ನು ತಯಾರಿಸಿ ಸಮಗ್ರ ಯೋಜನಾ ವರದಿಗೆ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ಕೆರೆಗಳ ಅಭಿವೃದ್ಧಿ ಕಾಮಗಾರಿಯನ್ನು ನಿಯಮಾನುಸಾರ

		ಕೈಗೆತ್ತಿಕೊಳ್ಳಲಾಗುವುದು.
12.	ಹಾವೇರಿ	ಶುಲ್ಕ ಸಂಗ್ರಹವಾದ ನಂತರ ಕೆರೆಗಳ ಅಭಿವೃದ್ಧಿಪಡಿಸಲು ಕ್ರಿಯಾ ಯೋಜನೆ ಸಿದ್ಧಪಡಿಸಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು.
13.	ವಿಜಯಪುರ	ಪ್ರಾಧಿಕಾರವು ಸಂಗ್ರಹಿಸಿದ ಕೆರೆ ಅಭಿವೃದ್ಧಿ ಶುಲ್ಕದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆದುಕೊಂಡು ಹಂತ ಹಂತವಾಗಿ ಕೈಗೊಳ್ಳಲಾಗುವುದು.
14.	ಹುಬ್ಬಳ್ಳಿ-ಧಾರವಾಡ	ಸಕ್ಷಮ ಪ್ರಾಧಿಕಾರದ ಅನುಮೋದನೆ ದೊರೆತ ನಂತರ ಬಾಕಿ ಉಳಿದ ಅನುದಾನದಲ್ಲಿ ಕೆರೆಗಳ ಅಭಿವೃದ್ಧಿ ಕೈಗೊಳ್ಳಲಾಗುವುದು.
15.	ಬೀದರ್	ಯೋಜನೆಯನ್ನು ಹಮ್ಮಿಕೊಂಡು ಸಮೂಚಿತ ಮಾರ್ಗದಲ್ಲಿ ಪ್ರಸ್ತಾವನೆಯನ್ನು ಅನುಮೋದನೆ ಪಡೆದ ನಂತರ ಕ್ರಮಕೈಗೊಳ್ಳಲಾಗುವುದು.
16.	ಬಳ್ಳಾರಿ	ಪ್ರಾಧಿಕಾರದ ವ್ಯಾಪ್ತಿಯಲ್ಲಿ ಯಾವುದೇ ಕೆರೆಗಳು ಇರುವುದಿಲ್ಲ.
17.	ಕೊಪ್ಪಳ	ಇಲ್ಲ.
18.	ರಾಯಚೂರು	ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕೆರೆ ಅಭಿವೃದ್ಧಿ ಶುಲ್ಕದಲ್ಲಿ ಬಾಕಿ ಉಳಿದ ಅನುದಾನದಲ್ಲಿ ಕೆರೆಗಳ ಅಭಿವೃದ್ಧಿಗಳನ್ನು ಸದ್ಯದಲ್ಲಿ ಕೈಗೊಳ್ಳಲಾಗುವುದು.
19.	ಯಾದಗಿರಿ	ಇಲ್ಲ.
20.	ವಿಜಯನಗರ ಪ್ರದೇಶ ನಗರಾಭಿವೃದ್ಧಿ ಪ್ರಾಧಿಕಾರ	ಪ್ರಾಧಿಕಾರದ ವ್ಯಾಪ್ತಿಯಲ್ಲಿ ಶಿವಪುರ ಕೆರೆಯನ್ನು ಅಭಿವೃದ್ಧಿಪಡಿಸಲಾಗುತ್ತದೆ. ಮುಂದುವರೆದು, ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಸಾಮಾನ್ಯ ಸಭೆಯಲ್ಲಿ ಸದರಿ ವಿಷಯದ ಬಗ್ಗೆ ಪ್ರಸ್ತಾಪಿಸಿ ಕ್ರಮ ವಹಿಸಲಾಗುವುದು.
21.	ಕಲಬುರಗಿ	ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಕೆರೆ, ನಾಲೆಗಳನ್ನು ಗುರುತಿಸಿ ಯೋಜನಾ ವರದಿ ಸಿದ್ಧಪಡಿಸಲು ನಿರ್ಣಯಿಸಲಾಗಿದೆ. ಯೋಜನಾ ವರದಿ ಸಿದ್ಧಪಡಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆಗಾಗಿ ಸಲ್ಲಿಸಲಾಗುವುದು.
22.	ಹೊಸಪೇಟೆ	ಅನ್ವಯಿಸುವುದಿಲ್ಲ.
23.	ಮೈಸೂರು	2020-21ನೇ ಸಾಲಿನಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ.

ಕೆರೆಯ ಹೆಸರು	ಅಭಿವೃದ್ಧಿ ವೆಚ್ಚದ ಮೊತ್ತ ರೂ.ಲಕ್ಷಗಳಲ್ಲಿ
ಲಿಂಗಾಂಬುದಿ ಕೆರೆ	200.00
ಹಿನಕಲ್ ಕೆರೆ	50.00
ದೇವನೂರು ಕೆರೆ	50.00
ಆಲನಹಳ್ಳಿ ಗ್ರಾಮದ ಕಟ್ಟೆಗಳ ಅಭಿವೃದ್ಧಿ	75.00
ಬೋಗಾದಿ ಕೆರೆ	75.00
ಒಟ್ಟು ವೆಚ್ಚ	**450.00**

24.	ಮಂಗಳೂರು	ಒಟ್ಟು 9 ಕೆರೆಗಳನ್ನು ಪ್ರಾರಂಭಿಸಲಾಗಿದೆ ಹಾಗೂ 6 ಕೆರೆಗಳ ಟೆಂಡರ್ ಕರೆಯುವ ಹಂತದಲ್ಲಿದೆ.
25.	ಮಡಿಕೇರಿ	ಇಲ್ಲ.
26.	ಹಾಸನ	ಇಲ್ಲ.
27.	ಉಡುಪಿ	2020-21ನೇ ಸಾಲಿನಲ್ಲಿ ಬಾಕಿ ಉಳಿದ ಕೆರೆ ಅಭಿವೃದ್ಧಿ ಅನುದಾನದಲ್ಲಿ ಮಣಿಪಾಲದಲ್ಲಿರುವ ಮಣ್ಣಪಳ್ಳ ಕೆರೆಯ ಹೂಳೆತ್ತುವ ಕಾಮಗಾರಿ, ಮೂಡುತೋನ್ಸೆ ಗ್ರಾಮದ

		ಸ.ನಂ.183ರಲ್ಲಿರುವ 3.17 ಎಕರೆ ಸರ್ಕಾರಿ ಅಗಸನ ಕೆರೆ ಕಾಮಗಾರಿ, ಇಂದ್ರಾಳಿ ಮಹಾಲಿಂಗೇಶ್ವರ ದೇವಸ್ಥಾನದ ಪಕ್ಕದ ಸರ್ಕಾರಿ ಕೆರೆ ಅಭಿವೃದ್ಧಿ, ಕೊಡವೂರು ಶಂಕರ ನಾರಾಯಣ ದೇವಸ್ಥಾನದ ತೀರ್ಥಕೆರೆ ಅಭಿವೃದ್ಧಿ ಹಾಗೂ ಬಡಾನಿಡಿಯೂರು ಗ್ರಾಮದ ಸ.ನಂ.73/13ರಲ್ಲಿರುವ ಸರ್ಕಾರಿ ಕೆರೆ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಕೈಗೊಳ್ಳಲಾಗುವುದು.
28.	ಚಿಕ್ಕಮಗಳೂರು	ಕೆರೆ ಅಭಿವೃದ್ಧಿಯ ಅವಶ್ಯ ಇದ್ದಲ್ಲಿ ಅಭಿವೃದ್ಧಿಯನ್ನು ಕೈಗೊಳ್ಳಲಾಗುವುದು.
29.	ಚಾಮರಾಜನಗರ–ರಾಮಸಮುದ್ರ	ಇಲ್ಲ.
30.	ಮಂಡ್ಯ	ಬಾಕಿ ಉಳಿಯಬಹುದಾದ ಅನುದಾನದಲ್ಲಿ ಕೆರೆಗಳ ಅಭಿವೃದ್ಧಿಯನ್ನು ಕೈಗೊಳ್ಳಲು ಮುಂದೆ ಕ್ರಮವಹಿಸಲಾಗುವುದು.

(ಸಿ.ಎಸ್.ಶಿವಕುಮಾರಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ:ಆನಾಸ 14 ಆನಾಸ 2020 (ಇ-ಆಫೀಸ್)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ, ನೆಲಮಹಡಿ
ಬೆಂಗಳೂರು ದಿನಾಂಕ: 04.03.2020

20
YS
06/03/2020

ಇವರಿಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ
ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಅಶೋಕ್ ನಾಯಕ್ .ಕೆ.ಬಿ (ಶಿವಮೊಗ್ಗ ಗ್ರಾಮಾಂತರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:317ಗೆಉತ್ತರ ನೀಡುವ ಬಗ್ಗೆ.

******

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಅಶೋಕ್ ನಾಯಕ್ .ಕೆ.ಬಿ (ಶಿವಮೊಗ್ಗ ಗ್ರಾಮಾಂತರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:317ಗೆಕ್ಕೆ ಉತ್ತರವನ್ನು ಸಿದ್ಧಪಡಿಸಿ, ಅದರ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

(ವಿ.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳ
ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ.

ಪ್ರತಿ:

1. ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆಯ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆಯ ಆಪ್ತ ಸಹಾಯಕಿ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ, ವಿಕಾಸಸೌಧ, ಬೆಂಗಳೂರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	317
ವಿಧಾನ ಸಭೆಯ ಸದಸ್ಯರ ಹೆಸರು	:	ಶ್ರೀ ಅಶೋಕ್ ನಾಯಕ್ ಕೆ.ಬಿ. (ಶಿವಮೊಗ್ಗ ಗ್ರಾಮಾಂತರ)
ಉತ್ತರಿಸಬೇಕಾದ ದಿನಾಂಕ	:	06.03.2020
ಉತ್ತರಿಸುವ ಸಚಿವರು	:	ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ನ್ಯಾಯಬೆಲೆ ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ; (ತಾಲ್ಲೂಕುವಾರು, ಗ್ರಾಮವಾರು ಅಂಗಡಿಗಳ ಸಂಪೂರ್ಣ ಮಾಹಿತಿ ನೀಡುವುದು);</td><td>ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು 570 ನ್ಯಾಯ ಬೆಲೆ ಅಂಗಡಿ ಕಾರ್ಯನಿರ್ವಹಿಸುತ್ತಿವೆ. ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರ.ಸಂ</th><th>ತಾಲ್ಲೂಕಿನ ಹೆಸರು</th><th>ನ್ಯಾಯಬೆಲೆ ಅಂಗಡಿ ಸಂಖ್ಯೆ</th></tr>
<tr><td>1</td><td>ಶಿವಮೊಗ್ಗ</td><td>130</td></tr>
<tr><td>2</td><td>ಭದ್ರಾವತಿ</td><td>131</td></tr>
<tr><td>3</td><td>ಸಾಗರ</td><td>60</td></tr>
<tr><td>4</td><td>ಹೊಸನಗರ</td><td>43</td></tr>
<tr><td>5</td><td>ಶಿಕಾರಿಪುರ</td><td>81</td></tr>
<tr><td>6</td><td>ಸೊರಬ</td><td>69</td></tr>
<tr><td>7</td><td>ತೀರ್ಥಹಳ್ಳಿ</td><td>56</td></tr>
<tr><td></td><td>ಒಟ್ಟು</td><td>570</td></tr>
</table>
ಗ್ರಾಮವಾರು ನ್ಯಾಯಬೆಲೆ ಅಂಗಡಿಗಳ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.</td></tr>
<tr><td>ಆ</td><td>ಅನೇಕ ನ್ಯಾಯ ಬೆಲೆ ಅಂಗಡಿಗಳಲ್ಲಿ ಬಯೋಮೆಟ್ರಿಕ್ ಸಮಸ್ಯೆಯಿದ್ದು, ಬಡವರಿಗೆ ಪಡಿತರ ಚೀಟಿ ದೊರಕುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಶಿವಮೊಗ್ಗ ಜಿಲ್ಲೆಯ 570 ನ್ಯಾಯ ಬೆಲೆ ಅಂಗಡಿಗಳ ಪೈಕಿ 568 ಅಂಗಡಿಗಳಲ್ಲಿ ಬಯೋಮೆಟ್ರಿಕ್ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಪಡಿತರ ವಿತರಣೆ ಸಮಯದಲ್ಲಿ ನ್ಯಾಯ ಬೆಲೆ ಅಂಗಡಿಗಳಲ್ಲಿ ಕಂಡುಬಂದ ಬಯೋಮೆಟ್ರಿಕ್ ಸಮಸ್ಯೆ ಬಗ್ಗೆ ಈಗಾಗಲೇ ಕ್ರಮವಹಿಸಲಾಗಿದೆ. 2020ರ ಫೆಬ್ರವರಿ ಮಾಹೆಯಲ್ಲಿ ಆಹಾರ ಧಾನ್ಯ ಹಂಚಿಕೆಯನ್ನು ಬಯೋಮೆಟ್ರಿಕ್ ವ್ಯವಸ್ಥೆಯ ಮೂಲಕವೇ ಮಾಡಲಾಗಿರುತ್ತದೆ.</td></tr>
</table>

ಇ	ನ್ಯಾಯ ಬೆಲೆ ಅಂಗಡಿಯಿಂದ 10 ಕಿ.ಮೀ. ದೂರದಲ್ಲಿರುವ ಗ್ರಾಮಗಳ ಫಲಾನುಭವಿಗಳಿಗೆ ಪಡಿತರ ವಿತರಿಸಲು ನ್ಯಾಯ ಬೆಲೆ ಅಂಗಡಿಯವರು ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ
ಈ	ನ್ಯಾಯಬೆಲೆ ಅಂಗಡಿಗಳ ಮುಖಾಂತರ ಎಲ್ಲಾ ಗ್ರಾಮಗಳ ಫಲಾನುಭವಿಗಳಿಗೆ ಪಡಿತರ ಪೂರೈಕೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?(ಸಂಪೂರ್ಣ ವಿವರ ನೀಡುವುದು)	ಪ್ರತಿ ತಿಂಗಳ 11ನೇ ತಾರೀಖಿನಿಂದ ತಿಂಗಳ ಕೊನೆಯ ದಿನಾಂಕದವರೆಗೂ ಬೆಳಗ್ಗೆ 7.00 ರಿಂದ ರಾತ್ರಿ 8.00 ಗಂಟೆಯವರೆಗೆ ನ್ಯಾಯ ಬೆಲೆ ಅಂಗಡಿಗಳಲ್ಲಿ ಪಡಿತರ ವಿತರಣೆ ಮಾಡಲು ಕ್ರಮವಹಿಸಲಾಗಿದೆ. ಹಾಗೂ ಪಡಿತರ ಚೀಟಿದಾರರು ಪಡಿತರ ಪದಾರ್ಥಗಳನ್ನು ರಾಜ್ಯದಲ್ಲಿರುವ ಯಾವುದೇ ನ್ಯಾಯ ಬೆಲೆ ಅಂಗಡಿಯಲ್ಲಿ ಪಡೆಯುವ ವ್ಯವಸ್ಥೆ ಜಾರಿಯಲ್ಲಿರುತ್ತದೆ.

ಆನಾಸ 14 ಆನಾಸ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)

ಆಹಾರ, ನಾಗರಿಕ ಸರಬರಾಜು ಮತ್ತು

ಗ್ರಾಹಕರ ವ್ಯವಹಾರಗಳ ಹಾಗೂ

ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

Talukwise Fair Price Shop Details

District Name	Taluk Name	Panchayat Name	Village Name	FPD ID	FPD Shop No	FPD LOCATION	SHOPNAME ENG
SHIVAMOGGA	BHADRAVATI	-	-	16062	1	IRA	RSSN UJJANIPURA
SHIVAMOGGA	BHADRAVATI	-	-	16063	2	IRA	PUUTTEGOWDA VINAYAKA F.P.S J.P.S Colony
SHIVAMOGGA	BHADRAVATI	-	-	16064	3	IRA	H.K.RAJU SIDDESHWARA F.P.S.PAPER TOWN
SHIVAMOGGA	BHADRAVATI	-	-	16067	6	IRA	RSSN (JANNAPURA)
SHIVAMOGGA	BHADRAVATI	-	-	16068	7	IRA	G D NATARAJ JAI BHARATH F.P.S Jannapura
SHIVAMOGGA	BHADRAVATI	-	-	16069	8	IRA	PARASHURAMRAO THIRUMALA F.P.S Paper Town
SHIVAMOGGA	BHADRAVATI	-	-	16070	9	IRA	SIDDALINGAIAH SIDDALINGESHWARA F.P.S Zinkline
SHIVAMOGGA	BHADRAVATI	-	-	16071	10	IRA	Y.V.MOHANKUMAR KAMADENU F.P.S.Zinkline
SHIVAMOGGA	BHADRAVATI	-	-	16073	12	IRA	G.Kumara.RANGANATHA FPS(NEW TOWN) Lower Hutta
SHIVAMOGGA	BHADRAVATI	-	-	16074	13	IRA	Ejaz Ahmed.JANATHA FPS. NMC Main
SHIVAMOGGA	BHADRAVATI	-	-	16075	14	IRA	SUNDAR VILLAGE INDUSTRIES Oldtown
SHIVAMOGGA	BHADRAVATI	-	-	16076	15	IRA	Abdul Aaja.SUPREME.FPS.Hosmane
SHIVAMOGGA	BHADRAVATI	-	-	16077	16	IRA	GOUSE MOHIDDIN.RAHAMANIYA.FPS. H.H.Road
SHIVAMOGGA	BHADRAVATI	-	-	16078	17	IRA	BHADRA CO-OP. SOCIETY.GOWLIGARA STREET
SHIVAMOGGA	BHADRAVATI	-	-	16079	18	IRA	SHOKESHWARA.BHARATHI FPS GANDHINAGAR
SHIVAMOGGA	BHADRAVATI	-	-	16081	20	IRA	M.M.COMPOUND PCCS I.K.ROAD
SHIVAMOGGA	BHADRAVATI	-	-	16083	22	IRA	B.R.C.S.Hosmane
SHIVAMOGGA	BHADRAVATI	-	-	16084	23	IRA	SHAFEEQ AHMED.NATIONAL FPS.Fisher Street
SHIVAMOGGA	BHADRAVATI	-	-	16085	24	IRA	S.R.Nagaraj.Srinivasa FPS.Tarikere Road
SHIVAMOGGA	BHADRAVATI	-	-	16094	33	IRA	R.NAGESH FPS HOSASIDDAPURA
SHIVAMOGGA	BHADRAVATI	-	-	16098	37	IRA	G.T.JAIRAM FPS KAVALUGUNDI
SHIVAMOGGA	BHADRAVATI	-	-	16105	44	IRA	Srinivasa.BOMMANAKATTE
SHIVAMOGGA	BHADRAVATI	-	-	16106	45	IRA	KRISHNOJIRAO KANAKATTE
SHIVAMOGGA	BHADRAVATI	-	-	16117	56	IRA	PANKAJA.R JEDIKATTE
SHIVAMOGGA	BHADRAVATI	-	-	16118	57	IRA	CHANNEGOWDA.KODIHALLI
SHIVAMOGGA	BHADRAVATI	-	-	16119	58	IRA	VINODHAKUMAR BHADRA COLONY
SHIVAMOGGA	BHADRAVATI	-	-	16122	61	IRA	MAHESH GIRI HANUMANTHNAGAR
SHIVAMOGGA	BHADRAVATI	-	-	16126	65	IRA	SHIVARAM GOWRAPUR
SHIVAMOGGA	BHADRAVATI	-	-	16128	67	IRA	RAMEGOWDA BOMMANKATTE
SHIVAMOGGA	BHADRAVATI	-	-	16131	70	IRA	H.C.PARAMESWARAPPA HEBBANDI
SHIVAMOGGA	BHADRAVATI	-	-	16133	72	IRA	VSSSN THIMLAPURA
SHIVAMOGGA	BHADRAVATI	-	-	16134	73	IRA	TAPCMS BANDARAHALLI
SHIVAMOGGA	BHADRAVATI	-	-	19106	114	IRA	G.O.CO-OP.SOCIETY Basaveshwara Circle
SHIVAMOGGA	BHADRAVATI	-	-	19107	115	IRA	Rajendra.RAGHAVENDRA FPS.Khazi Mohalla
SHIVAMOGGA	BHADRAVATI	-	-	19108	116	IRA	ASHWINI FPS Marata Beedi
SHIVAMOGGA	BHADRAVATI	-	-	19109	117	IRA	SYED.GAFAR FPS KHAZI MOHALLA
SHIVAMOGGA	BHADRAVATI	-	-	19110	118	IRA	MANI FPS Bhuthanagudi
SHIVAMOGGA	BHADRAVATI	-	-	19111	119	IRA	LAKSHMI FPS Chamegowda Area
SHIVAMOGGA	BHADRAVATI	-	-	19112	120	IRA	NAGARAJ NANDI FPS HUDCO COLONY
SHIVAMOGGA	BHADRAVATI	-	-	19114	122	IRA	Chandramma SRI JYOTHI NANJUNDESHWAR FPS KANCIBAGILU
SHIVAMOGGA	BHADRAVATI	-	-	19115	123	IRA	ANWAR COLONY SOCEITY
SHIVAMOGGA	BHADRAVATI	-	-	19116	124	IRA	S.M.B.S.S SEEGEBAGI
SHIVAMOGGA	BHADRAVATI	-	-	19118	126	IRA	GANGOJI RAO KABALIKATTE
SHIVAMOGGA	BHADRAVATI	-	-	19119	127	IRA	HOTEL OWNERS SOCEITY Hosamane
SHIVAMOGGA	BHADRAVATI	-	-	19120	128	IRA	V.RAMU.VENKATESHWARA FPS SANTEMAIDANA
SHIVAMOGGA	BHADRAVATI	-	-	19124	132	IRA	M.RAMACHANDRA.MAHADESHWARA FPS.HUDCOCOLONY
